ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲಾ--ಸಂಖ್ಯೆ ೩೪

ಶ್ರೀ ವಸಿಷ್ಠ ಮಹರ್ಷಿ ವಿರಚಿತವೂ ಶ್ರೀ ವಾಲ್ಮೀಕಿ ಮಹರ್ಷಿ ಪ್ರೋಕ್ತವೂ
ಆದ

ಯೋಗವಾಸಿಷ್ಠ

ಸಂಪುಟ—೧೪

ನಿರ್ವಾಣ ಪ್ರಕರಣ

ದೇವುಡು ಕನ್ನಡಿಸಿದುದು

ಶ್ರೀ ನೀಲಕಂಠೇಶ್ವರ ಪ್ರಿಂಟಿಂಗ್ ವರ್ಕ್ಸ್,
ಸುಲ್ತಾನ್‌ಪೇಟೆ, ಬೆಂಗಳೂರು ನಗರ.
೧೯೪೯

ಯೋಗವಾಸಿಷ್ಠ

ಸಂಪುಟ—೧೪

ನಿರ್ವಾಣ ಪ್ರಕರಣ

ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲಾ--ಸಂಖ್ಯೆ ೩೪

ಶ್ರೀ ವಸಿಷ್ಠ ಮಹರ್ಷಿ ವಿರಚಿತವೂ ಶ್ರೀ ವಾಲ್ಮೀಕಿ ಮಹರ್ಷಿ ಪ್ರೋಕ್ತವೂ
ಆದ

ಯೋಗವಾಸಿಷ್ಠ

ಸಂಪುಟ—೧೪

ನಿರ್ವಾಣ ಪ್ರಕರಣ

ದೇವುಡು ಕನ್ನಡಿಸಿದುದು

ಶ್ರೀ ನೀಲಕಂಠೇಶ್ವರ ಪ್ರಿಂಟಿಂಗ್ ವರ್ಕ್ಸ್,
ಸುಲ್ತಾನ್‌ಪೇಟೆ, ಬೆಂಗಳೂರು ನಗರ.
೧೯೪೯

ಪೀಠಿಕೆ

ಯೋಗವಾಸಿಷ್ಠವು ಅದ್ವೈತಸಿದ್ಧಾಂತಕ್ಕೆ ಸೇರಿದ ಪ್ರಕರಣ ಗ್ರಂಥ. ಇದಕ್ಕೆ ವಾಸಿಷ್ಠರಾಮಾಯಣ ಎಂದೂ ಹೆಸರುಂಟು. ಅದ್ವೈತ ಗುರುಪರಂಪರೆಯ ಆದ್ಯರಾದ ವಸಿಷ್ಠರು "ಸೃಷ್ಟಿಯ ಮೊದಲು ದಿನಗಳಲ್ಲಿ ಲೋಕದಲ್ಲಿ ಶಾಂತಿಯು ನೆಲೆಗೊಳ್ಳಲೆಂದು ಭಗವಂತನಾದ ಚತುರ್ಮುಖನು ಉಪದೇಶಿಸಿದ ಜ್ಞಾನವಿದ್ಯೆ"ಯನ್ನು ಶ್ರೀರಾಮನ ಚಿತ್ತಶಾಂತಿಗೆಂದು ಹೇಳಿದರೆಂದೂ, ಅದನ್ನೇ ವಾಲ್ಮೀಕಿಗಳು ಬ್ರಹ್ಮನಾಜ್ಞೆಯಿಂದ ಗ್ರಂಥವಾಗಿ ವಿರಚಿಸಿದರೆಂದೂ ಈ ಗ್ರಂಥದಲ್ಲಿ ಹೇಳಿದೆ. ವಿದ್ಯಾರಣ್ಯರು ನಿಶ್ಚಲದಾಸರು ಮೊದಲಾದ ಅದ್ವೈತಾಚಾರ್ಯರನೇಕರು ಈ ಗ್ರಂಥದ ಅನೇಕಾಂಶಗಳನ್ನು ತಮ್ಮ ಗ್ರಂಥಗಳಲ್ಲಿ ಸಂಗ್ರಹಿಸಿದ್ದಾರೆ. ವಾಸಿಷ್ಠಸಿದ್ಧಾಂತವೂ ಶಾಂಕರಸಿದ್ಧಾಂತವೂ ಕೆಲವೆಡೆಗಳಲ್ಲಿ ಭಿನ್ನೈಸುವುದೆಂದು ಕೆಲವರ ಅಭಿಪ್ರಾಯವಿದೆ. ಆದರೂ ಅದ್ವೈತ ಸಂಪ್ರದಾಯವನ್ನು ಹಿಡಿದ ಮುಮುಕ್ಷುಗಳೂ ಜಿಜ್ಞಾಸುಗಳೂ ಈ ಗ್ರಂಥವನ್ನು ಪರಮಾದರದಿಂದ ಅಧ್ಯಯನ ಮಾಡುತ್ತಾರೆ.

ಭೋಗೈಕಪರಾಯಣವಾದ ಆಧುನಿಕ ನಾಗರಿಕತೆಯ ದೇಶಗಳಲ್ಲಿಯೇ ಹುಟ್ಟಿ ಬೆಳೆದ ಅನೇಕ ದಾರ್ಶನಿಕರು ನಿರೂಪಿಸಿರುವ ಸಿದ್ಧಾಂತಗಳಿಗೂ ಈ ವಾಸಿಷ್ಠಸಿದ್ಧಾಂತಕ್ಕೂ ಎಷ್ಟೋ ಅಂಶಗಳಲ್ಲಿ ಏಕತಾನತೆಯು ಇರುವುದು ಒಂದು ವಿಶೇಷ ಸಂಗತಿ.

ಈ ಗ್ರಂಥದಲ್ಲಿ ನಿರ್ಣಯಸಾಗರ ಪ್ರೆಸ್ಸಿನಲ್ಲಿ ತಾತ್ಪರ್ಯಪ್ರಕಾಶವೆಂಬ ವ್ಯಾಖ್ಯಾನದೊಡನೆ ಮುದ್ರಿತವಾಗಿರುವ ಮೂಲವನ್ನೇ ಬಹುಮಟ್ಟಿಗೆ ಅನುಸರಿಸಲಾಗಿದೆ. ಹಿಂದೆ ಆಸ್ಥಾನ ವಿದ್ವಾನ್ ಬ್ರಹ್ಮಶ್ರೀ ಗುಂಡಶಾಸ್ತ್ರಿಗಳು ಕೃಷ್ಣರಾಜವೈಭವವೆಂಬ ಹೆಸರಿನಿಂದ ವೈರಾಗ್ಯ, ಮುಮುಕ್ಷು, ವ್ಯವಹಾರ, ಉತ್ಪತ್ತಿ, ಸ್ಥಿತಿ ಉಪಶಮಗಳೆಂಬ ಮೊದಲಿನೈದು ಪ್ರಕರಣಗಳನ್ನು ಮೂಲ-ಅನುವಾದ ಸಹಿತವಾಗಿ ಪ್ರಕಟಿಸಿದ್ದರು. ಈಗ ಇಲ್ಲಿ ಪ್ರಕಟವಾಗಿರುವ ಅನುವಾದವು ಸ್ವತಂತ್ರವು. ಅವಶ್ಯವೆಂದು ತೋರಿದ ಕಡೆಗಳಲ್ಲಿಯೂ ಗ್ರಂಥಾಂತರಗಳಲ್ಲಿ ಹೇಳಿರುವುದು ಓದುಗರ ಗಮನಕ್ಕೆ ಬಂದು ಓದಿದ ವಿಷಯವು ದೃಢವಾಗಲೆಂದೂ ಟಿಪ್ಪಣಿಗಳನ್ನು ಕೊಡಲಾಗಿದೆ.

ಭಾರತವಿಂದು ಜಾಗ್ರತವಾಗಿದೆ. ಮಾದರಿಯ ಮೈಸೂರು ಅಕ್ಷರ ಪ್ರಚಾರವನ್ನು ದೇಶಾದ್ಯಂತವೂ ಹರಡಿ ಕೀರ್ತಿವಂತವಾಗಿದೆ. ನಾನಾಮುಖವಾಗಿ ಬೆಳೆಯುತ್ತಿರುವ ದೇಶದ ಸೌಭಾಗ್ಯ ಮಂದಿರಕ್ಕೆ ಕಲಶವಾಗಿ ಜನರಲ್ಲಿ ವಿದ್ಯಾವಂತರಾಗಬೇಕೆಂಬ ಆಶೆ ಬಲವಾಗುತ್ತಿದೆ. ಕಲಿತ ವಿದ್ಯೆಗಳೆಲ್ಲವೂ ಸಾರ್ಥಕವಾಗಬೇಕಾದರೆ ಬ್ರಹ್ಮವಿದ್ಯೆಯನ್ನು ಕಲಿಯಲೇಬೇಕೆಂಬ ಪ್ರಾಚೀನರ ಉಪದೇಶವಿಂದು ಎಲ್ಲರ ಮನಸ್ಸಿಗೂ ಬರುವ ಕಾಲವೂ ಬಂದಿದೆ. ಇಂತಹ ಸಂಧಿಕಾಲಗಳಲ್ಲಿ ಈ ಗ್ರಂಥವು ಸುಲಭ ಕನ್ನಡದಲ್ಲಿ ಬರುವುದು ಕನ್ನಡಲೋಕದ ಸುದೈವ. ಕಾವ್ಯಶೈಲಿಯಲ್ಲಿ ವೇದಾಂತವನ್ನು ಇಷ್ಟು ಸುಂದರವಾಗಿ ಸುಲಭವಾಗಿ ಬೋಧಿಸುವ ಗ್ರಂಥ ಇನ್ನೊಂದಿಲ್ಲ. ಇದನ್ನು ಓದಿ ಅರ್ಥಮಾಡಿಕೊಳ್ಳಲು ಗ್ರಂಥಾಂತರಗಳ ಸಹಾಯವು ಬೇಕಿಲ್ಲ: ಶ್ರದ್ಧೆಯೊಂದಿದ್ದರೆ ಸಾಕು: ಆದರಿಂದ ಈ ಗ್ರಂಥದಿಂದ ಆಗುವ ಲೋಕೋಪಕಾರವು ಅಷ್ಟಿಷ್ಟಲ್ಲ.

ಈ ಗ್ರಂಥವು ಈ ರೂಪದಲ್ಲಿ ಬರುವುದಕ್ಕೆ ಕಾರಣರು ನಮ್ಮನ್ನಾಳುವ ಶ್ರೀಮನ್ಮಹಾರಾಜರು ಶ್ರೀ ಜಯಚಾಮರಾಜೇಂದ್ರ ಒಡೆಯರು ಬಹದ್ದೂರ್, ಜಿ.ಸಿ.ಬಿ.,ಜಿ.ಸಿ.ಎಸ್.ಐ. ಅವರು. ಈ ಗ್ರಂಥದ ಪಠನ ಪಾಠನಗಳಿಂದ ಲಭಿಸುವ ಶ್ರೇಯಸ್ಸೆಲ್ಲವೂ ಮಹಾಸನ್ನಿಧಾನಕ್ಕೇ ಸೇರಿದುದು.

ಈ ಕಾರ್ಯಕ್ಕೆ ತನ್ನನ್ನು ನಿಯಮಿಸಿದ ಆಳುವ ಮಹಾಸ್ವಾಮಿಯವರಿಗೆ ಅನುವಾದಕನು ಅತ್ಯಂತ ಕೃತಜ್ಞನಾಗಿ ಈ ಗ್ರಂಥದ ಅಧ್ಯಯನದಿಂದ ತನಗೆ ಆದ ಪರಮೋಪಕಾರವನ್ನು ನೆನೆದು ಸಮಸ್ತ ಸನ್ಮಂಗಳಾನಿ ಭವಂತು ಎಂದು ಹರಕೆ ಹೊರುತ್ತಾನೆ.

ಬೆಂಗಳೂರು ನಗರ
೧೫–೨–೪೯

ದೇವುಡು.

ವಿಷಯ ಸೂಚಿಕೆ

ಶ್ರೀ

ಯೋಗವಾಸಿಷ್ಠ

ನಿರ್ವಾಣ ಪ್ರಕರಣಂ ಪೂರ್ವಾರ್ಧಂ

ಪ್ರಥಮಃ ಸರ್ಗಃ

ಶ್ರೀ ವಾಲ್ಮೀಕಿ ಉವಾಚ—

ಉಪಶಮಪ್ರಕರಣಾದನಂತರಮಿದಂ ಶೃಣು ।
ತ್ವಂ ನಿರ್ವಾಣಪ್ರಕರಣಂ ಜ್ಞಾತಂ ನಿರ್ವಾಣದಾಯಿ ಯತ್ ॥ ೧ ॥

ಮೊದಲನೆಯ ಸರ್ಗ

೧. ಶ್ರೀ ವಾಲ್ಮೀಕಿಯು ಹೇಳಿದನು:—ಉಪಶಮ ಪ್ರಕರಣವನ್ನು ಕೇಳು. ಇದನ್ನು ತಿಳಿದುದೇ ಆದರೆ ಮೋಕ್ಷವು ದೊರೆತೇ ದೊರೆಯುವುದು.

ತಾತ್ಪರ್ಯ ಪ್ರಕಾಶ—ಉತ್ಪತ್ತಿ, ಸ್ಥಿತಿ, ಉಪಶಮ ಎಂಬ ಹೆಸರಿನ ಮೂರು ಪ್ರಕರಣಗಳಿಂದ ಜಗತ್ತಿನ ಜನ್ಮ ಸ್ಥಿತಿ ಲಯಗಳನ್ನೂ "ಅಥಾತ ಆದೇಶೋ ನೇತಿ ನೇತಿ" ಇತ್ಯಾದಿಯಾದ ಸರ್ವ ಪ್ರಪಂಚ ನಿಷೇಧಕವಾದ ವೇದಾಂತ ವಾಕ್ಯಗಳ ತತ್ತ್ವಾರ್ಥವನ್ನೂ, ಅಧ್ಯಾರೋಪ, ಅಪವಾದ ನ್ಯಾಯದಿಂದ ಆತ್ಮತತ್ತ್ವವನ್ನು ಬೋಧಿಸುವುದರ ಮೂಲಕ ವಾಸನಾಕ್ಷಯವಾಗಿ ಮನೋನಾಶವಾಗುವುದೇ ಕೊನೆಯಾಗುಳ್ಳ ಜ್ಞಾನವು, ಪರಮ ಪುರುಷಾರ್ಥವಾದ ಮೋಕ್ಷದಲ್ಲಿಯೇ ಪರ್ಯವಸಾನವಾಗುವುದು ಎಂಬುದನ್ನೂ ಇದುವರೆಗೂ ಉಪದೇಶಿಸಿಯಾಯಿತು. ಈಗ, "ಯತ್ರ ನಾನ್ಯತ್ ಪಶ್ಯತಿ, ನಾನ್ಯತ್ ಶೃಣೋತಿ, ನಾನ್ಯತ್ ವಿಜಾನಾತಿ,

ಸಭೂಮಾ ಯೋ ವೈ ಭೂಮಾ ತತ್ಸುಖಮ್'' (ಯಾವಾಗ ಇನ್ನೇನೂ ನೋಡುವುದಿಲ್ಲವೋ, ಇನ್ನೇನೂ ಕೇಳುವುದಿಲ್ಲವೋ, ಇನ್ನೇನೂ ತಿಳಿಯುವುದಿಲ್ಲವೋ, ಅದೇ ಭೂಮಾ. ಆ ಭೂಮಾ ಎನ್ನುವುದು ಯಾವುದುಂಟೋ ಅದೇ ಸುಖ.) "ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ"(ಮನಸ್ಸಿಗೂ ನಿಲುಕದ (ಆ ವಸ್ತುವನ್ನು) ಮಾತು ಬಣ್ಣಿಸಲಾರದೆ ಹಿಂತಿರುಗುವುದು.) "ಆನಂದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕುತಶ್ಚನ" (ಬ್ರಹ್ಮದ ಆನಂದವನ್ನು ಬಲ್ಲವನು ಯಾವ ಭೀತಿಗೂ ಬಗ್ಗುವುದಿಲ್ಲ.) "ತದೇತದ್ಬ್ರಹ್ಮಾಪೂರ್ವಂ, ಅನಪರಂ, ಅನಂತರಂ, ಅಬಾಹ್ಯಂ, ಅಯಮಾತ್ಮಾ ಬ್ರಹ್ಮ, ಸರ್ವಾನುಭೂಃ'' (ಅಪೂರ್ವ-ಅದಕ್ಕಿಂತ ಮೊದಲು ಯಾವುದೂ ಇಲ್ಲದ್ದು, ಅನಪರ-ಅದಕ್ಕಿಂತ ಆ ಮೇಲೆ ಯಾವುದೂ ಇಲ್ಲದ್ದು, ಅನಂತರ ಅದರೊಳಗೆ ಯಾವುದೂ ಇಲ್ಲದ್ದು, ಅಬಾಹ್ಯ-ಅದರ ಹೊರಗೆ ಯಾವುದೂ ಇಲ್ಲದ್ದು. ಇಂತಹದು ಯಾವುದೋ ಅದೇ ಬ್ರಹ್ಮ, ಈ ಆತ್ಮವೇ ಬ್ರಹ್ಮ, ಇದನ್ನು ಬಲ್ಲವನಿಗೆ ಎಲ್ಲವೂ ಗೊತ್ತು.) ''ನಿಷ್ಕಲಂ ನಿಷ್ಕ್ರಿಯಂ ಶಾಂತಂ ನಿರವದ್ಯಂ ನಿರಂಜನಂ'' (ಭಾಗಗಳಿಲ್ಲದ, ವ್ಯಾಪಾರವಿಲ್ಲದ ಶಾಂತವಾದ, ದೋಷವೇನೂ ಇಲ್ಲದ, ಯಾವ ಸಂಪರ್ಕವೂ ಇಲ್ಲದ, ಯಾವುದೋ ಅದೇ ಬ್ರಹ್ಮ.) "ಅಮೃತಸ್ಯ ಪರಂಸೇತುಃ ದಗ್ಧೇಂದನ ಮಿವಾನಲಂ" (ಅಮೃತಕ್ಕೆ ಉತ್ತಮವಾದ ಸೇತುವು: ಸೌದೆಯನ್ನೆಲ್ಲ ಸುಟ್ಟು ಕುಳಿತಿರುವ ಬೆಂಕಿಯಂತೆ (ಇರುವುದು ಬ್ರಹ್ಮ) ಇತ್ಯಾದಿಯಾದ ಶ್ರುತಿಗಳ ತಾತ್ಪರ್ಯಭೂತವಾಗಿ ಹಿಂದೆಯೇ ಹೇಳಿರುವ ಸರ್ವಸಾಧನಗಳಿಗೂ ಸಾಧ್ಯವಾಗಿ, ಸಾಕ್ಷಾತ್ಕಾರವೆಂಬ ಜ್ಞಾನಫಲವಾಗಿರುವ ನಿರ್ವಾಣವನ್ನು ಕುರಿತು ಬೋಧಿಸಲು ನಿರ್ವಾಣವೆಂಬ ಹೆಸರುಳ್ಳ ಈ ಪ್ರಕರಣವನ್ನು ಶ್ರೋತೃಗಳಿಗೆ ಹೇಳಲು ಭಗವಾನ್ ವಾಲ್ಮೀಕಿಯು ಹೇಳುತ್ತಾನೆ :—

ಜಗತ್ತಿನ ಜನ್ಮ, ಸ್ಥಿತಿ, ವಿಲಯಗಳಿಗೆಲ್ಲ ಕಾರಣವಾಗಿದ್ದರೂ ತಾನು ತಟಸ್ಥವಾಗಿರುವುದೇ ಲಕ್ಷಣವಾಗಿರುವ (ಬ್ರಹ್ಮದಿಂದ) ಮೃತ್ತು, ಲೋಹ, ಸ್ಫುಲಿಂಗ, ಮೊದಲಾದ ದೃಷ್ಟಾಂತಗಳಿಂದ, "ವಾಚಾರಂಭಣಂ ವಿಕಾರಃ ನಾಮಧೇಯಂ ತ್ರೀಣಿ ರೂಪಾಣೀತ್ಯೇವ ಸತ್ಯಂ'' ಎಂಬ ಶ್ರುತಿಯು ಹೇಳುವ ನ್ಯಾಯದಿಂದಲೇ, "ಅನ್ನೇನ ಸೋಮ್ಯ, ಶುಂಗೇನ ತೇಜೋಮೂಲ ಮನ್ವಿಚ್ಛ, ತೇಜಸಾ ಸೋಮ್ಯ ಶುಂಗೇನ ಸನ್ಮೂಲ ಮನ್ವಿಚ್ಛ, ಸನ್ಮೂಲಾಃ ಸೋಮ್ಯ, ಇಮಾಃ ಸರ್ವಾಃ ಪ್ರಜಾಃ, ಸದಾಯತನಾಃ ಸತ್ಪ್ರತಿಷ್ಠಾಃ, ಸ ಯ ಏಷೋಽಣಿಮಾ ಏತದಾತ್ಮ್ಯಂ ಇದಂ ಸರ್ವಂ ತತ್ಸತ್ಯಂ ಸ ಆತ್ಮಾ'' ಎಂದು ಶ್ರುತಿಯು ಹೇಳುವ ಐಕಾತ್ಮ್ಯ ವಿಷಯದಲ್ಲಿ ಪರ್ಯವಸಾನವಾಗುವ ಪ್ರಕರಣಗಳು ಮೂರನ್ನು ಹೇಳಿದ

ಮೇಲೆ ಅದೆಲ್ಲದರ ಫಲವಾದ "ಸತ್ಯಂ ಜ್ಞಾನಮನಂತಂ ಬ್ರಹ್ಮ" "ನಿತ್ಯಂ ವಿಜ್ಞಾನಮಾನಂದಂ ಬ್ರಹ್ಮ" "ಆನಂದೋ ಬ್ರಹ್ಮೇತಿ ವ್ಯಜಾನಾತ್" ಮೊದಲಾದ ಶ್ರುತಿಗಳು ಹೇಳುವ ಬ್ರಹ್ಮದ ಸ್ವರೂಪ ಲಕ್ಷಣವಾದ "ತತ್ವಮಸಿ ಶ್ವೇತಕೇತೋ" "ಅಯಮಾತ್ಮಾ ಬ್ರಹ್ಮ ಸರ್ವಾನುಭೂಃ" ಎಂಬ ಮಹಾವಾಕ್ಯಗಳ ಅರ್ಥರೂಪವಾಗಿರುವ ಬ್ರಹ್ಮದ ಜ್ಞಾನಫಲವಾದ ನಿರ್ವಾಣವನ್ನು ಬೋಧಿಸಲು ಈ ಪ್ರಕರಣವು.

ಈ ಸಂದರ್ಭದಲ್ಲಿ ಆಧುನಿಕ ಸೈನ್ಸ್ ಪ್ರಸ್ಥಾನವನ್ನು ಕುರಿತು ಚಿಂತಿಸುವುದು ಅಸಾಧುವಲ್ಲ. ಪಿಂಡಗ್ರಹ ನಿವೃತಿಯಾಗುವವರೆಗೂ ವೇದಾಂತವಿಲ್ಲ ಎಂಬ ಸಿದ್ಧಾಂತವನ್ನು ಈ ಕೆಳಗೆ ಹೇಳುವ ಸೈನ್ಸ್ ಸಿದ್ಧಾಂತದೊಡನೆ ಹೋಲಿಸಿ.

............Science rests on judjements the validity of which must be accepted by tne Scientist before he can either experiment or think. Philosophically sophisticated scientists, however, like the biologist J. H. Woodger, are quite aware of this fact. In his impressive book, Biological Principles (London, 1929) P. 228, he has gathered together a list of the fundamental judgements upon which all our natural scientific knowledge rests & which cannot be inferred from anything else. He sets them as follows:—

A. Empirical

Judgement of Perception, e. g., "This Rabbit is white."

B. A Priori

A priori not in the sense of being known prior to experience but in the sense of being logically independent of experience; "elicited by" experience, but neither provable or disprovable by experience.

1. Not, "Self evident" but essential for the possibility of scientific knowledge :

    (a) Belief in a real external world.

    (b) Belief in the trust worthiness of memory.

    (c) Belief in the existence of other selves.

    (d) Belief in some sort of of regularity in the external world.

2. Self evident as well as essential for knowledge.

    (a) Analytic (in the sense that the opposite would be self contradictory). e. g., 1 foot equals 12 inches (i. e., defining and explicatory judgements.)

    (b) Synthetic, e. g. propositions concerning the relations between universals-' Black is different from white". "The whole is greater than the part". "If a equals b and b equals c, then a equals c". "If a entails b and a is true, then b is true." (where a and b are propositions & "a entials b" means "b logically follows from a."

The university & the modern world : Arnold S. Nash: S. C. M. Press Ltd., 56, Blooms Brony Stroet, London, 1945, P. 80.

ಈ ಪುಸ್ತಕದ "The decline of Scientific Individualion" ಎಂಬ ಮೂರನೆಯ ಅಧ್ಯಾಯವನ್ನು ಕುತೂಹಲಿಗಳು ಓದಿದರೆ ಒಳ್ಳೆಯದು.

ಕಥಯತ್ಯೇವಮುದ್ದಾಮವಚನೇ ಮುನಿನಾಯಕೇ ।
ಶ್ರವಣೈಕರಸೇ ಮೌನಸ್ಥಿತೇ ರಾಜಕುಮಾರಕೇ ॥ ೨ ॥

ಮುನಿವಾಗರ್ಥನಿಕ್ಷಿಪ್ತ ಮನಸಸ್ತತಪಃ ಕ್ರಿಯೇ ।
ರಾಜಲೋಕೇ ಗತಸ್ಪಂದೇ ಚಿತ್ರಾರ್ಪಿತ ಇವ ಸ್ಥಿತೇ ॥ ೩ ॥

ವಸಿಷ್ಠವಚಸಾಮರ್ಥಂ ವಿಚಾರಯತಿ ಸಾದರಂ ।
ಲಸದಂಗುಲಿಭಂಗೇನ ಮುನಿನಾರ್ಥೇ ಸ್ಫುರದ್ಭ್ರುವಿ ॥ ೪ ॥

ವಿಸ್ಮಯಾಲೋಕನೋಲ್ಲಾಸ ಪ್ರೋತ್ಫುಲ್ಲನಯನಾಲಿನಿ ।
ಪುರಂಧ್ರಿವರ್ಗೇ ಗಂಭೀರತರುಮಂಜರಿತಾಂ ಗತೇ ॥ ೫ ॥

ಖೇ ವಾಸರಚತುರ್ಭಾಗದೇಶೇ ದಿನಕರೇ ಸ್ಥಿತೇ ।
ಕಿಂಚಿತ್ ಜ್ಞಾನೋದಯಾತ್ಸ್ವಾಮ್ಯೇ ಕಿಂಚಿಚ್ಛಮಮುಪೇಯುಷಿ ॥ ೬ ॥

---

೨. ಪ್ರೌಢವಾದ ಮಾತುಗಳುಳ್ಳ ಮುನಿಶ್ರೇಷ್ಠನಾದ ವಸಿಷ್ಠನು ಈ ರೀತಿ ಹೇಳುತ್ತಿರಲಾಗಿ, ರಾಜಪುತ್ರನಾದ ಶ್ರೀರಾಮನು ಕೇಳುವುದರಲ್ಲೇ ಆದರವುಳ್ಳವನಾಗಿ ಮೌನದಿಂದಿರಲು ;

೩. ರಾಜರ ಸಮೂಹವು ಮುನಿಗಳ ಮಾತಿನ ಅರ್ಥದಲ್ಲಿಯೇ ನಟ್ಟ ಮನಸ್ಸುಳ್ಳದ್ದಾಗಿಯೂ, ಬೇರೆ ಯೋಚನೆಯಾಗಲೀ, ಶರೀರಚೇಷ್ಟೆಯಾಗಲೀ, ಇಲ್ಲದ್ದಾಗಿಯೂ, ಅಲ್ಲಾಡದೆ ಚಿತ್ರದಲ್ಲಿ ಬರೆಯಲ್ಪಟ್ಟಂತೆಯೂ ಇರುತ್ತಿರಲು ;

೪. ಮುನಿಗಳ ಸಮೂಹವು ತೋರುಬೆರಳನ್ನೆತ್ತಿಕೊಂಡು ಹುಬ್ಬುಗಳನ್ನಲ್ಲಾಡಿಸುತ್ತಾ ವಸಿಷ್ಠನ ಮಾತುಗಳರ್ಥವನ್ನು ಆದರಪೂರ್ವಕವಾಗಿ ವಿಚಾರ ಮಾಡುತ್ತಿರಲು ;

೫. ಅಂತರಾತ್ಮನನ್ನು ನೋಡುವುದರಿಂದುಂಟಾದ ಆನಂದದಿಂದ ಶೋಭಿಸುವ ಕಣ್ಣುಳ್ಳ ಸ್ತ್ರೀಯರ ಸಮೂಹವು ಮಕರಂದಪಾನದಲ್ಲಾಸಕ್ತವಾಗಿರುವ ದುಂಬಿಗಳುಳ್ಳ ಮರದ ಗುಚ್ಛದ ಭಾವವನ್ನು ಹೊಂದುತ್ತಿರಲು ;

(ವಿಸ್ಮಯಃ-ಪರಮಾಶ್ಚರ್ಯರೂಪಃ ಪ್ರತ್ಯಗಾತ್ಮಾ—ತಾ. ಪ್ರ.

೬. ಹಗಲಿನ ನಾಲ್ಕನೇ ಭಾಗದಲ್ಲಿ ಆಕಾಶದಲ್ಲಿ ಸೂರ್ಯನು ಸ್ವಲ್ಪ

ಶ್ರವಣಾಯೇವ ಸಂಶಾಂತೇ ವಿತಾನಸ್ಪಂದಮಾಲಿತೇ ।
ಮೌನಂ ಮರುತಿ ಮಂದಾರ ಮಧುರಾಮೋದದಾಯಿನಿ ॥ ೭ ॥

ಪುಷ್ಪದಾಮಸುಸುಪ್ತಾಸು ಮಹಾಭ್ರಮರಪಂಕ್ತಿಷು ।
ಜ್ಞಾತಜ್ಞೇಯತಯಾ ನೂನಂ ಸಮುಗ್ಧ್ಯಾನವತೀಷ್ವಿವ ॥ ೮ ॥

ಮುಕ್ತಾಜಾಲಕಲಾಪಾಂತರ್ಗತಾಸ್ವಂತರಭೂಮಿಷು ।
ಕಚತ್ಯಪಗತಸ್ಪಂದಂ ತೋಯೇ ಶ್ರೋತುಮಿವಾಸ್ಥಿತೇ ॥ ೯ ॥

ಗೃಹಾಂತರಂ ಪ್ರವಿಷ್ಟೇಷು ಗವಾಕ್ಷೇ ದೂರಮಂಶುಷು ।
ವಿಶ್ರಾಮಾರ್ಥಮಿವಾದೀರ್ಘಂ ನಭಃ ಪಾಂಥೇಷು ಶೀತಲಂ ॥ ೧೦ ॥

ಮುಕ್ತಾಜಾಲಪ್ರಭಾಜಾಲ ಭಸ್ಮನೋದ್ಧೂಲಿತಾತ್ಮನಿ ।
ಶಂಸತೀವ ಶಮಂ ಶಾಮ್ಯದ್ದಿನದೇಹೇ ದಿವಾತಪೇ ॥ ೧೧ ॥

ಜ್ಞಾನೋದಯದಿಂದಲೋ ಎಂಬಂತೆ, (ಕೇಳುವುದಕ್ಕೋ ಎನ್ನುವಹಾಗೆ,) ಸ್ವಲ್ಪ ಮಟ್ಟಿಗೆ ಸೌಮ್ಯತೆಯನ್ನು ಹೊಂದುತ್ತಿರಲು ;

೭. ಹೂಗೊಂಚಲುಗಳನ್ನಲ್ಲಾಡಿಸಿ, ಮಂದಾರಪುಷ್ಪಗಳ ಪರಿಮಳವನ್ನು ನಿಶ್ಶಬ್ದವಾಗಿ ಬೀರುತ್ತಿರುವ ವಾಯುವು ಅದನ್ನು ಕೇಳುವುದಕ್ಕೋ ಎಂಬಂತೆ ಶಾಂತಿಯನ್ನೈದುತ್ತಿರಲು ;

೮. ಹೂವಿನ ಮಾಲೆಗಳಲ್ಲಿ ಮಲಗಿರುವ ದೊಡ್ಡದೊಡ್ಡ ಧುಂಬಿಗಳ ಸಾಲುಗಳು ತಿಳಿಯತಕ್ಕದ್ದನ್ನು ತಿಳಿದದ್ದರಿಂದ ಚೆನ್ನಾಗಿ ಧ್ಯಾನದಲ್ಲಿ ತೊಡಗಿವೆಯೋ ಎಂಬಂತಿರಲು ;

೯. ಮುತ್ತಿನ ದಂಡಿಕೆಗಳ ಮುಚ್ಚಳವುಳ್ಳ ಬಾವಿಗಳೊಳಗಿರುವ ಪ್ರಕಾಶಿಸುತ್ತಿರುವ ನೀರು ಕೇಳುವುದಕ್ಕೋಸ್ಕರವೋ ಎಂಬಂತೆ ನಿಶ್ಚಲವಾಗಿರಲು ;

೧೦. ಬಹಳ ಹೊತ್ತಿನಿಂದಲೂ, ಬಹಳ ದೂರದಿಂದಲೂ, ಆಕಾಶದಲ್ಲಿ ಸಂಚರಿಸುತ್ತಿರುವ ಸೂರ್ಯಕಿರಣಗಳು ವಿಶ್ರಾಂತಿಗೋಸ್ಕರವೋ ಎಂಬಂತೆ ಶ್ರವಣಶಾಲೆಯೊಳಗೆ ಪ್ರವೇಶಿಸುತ್ತಿರಲು ;

೧೧. ಮುತ್ತಿನ ಸರಗಳ ಪ್ರಭೆಯೆಂಬ ಭಸ್ಮವನ್ನು ತೊಡೆದುಕೊಂಡ ಕೊನೆ ಹಗಲಿನ ಶರೀರವಾದ ಬಿಸಿಲು ಶಾಂತಿಯನ್ನುಪದೇಶಿಸುತ್ತಿದೆಯೋ ಎಂಬಂತಿರುವ,

ಕರೇ ಲೀಲಾಸರೋಜೇಷು ಶೇಖರೇಷು ಚ ಭೂಭೃತಾಂ ।
ಶ್ರುತ್ವಾ ಸುರಸಮಾಮೋದಾದವೃತ್ತಿಷು ಮನಃಸ್ವಿವ ॥ ೧೨ ॥

ಬಾಲಕೇಷ್ವಜ್ಞಲೋಕೇಷು ಲೀಲಾಪಕ್ಷಿಷು ಸಾದರಂ ।
ಭೋಜನಾರ್ಥಂ ವಧೂಲೋಕಮುಪರುಂಧತ್ಸ್ವನಾರತಂ ॥ ೧೩ ॥

ಭ್ರಮರಭ್ರಮರಪಕ್ಷೋತ್ಥವಾತಧೂತರಜಸ್ವಲಂ ।
ಕೌಮುದೇ ಪರಿವಿಶ್ರಾಂತೇ ಚಾಮರೇಷ್ವಕ್ಷಿಪಕ್ಷ್ಮಸು ॥ ೧೪ ॥

ರಶ್ಮಿಷ್ವಗಗುಹೋನ್ಮುಕ್ತಚ್ಛಾಯಾಜಾಲ ಭಯಾದಿವ ।
ಗವಾಕ್ಷಾದಿಷ್ವಿವೋಡ್ಡೀಯ ಪ್ರವಿಷ್ಟೇಷು ಗೃಹಾಂತರಂ ॥ ೧೫ ॥

ಆಸೀದ್ದಿನಚತುರ್ಭಾಗಸತ್ತಾವೇದನತತ್ಪರಃ ।
ಭೇರೀಪಟಹಶಂಖಾನಾಂ ದಿಂಗ್ಮುಖಾಪೂರಕೋ ಧ್ವನಿಃ ॥ ೧೬ ॥

---

೧೨. ರಾಜರ ಕೈಗಳಲ್ಲಿಯೂ ಶಿರಸ್ಸುಗಳಲ್ಲಿಯೂ ಇರುವ ಲೀಲಾಕಮಲಗಳ ಸ್ವಾರಸ್ಯವಾದ ವಸಿಷ್ಠನ ಉಪದೇಶವನ್ನು ಕೇಳಿ ಆನಂದದಿಂದ ಮುಚ್ಚಿಕೊಳ್ಳುವ ಮನಸ್ಸುಗಳಂತೆ ಮುಚ್ಚಿಕೊಳ್ಳುತ್ತಿರಲು,

೧೩. ಚಿಕ್ಕಮಕ್ಕಳೂ ಮೂಢಜನರೂ ಸೊಗಸಿನ ಹಕ್ಕಿಗಳೂ ಊಟಕ್ಕೋಸ್ಕರ ಆದರದಿಂದ ಸ್ತ್ರೀಜನರನ್ನು ಎಡೆಬಿಡದೆ ತ್ವರೆಪಡಿಸುತ್ತಿರಲು ;

೧೪. ಸುತ್ತಾಡುತ್ತಿರುವ ದುಂಬಿಗಳ ರೆಕ್ಕೆಗಾಳಿಯಿಂದ ಕೊಡಹಲ್ಪಟ್ಟ ನೈದಿಲೆಯ ಧೂಳಿಗಳು ಚಾಮರಗಳಲ್ಲಿಯೂ ಕಣ್ಣಿನ ರೆಪ್ಪೆಗಳಲ್ಲಿಯೂ ಕುಳಿತುಕೊಳ್ಳುತ್ತಿರಲು ;

೧೫. ಸೂರ್ಯಕಿರಣಗಳು ಪರ್ವತಗುಹೆಗಳಿಂದ ಎದ್ದ ಕತ್ತಲೆಸಮೂಹದ ಭಯದಿಂದಲೋ ಎಂಬಂತೆ ಕಿಟಕಿಗಳಲ್ಲಿ ಹಾರಿ ಮನೆಗಳೊಳಗೆ ಪ್ರವೇಶಿಸುತ್ತಿರಲು;

೧೬. ಹಗಲಿನ ನಾಲ್ಕನೇ ಭಾಗವನ್ನು ತಿಳಿಸುವ ಭೇರಿ ಪಟಹ ಶಂಖಗಳ ಎಲ್ಲಾ ದಿಕ್ಕುಗಳಲ್ಲೂ ವ್ಯಾಪಿಸುವ ಧ್ವನಿಯುಂಟಾಯಿತು.

ತೇನ ತತ್ತಾರಮುಪ್ತಾಶು ವಚೋಂತರ್ಧಾನಮಾಯಯೌ ।
ಮೌನಂ ಜಲದನಾದೇನ ಮಾಯೂರ ಇವ ನಿಃಸ್ವನಃ ॥ ೧೭ ॥

ಆಕ್ಷುಬ್ಧಾ ಕ್ಷುಬ್ಧಪಕ್ಷಾಲಿಃ ಪಂಜರಸ್ಥಾ ಖಗಾವಲೀ ।
ಭೂಕಂಪೇ ತರಸಾ ತಾಲೀಪಲ್ಲವೇವ ವನಾವಲೀ ॥ ೧೮ ॥

ಆಯಯುರ್ಭಯವಿತ್ರಸ್ತಾ ಬಾಲಾ ಧಾತ್ರೀಕುಚಾಂತರಂ ।
ಸಾರವಂ ಪ್ರಾವೃಷೀವಾಬ್ದಾಃ ಪ್ರೋನ್ನತಂ ಶೃಂಗಕೋಟರಂ ॥ ೧೯ ॥

ಉತ್ತ್ರಸ್ತುರಪತಂಸೇಭ್ಯೋ ಭೂಭೃತಾಂ ಭ್ರಮರಸ್ರಜಃ ।
ಈಷತ್ಕರಾಲವಾಹಾಭ್ಯಃ ಸರಿದ್ಭ್ಯೋಽಂಬುಕಣಾ ಇವ ॥ ೨೦ ॥

ಏವಂ ಪ್ರಕ್ಷುಭಿತೇ ತಸ್ಮಿನ್ ಗೃಹೇ ದಾಶರಥೇ ತದಾ ।
ಪ್ರಾಪ್ತೇ ವಾಸರವೃದ್ಧತ್ವೇ ಸಾಂತಶಂಖಸ್ವನೇ ಶನೈಃ ॥ ೨೧ ॥

ಸಂಹರ್ತ ಪ್ರಸ್ತುತಂ ವಸ್ತು ವಚೋ ಮಧುರವೃತ್ತಿಮತ್ ।
ಉವಾಚ ಮುನಿಶಾರ್ದೂಲಃ ಸಭಾಮಧ್ಯೇ ರಘೂದ್ವಹಂ ॥ ೨೨ ॥

---

೧೭. ಆ ಧ್ವನಿಯಿಂದ ಘಟ್ಟಿಯಾದಾಗ್ಯೂ ವಸಿಷ್ಠ ಮಹರ್ಷಿಯ ಮಾತುಗಳು ಮೇಘಗರ್ಜನೆಯಾದಾಗ ಅಡಗುವ ನವಿಲಿನ ಶಬ್ದದಂತೆ ಅಡಗಿಹೋಯಿತು;

೧೮. ಪಂಜರಗಳಲ್ಲಿರತಕ್ಕ ಪಕ್ಷಿಸಮೂಹವು ವೇಗದಿಂದ, ಭೂಕಂಪದಿಂದ ಅಲ್ಲಾಡಿದ ತಾಳೆಯೆಲೆಗಳುಳ್ಳ ವನಪಂಕ್ತಿಯಂತೆ ಕೆದರಿದ ರೆಕ್ಕೆಗಳುಳ್ಳದ್ದಾಗಿ ನಡುಗಿಬಿಟ್ಟಿತು.

೧೯. ಆ ಭಯದಿಂದ ನಡುಗಿದ ಹಸುಗೂಸುಗಳು ಕಿರುಚುತ್ತ, ಮಳೆಗಾಲದಲ್ಲಿ ಮೋಡಗಳು ಮೊರೆಯುತ್ತ ಉನ್ನತ ಶಿಖರಗಳ ಗುಹೆಗಳನ್ನು ಹೊಗುವಂತೆ, ತಾಯಿಯ ಮಡಿಲೊಳಗೆ ಹೊಕ್ಕವು.

೨೦. ರಾಜರ ಶಿರಸ್ಸಿನ ಹೂವುಗಳಿಂದ ದುಂಬಿಗಳ ಸಾಲುಗಳು, ಸ್ವಲ್ಪ ಬಿರುಸಾಗಿ ಹರಿಯುವ ನದಿಗಳಿಂದ ಹಾರುವ ನೀರಿನ ತುಂತುರುಗಳಂತೆ ಹಾರಿದುವು.

೨೧–೨೨. ಈ ರೀತಿ ದಶರಥ ಮಹಾರಾಜನ ಅರಮನೆಯಲ್ಲಿ ಗದ್ದಲ ಮಾಡಿದ ಸಾಯಂಕಾಲ ಶಂಖಧ್ವನಿಯು ಕ್ರಮಕ್ರಮವಾಗಿ ನಿಲ್ಲಲು, ಮುನಿಶ್ರೇಷ್ಠ

ರಾಘವಾನಘ ವಾಗ್ಜಾಲಂ ಮಯ್ಯೇತತ್ಪ್ರವಿಸಾರಿತಂ ।
ತೇನ ಚಿತ್ತಖಗಂ ಬದ್ಧ್ವಾ ಕ್ರೋಡೀಕೃತ್ಯಾತ್ಮತಾಂ ನಯ ॥ ೨೩ ॥

ಕಚ್ಚಿತ್ ಗೃಹೀತೋ ಭವತಾ ಮದ್ಗಿರಾಮರ್ಥ ಈದೃಶಃ ।
ತ್ಯಕ್ತ್ವಾಶ ದುರ್ಭೋದಮಕ್ಷೀಣೋ ಹಂಸೇನೇವಾಂಭಸಃ ಪಯಃ ॥ ೨೪ ॥

ವಿಚಾರ್ಯೈತದವಶೇಷೇಣ ಸ್ವಧಿಯ್ಯೈವಂ ಪುನಃ ಪುನಃ ।
ಅನೇನೈವ ಪಥಾ ಸಾಧೋ ಗಂತವ್ಯಂ ಭವತಾಧುನಾ ॥ ೨೫ ॥

ಅನಯ್ಯೈವ ಧಿಯಾ ರಾಮ ವಿಹರನ್ನೈವ ಬಧ್ಯಸೇ ।
ಅನ್ಯಥಾಘಃ ಪತಸ್ಯಾಶು ವಿಂಧ್ಯಖಾತೇ ಯಥಾ ಗಜಃ ॥ ೨೬ ॥

ನಾದ ವಸಿಷ್ಠನು ಪ್ರಕೃತ ವಿಷಯವನ್ನು ಮುಕ್ತಾಯಗೊಳಿಸುವನಾಗಿ ಸಭಾಮಧ್ಯದಲ್ಲಿ ರಾಮನನ್ನು ಕುರಿತು ಶ್ರಾವ್ಯವಾದ ಈ ಮಾತನ್ನು ಹೇಳಿದನು.

೨೩. ನಿರ್ದೋಷಿಯಾದ ರಾಮನೆ, ನಾನು ಹೇಳಿದ ಈ ಮಾತನ್ನು ನಿನ್ನ ಹೃದಯದಲ್ಲಿಟ್ಟುಕೊಂಡು ಅದರಿಂದ ಮನಸ್ಸೆಂಬ ಪಕ್ಷಿಯನ್ನು ಕಟ್ಟಿ ನಿನ್ನ ವಶ ಮಾಡಿಕೋ.

೨೪. ಕಠಿನವಾದುದನ್ನು ಬಿಟ್ಟು ಸ್ಥಾಯಿಯಾದ ನನ್ನ ಮಾತಿನ ಅರ್ಥವನ್ನು ಹಂಸವು ನೀರನ್ನು ಬಿಟ್ಟು ಹಾಲನ್ನು ಗ್ರಹಿಸುವಂತೆ, ಗ್ರಹಿಸಿದೆಯಾ ?

೨೫. ಎಲೈ ಸಜ್ಜನನೇ, ನೀನಿದೆಲ್ಲವನ್ನೂ ಸ್ವಬುದ್ಧಿಯಿಂದ ಮತ್ತೆಮತ್ತೆ ವಿಚಾರಮಾಡಿ ಇದೇ ಮಾರ್ಗದಲ್ಲಿ ಹೋಗುವವನಾಗು.

ಅನೇನ=ವಾಸನಾಕ್ಷಯ, ಮನೋನಾಶ, ಪ್ರಾಣಸಂರೋಧ, ಜ್ಞಾನಾಭ್ಯಾಸ-ಪಥಾ—ತಾ. ಪ್ರ.

೨೬. ರಾಮನೆ, ಇದೇ ತಿಳಿವಳಿಕೆಯಿಂದ ಆಚರಿಸುವನಾದರೆ ನೀನು ಬಂಧನವನ್ನು ಹೊಂದದೆ ಇರುವಿ. ಇಲ್ಲದಿದ್ದರೆ ವಿಂಧ್ಯಪರ್ವತದ ಗುಂಡಿಯಲ್ಲಿ ಬಿದ್ದ ಆನೆಯಂತೆ, ಚ್ಯುತನಾಗುವಿ.

ಸುಗೃಹೀತಂ ಧಿಯಾ ರಾಮ ಮದ್ವಚೋ ನ ಕರೋಷಿ ಚೇತ್ ।
ತತ್ಪತಸ್ಯವಟೇ ತ್ಯಕ್ತದೀಪೋ ವಾಽಂಧೋ ನಿಶಾಸ್ವಿವ ॥ ೨೭ ॥

ಅಸಂಗೇನ ಯಥಾ ಪ್ರಾಪ್ತೋ ವ್ಯವಹಾರೋಽಸ್ಯ ಸಿದ್ಧಯೇ ।
ಇತ್ಯೇವ ಶಾಸ್ತ್ರಸಿದ್ಧಾಂತಮಾದಾಯೋದಾರವಾನ್ ಭವ ॥ ೨೮ ॥

ಹೇ ಸಭ್ಯಾ ಹೇ ಮಹಾರಾಜ ರಾಮಲಕ್ಷ್ಮಣಭೂಮಿಪಾಃ ।
ಸರ್ವ ಏವ ಭವಂತೋಽದ್ಯ ತಾವದ್ವ್ಯಾಪಾರಮಾಹ್ನಿಕಂ ॥ ೨೯ ॥

ಕುರ್ವಂತ್ವಯಂ ಹಿ ದಿವಸಃ ಪ್ರಾಯಃ ಪರಿಣತಾಕೃತಿಃ ।
ಶೇಷಂ ವಿಚಾರಯಿಷ್ಯಾಮೋ ವಿಚಾರ್ಯಂ ಪ್ರಾತರಾಗತಾಃ ॥ ೩೦ ॥

ಶ್ರೀ ವಾಲ್ಮೀಕಿರುವಾಚ :—

ಇತ್ಯುಕ್ತ್ವಾ ಮುನಿನಾ ತೇನ ಸಾ ಸರ್ವೈವ ತದಾ ಸಭಾ ।
ಪ್ರೋತ್ತಸ್ಥೌ ಪದ್ಮವದನಾ ಸವಿಕಾಸೇವ ಪದ್ಮಿನೀ ॥ ೩೧ ॥

---

೨೭. ರಾಮನೆ, ನನ್ನ ಮಾತನ್ನು ಚೆನ್ನಾಗಿ ತಿಳಿದುಕೊಂಡು ಅದರಂತೆ ನಡೆಯದಿದ್ದರೆ ರಾತ್ರಿಯಲ್ಲಿ ದೀಪವಿಲ್ಲದವನಾಗಲಿ ಕುರುಡನಾಗಲಿ ಗುಂಡಿಯಲ್ಲಿ ಬಿದ್ದಂತೆ ಬೀಳುವಿ.

೨೮. ಸ್ವಭಾವವಾಗಿ ಬಂದ ವ್ಯವಹಾರವನ್ನು ಫಲಾಸಕ್ತಿಯಿಲ್ಲದೆ ಮಾಡಿದರೆ ನಾನು ಹೇಳಿದ ಪ್ರಯೋಜನವು ಸಿದ್ಧಿಸುತ್ತದೆ. ಈ ರೀತಿಯಾದ ಶಾಸ್ತ್ರದ ಸಿದ್ಧಾಂತವನ್ನು ತಿಳಿದುಕೊಂಡು ಪೂರ್ಣವಾದ ಆತ್ಮಜ್ಞಾನವುಳ್ಳವನಾಗು.

೨೯–೩೦. ಸಭಿಕರೆ, ಮಹಾರಾಜನೆ, ರಾಮಲಕ್ಷ್ಮಣರೆ, ರಾಜರೆ, ನೀವೆಲ್ಲರೂ ಈಗ ಸಂಧ್ಯಾವಂದನೆ ಮಾಡಿರಿ. ಸಾಯಂಕಾಲ ಸಮೀಪಿಸಿತು. ಉಳಿದ ವಿಚಾರವನ್ನು ನಾಳೆ ಬೆಳಗ್ಗೆ ಬಂದು ಮಾಡೋಣ.

೩೧. ಶ್ರೀ ವಾಲ್ಮೀಕಿಯು ಹೇಳಿದನು :—ವಸಿಷ್ಠ ಮಹರ್ಷಿಯು ಈ ರೀತಿ ಹೇಳಲು, ಆ ಸಭೆಯೆಲ್ಲವೂ ಕಮಲಗಳೇ ಮುಖವಾಗಿಯುಳ್ಳ ಪದ್ಮಲತೆಯು ಅರಳುತ್ತ ಅರಳುತ್ತ ಮೇಲೆದ್ದಂತೆ ಎದ್ದಿತು.

ರಾಜಾನಃ ಸ್ತುತರಾಜಾನಃ ಕೃತರಾಘವವಂದನಾಃ |
ಪರಿಷ್ಟುತೇ ವಸಿಷ್ಟೇ ತೇ ಜಗ್ಮುರಾತ್ಮನಿವೇಶನಂ ॥ ೩೨ ॥

ವಿಶ್ವಾಮಿತ್ರೇಣ ಸಹಿತೋ ವಸಿಷ್ಟೋ ಗಂತುಮಾಶ್ರಮಂ |
ಉತ್ತಸ್ಥಾವಾಸನಾತ್ ಶ್ರೀಮಾನ್ನಮಸ್ಕೃತನಭಶ್ಚರಃ ॥ ೩೩ ॥

ದಶರಥಪ್ರಭೃತಯೋ ರಾಜಾನೋ ಮುನಯಸ್ತಥಾ |
ಯಥಾನುರೂಪಂ ವಕ್ತಾರಮನುಗಮ್ಯ ಮುನಿಂ ಚಿರಂ ॥ ೩೪ ॥

ಆಪೃಚ್ಛ್ಯ ಕೇಚಿದ್ಗಗನಂ ಯಯುಃ ಕೇಚಿದ್ವನಾಂತರಂ |
ಕೇಚಿದ್ರಾಜಗೃಹಂ ಸಂತೋ ಭೃಂಗಾಃ ಪದ್ಮೋತ್ಥಿತಾ ಇವ ॥ ೩೫ ॥

ವಸಿಷ್ಠಪಾದಯೋಸ್ತ್ಯಕ್ತ್ವಾ ಪುಷ್ಪಾಂಜಲಿಮನಾವಿಲಂ |
ದಾರೈರನುಗತೋ ರಾಜಾ ಪ್ರವಿವೇಶ ಗೃಹಾಂತರಂ ॥ ೩೬ ॥

---

೩೨. ರಾಜರು ದಶರಥನನ್ನೂ ಸ್ತುತಿಸಿ ರಾಮಲಕ್ಷ್ಮಣರನ್ನು ವಂದಿಸಿ ವಸಿಷ್ಠ ಮಹರ್ಷಿಯು ಸಂತೋಷಗೊಳ್ಳುತಿರಲು ತಮ್ಮತಮ್ಮ ಮನೆಗಳಿಗೆ ಹೊರಟು ಹೋದರು.

೩೩. ವಸಿಷ್ಠ ಮಹರ್ಷಿಯು ದೇವತೆಗಳು ಮಾಡಿದ ನಮಸ್ಕಾರವನ್ನು ಕೈಗೊಂಡು ವಿಶ್ವಾಮಿತ್ರ ಮಹರ್ಷಿಯೊಡನೆ, ಆಶ್ರಮಕ್ಕೆ ಹೋಗುವುದಕ್ಕೋಸ್ಕರ ಆಸನದಿಂದೆದ್ದನು.

೩೪-೩೫. ದಶರಥನೇ ಮೊದಲಾದ ರಾಜರೂ ಮುನಿಗಳೂ ಅವರವರಿಗೆ ತಕ್ಕಂತೆ ಉಪದೇಶಕನಾದ ವಸಿಷ್ಠನನ್ನೂ ಬಹು ಹೊತ್ತು ಹಿಂಬಾಲಿಸಿ ಆತನನುಜ್ಞೆ ಪಡೆದು ಕಮಲದಿಂದ ಎದ್ದ ದುಂಬಿಗಳಂತೆ ಕೆಲವರು ಆಕಾಶ ಮಾರ್ಗವಾಗಿ ಹೊರಟರು. ಕೆಲವರು ಅರಣ್ಯಮಧ್ಯಕ್ಕೆ ಹೊರಟರು. ಕೆಲವರು ಅರಮನೆಗೆ ಹೊರಟರು.

೩೬. ದಶರಥನು ನಿರ್ಮಲವಾದ ಹೂಬೊಗಸೆಯನ್ನು ವಸಿಷ್ಠನ ಪಾದಗಳಲ್ಲಿ ಸಮರ್ಪಿಸಿ ಪತ್ನಿಯರೊಡಗೂಡಿ ಮನೆಯೊಳಗೆ ಪ್ರವೇಶಿಸಿದನು.

ರಾಮಲಕ್ಷ್ಮಣಶತ್ರುಘ್ನಾಃ ಪ್ರಾಪ್ತಸ್ಯ ಸ್ವಾಶ್ರಮಂ ಗುರೋಃ |
ಅಭ್ಯರ್ಚ್ಯ ಚರಣೌ ಭಕ್ತ್ಯಾ ತ್ವಾಜಗ್ಮುರ್ನೃಪಮಂದಿರಂ || ೩೭ ||

ಸದನಾನಿ ಸಮಾಸಾದ್ಯ ಶ್ರೋತಾರಃ ಸರ್ವ ಏವ ತೇ |
ಸಸ್ನುರಾನರ್ಚುರಭ್ಯೇಯುರ್ದೇವಾನ್ವಿಪ್ರಾನ್ಪಿತೄಂಸ್ತಥಾ || ೩೮ ||

ಯಥಾಕ್ರಮಂ ಸ್ವಭೃತ್ಯಾಂತ್ಯೈಃ ವಿಪ್ರಾದ್ಯೈರ್ಭೃಶ್ಚ ಪರಿಚ್ಛದೈಃ |
ಸಮಂ ಬುಭುಜಿರೇ ಭೋಜ್ಯಂ ವರ್ಣಧರ್ಮಕ್ರಮೋದಿತಂ || ೩೯ ||

ಅಸ್ತಂಗತೇ ದಿನಕರೇ ಸಮಂ ದಿವಸಕರ್ಮಭಿಃ |
ಅಭ್ಯಾಗತೇ ರಾತ್ರಿಕರೇ ಸಮಂ ರಜನಿಕರ್ಮಭಿಃ || ೪೦ ||

ಸ್ಥಿತ್ವಾ ಕಲ್ಪೇಷು ಕೌಶೇಯಶಯನೇಷ್ವಾಸನೇಷು ಚ |
ಭೂಚರಾ ಮುನಿರಾಜಾನೋ ರಾಜಪುತ್ರಾ ಮಹರ್ಷಯಃ || ೪೧ ||

ಸಂಸಾರೋತ್ತಾರಣೋಪಾಯಂ ವಸಿಷ್ಠವದನೇರಿತಂ |
ಯಥಾವದೇಕಾಗ್ರಧಿಯಶ್ಚಿಂತಯಾಮಾಸುರಾದೃತಾಃ || ೪೨ ||

---

೩೭. ರಾಮಲಕ್ಷ್ಮಣ ಶತ್ರುಘ್ನರು ತಮ್ಮ ಆಶ್ರಮಕ್ಕೆ ಬಂದ ಗುರುಗಳ ಪಾದಗಳನ್ನು ಭಕ್ತಿಯಿಂದ ಪೂಜಿಸಿ ಅರಮನೆಗೆ ಬಂದರು

೩೮. ಶ್ರೋತೃಗಳೆಲ್ಲರೂ ತಮ್ಮ ತಮ್ಮ ಮನೆಗೆ ಹೋಗಿ ಸ್ನಾನ ಮಾಡಿ ದೇವತೆಗಳನ್ನು ಪೂಜಿಸಿದರು. ಅತಿಥಿಗಳನ್ನೆದುರುಗೊಂಡರು. ಪಿತೃಗಳನ್ನೂ ಪೂಜಿಸಿದರು.

೩೯. ಬ್ರಾಹ್ಮಣರು ಮೊದಲುಗೊಂಡು ಸೇವಕರವರೆಗಿನ ಎಲ್ಲಾ ಪರಿವಾರ ದೊಡನೆ ವರ್ಣಧರ್ಮಕ್ಕನುಸಾರವಾಗಿ ಕೂಡಿಕೊಂಡು ಭೋಜನಮಾಡಿದರು.

೪೦-೪೧-೪೨. ಸೂರ್ಯನು ಹಗಲಿನ ಕೃತ್ಯಗಳೊಂದಿಗೆ ಅಸ್ತನಾಗುತ್ತಿರಲು ಚಂದ್ರನು ರಾತ್ರಿಕೃತ್ಯಗಳೊಂದಿಗೆ ಉದಯಿಸುತ್ತಿರಲು, ಮನುಷ್ಯರೂ, ಮುನಿಗಳೂ, ರಾಜರೂ, ರಾಜಪುತ್ರರೂ, ಮಹರ್ಷಿಗಳೂ, ರೇಶಿಮೆಯ ಹಾಸಿಗೆಗಳಲ್ಲೂ, ಆಸನಗಳಲ್ಲೂ ಕುಳಿತುಕೊಂಡು, ವಸಿಷ್ಠ ಮಹರ್ಷಿಯು ಹೇಳಿದ ಸಂಸಾರದಾಟುವ ಉಪಾಯವನ್ನು ಏಕಾಗ್ರವಾದ ಮನಸ್ಸಿನಿಂದ ಆದರಪೂರ್ವಕವಾಗಿ ಚಿಂತಿಸಿದರು.

ತತಃ ಪ್ರಹರಮಾತ್ರೇಣ ನಿದ್ರಾಮಾಮುದ್ರಿತಾನನಾಃ ।
ಉತ್ಸ್ವಪ್ನಸುಂದರೀಮಾಯುಃ ಪದ್ಮಾ ಇವ ದಿನಾರ್ಥಿನಃ ॥ ೪೩ ॥

ರಾಮಲಕ್ಷ್ಮಣಶತ್ರುಘ್ನಾಃ ಪ್ರಹರತ್ರಯಮೇವ ತತ್ ।
ವಾಸಿಷ್ಠಮುಪದೇಶಂ ತೇ ಚಿಂತಯಾಮಾಸುರಕ್ಷತಂ ॥ ೪೪ ॥

ಪ್ರಹರಸ್ಯಾರ್ಧಮಾತ್ರಂ ತೇ ತತ ಆಮುದ್ರಿತೇಕ್ಷಣಾಃ ।
ಉತ್ಸ್ವಪ್ನಮಾಯಯುರ್ನಿದ್ರಾಂ ಕ್ಷಣಾದ್ವಿದ್ರಾವಿತಶ್ರಮಾಂ ॥ ೪೫ ॥

ಇತಿ ಶುಭಮನಸಾಂ ವಿವೇಕಭಾಜಾಂ ।
ಅಧಿಗತಸಾರತಯೋದಿತಾಶಯಾನಾಂ ॥
ಅಭಜತ ವಿರತಿಂ ತದಾ ತ್ರಿಯಾಮಾ ।
ಮಲಿನನಿಶಾಕರವಕ್ತ್ರತಾಂ ಜಗಾಮ ॥ ೪೬ ॥

ಇತ್ಯಾರ್ಷೇ ವಾಸಿಷ್ಠರಾಮಾಯಣೇ ವಾಲ್ಮೀಕೀಯೇ ದೇವದೂತೋಕ್ತೇ ಮೋಕ್ಷೋಪಾಯೇಷು
ನಿರ್ವಾಣಪ್ರಕರಣೇ "ದಿವಸವ್ಯವಹಾರವರ್ಣನಂ" ನಾಮ ಪ್ರಥಮಃ ಸರ್ಗಃ

---

೪೩. ಅನಂತರ ಜಾವದ ಹೊತ್ತಿನಲ್ಲೇ ಮುಚ್ಚಿದ ಕಣ್ಣುಳ್ಳವರಾಗಿ ಹಗಲನ್ನು ಬಯಸುವ ಕಮಲಗಳಂತೆ ಒಳ್ಳೆಯ ಸ್ವಪ್ನದಿಂದ ರಮ್ಯವಾದ ನಿದ್ದೆಯನ್ನು ಹೊಂದಿದರು.

(ಉತ್ಸ್ವಪ್ನ ಸುಂದರೀಂ. ಭಾವಿಶುಭಸೂಚಕತ್ವಾ ದುತ್ಕೃಷ್ಟ ಸ್ವಪ್ನೈಃ ಸುಂದರೀಂ ರಮಣೀಯಾಂ—ತಾ. ಪ್ರ.)

೪೪. ರಾಮಲಕ್ಷ್ಮಣಶತ್ರುಘ್ನರು ವಸಿಷ್ಠ ಮಹರ್ಷಿಯ ಉಪದೇಶವನ್ನು ಮೂರು ಜಾವ ಪರ್ಯಂತವೂ ಅವಿಚ್ಛಿನ್ನವಾಗಿ ಚಿಂತಿಸಿದರು.

೪೫. ಅನಂತರ ಅರ್ಧಜಾವ ಮಾತ್ರ ಕಣ್ಣುಮುಚ್ಚಿ ಶ್ರಮನಿವಾರಕವಾಗಿಯೂ ಒಳ್ಳೆ ಸ್ವಪ್ನವುಳ್ಳದ್ದಾಗಿಯೂ ಇರುವ ನಿದ್ದೆಯನ್ನು ಹೊಂದಿದರು.

೪೬. ಈ ರೀತಿ ಶುದ್ಧ ಮನಸ್ಸುಳ್ಳವರಾಗಿಯೂ, ವಿವೇಕವುಳ್ಳವರಾಗಿಯೂ, ಉಪದೇಶದ ಸಾರಾಂಶಗ್ರಹಣದಿಂದ ಮನಃಪರಿಪಾಕವುಳ್ಳವರಾಗಿಯೂ ಇರುವ ರಾಮಾದಿಗಳ ರಾತ್ರಿಯು ಮುಗಿದು ಕಾಂತಿಹೀನ ಚಂದ್ರನೇ ಮುಖವುಳ್ಳದ್ದಾಯಿತು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ
ನಿರ್ವಾಣಪ್ರಕರಣದ ಪೂರ್ವಾರ್ಧದಲ್ಲಿ "ದಿವಸವ್ಯವಹಾರ ವರ್ಣನ" ಎಂಬ
ಮೊದಲನೆಯ ಸರ್ಗವು.

ದ್ವಿತೀಯಃ ಸರ್ಗಃ

ಶ್ರೀ ವಾಲ್ಮೀಕಿರುವಾಚ—

ತತಃ ಕ್ಲಿನ್ನೇಂದುವದನಾ ಪರ್ಯಾಕುಲತಮಃಪದಾ ।
ಕ್ಷೀಯಮಾಣಾ ಬಭೌ ಶ್ಯಾಮಾ ವಿವೇಕ ಇವ ವಾಸನಾ ॥ ೧ ॥

ಪೂರ್ವೇ ಧ್ವಸ್ತತಯಾಲೋಕಂ ದೃಶ್ಯಮಾನೇ ಪರೇಽಚಲೇ ।
ಶಯಾಲೀಕಾವತಂಸಾಭಂ ತಾಪಕೋ ನಿಕರೋ ದಧೌ ॥ ೨ ॥

ಅವಶ್ಯಾಯಕಣಾಕರ್ಷೀ ಪರಾಮೃಷ್ಟೇಂದುಮಂಡಲಃ ।
ಜ್ಯೋತ್ಸ್ನಾಕವಲನಾಲೋಕೋ ಬಭೌ ಪ್ರಾಭಾತಿಕೋಽನಿಲಃ ॥ ೩ ॥

ಎರಡನೆಯ ಸರ್ಗ

೧. ವಾಲ್ಮೀಕಿಯು ಹೇಳಿದನು:—ಅನಂತರ ಕಾಂತಿಯಡಗಿದ ಚಂದ್ರನ ಮೊಗವುಳ್ಳ, ಕತ್ತಲೆಯಾವರಿಸಿದ ದಾರಿಯುಳ್ಳ, ಕ್ಷಯೋನ್ಮುಖವಾದ ರಾತ್ರಿಯು ವಿವೇಕವುಂಟಾದಾಗ (ಶಿಥಿಲವಾಗುವ) ವಾಸನೋಪಾದಿಯಲ್ಲಿ ಪ್ರಕಾಶಿಸಿತು.

೨. ಕಿರಣಗಳನ್ನೂ ಬೀರಿ ಸುಡತಕ್ಕ ಸೂರ್ಯನು ಪೂರ್ವದಲ್ಲಿ ಕಾಣುವ ಪರ್ವತದಲ್ಲಿ ಶಿಖರಗಳಿಂದ ತಡೆಯಾಗುವುದರಿಂದ ಪಶ್ಚಿಮದ ಪರ್ವತದಲ್ಲಿ ಕಲ್ಪಿತವಾದ ಕಿರೀಟಗಳ ಕಾಂತಿಯನ್ನೂ ಹೊಂದಿದನು.

೩. ಚಂದ್ರಮಂಡಲವನ್ನು ಮುಟ್ಟಿ ಮಂಜಿನ ಹನಿಗಳನ್ನು ಸೆಳೆದು ತರುವ ಮುಂಜಾನೆಯ ಗಾಳಿಯು ಬೆಳದಿಂಗಳನ್ನು ನುಂಗಿ ಬೆಳಕು ತೋರುವುದಾಗಿ ಶೋಭಿಸಿತು.

(ಇದು ಸೂರ್ಯನನ್ನು ವಾಯುವಿಗೆ ಕಣ್ಣಾಗಿ ಆರೋಪಿಸಿ ಹೇಳುವ ಮಾತು —ತಾ. ಪ್ರ.)

ರಾಮಲಕ್ಷ್ಮಣಶತ್ರುಘ್ನಾ ಉತ್ಥಾಯಾನುಚರೈಃ ಸಹ ।
ಯಯುರ್ವಂದಿತಸಂಧ್ಯಾಸ್ತೇ ಪುಣ್ಯಂ ವಾಸಿಷ್ಠಮಾಶ್ರಮಂ ॥ ೪ ॥

ತತ್ರ ವಂದಿತಸಂಧ್ಯಸ್ಯ ನಿರ್ಗತಸ್ಯಾಪಿ ಸದ್ಮತಃ ।
ಮುನೇರ್ವವಂದಿರೇ ಪಾದೌ ಪದೋರ್ದತ್ತ್ವಾರ್ಘ್ಯಸಂತತಿಂ ॥ ೫ ॥

ಕ್ಷಣಾತ್ತತ್ಸದನಂ ಮೌನಂ ಮುನಿಬ್ರಾಹ್ಮಣರಾಜಭಿಃ ।
ಹಸ್ತ್ಯಶ್ವರಥಯಾನೈಶ್ಚ ಶನೈರ್ನೀರಂಧ್ರತಾಂ ಯಯೌ ॥ ೬ ॥

ಅಥಾಸೌ ಮುನಿಶಾರ್ದೂಲಸ್ತಯೈವ ಸಹ ಸೇನಯಾ ।
ಗೃಹಂ ದಾಶರಥಂ ಕಾಲೇ ರಾಮಾದ್ಯನುಗತೋ ಯಯೌ ॥ ೭ ॥

ತತ್ರೈನಂ ಪೂರ್ವಸಂಬಂಧಃ ಕೃತಸಂಧ್ಯೋ ಮಹೀಪತಿಃ ।
ದೂರಮಾರ್ಗಂ ವಿನಿರ್ಗತ್ಯ ಪೂಜಯಾಮಾಸ ಸಾದರಂ ॥ ೮ ॥

---

೪. ರಾಮಲಕ್ಷ್ಮಣಶತ್ರುಘ್ನರು ಅನುಜರರೊಡನೆ ಎದ್ದು ಸಂಧ್ಯಾವಂದನೆ ಮಾಡಿ ಪುಣ್ಯಕರವಾದ ವಸಿಷ್ಠನಾಶ್ರಮವನ್ನು ಕುರಿತು ಹೊರಟರು.

೫. ಅಲ್ಲಿ ಅವರು ಸಂಧ್ಯಾವಂದನೆ ಮಾಡಿ ಮನೆಯಿಂದ ಹೊರಟ ವಸಿಷ್ಠ ಮಹರ್ಷಿಯ ಪಾದಗಳಲ್ಲಿ ಅರ್ಘ್ಯವನ್ನು ಸಮರ್ಪಿಸಿ ನಮಸ್ಕರಿಸಿದರು.

೬. ಕ್ಷಣಮಾತ್ರದಲ್ಲಿಯೇ ಮುನಿಗಳ ಆ ಮನೆಯು ಮುನಿಬ್ರಾಹ್ಮಣರಾಜರಿಂದಲೂ, ಆನೆ, ಕುದುರೆ, ರಥ ಮೊದಲಾದ ವಾಹನಗಳಿಂದಲೂ, ಕ್ರಮೇಣ ನಿಬಿಡವಾಯಿತು.

೭. ಅನಂತರ ಆ ಮುನಿಶ್ರೇಷ್ಠನು ಅದೇ ಸೇನೆಯಿಂದಲೂ, ರಾಮಾದಿಗಳಿಂದಲೂ ಕೂಡಿ ನಿಯತಕಾಲದಲ್ಲಿ ದಶರಥನ ಮನೆಯನ್ನು ಹೊಂದಿದನು.

೮. ಅಲ್ಲಿ ಸಂಧ್ಯಾವಂದನಾದಿಗಳನ್ನು (ಕಾದಿದ್ದ) ದಶರಥನು ತಾನೇ ಎದ್ದು ದೂರದ ತನಕ ಬಂದು ವಸಿಷ್ಠನನ್ನು ಆದರದಿಂದ ಪೂಜಿಸಿದನು.

ಪುಷ್ಪಮುಕ್ತಾಮಣಿಪ್ರಾತ್ಯೈರ್ಭೂರ್ಯೋऽತ್ಯಧಿಕಭೂಷಿತಾಂ ।
ಸಭಾಂ ಪ್ರವಿಶ್ಯ ತೇ ಸರ್ವೇ ವಿವಿಶುರ್ವಿಷ್ಟರಾಲಿಷು ॥ ೯ ॥

ಅಥ ತಸ್ಮಿನ್ನವಸರೇ ಹ್ಯಸ್ತನಾಃ ಸರ್ವ ಏವ ತೇ ।
ಶ್ರೋತಾರಃ ಸಮುಪಾಜಗ್ಮುರ್ನಭಶ್ಚರಮಹೀಚರಾಃ ॥ ೧೦ ॥

ವಿವೇಶ ಸಾ ಸಭಾ ಸೌಮ್ಯಾ ಕೃತಾನ್ಯೋನ್ಯಾಭಿವಂದನಾ ।
ಬಭೌ ರಾಜಸಮಾಭೋಗಾ ಶಾಂತವಾತೇವ ಪದ್ಮಿನೀ ॥ ೧೧ ॥

ಯಥಾ ಪ್ರದೇಶಮೇವಾಶು ನಿವಿಷ್ಟೇಷು ಯಥಾಸುಖಾ ।
ತೇಷು ತೇಧೃಶಯೋಗೇಷು ವಿಪ್ರರ್ಷಿಮುನಿರಾಜಸು ॥ ೧೨ ॥

ಮೃದುನಿ ಸ್ವಾಗತರವೇ ಶನೈಃ ಶಮಮುಪಾಗತೇ ।
ಸಭಾಕೋಣೋಪವಿಷ್ಟೇಷು ಶಾಂತಶಬ್ದೇಷು ವಂದಿಷು। ॥ ೧೩ ॥

---

೯. ಅವರೆಲ್ಲರೂ ಹೂ ಮುತ್ತು ರತ್ನಗಳಿಂದ ಅತ್ಯಂತವಾಗಿ ಕಂಗೊಳಿಸುತ್ತಿರುವ ಸಭೆಯನ್ನು ಪ್ರವೇಶಿಸಿ ಆಸನ ಪಂಕ್ತಿಗಳಲ್ಲಿ ಕುಳಿತುಕೊಂಡರು.

೧೦. ಅನಂತರ ಆ ಸಮಯದಲ್ಲಿ ಹಿಂದಿನ ದಿನದ ದೇವಮಾನುಷರಾದಿಯಾದ ಎಲ್ಲಾ ಶ್ರೋತೃಗಳೂ, ಕುಳಿತುಕೊಂಡರು.

೧೧. ಪರಸ್ಪರ ವಂದನೆಮಾಡಿ ಸೌಮ್ಯವಾದ ಆ ಸಭೆಯು ಕುಳಿತುಕೊಂಡಿತು. ರಾಜನಂತೆಯೇ ನಿಶ್ಚಲಸ್ಥಿತಿಯುಳ್ಳ ಆ ಸಭೆಯು ಗಾಳಿಯಡಗಿದಾಗ ಮೆರೆವ ಕಮಲ ಸರಸ್ಸಿನಂತೆ ಶೋಭಿಸಿತು.

೧೨. ಬ್ರಾಹ್ಮಣರೂ, ಋಷಿಗಳೂ, ಮುನಿಗಳೂ, ರಾಜರೂ, ಸೌಕರ್ಯಾನುಸಾರವಾಗಿ ಆಯಾ ಪ್ರದೇಶದಲ್ಲಿ ಕುಳಿತುಕೊಳ್ಳುತ್ತಿರಲು;

೧೩. ಸ್ವಾಗತಶಬ್ದವು ಕ್ರಮೇಣ ಕಡಿಮೆಯಾಗುತ್ತಿರಲು, ಸಭೆಯ ಮೂಲೆಗಳಲ್ಲಿ ಕುಳಿತಿದ್ದ ಸ್ತುತಿಪಾಠಕರ ಶಬ್ದವೂ ಕಡಿಮೆಯಾಗುತ್ತಿರಲು;

ತರಸೈವೋದಿತೇಷ್ವಾಶು ಶ್ರೋತುಮಭ್ಯಾಗತೇಷ್ವಿವ ।
ಗವಾಕ್ಷಾದಿವ ಜಾಲೇಷು ಪ್ರವಿಷ್ಟೇಷ್ವರ್ಕರಶ್ಮಿಷು ॥ ೧೪ ॥

ಸತ್ವರಪ್ರವಿಶಚ್ಛ್ರೋತೃಹಸ್ತಸ್ಪರ್ಶಘಟೋದ್ಭವೇ ।
ಮುಕ್ತಾಜಾಲಝಣತ್ಕಾರೇ ನಿದ್ರಾಯಾಮಿವ ಶಾಮ್ಯತಿ ॥ ೧೫ ॥

ಕುಮಾರಃ ಶಂಕರಸ್ಯೇವ ಕಚೋ ದೇವಗುರೋರಿವ ।
ಪ್ರಹ್ಲಾದ ಇವ ಶುಕ್ರಸ್ಯ ಸುಪರ್ಣ ಇವ ಶಾಂಗಿರ್ಣಃ ॥ ೧೬ ॥

ವಸಿಷ್ಠಸ್ಯಾನನೇ ರಾಮಃ ಶನೈರ್ದೃಷ್ಟಿಂ ನ್ಯವೇಶಯತ್ ।
ಭ್ರಮಂತೀಮಂಬರೋಪಾಂತೇ ಫುಲ್ಲಪದ್ಮ ಇವಾಲಿನೀಂ ॥ ೧೭ ॥

ಮುನಿಸ್ತ್ವನುಜ್ಝಿತೇನಾಥ ತೇನೈವ ರಘುನಂದನಂ ।
ಕ್ರಮೇಣೋವಾಚ ವಾಕ್ಯಜ್ಞೋ ವಾಕ್ಯಂ ವಾಕ್ಯಾರ್ಥಕೋವಿದಂ ॥ ೧೮ ॥

---

೧೪. ಉದಿಸಿದ ಸೂರ್ಯಕಿರಣಗಳು ಶ್ರವಣಕ್ಕೋ ಎಂಬಂತೆ, ಕಿಟಕಿಗಳನ್ನು ಹತ್ತಿಯೋ ಎಂಬಂತೆ, ಅವುಗಳ ರಂಧ್ರಗಳಿಂದ ಒಳಗೆ ಪ್ರವೇಶಿಸುತ್ತಿರಲು ;

೧೫. ತ್ವರೆಯಿಂದ ಪ್ರವೇಶಿಸುವ ಶ್ರೋತೃಗಳ ಕೈತಾಕುವಿಕೆಯಿಂದಲೂ, ಹೊಡೆತಗಳಿಂದಲೂ, ಉಂಟಾದ ಮುತ್ತಿನ ಮಾಲೆಗಳ ಝಣ ಝಣ ಶಬ್ದವು ನಿದ್ದೆಯಲ್ಲಿ ಎಂತೋ ಅಂತು ಶಾಂತವಾಗುತ್ತಿರಲು ;

೧೬-೧೭. ಷಣ್ಮುಖನು ಈಶ್ವರನನ್ನೂ, ಕಚನು ಬೃಹಸ್ಪತಿಯನ್ನೂ, ಪ್ರಹ್ಲಾದನು ಶುಕ್ರನನ್ನೂ, ಗರುಡನು ವಿಷ್ಣುವನ್ನೂ, ದರ್ಶನ ಮಾಡುವಾಗ ಹೇಗೋ ಹಾಗೆ, ರಾಮನು ವಸಿಷ್ಠನ ಮುಖವನ್ನು, ಆಕಾಶದಲ್ಲಿ ಹಾರಾಡುತ್ತಿರುವ ಹೆಣ್ಣು ದುಂಬಿಯು ಅರಳಿದ ಕಮಲವನ್ನು ನೋಡುವಂತೆ ನೋಡಿದನು.

೧೮. ವಸಿಷ್ಠನಾದರೋ ಅದೇ ಹಿಂದಿನ ಕ್ರಮದಿಂದಲೇ ವಾಕ್ಯಾರ್ಥ ಕುಶಲನಾದ ರಾಮನನ್ನು ಕುರಿತಿಂತೆಂದನು.

ಶ್ರೀ ವಸಿಷ್ಠ ಉವಾಚ :—

ಕಚ್ಚಿತ್ಸ್ಮರಸಿ ಯತ್ಪ್ರೋಕ್ತಂ ಪ್ರೋ ಮಯಾ ರಘುನಂದನ ।
ವಾಕ್ಯಮತ್ಯಂತಗುರ್ವರ್ಥಂ ಪರಮಾರ್ಥಾವಬೋಧನಂ ॥ ೧೯ ॥

ಇದಾನೀಮವಬೋಧಾರ್ಥಮನ್ಯಚ್ಚ ರಿಪುಮರ್ದನ ।
ಉಚ್ಯಮಾನಂ ಮಯೇವಂ ಚ ಶೃಣು ಶಾಶ್ವತಸಿದ್ಧಯೇ ॥ ೨೦ ॥

ವೈರಾಗ್ಯಾಭ್ಯಾಸವಶತಸ್ತಥಾ ತತ್ತ್ವಾವಬೋಧನಾತ್ ।
ಸಂಸಾರಸ್ತೀರ್ಯತೇ ತೇನ ತೇಷ್ವೇವಾಭ್ಯಾಸಮಾಹರ ॥ ೨೧ ॥

ಸಂಮ್ಯಕ್ತತ್ತ್ವಾವಬೋಧೇನ ದುರ್ಬೋಧೇ ಕ್ಷಯಮಾಗತೇ ।
ಗಲಿತೇ ವಾಸನಾವೇಶೇ ವಿಶೋಕಂ ಪ್ರಾಪ್ಯತೇ ಪದಂ ॥ ೨೨ ॥

ದಿಕ್ಕಾಲಾದ್ಯನವಚ್ಛಿನ್ನಮದೃಷ್ಟೋಭಯಕೋಟಿಕಂ ।
ಏಕಂ ಬ್ರಹ್ಮೈವ ಹಿ ಜಗತ್ಸ್ಥಿತಂ ದ್ವಿತ್ವಮುಪಾಗತಂ ॥ ೨೩ ॥

---

೧೯. ವಸಿಷ್ಠನು ಹೇಳಿದನು:—ರಘುನಂದನನೇ, ನಿನ್ನೆ ನಾನು ಹೇಳಿದ ಅರ್ಥಗರ್ಭಿತವಾದ, ಪರಮಾರ್ಥ ತತ್ವವನ್ನು ಬೀರುವ ಮಾತು ಜ್ಞಾಪಕವಿದೆಯೇ ?

೨೦. ಶತ್ರುನಾಶಕನೆ, ಈಗ ಜ್ಞಾನವನ್ನುಂಟುಮಾಡುವ ಮತ್ತು ಮೋಕ್ಷವೇ ಪ್ರಯೋಜನವಾಗುಳ್ಳ ನಾನು ಹೇಳುವ ಮಾತನ್ನು ಕೇಳು.

೨೧. ವೈರಾಗ್ಯವನ್ನು ಅಭ್ಯಸಿಸುವುದರಿಂದಲೂ, ಮತ್ತು ತತ್ವವನ್ನರಿಯುವುದ ರಿಂದಲೂ ಸಂಸಾರವು ದಾಟಲ್ಪಡುವುದು. ಆದ್ದರಿಂದ ಅವುಗಳಲ್ಲೇ ಅಭ್ಯಾಸ ವನ್ನು ಸ್ಥಿರಗೊಳಿಸು.

೨೨. ಚೆನ್ನಾಗಿ ತತ್ವವನ್ನು ಅರಿತುಕೊಳ್ಳುವುದರಿಂದ ಅಜ್ಞಾನವು ಕ್ಷೀಣ ವಾಗಲು, ದೃಢಸಂಸ್ಕಾರವೂ ನಾಶಹೊಂದಲು, ಶೋಕರಹಿತವಾದ ಮೋಕ್ಷಪದವಿಯು ದೊರೆಯುವುದು.

೨೩. ದಿಕ್ಕು ಕಾಲಗಳಿಗೆ ಒಳಗಾಗದಿರುವುದರಿಂದಲೇ ದೇಶಕಾಲಾತೀತ ವಾಗಿ ಆದ್ಯಂತ ರಹಿತವಾದ ಒಂದೇ ಬ್ರಹ್ಮವಸ್ತುವು ಜಗತ್ತಿನ ಸಂಬಂಧದಿಂದ ದ್ವೈತವನ್ನು ಹೊಂದಿರುವುದು.

ಸರ್ವಭಾವಾನವಚ್ಛಿನ್ನಂ ಯತ್ರ ಬ್ರಹ್ಮೈವ ವಿದ್ಯತೇ ।
ಶಾಂತಂ ಸಮಸಮಾಭಾಸಂ ತತ್ರಾನ್ಯತ್ವಂ ಕಥಂ ಭವೇತ್ ॥ ೨೪ ॥

ಇತಿ ಮತ್ವಾಹಮಿತ್ಯಂತರ್ಮುಕ್ತ್ವಾ ಮುಕ್ತವಪುರ್ಮಹಾನ್ ।
ಏಕರೂಪಃ ಪ್ರಶಾಂತಾತ್ಮಾ ಸಾಕ್ಷಾತ್ಸ್ವಾತ್ಮಸುಖೋ ಭವ ॥ ೨೫ ॥

ನಾಸ್ತಿ ಚಿತ್ತಂ ನ ಚಾವಿದ್ಯಾ ನ ಮನೋ ನ ಚ ಜೀವಕಃ ।
ಏತಾಃ ಸ್ವಕಲನಾ ರಾಮ ಕೃತಾ ಬ್ರಹ್ಮಣ ಏವ ತಾಃ ॥ ೨೬ ॥

ಯಾಃ ಸಂಪದೋ ಯಾಶ್ಚ ಧೃತೋ ಯಾಶ್ಚಿತೋ ಯಾಸ್ತದೇಷಣಾಃ ।
ಬ್ರಹ್ಮೈವ ತದನಾದ್ಯಂತಮಬ್ಧಿವತ್ಪ್ರವಿಜೃಂಭತೇ ॥ ೨೭ ॥

ಪಾತಾಲೇ ಭೂತಲೇ ಸ್ವರ್ಗೇ ತೃಣೇ ಪ್ರಾಣ್ಯಂಬರೇಽಪಿ ಚ ।
ದೃಶ್ಯತೇ ತತ್ಪರಂ ಬ್ರಹ್ಮ ಚಿದ್ರೂಪಂ ನಾನ್ಯದಸ್ತಿ ಹಿ ॥ ೨೮ ॥

---

೨೪. ಯಾವ ಪದಾರ್ಥಗಳಿಂದಲೂ, ಇತಿಮಿತಿಗಳನ್ನು ಪಡೆಯದೆ, ಶಾಂತವಾಗಿಯೂ, ಸಾಧಾರಣವಾದ ಜಾತಿ ಮೊದಲಾದವುಗಳೆಲ್ಲದರಲ್ಲಿಯೂ ಸೇರಿಕೊಂಡಿರುವ ಬ್ರಹ್ಮವು ಎಲ್ಲಿದೆಯೋ ಅಲ್ಲಿ ಭೇದವೆಲ್ಲಿಂದ ಬರಬೇಕು !

೨೫. ಈ ರೀತಿಯಾದ ಬ್ರಹ್ಮಸ್ವರೂಪವನ್ನು ತಿಳಿದುಕೊಂಡು ನಾನೆಂಬ ಅಭಿಮಾನವನ್ನು ಬಿಟ್ಟು ಶರೀರದ ಮೇಲಣ ಅಭಿಮಾನ ತ್ಯಾಗಮಾಡಿ ಮಹತ್ತಾದ ಏಕರೂಪವಾದ ಪ್ರಶಾಂತ ಸ್ವರೂಪವುಳ್ಳ ಆತ್ಮಸ್ವರೂಪ ಸೌಖ್ಯದ ಸಾಕ್ಷಾತ್ಕಾರವುಳ್ಳವನಾಗು.

೨೬. ಚಿತ್ತವೂ ಇಲ್ಲ. ಅಜ್ಞಾನವೂ ಇಲ್ಲ. ಮನಸ್ಸೂ ಇಲ್ಲ. ಭೋಕ್ತೃವೂ ಇಲ್ಲ. ರಾಮ, ಇವೆಲ್ಲವೂ ಬ್ರಹ್ಮದಿಂದಲೇ ನಾನಾಗಿ ಕಲ್ಪಿಸಿಕೊಂಡವು.

೨೭. ಸಮುದ್ರವು ಅನೇಕ ರೂಪಗಳನ್ನು ಹೊಂದುವಂತೆ ಆದ್ಯಂತ ರಹಿತವಾದ ಬ್ರಹ್ಮವೇ ಭೋಗ್ಯವಸ್ತುಗಳು, ಭೋಗರೂಪ ಮನೋವೃತ್ತಿಗಳು, ಆ ವೃತ್ತಿಗಳಲ್ಲಿ ಪ್ರತಿಬಿಂಬಿಸಿದ ಚಿತ್ತುಗಳು, ಭೋಗ್ಯಾಕಾಂಕ್ಷೆಗಳು, ಈ ಎಲ್ಲ ರೂಪಗಳನ್ನೂ ಹೊಂದುವುದು.

೨೮. ಜ್ಞಾನಸ್ವರೂಪವಾದ ಆ ಪರಬ್ರಹ್ಮವಸ್ತುವೇ ಪಾತಾಳದಲ್ಲಿಯೂ,

ಉಪೇಕ್ಷ್ಯ ಹೇಯೋಪಾದೇಯಬಂಧವೋ ವಿಭವಾ ವಪುಃ ।
ಬ್ರಹ್ಮೈವ ವಿಗತಾದ್ಯಂತಮಬ್ಧಿವತ್ಸ್ರವಿಜೃಂಭಂತೇ ॥ ೨೯ ॥

ಯಾವದಜ್ಞಾನಕಲನಾ ಯಾವದಬ್ರಹ್ಮಭಾವನಾ ।
ಯಾವದಾಸ್ಥಾ ಜಗಜ್ಜಾಲೇ ತಾವಚ್ಚಿತ್ತಾಹಿ ಕಲ್ಪನಾ ॥ ೩೦ ॥

ದೇಹೇ ಯಾವದಹಂಭಾವಾ ದೃಶ್ಯೇಽಸ್ಮಿನ್ಯಾವದಾತ್ಮನಾ ।
ಯಾವನ್ಮಮೇದಮಿತ್ಯಾಸ್ಥಾ ತಾವಚ್ಚಿತ್ತಾದಿವಿಭ್ರಮಃ ॥ ೩೧ ॥

ಯಾವನ್ನೋದಿತಮುಚ್ಚೈಸ್ತ್ವಂ ಸಜ್ಜನಾಸಂಗಸಂಗತಃ ।
ಯಾವನ್ಮೌರ್ಖ್ಯಂ ನ ಸಂಕ್ಷೀಣಂ ತಾವಚ್ಚಿತ್ತಾದಿನಿಮ್ನತಾ ॥ ೩೨ ॥

ಭೂಲೋಕದಲ್ಲಿಯೂ, ಸ್ವರ್ಗದಲ್ಲಿಯೂ, ಹುಲ್ಲಿನಲ್ಲಿಯೂ, ಪ್ರಾಣಿಗಳಲ್ಲಿಯೂ, ಆಕಾಶದಲ್ಲಿಯೂ ತೋರುವುದು. ಅದಲ್ಲದೆ ಬೇರೆಯೇನೂ ಅಲ್ಲ.

೨೯. ಆದ್ಯಂತಶೂನ್ಯವಾದ ಬ್ರಹ್ಮವಸ್ತುವೇ ಸಮುದ್ರವೊಂದೇ (ತರಂಗಾದಿ) ಅನೇಕ ರೂಪದಿಂದ ಕಾಣುವಂತೆ, ಉಪೇಕ್ಷ್ಯ ವಸ್ತುರೂಪವಾಗಿಯೂ, ಬೇಕು ಬೇಡಾದ ವಸ್ತುಗಳ ರೂಪವಾಗಿಯೂ, ಬಂಧುಗಳು, ಸಂಪತ್ತು, ದೇಹಗಳ ರೂಪ ವಾಗಿಯೂ ತೋರಿಸಿಕೊಳ್ಳುವುದು.

೩೦. ಎದುವರೆಗೆ ಅಜ್ಞಾನ ಕವಿದಿರುವುದೋ, ಎದುವರೆಗೆ ಜಡಭಾವನೆ ಯಿರುವುದೋ, ಎದುವರೆಗೆ ಪ್ರಪಂಚದಲ್ಲಿ ಆಶೆಯಿರುವುದೋ ಅದುವರೆಗೆ ಚಿತ್ತವೇ ಮೊದಲಾದ ಕಾರ್ಯಕರಣಗಳ ಕಲ್ಪನೆಯಿರುವುದು.

೩೧. ಎದುವರೆಗೆ ಶರೀರವೇ ನಾನೆಂಬ ಭ್ರಾಂತಿಯಿರುವುದೋ, ದೃಶ್ಯವಾದ ವಸ್ತುಗಳಲ್ಲಿ ಎದುವರೆಗೆ ನನ್ನದೆಂಬ ಭಾವನೆಯಿರುವುದೋ ಅಲ್ಲಿಯತನಕ ಚಿತ್ತಾದಿ ಕಲ್ಪನೆಯಿರುವುದು.

೩೨. ಎದುವರೆಗೆ ಸಜ್ಜನರ ಸಹವಾಸದಿಂದ ಪೂರ್ಣತೆಯು ಪ್ರಾದುರ್ಭವಿ ಸುವುದಿಲ್ಲವೋ, ಎದುವರೆಗೆ ಮೂರ್ಖತನವು ಕ್ಷೀಣವಾಗುವುದಿಲ್ಲವೋ, ಅದುವರೆಗೆ ಚಿತ್ತಾದಿಗಳ ಸಂಬಂಧದಿಂದುಂಟಾದ ನೀಚತನವಿರುವುದು.

ಯಾವಚ್ಛಿಥಿಲತಾಂ ಯಾತಂ ನೇದಂ ಭುವನಭಾವನಂ ।
ಸಮ್ಯಗ್ದರ್ಶನಶಕ್ತ್ಯಾಂತಃಸ್ತಾವಚ್ಚಿತ್ತಾದಯಃ ಸ್ಫುಟಾಃ ॥ ೩೩ ॥

ಯಾವದಜ್ಞತ್ವಮಂಧತ್ವಂ ವೈವಶ್ಯಂ ವಿಷಯಾಶಯಾ ।
ಮೌರ್ಖ್ಯಾನ್ಮೋಹಸಮುಚ್ಛ್ರಾಯಸ್ತಾವಚ್ಚಿತ್ತಾದಿಕಲ್ಪನಾ ॥ ೩೪ ॥

ಯಾವದಾಶಾವಿಷಾಮೋದಃ ಪರಿಸ್ಫುರತಿ ಹೃದ್ವನೇ ।
ಪ್ರವಿಚಾರಚಕೋರೋಂತರ್ನ ತಾವತ್ಪ್ರವಿಶತ್ಯಲಂ ॥ ೩೫ ॥

ಭೋಗೇಷ್ವನಾಸ್ಥಮನಸಃ ಶೀತಲಾಮಲನಿರ್ವೃತೇಃ ।
ಭಿನ್ನಾಶಾಪಾಶಜಾಲಸ್ಯ ಕ್ಷೀಯತೇ ಚಿತ್ತವಿಭ್ರಮಃ ॥ ೩೬ ॥

ತೃಷ್ಣಾಮೋಹಪರಿತ್ಯಾಗಾನ್ನಿತ್ಯಶೀತಲಸಂವಿದಃ ।
ಪುಂಸಃ ಪ್ರಶಾಂತಚಿತ್ತಸ್ಯ ಪ್ರಬುದ್ಧಾ ತ್ಯಕ್ತಚಿತ್ತಭೂಃ ॥ ೩೭ ॥

---

೩೩. ಹೃದಯದೊಳಗೆ ಮಾಡಿದ ಯಥಾರ್ಥ ಜ್ಞಾನದಿಂದ ಎದುವರೆಗೆ ಪ್ರಪಂಚ ಭಾವನೆಯು ಸಡಿಲವಾಗುವುದಿಲ್ಲವೋ ಅದುವರೆಗೆ ಚಿತ್ತಾದಿಗಳು ಪ್ರಕಟವಾಗಿರುವುವು.

೩೪. ಎದುವರೆಗೆ ಅಜ್ಞಾನರೂಪವಾದ ಕುರುಡತನವಿರುವುದೋ, ವಿಷಯ್ಯಗಳ ಮೇಲಿನ ಆಶೆಯಿಂದ ಪರಾಧೀನತೆಯಿರುವುದೋ, ಮೂರ್ಖತನದಿಂದ ಅಜ್ಞಾನವು ಉದ್ರೇಕ ಹೊಂದಿರುವುದೋ, ಅಲ್ಲಿಯವರೆಗೆ ಚಿತ್ತಾದಿ ಕಲ್ಪನೆಯಿರುವುದು.

೩೫. ಎದುವರೆಗೆ ಆಶೆಯೆಂಬ ವಿಷಗಂಧವು ಮನಸ್ಸೆಂಬ ವನದಲ್ಲಿ ಸುಳಿಯುತ್ತಿರುವುದೋ, ಅಲ್ಲಿಯತನಕ ಆತ್ಮವಿಚಾರವೆಂಬ ಚಕೋರ ಪಕ್ಷಿಯು ಮನಸ್ಸೆಂಬ ವನದಲ್ಲಿ ಪ್ರವೇಶ ಮಾಡುವುದಿಲ್ಲ. ಚಿತ್ತಾದಿ ವಿಕಲ್ಪವಿರುವುದು.

೩೬. ವಿಷಯ ಸೇವನೆಯಲ್ಲಿ ಯಾವನಿಗೆ ವೈರಾಗ್ಯವು ಬಂದಿರುವುದೋ, ಸೌಮ್ಯವೂ ನಿರ್ಮಲವೂ ಆದ ತ್ಯಾಗಸೌಖ್ಯವನ್ನು ಯಾವನು ಬಲ್ಲನೋ, ಆಶಾಬಂಧಗಳೆಲ್ಲವನ್ನೂ ಯಾರು ನೀಗಿಕೊಂಡಿರುವನೋ ಅವನಿಗೆ ಚಿತ್ತ ಭ್ರಮವು ನಾಶಹೊಂದುವುದು.

೩೭. ಆಶಾಮೋಹಗಳನ್ನು ಬಿಟ್ಟು ಶಾಶ್ವತವಾದ, ಸೌಮ್ಯವಾದ ಜ್ಞಾನವನ್ನು ಪಡೆದು, ನಿರಪೇಕ್ಷಾಸುಂದರವಾದ ಚಿತ್ತಭೂಮಿಯು ಪ್ರಬೋಧವೆಂಬ ಫಲವನ್ನು ಕೊಡುವುದು.

ಅಸಂಸ್ತುತಮಿವಾನಾಸ್ಥಮುವಸ್ತು ಪರಿಪಶ್ಯತಃ ।
ದೂರಸ್ಥಮಿವ ದೇಹಂ ಸ್ವಮುಸಂತಂ ಚಿತ್ತಭೂಃ ಕುತಃ ॥ ೩೮ ॥

ಭಾವಿತಾನಂತಚಿತ್ತತ್ತ್ವರೂಪರೂಪಾಂತರಾತ್ಮನಃ ।
ಸ್ವಾಂತಾವಲೀನಜಗತಃ ಶಾಂತೋ ಜೀವಾದಿವಿಭ್ರಮಃ ॥ ೩೯ ॥

ಅಸಮ್ಯಗ್ದರ್ಶನೇ ಶಾಂತೇ ಮಿಥ್ಯಾಭ್ರಮಕರಾತ್ಮನಿ ।
ಉದಿತೇ ಪರಮಾದಿತ್ಯೇ ಪರಮಾರ್ಥೈಕದರ್ಶನೇ ॥ ೪೦ ॥

ಅಪುನರ್ದರ್ಶನಾಯೈವ ದಗ್ಧಸಂಶುಷ್ಕಪರ್ಣವತ್ ।
ಚಿತ್ತಂ ವಿಗಲಿತಂ ವಿದ್ಧಿ ವಹ್ನೌ ಘೃತಲವಂ ಯಥಾ ॥ ೪೧ ॥

ಜೀವನ್ಮುಕ್ತಾ ಮಹಾತ್ಮಾನೋ ಯೇ ಪರಾವರದರ್ಶಿನಃ ।
ತೇಷಾಂ ಯಾ ಚಿತ್ತಪದವೀ ಸಾ ಸತ್ತ್ವಮಿತಿ ಕಥ್ಯತೇ ॥ ೪೨ ॥

---

೩೮. ಯಾರು ತನ್ನ ಶರೀರವನ್ನು ಕೆಲಸಕ್ಕೆ ಬರದ ವಸ್ತುವಿನಂತೆ, ದೂರದಲ್ಲಿ ಇದ್ದರೆ ಹೇಗೋ ಹಾಗೆ ನೋಡುತ್ತಿರುವನೋ ಅವನಿಗೆ ಚಿತ್ತದ ಹುಟ್ಟೇ ಅಡಗಿ ಹೋಗುವುದು.

೩೯. ಸಾಂಸಾರಿಕ ರೂಪಕ್ಕಿಂತಲೂ ಬೇರೆಯಾದ ಚಿನ್ಮಾತ್ರ ತತ್ವವನ್ನು ಅನೇಕ ಬಾರಿ ಧ್ಯಾನಿಸಿ, ಜಗತ್ತೆಲ್ಲವನ್ನೂ ಮನಸ್ಸಿನೊಳಗೇ ಅಡಗಿಸಿಕೊಂಡವನಿಗೆ ಜೀವನೆಂಬುದೇ ಮೊದಲಾದ ಭ್ರಾಂತಿಯು ಶಾಂತವಾಗುವುದು.

೪೦. ಮಿಥ್ಯಾಭ್ರಾಂತಿಯನ್ನುಂಟುಮಾಡುವ ವಿಪರೀತ ಜ್ಞಾನವು ನಾಶ ಹೊಂದಲು, ಪರಮಾರ್ಥಜ್ಞಾನರೂಪವಾದ ಸೂರ್ಯನುದಯಿಸಲು ;

೪೧. ಚಿತ್ತವು ಸುಟ್ಟುಹೋದ ತರಗೆಲೆಯಂತೆಯೂ, ಬೆಂಕಿಯಲ್ಲಿ ಬಿದ್ದ ತುಪ್ಪದ ಹನಿಯಂತೆಯೂ ಪುನಃ ಎಂದಿಗೂ ಕಾಣದಾಗುವುದು.

೪೨. ಜೀವನ್ಮುಕ್ತರಾಗಿ ಪರವಸ್ತುವನ್ನು ಯಾವ ಮಹಾತ್ಮರು ನೋಡುತ್ತಿರುವರೋ ಅವರ ಮನಸ್ಸಿನ ಸಂಸ್ಕಾರವು ಸತ್ವವೆಂದು ಹೇಳಲ್ಪಡುವುದು.

ಜೀವನ್ಮುಕ್ತಶರೀರೇಷು ವಾಸನಾ ವ್ಯವಹಾರಿಣೀ |
ನ ಚಿತ್ತನಾಮ್ನಾ ಭವತಿ ಸಾ ಹಿ ಸತ್ತ್ವಪದಂ ಗತಾ || ೪೩ ||

ನಿಶ್ಚೇತಸೋ ಹಿ ತತ್ತ್ವಜ್ಞಾ ನಿತ್ಯಂ ಸಮುಪದೇ ಸ್ಥಿತಾಃ |
ಲೀಲಯಾ ಪ್ರಭ್ರಮಂತೀಹ ಸತ್ವಸಂಸ್ಥಿತಿಹೇಲಯಾ || ೪೪ ||

ಶಾಂತಾ ವ್ಯವಹರಂತೋಪಿ ಸತ್ತ್ವಸ್ಥಾಃ ಸಂಯತೇಂದ್ರಿಯಾಃ |
ನಿತ್ಯಂ ಪಶ್ಯಂತಿ ತಜ್ಜ್ಯೋತಿರ್ನ ದ್ವೈತೈಕ್ಯೇನ ವಾಸನಾ || ೪೫ ||

ಅಂತರ್ಮುಖತಯಾ ಸರ್ವಂ ಚಿದ್ವಹ್ನೌ ತ್ರಿಜಗತ್ತೃಣಂ |
ಜುಹ್ವತೋಽಂತರ್ನಿವರ್ತಂತೇ ಮುನೇಶ್ಚಿತ್ತಾದಿವಿಭ್ರಮಾಃ || ೪೬ ||

ವಿವೇಕವಿಶದಂ ಚೇತಃ ಸತ್ವಮಿತ್ಯಭಿಧೀಯತೇ |
ಭೂಯಃ ಫಲತಿ ನೋ ಮೋಹಂ ದಗ್ಧಬೀಜಮಿವಾಂಕುರಂ || ೪೭ ||

---

೪೩. ಜೀವನ್ಮುಕ್ತರ ಶರೀರದಲ್ಲಿ ವ್ಯವಹಾರವನ್ನು ನಡೆಸತಕ್ಕ ಯಾವ ಸಂಸ್ಕಾರವುಂಟೋ ಅದು ಮನಸ್ಸಲ್ಲ. ಅದು ಸತ್ವರೂಪವನ್ನು ಹೊಂದಿರುವುದು.

೪೪. ಮನಶ್ಶೂನ್ಯರಾಗಿ ಯಾವಾಗಲೂ ಬ್ರಹ್ಮಸ್ಥಾನದಲ್ಲಿಯೇ ಇರುವ ತತ್ವಜ್ಞಾನಿಗಳು ಸತ್ವದಲ್ಲಿದ್ದುಕೊಂಡು ಅನಾದರಣೆಯಿಂದ ವ್ಯವಹಾರ ನಡೆಸುವರು.

೪೫. ವ್ಯವಹಾರ ಮಾಡುತ್ತಿದ್ದರೂ ಶಾಂತರಾಗಿಯೂ ಸತ್ವಸ್ಥಿರರಾಗಿಯೂ ಇಂದ್ರಿಯ ನಿಗ್ರಹವುಳ್ಳವರಾಗಿಯೂ ಇರುವ ಅವರು ಆ ಪರಂಜ್ಯೋತಿಯನ್ನೇ ನೋಡುತ್ತಿರುವರು. ದ್ವೈತವೇ ಹೋದಮೇಲೆ ಅದರ ಸೊಂಕೇ ಆಗಲೀ ವಾಸನೆಯೇ ಆಗಲೀ ಉಳಿಯುವುದೆಂತು ?

೪೬. ಅಂತರ್ಮುಖನಾಗಿ ಜ್ಞಾನಾಗ್ನಿಯಲ್ಲಿ ಸಕಲ ಜಗತ್ತನ್ನೂ ತೃಣದಂತೆ ಹೋಮ ಮಾಡುತ್ತಿರುವ ಆ ಮುನಿಗೆ ಚಿತ್ತವೇ ಮೊದಲಾದ ಸರ್ವ ಭ್ರಾಂತಿಗಳೂ ತೊಲಗಿ ಹೋಗುವುವು.

೪೭. ವಿವೇಕದಿಂದ ಶುದ್ಧವಾದ ಮನಸ್ಸೇ ಸತ್ವವೆನ್ನಿಸಿಕೊಳ್ಳುವುದು. ಸುಟ್ಟ ಬೀಜದಲ್ಲಿ ಮೊಳಕೆಯು ಹೇಗೆ ಇರುವುದಿಲ್ಲವೋ ಹಾಗೆಯೇ ಸತ್ವರೂಪವಾದ ಮನಸ್ಸಿಗೆ ಮೋಹವು ಸೋಕುವುದಿಲ್ಲ.

ಯಾವತ್ಸತ್ವಂ ವಿಮೂಢಾಂತಃ ಪುನರ್ಜನನಧರ್ಮಿಣೀ ।
ಚಿತ್ತಶಬ್ದಾಭಿಧಾನೋಕ್ತಾ ವಿಪರ್ಯಸ್ಯತಿ ಬೋಧತಃ ॥ ೪೮ ॥

ಪ್ರಾಪ್ತಪ್ರಾಪ್ತ್ಯೋ ಭವಾನ್ನಾಮ ಸತ್ವಭಾವಮುಪಾಗತಂ ।
ಚಿತ್ತಂ ಜ್ಞಾನಾಗ್ನಿನಾ ದಗ್ಧಂ ನ ಭೂಯಃ ಪರಿರೋಹತಿ ॥ ೪೯ ॥

ಸಂರೋಹತೀಷಣಾವಿದ್ಧಂ ಯಥಾ ಪರಶುನಾಗ್ನಿನಾ ।
ನತು ಜ್ಞಾನಾಗ್ನಿನಿರ್ದಗ್ಧಂ ಪ್ರಬೋಧವಿಶದಂ ಮನಃ ॥ ೫೦ ॥

ಬ್ರಹ್ಮಬೃಂಹೈವ ಹಿ ಜಗಜ್ಜಗಚ್ಚ ಬ್ರಹ್ಮಬೃಂಹಣಂ ।
ವಿದ್ಯತೇ ನಾನಯೋರ್ಭೇದಶ್ಚಿದ್ಘನಬ್ರಹ್ಮಣೋರಿವ ॥ ೫೧ ॥

ಚಿದಂತರಸ್ತಿ ತ್ರಿಜಗನ್ಮರಿಚೇ ತೀಕ್ಷ್ಣತಾ ಯಥಾ ।
ನಾತಶ್ಚಿಜ್ಜಗತೀ ಭಿನ್ನೇ ತಸ್ಮಾತ್ಸದಸತೀ ಮುಧಾ ॥ ೫೨ ॥

---

೪೮. ಎದುವರೆಗೆ ಸತ್ವವು ಮೂಢರ ಹೃದಯದಲ್ಲಿದ್ದುಕೊಂಡು ಪುನರ್ಜನ್ಮ ಕಾರಣವಾಗಿರುವುದೋ ಅದುವರೆಗೆ ಚಿತ್ತವೆನ್ನಿಸಿಕೊಳ್ಳುವುದು. ಜ್ಞಾನೋದಯವಾದಮೇಲೆ ಅದೇ ತನ್ನ ಹಿಂದಿನ ಸತ್ವವೆಂಬ ಹೆಸರನ್ನು ಪಡೆದು ಜನ್ಮನಾಶರೂಪವಾದ ವಿಲಕ್ಷಣ ಕಾರ್ಯವನ್ನುಂಟು ಮಾಡುವುದು.

೪೯. ನೀನು ಹೊಂದಬೇಕಾದ್ದನ್ನು ಹೊಂದಿದವನಾಗಿರುವೆ. ನಿನ್ನ ಚಿತ್ತವು ಜ್ಞಾನಾಗ್ನಿಯಿಂದ ಭಸ್ಮವಾಗಿ ಸತ್ವಭಾವವನ್ನು ಹೊಂದಿರುವುದರಿಂದ ತಿರುಗಿ ಅಂಕುರಿಸುವುದಿಲ್ಲ.

೫೦. ಕೊಡಲಿಯಿಂದ ಕಡಿದರೂ ಬೆಂಕಿಯಿಂದ ಸುಟ್ಟರೂ ಗಿಡವು ಮತ್ತೆ ಚಿಗುರುವಂತೆ, ಚಿತ್ತವೂ ಆಶೆಗಳಿಂದ ಕೂಡಿದ್ದರೆ, ಮತ್ತೆ ಮತ್ತೆ ತಲೆಯೆತ್ತುವುದು. ಆದರೆ ಜ್ಞಾನಾಗ್ನಿಯಿಂದ ಭಸ್ಮವಾಗಿ ಶುದ್ಧವಾದ ಚಿತ್ತವು ಮಾತ್ರ ಮತ್ತೆ ತಲೆಯೆತ್ತುವುದಿಲ್ಲ.

೫೧. ಬ್ರಹ್ಮದ ವೃದ್ಧಿಯೇ ಜಗತ್ತು. ಬ್ರಹ್ಮವೇ ಜಗತ್ತಿಗೆ ವೃದ್ಧಿಪ್ರದವು. ವಸ್ತುಗತಿಯಿಂದ ಜಗತ್ತಿಗೂ ಬ್ರಹ್ಮಕ್ಕೂ ಚಿದ್ಘನ ಮತ್ತು ಬ್ರಹ್ಮಗಳಂತೆಯೇ ಭೇದವಿಲ್ಲ.

೫೨. ತ್ರೈಲೋಕ್ಯವೂ ಚಿತ್ತಿನ ಮಧ್ಯದಲ್ಲಿ ಮೆಣಸಿನ ಕಾಳಿನಲ್ಲಿರುವ

ಶಬ್ದಶಬಾರ್ಥಸಂಕೇತವಾಸನೇಹ ನ ಸಂವಿದಾ ।
ಚಿದ್ವ್ಯೋಮತ್ವಾದುಭೇ ಭಾತಸ್ತ್ಯಜಾತಃ ಸದಸನ್ಮತೀ ॥ ೫೩ ॥

ಅಚಿನ್ಮಯತ್ವಾನ್ನಾಸಿ ತ್ವಂ ಸ್ವಾತ್ಮಾ ಕಿಮಿವ ರೋದಿಷಿ ।
ಅಚಿನ್ಮಯತ್ವೇ ಜಗತಾಮಭಾವೇ ಕಲ್ಪನಂ ಕುತಃ ॥ ೫೪ ॥

ಚಿನ್ಮಯಂ ಚೇತ್ಸದಾ ಸರ್ವಂ ತಚ್ಚಿತ್ತ್ವಂ ಪ್ರವಿಚಾರಯ ।
ಶುದ್ಧಂ ಸತ್ವಮನಾದ್ಯಂತಂ ತತ್ರಾಂಗ ಕಲ್ಪನಾ ಕುತಃ ॥ ೫೫ ॥

ಚಿದಾತ್ಮಾಸಿ ನಿರಂಶೋಽಸಿ ಪಾರಾವಾರವಿವರ್ಜಿತಃ ।
ರೂಪಂ ಸ್ಮರ ನಿಜಂ ಸ್ಫಾರಂ ಮಾಸ್ಮೃತ್ಯಾ ಸಂಮಿತೋ ಭವ ॥ ೫೬ ॥

ಖಾರದಂತೆ ಸೇರಿರುವುದು. ಚಿತ್ತೂ ಜಗತ್ತೂ ಬೇರೆಯಲ್ಲ. ಆದ್ದರಿಂದ ಸತ್ತು ಅಸತ್ತು ಎಂಬ ಭೇದಕಲ್ಪನೆಯೇ ಸುಳ್ಳು.

೫೩. ಶಬ್ದ ಮತ್ತು ಶಬ್ದಾರ್ಥಗಳೆಂಬ ಬುದ್ಧಿಯು ಸಂಸ್ಕಾರ ಮಾತ್ರವೇ ಹೊರತು ಪ್ರಮಾಣವಲ್ಲ. ಎರಡೂ ಚಿದ್ರೂಪವೇ ಆಗಿರುವುದರಿಂದ ಸತ್ತು ಅಸತ್ತೆಂಬ ಬುದ್ಧಿಯನ್ನು ಬಿಟ್ಟುಬಿಡು.

೫೪. ದೇಹರೂಪನಾದ ನೀನು ಚಿದ್ರೂಪನಲ್ಲದ್ದರಿಂದ ಇಲ್ಲವೇ ಇಲ್ಲ. ಜಗತ್ತೆಲ್ಲವೂ ಚಿನ್ಮಯವಲ್ಲದಿರುವಾದಾಗ ಅಭಾವರೂಪವಾಗಿರುವಲ್ಲಿ ದೇಹಾದಿ ಕಲ್ಪನೆಯೆಲ್ಲಿ ಬಂತು ?

೫೫. ಎಲ್ಲವೂ ಯಾವಾಗಲೂ ಚಿನ್ಮಯವೇ ಆಗಿರುವಾಗ (ಹಾಗೆ ಎಲ್ಲವೂ ಆಗಿರುವ) ಆ ಚಿತ್ತನ್ನು ಕುರಿತು ನೀನು ವಿಚಾರಮಾಡು. ಆ ಚಿತ್ತು ಆದ್ಯಂತ ರಹಿತವು, ಶುದ್ಧವು. ಹೀಗಿರುವಲ್ಲಿ ದೇಹಾದಿಕಲ್ಪನೆಯೆಲ್ಲಿ ?

೫೬. ನೀನು ಚಿದಾತ್ಮನಾಗಿಯೂ, ವಿಭಾಗವರ್ಜಿತನಾಗಿಯೂ, ಪರಿಚ್ಛೇದ ರಹಿತನಾಗಿಯೂ ಇರುವೆ. ನಿನ್ನ ವ್ಯಾಪಕವಾದ ಸ್ವರೂಪವನ್ನು ಸ್ಮರಿಸು. ಯಾವಾಗಲಾದರೂ ಅದನ್ನು ಮರೆತು ಪರಿಚ್ಛಿನ್ನನಾದೀಯೆ !

ತಾಂ ಸ್ವಸತ್ತಾಂ ಗತಃ ಸರ್ವಮಸರ್ವಂ ಭಾವಯೋದಯೀ ।
ತಾದೃಗ್ರೂಪೋಽಸಿ ಶಾಂತೋಽಸಿ ಚಿದಸಿ ಬ್ರಹ್ಮರೂಪ್ಯಸಿ ॥ ೫೭ ॥

ವಿಚ್ಛಿಲೋದರಮೇವಾಸಿ ನಾಸಿ ನಾನಾಸ್ಯಥಾಪ್ಯಸಿ ।
ಯೋಽಸಿ ಸೋಽಸಿ ನ ಸೋಽಸೀವ ಸದಸ್ಯಸದಸಿ ಸ್ವಭಾಃ ॥ ೫೮ ॥

ಯಃ ಪದಾರ್ಥವಿಶೇಷೋಂತರ್ನ ತ್ವಂ ನ ಹ್ಯೇವ ಸೋಽಸ್ತಿ ತೇ ।
ತದಸ್ಯತದಸಿ ಸ್ವಸ್ಥಶ್ಚಿದ್ಘನಾತ್ಮನ್ನಮೋಸ್ತುತೇ ॥ ೫೯ ॥

---

೫೭. ಆ ಪೂರ್ಣ ಚಿತ್ಸ್ವಭಾವವನ್ನು ಹೊಂದಿ ಪರಿಚ್ಛಿನ್ನವಾದ ಸಕಲವನ್ನೂ ಪೂರ್ಣವನ್ನಾಗಿ ಭಾವಿಸು. ನೀನು ಆ ರೀತಿ ಪೂರ್ಣರೂಪನಾಗಿಯೂ ಶಾಂತ ರೂಪನಾಗಿಯೂ, ಚಿದ್ರೂಪನಾಗಿಯೂ, ಬ್ರಹ್ಮರೂಪನಾಗಿಯೂ ಇರುವೆ.

೫೮. ನೀನು ಚಿದ್ರೂಪಶಿಲೆಯ ತಿರುಳೇ ಆಗಿರುವಿ. ನೀನು ನಾನಾ ವಸ್ತು ರೂಪನಲ್ಲ: ನಾನಾ ವಸ್ತುಗಳ ಅವಧಿ ರೂಪನು. ನೀನು ಯಾವ ರೂಪನಾಗಿದ್ದೀ ಯೆಂದು ಈಗ ತಿಳಿದಿದ್ದೇಯೋ ಆ ರೂಪನು ನೀನಲ್ಲ. ನಾನಾರೂಪವಾಗಿ ಕಂಡರೂ ನೀನು ಸ್ವಪ್ರಕಾಶನು. ಸದಸತ್ತೆಲ್ಲವೂ ನೀನೇ!

೫೯. ಪದಾರ್ಥ ಪದಾರ್ಥವನ್ನೂ ಬೇರೆಬೇರೆಯೆಂದು ವಿಂಗಡಿಸಿ ತೋರಿಸುವ ವಿಶೇಷ ಸ್ವರೂಪವು ಯಾವುದೋ ಅದು ನಿನಗಿಲ್ಲ. ನೀನು ಆ ವಿಶೇಷ ಸ್ವರೂಪವಲ್ಲ. ಅದಕ್ಕಿಂತಲೂ ಬೇರೆಯಾದ ಸ್ವಸ್ಥರೂಪವಾದ ಬ್ರಹ್ಮವೇ ನೀನಾಗಿದ್ದಿ. ಚಿದ್ಘನಾತ್ಮನೇ! ನಿನಗೆ ನಮಸ್ಕಾರವು.

(ತಾತ್ಪರ್ಯ ಪ್ರಕಾಶವು ಹೀಗೆ ಹೇಳಿದೆ:—ಸದಸಿ, ಅಸದಸಿ ಇತ್ಯಂಶಂ ವಿವೃಣೋತಿ–ಯಃ ಸರ್ವಪದಾರ್ಥಾನಾಂ ವ್ಯಾವೃತ್ತಿ ಲಕ್ಷಣೋಽಂತಃ ಪರಿಚ್ಛೇದಃ ಸ ಏವ ಅಲೀಕತ್ವಾತ್ ಅಸಚ್ಛಬ್ದಾರ್ಥಃ ಸತ್ವಂ ನ ಭವಸಿ ಇತ್ಯರ್ಥಃ । ಸ ಏವ ತದ್ವ್ಯಾವೃತ್ತ ಸದ್ಧರ್ಮತ್ವೇನ ಕಲ್ಪಮಾನೋ ವ್ಯಾವಹಾರಿಕೈಃ ಸತ್ತಾ—ಇತಿ ವ್ಯಪದಿಶ್ಯತೇ ಸ ತೇ ನಾಸ್ತ್ಯೇವೇತ್ಯಸದಸೀತ್ಯಸ್ಯಾರ್ಥಃ ಇತ್ಯಾಶಯೇ ನ ಸದಸಿ—ಅಸದಸಿ—ಇತ್ಯುಕ್ತ ಇತ್ಯರ್ಥಃ ॥

ನಾವು "ಯಃ ಪದಾರ್ಥ ವಿಶೇಷೋಽಂತಃ ನ ಸೋಽಸ್ತಿ ತೇ, ಏವ । ತ್ವಂ ನ ಹಿ ತದಸಿ । ಅತದಸಿ ಸ್ವಸ್ಥಃ । ಚಿದ್ಘನಾತ್ಮನ್, ನಮೋಽಸ್ತು ತೇ" ಎಂದು ಅರ್ಥ ಮಾಡಿದ್ದೇವೆ.—ದೇ.)

ಆದ್ಯಂತವರ್ಜಿತವಿಶಾಲ ಶಿಲಾಂತರಾಲ
ಸಂಪೀಡಚಿದ್ಘನವಪುರ್ಗಗನಾಮಲಸ್ತ್ವಂ ।
ಸ್ವಸ್ಥೋ ಭವಾಜಠರಪಲ್ಲವಕೋಶಲೇಖಾ
ಲೀಲಾಸ್ಥಿತಾಖಿಲಜಗಜ್ಜಯ ತೇ ನಮಸ್ತೆ ॥ ೬೦ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ದೇವದೂತೋಕ್ತೇ ಮೋಕ್ಷೋಪಾಯೇಷು ನಿರ್ವಾಣಪ್ರಕರಣೇ "ವಿಶ್ರಾಂತಿಸುದೃಢೀಕರಣಂ" ನಾಮ ದ್ವಿತೀಯಃ ಸರ್ಗಃ

---

೬೦. ಆದ್ಯಂತಶೂನ್ಯನಾಗಿಯೂ, ನಿಬಿಡವಾದ ಶಿಲೆಯ ಮಧ್ಯದಂತೆ ಘನರೂಪನಾಗಿಯೂ, ಆಕಾಶದಂತೆ ಶುದ್ಧನಾಗಿಯೂ, ಇರುವ ಚಿತ್ಸ್ವರೂಪನಾದ ನಿನ್ನ ಜಠರದಲ್ಲಿ ಶಿಲಾಜಠರದಲ್ಲಿರುವ ಲೇಖೆಯಂತೆ ವಾಸನಾರೂಪವಾಗಿ ಮನೋವಿಲಾಸಮಾತ್ರದಿಂದಿರುವ ಸಕಲ ಜಗತ್ತುಗಳೂ ಇವೆ. ಇಂತಹ ನೀನು ಸ್ವಸ್ಥನಾಗಿರು. ಇಂತಹ ನಿನಗೆ ನಮಸ್ಕಾರವು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ ನಿರ್ವಾಣಪ್ರಕರಣದ ಪೂರ್ವಾರ್ಧದಲ್ಲಿ "ವಿಶ್ರಾಂತಿ ಸುದೃಢೀಕರಣ" ಎಂಬ ಎರಡನೆಯ ಸರ್ಗವು.

ತೃತೀಯಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಭಾವಿಭೂರಿತರಂಗಾಣಾಂ ಪಯೋವೃಂದಮಿವಾಂಬುಧೌ ।
ಯಾ ಚಿದ್ವಹನ್ತ್ಯನಂತಾನಿ ಜಗಂತ್ಯನಘ ಸೋಽ ಭವಾನ್ ॥ ೧ ॥

ಭವ ಭಾವನಯಾ ಮುಕ್ತೋ ಭಾವಾಭಾವವಿವರ್ಜಿತಃ ।
ಚಿದಾತ್ಮನ್ಸಂಸ್ಥಿತಾಃ ಕ್ವೇವ ವದ ತೇ ವಾಸನಾದಯಃ ॥ ೨ ॥

ಜೀವೋಽಯಂ ವಾಸನಾದೀದಮಿತಿ ಚಿತ್ಕಚತಿ ಸ್ವತಃ ।
ಇತರೋಕ್ತ್ಯರ್ಥಯೋರತ್ರ ಕಃ ಪ್ರಸಂಗೋಽಂಗ ಕಥ್ಯತಾಂ ॥ ೩ ॥

ಮಹಾತರಂಗಗಂಭೀರಭಾಸುರಾತ್ಮಚಿದರ್ಣವಃ ।
ರಾಮಾಭಿಧೋರ್ಮಿಸ್ತಿಮಿತಃ ಸಮ ಸೌಮ್ಯೋಽಸಿ ವ್ಯೋಮವತ್ ॥ ೪ ॥

ಮೂರನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು—ಪಾಪರಹಿತನಾದ ರಾಮನೇ,ಅನೇಕವಾದ ಅಲೆಗಳು ಜಲರಾಶಿಯಲ್ಲಿ ಕಾಣಿಸುವಂತೆ, ಸಕಲ ಜಗತ್ತುಗಳೂ ಯಾವ ಚಿತ್ತಿನಲ್ಲಿ ತೋರುವುವೋ ಆ ಚಿತ್ತೇ ನೀನಾಗಿರುವಿ.

೨. ಚಿದಾತ್ಮ ಸ್ವರೂಪನೇ, ಪ್ರಪಂಚ ಭಾವನೆಯು ಅಳಿದು ನೀನು ಸದಸದ್ವಿಭಾಗರಹಿತನಾಗು. ಆಗ ಆ ವಾಸನೆಗಳೆಲ್ಲ ಎಲ್ಲಿ ಉಳಿಯುವುವು ?

೩. ಜೀವವಾಸನಾದಿಗಳೆಲ್ಲವೂ ಚಿತ್ತಿನದೇ ತೋರಿಕೆ. ಹೀಗಿರುವಲ್ಲಿ ಅಚಿತ್ತೆಂಬ ಶಬ್ದ ಮತ್ತು ಅರ್ಥಗಳಿಗೆ ಅವಕಾಶವೆಲ್ಲಿರುವುದು ?

೪. ದೊಡ್ಡ ಅಲೆಗಳಿಂದ ಗಂಭೀರವಾಗಿಯೂ, ಪ್ರಕಾಶಮಾನವಾಗಿಯೂ,

ಯಥಾ ನ ಭಿನ್ನಮನಲಾದೌಷ್ಣ್ಯಂ ಸೌಗಂಧ್ಯಮಂಬುಜಾತ್ ।
ಕಾರ್ಷ್ಣ್ಯಂ ಕಜ್ಜಲತಃ ಶೌಕ್ಲ್ಯಂ ಹಿಮಾನ್ಮಾಧುರ್ಯಮಿಕ್ಷುತಃ ॥ ೫ ॥

ಆಲೋಕಶ್ಚ ಪ್ರಕಾಶಾಂಗಾದನುಭೂತಿಸ್ತಥಾ ಚಿತೇಃ ।
ಜಲಾದ್ವೀಚಿರ್ಯಥಾಭಿನ್ನಾ ಚಿತ್ಸ್ವಭಾವಾತ್ತಥಾ ಜಗತ್ ॥ ೬ ॥

ಚಿತೋ ನ ಭಿನ್ನೋಽನುಭವೋ ಭಿನ್ನೋ ನಾನುಭವಾದಹಂ ।
ನ ಮತ್ತೋ ಭಿದ್ಯತೇ ಜೀವೋ ನ ಜೀವಾದ್ಭಿದ್ಯತೇ ಮನಃ ॥ ೭ ॥

ಮನಸೋ ನೇಂದ್ರಿಯಂ ಭಿನ್ನಂ ಪೃಥಗ್ದೇಹಶ್ಚ ನೇಂದ್ರಿಯಾತ್ ।
ನ ಶರೀರಾಜ್ಜಗದ್ಭಿನ್ನಂ ಜಗತೋ ನಾನ್ಯದಸ್ತಿ ಹಿ ॥ ೮ ॥

ಇರುವ ಚಿತ್ ಸಮುದ್ರರೂಪನಾಗಿದ್ದಿ. ಆಕಾಶದಂತೆ ಏಕರೂಪನಾಗಿಯೂ, ರಾಮನೆಂದು ಹೆಸರುಳ್ಳ ಅಲೆಗಳಿಂದ ಸ್ತಿಮಿತವಾದ ಸಮುದ್ರರೂಪನಾಗಿರುವಿ.

(ರಮಂತೇ ಯೋಗಿನೋಽಯಸ್ಮಿನ್ ನಿತ್ಯಾನಂದೇ ಚಿದಾತ್ಮನಿ।
ಇತಿ ರಾಮ ಪದೇನಾಸೌ ಪರಂಬ್ರಹ್ಮಾಭಿಧೀಯತೇ—ತಾ.ಪ್ರ.)

೫-೬. ಉಷ್ಣತೆಯು ಅಗ್ನಿಗಿಂತ ಹೇಗೆ ಬೇರೆಯಲ್ಲವೋ, ಪರಿಮಳವು ಕಮಲಕ್ಕಿಂತ ಹೇಗೆ ಬೇರೆಯಲ್ಲವೋ, ಕಪ್ಪುಬಣ್ಣವು ಕಾಡಿಗೆಗಿಂತ ಹೇಗೆ ಬೇರೆಯಲ್ಲವೋ, ಬಿಳುಪು ಮಂಜುಗಡ್ಡೆಗಿಂತ ಹೇಗೆ ಬೇರೆಯಲ್ಲವೋ, ಸಿಹಿಯು ಕಬ್ಬಿಗಿಂತ ಹೇಗೆ ಬೇರೆಯಲ್ಲವೋ, ಬೆಳಕು ತೇಜಸ್ಸಿಗಿಂತ ಹೇಗೆ ಬೇರೆಯಲ್ಲವೋ, ಅನುಭವವು ಚೈತನ್ಯಕ್ಕಿಂತ ಹೇಗೆ ಬೇರೆಯಲ್ಲವೋ, ಅಲೆಯು ನೀರಿಗಿಂತ ಹೇಗೆ ಬೇರೆಯಲ್ಲವೋ ಹಾಗೆಯೇ ಜಗತ್ತೂ ಕೂಡ ಚಿದ್ರೂಪಕ್ಕಿಂತ ಬೇರೆಯಲ್ಲ.

೭. ಈ ಅನುಭವವು ಚಿತ್ತಿನಿಂದ ಬೇರೆಯಲ್ಲ. ನೀನು ಅನುಭವದಿಂದ ಬೇರೆಯಲ್ಲ. ಜೀವನು ನನ್ನಿಂದ ಬೇರೆಯಲ್ಲ. ಮನಸ್ಸು ಜೀವನಿಂದ ಬೇರೆಯಲ್ಲ.

(ಚಿತ್-ಮೂಲಾಧಿಷ್ಠಾನ ಬ್ರಹ್ಮಚಿತ್. ಅನುಭವಃ-ಮಾಯಾ ವೃತ್ತ್ಯಾರೂಢ ಚಿದಾಭಾಸಃ. ಅಹಂ-ವ್ಯಷ್ಟಿಸಮಷ್ಟ್ಯಹಂಕಾರಃ.)

೮. ಇಂದ್ರಿಯವು ಮನಸ್ಸಿನಿಂದ ಬೇರೆಯಲ್ಲ. ದೇಹವು ಇಂದ್ರಿಯದಿಂದ ಬೇರೆಯಲ್ಲ. ಜಗತ್ತು ದೇಹದಿಂದ ಬೇರೆಯಲ್ಲ. ಜಗತ್ತಿನಿಂದ ಬೇರೆ ಯಾವುದೂ ಇಲ್ಲವೇ ಇಲ್ಲ.

ಏವಂ ಪ್ರವರ್ತಿತಮಿದಂ ಮಹಚ್ಚಕ್ರಮಿದಂ ಚಿರಂ |
ನ ಚ ಪ್ರವರ್ತಿತಂ ಕಿಂಚಿನ್ನ ಚ ಶೀಘ್ರಂ ಚ ನೋ ಚಿರಂ || ೯ ||

ಸ್ವವೇದನಮನಂತಂ ಚ ಸರ್ವಮೇವಮಖಂಡಿತಂ |
ವಿದ್ಯತೇ ವ್ಯೋಮನಿ ವ್ಯೋಮ ನ ಕಸ್ಮಿಂಶ್ಚಿನ್ನ ಕಿಂಚನ || ೧೦ ||

ಶೂನ್ಯಂ ಶೂನ್ಯೇ ಸಮುಚ್ಛೂನಂ ಬ್ರಹ್ಮ ಬ್ರಹ್ಮಣಿ ಬೃಂಹಿತಂ |
ಸತ್ಯಂ ವಿಜೃಂಭತೇ ಸತ್ಯೇ ಪೂರ್ಣೇ ಪೂರ್ಣಮಿವ ಸ್ಥಿತಂ || ೧೧ ||

ರೂಪಾಲೋಕಮನಸ್ಕಾರಾನ್ಕುರ್ವನ್ನಪಿ ನ ಕಿಂಚನ |
ಜ್ಞಃ ಕರೋತ್ಯನುಪಾದೇಯಾನ್ನ ಜ್ಞಸ್ಯೈವ ಹಿ ಕರ್ತೃತಾ || ೧೨ ||

ಯದುಪಾದೇಯಬುದ್ಧ್ಯಾ ಚ ತದ್ದುಃಖಾಯ ಸುಖಾಯ ತೇ |
ಭಾವಾಭಾವೇನ ನಾದೇಯಮಕರ್ತೃ ಸುಖದುಃಖಯೋಃ || ೧೩ ||

---

೯. ಈ ರೀತಿಯಾಗಿ ಪ್ರವೃತ್ತವಾದ ದೊಡ್ಡದಾದ ಜಗಚ್ಚಕ್ರವು ತಿರುಗುತ್ತಲಿದೆಯಾದರೂ ವಸ್ತುತಃ ಈ ಚಕ್ರವು ಪ್ರವೃತ್ತವಾಗಿಯೂ ಇಲ್ಲ. ಶೀಘ್ರವಾಗಿಯೇ ಆಗಲಿ, ವಿಳಂಬವಾಗಿಯೇ ಆಗಲಿ ಇಲ್ಲ.

೧೦. ಇದೆಲ್ಲವೂ ಸ್ವಪ್ರಕಾಶವಾಗಿಯೂ, ಅಖಂಡವಾಗಿಯೂ, ಅನಂತವಾಗಿಯೂ, ಇರುವ ಬ್ರಹ್ಮವೇ! ಚಿದಾತ್ಮನು ಚಿದಾತ್ಮನಲ್ಲೇ ಇದ್ದಾನೆ. ಇನ್ನಾವುದೂ ಯಾವುದರಲ್ಲೂ ಇಲ್ಲ.

೧೧. ಶೂನ್ಯವು ಶೂನ್ಯದಲ್ಲೇ ಪೂರ್ಣವಾಗಿದೆ. ಬ್ರಹ್ಮವು ಬ್ರಹ್ಮದಲ್ಲೇ ವಿಜೃಂಭಿಸಿದೆ. ಸತ್ಯವು ಸತ್ಯದಲ್ಲೇ ಪೂರ್ಣವಾಗಿದೆ. ಪೂರ್ಣವು ಪೂರ್ಣದಲ್ಲೇ ಇದ್ದಂತಿದೆ.

೧೨. ಜ್ಞಾನರೂಪನಾದ ಆತ್ಮನು ರೂಪಾಲೋಕ, ಮನಸ್ಕಾರ ಮೊದಲಾದವುಗಳನ್ನೂ ಮಾಡುವನಾದಾಗ್ಯೂ ವಸ್ತುತಃ ಮಾಡುವುದಿಲ್ಲ. ಅವು ಉಪಾದೇಯಗಳಲ್ಲದ್ದರಿಂದ ಜ್ಞಾನರೂಪನಿಗೆ ಕರ್ತೃತ್ವವು ಸಂಭವಿಸುವುದಿಲ್ಲ.

೧೩. ಉಪಾದೇಯ ಬುದ್ಧಿಯಿಂದ ಮಾಡಿದ ಕರ್ಮವು ಸುಖಕ್ಕೂ ದುಃಖಕ್ಕೂ ಕಾರಣವಾಗುವುದು. ವಸ್ತುತಃ ಗ್ರಾಹ್ಯವೆಂಬುದೇ ಇಲ್ಲದಿರುವದರಿಂದ ಆತ್ಮನು ಸುಖದುಃಖಗಳಿಗೆ ಕರ್ತೃವಾಗಲಾರನು.

ಯಥಾ ನಾನಾಪ್ಯನಾನ್ಯೈವ ಖಂ ಖೇ ಖಾನೀತಿ ವಾಗ್ಗಣಃ ।
ಸಾರ್ಥಕೋಪ್ಯತಿಶೂನ್ಯಾತ್ಮಾ ತಥಾತ್ಮಜಗತೋಃ ಕ್ರಮಃ ॥ ೧೪ ॥

ಅಂತರ್ವ್ಯೋಮಾಮಲೋ ಬಾಹ್ಯೇ ಸಂವ್ಯಗಾಚಾರಚಂಚುರಃ ।
ಹರ್ಷಾಮರ್ಷವಿಕಾರೇಷು ಕಾಷ್ಠಲೋಷ್ಟಸಮಸ್ಥಿತಿಃ ॥ ೧೫ ॥

ಯ ಏವಾತಿತರಾಂ ಶತ್ರುಃ ಸತ್ವರಂ ಮಾರಣೋದ್ಯತಃ ।
ತಮೇವಾಕೃತ್ರಿಮಂ ಮಿತ್ರಂ ಯಃ ಪಶ್ಯತಿ ಸ ಪಶ್ಯತಿ ॥ ೧೬ ॥

ಸಮೂಲಕಾಷಂ ಕಷತಿ ನದೀತಟ ಇವ ದ್ರುಮಂ ।
ಯಃ ಸೌಹೃದಂ ಮತ್ಸರಂ ಚ ಸ ಹರ್ಷಾಮರ್ಷದೋಷಹಾ ॥ ೧೭ ॥

ರಾಗದ್ವೇಷವಿಚಾರಾಣಾಂ ಸ್ವರೂಪಂ ಚೇನ್ನ ಭಾವ್ಯತೇ ।
ತತಃ ಸಂತೋಪ್ಯಸದ್ರೂಪಾಃ ಸೇವಿತಾ ಅಪ್ಯಸೇವಿತಾಃ ॥ ೧೮ ॥

---

೧೪. ಆಕಾಶವು ಒಂದೇ ಆಗಿದ್ದರೂ, ಅದರಲ್ಲಿ ನಾನಾತ್ವವಿಲ್ಲದಿದ್ದರೂ ಆಕಾಶ, ಆಕಾಶಗಳು ಎಂಬ ಪದಗಳೂ ಇರುವಂತೆ, ಆತ್ಮ ಮತ್ತು ಜಗತ್ತುಗಳ ಕ್ರಮವೂ ಕೂಡ ಪದಗಳಿದ್ದರೂ ಬೇರೆ ಬೇರೆ ಪದಾರ್ಥಗಳಲ್ಲ.

೧೫. ಹೃದಯದಲ್ಲಿ ಶುದ್ಧನೂ ಹೊರಗೆ ಸದಾಚಾರನಿರತನೂ ಕ್ರೋಧ ಹರ್ಷಾದಿವಿಕಾರಗಳ ಸಂದರ್ಭದಲ್ಲಿ ಕಟ್ಟಿಗೆ ಕಲ್ಲುಗಳಂತೆ ವಿಕಾರಶೂನ್ಯನೂ ಆಗು.

೧೬. ಯಾವನು, ತನ್ನನ್ನು ಕೊಲ್ಲುವುದಕ್ಕೆ ಬಂದಿರುವ ಪರಮ ಶತ್ರುವನ್ನೂ ಕೂಡ ಅತ್ಯಂತ ಮಿತ್ರನನ್ನಾಗಿ ತಿಳಿಯಬಲ್ಲನೋ ಅವನೇ ಆತ್ಮದರ್ಶಿಯು.

೧೭. ನದಿಯ ದಡದಲ್ಲಿರುವ ಮರವನ್ನು ಪ್ರವಾಹವು ಹೇಗೆ ಕೊರೆದು ಕೊರೆದು ಸಮೂಲವಾಗಿ ಉರುಳಿಸುವುದೋ ಹಾಗೆಯೇ ಸ್ನೇಹವನ್ನೂ, ಮಾತ್ಸರ್ಯವನ್ನೂ ಸಮೂಲವಾಗಿ ನಾಶಗೊಳಿಸಲು ಯಾವನು ಸಮರ್ಥನೋ ಅವನೇ ಹರ್ಷಕ್ರೋಧಗಳನ್ನೂ ಕಳೆಯಬಲ್ಲವನು.

೧೮. ಸಜ್ಜನರು ಸಜ್ಜನರಾಗಿರುವುದೂ, ಸೇವ್ಯರಾಗಿರುವುದೂ, ರಾಗದ್ವೇಷ

ಯಸ್ಯ ನಾಹಂಕೃತೋ ಭಾವೋ ಬುದ್ಧಿರ್ಯಸ್ಯ ನ ಲಿಪ್ಯತೇ ।
ಹತ್ವಾಪಿ ಸ ಇಮಾಂಲ್ಲೋಕಾನ್ನ ಹಂತಿ ನ ನಿಬಧ್ಯತೇ ॥ ೧೯ ॥

ಯನ್ನಾಸ್ತಿ ತಸ್ಯ ಸದ್ಭಾವಪ್ರತಿಪತ್ತಿರುದಾಹೃತಾ ।
ಮಾಯೇತಿ ಸಾ ಪರಿಜ್ಞಾನಾದೇವ ನಶ್ಯತ್ಯಸಂಶಯಂ ॥ ೨೦ ॥

ನಿಃಸ್ನೇಹದೀಪವಚ್ಛಾಂತೋ ಯಸ್ಯಾಂತರ್ವಾಸನಾಭರಃ ।
ತೇನ ಚಿತ್ರಕೃತೇನೇವ ಜಿತಂ ಜ್ಞೇನಾವಿಕಾರಿಣಾ ॥ ೨೧ ॥

ಗಳ ಸ್ವರೂಪವನ್ನು ಬಲ್ಲವರಾಗಿರುವುದರಿಂದ. ಹಾಗಿಲ್ಲದೆ, ರಾಗದ್ವೇಷಾದಿ ವಿಕಾರಗಳ ಸ್ವರೂಪವನ್ನೇ ವಿಚಾರಮಾಡದಿದ್ದರೆ ಸಜ್ಜನರೂ ಅಸಜ್ಜನರೇ ! ಅವರನ್ನು ಸೇವಿಸಿದರೂ ಸೇವಿಸದಿದ್ದರೂ ಒಂದೇ !

೧೯. ಯಾವನಿಗೆ ನಾನು ಎಂಬ ಅಹಂಭಾವನೆಯೇ ಇಲ್ಲವೋ ಯಾವನ ಬುದ್ಧಿಯು ಕರ್ಮಫಲಸಂಗದಿಂದ ಲಿಪ್ತವಾಗುವುದಿಲ್ಲವೋ ಅವನು ಈ ಲೋಕಗಳೆಲ್ಲವನ್ನೂ ಧ್ವಂಸಮಾಡಿದರೂ ಅವನು ಹತ್ಯಾಕಾರಿಯಾಗುವುದಿಲ್ಲ. ಅವನಿಗೆ ಆ ಪಾಪವೂ ಬರುವುದಿಲ್ಲ.

೨೦. ವಸ್ತುತಃ ಇಲ್ಲದೇ ಇರುವುದನ್ನೇ ಉಂಟು ಎಂದು ತೋರಿಸುವುದು ಯಾವುದೋ ಅದೇ ಮಾಯೆಯು. ಮಾಯೆಯ ಸ್ವರೂಪವಿದು ಎಂದು ತಿಳಿದೊಡನೆಯೇ ಅದು ನಷ್ಟವಾಗುವುದು.

೨೧. ಯಾವನಿಗೆ ಹೃದಯದಲ್ಲಿದ್ದ ವಾಸನೆಗಳೆಲ್ಲವೂ ಎಣ್ಣೆಯಿಲ್ಲದ ದೀಪದಂತೆ ನಶಿಸಿ ಹೋಗಿರುವುವೋ ಅವನೇ ಗೆದ್ದವನು. ಆ ಗೆಲುವೂ ಚಿತ್ರದಲ್ಲಿ ಬರೆದಿರುವ ಯುದ್ಧದ ಜಯದಂತೆ ಆಭಾಸಮಾತ್ರವು.

ಯಸ್ಯಾನುಪಾದೇಯಮಿದಂ ಸಮಸ್ತಂ
ಪದಾರ್ಥಜಾತಂ ಸದಸದ್ದಶಾಸು ।
ನ ದುಃಖದಾಹಾಯ ಸುಖಾಯ ನೈವ
ವಿಮುಕ್ತ ಏವೇಹ ಸಜೀವ ಏವ　　॥ ೨೨ ॥

ಇತ್ಯಾರ್ಷೇ ವಾಸಿಷ್ಠರಾಮಾಯಣೇ ವಾಲ್ಮೀಕಿಯೇ ದೇವದೂತೋಕ್ತೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ "ಬ್ರಹ್ಮೈಕ್ಯ ಪ್ರತಿಪಾದನೇ" ನಾಮ ತೃತೀಯಃ ಸರ್ಗಃ

---

೨೨. ಈ ಸಕಲ ಪದಾರ್ಥಗಳೂ ಇರುವಾಗಲೂ ಇಲ್ಲದಿರುವಾಗಲೂ ಯಾವನಿಗೆ ಬೇಕಾಗುವುದೇ ಇಲ್ಲವೋ, ಅವುಗಳಿಂದ ಯಾವನಿಗೆ ದುಃಖನಾಶವೂ ಸುಖವೂ ಆಗುವುದಿಲ್ಲವೋ ಅವನು ಜೀವಂತನಾಗಿರುವಾಗಲೇ ಮುಕ್ತನಾದವನು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ ನಿರ್ವಾಣ ಪ್ರಕರಣದ ಪೂರ್ವಾರ್ಧದಲ್ಲಿ "ಬ್ರಹ್ಮೈಕ್ಯ ಪ್ರತಿಪಾದನ" ಎಂಬ ಮೂರನೆಯ ಸರ್ಗವು.

ಚತುರ್ಥಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ಮನೋ ಬುದ್ಧಿರಹಂಕಾರ ಇಂದ್ರಿಯಾದಿ ತಥಾನಘ ।
ಅಚೇತ್ಯಚಿನ್ಮಯಂ ಸರ್ವಂ ಕ್ವ ತೇ ಜೀವಾದಯಃ ಸ್ಥಿತಾಃ ॥ ೧ ॥

ಏಕೇನೈವಾತ್ಮನಾ ದತ್ತಾ ನಾನಾತೇಯಂ ಮಹಾತ್ಮನಾ ।
ಯಥೈಕೇನೈವ ಚಂದ್ರೇಣ ತಿಮಿರಾತ್ಪಾತ್ರದರ್ಪಣೈಃ ॥ ೨ ॥

ಭೋಗತೃಷ್ಣಾವಿಷಾವೇಶೋ ಯದೈವೋಪಶಮಂ ಗತಃ ।
ತದೈವಮಸ್ತಮಜ್ಞಾನಮಾಂಧ್ಯಂ ಧ್ವಾಂತಕ್ಷಯಾದಿವ ॥ ೩ ॥

ಅಧ್ಯಾತ್ಮಶಾಸ್ತ್ರಮಂತ್ರೇಣ ತೃಷ್ಣಾವಿಷವಿಷೂಚಿಕಾ ।
ಕ್ಷೀಯತೇ ಭಾವಿತೇನಾಂತಃ ಶರದಾ ಮಿಹಿಕಾ ಯಥಾ ॥ ೪ ॥

ನಾಲ್ಕನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು:—ಮನಸ್ಸು, ಬುದ್ಧಿ, ಅಹಂಕಾರ, ಇಂದ್ರಿಯ, ಮೊದಲಾದ ಜಗತ್ತೆಲ್ಲವೂ ದೃಶ್ಯವಲ್ಲದ ದೃಕ್ಕೇ ಆಗಿರಲು, ಜೀವ ಮೊದಲಾದ ಭೇದಗಳೆಲ್ಲಿಂದ ಬಂತು?

೨. ಚಂದ್ರನು ಒಬ್ಬನೇ ಆಗಿದ್ದರೂ, ಕಣ್ಣಿನ ರೋಗ, ನೀರಿನ ಪಾತ್ರೆ, ಕನ್ನಡಿ ಮೊದಲಾದ ಕಾರಣಗಳಿಂದ ಅನೇಕ ರೂಪವಾಗಿ ಕಾಣುವಂತೆ, ಮಹಾ ಆದ ಒಬ್ಬನೇ ಆತ್ಮನೇ ಈ ಅನೇಕಾನೇಕ ರೂಪವಾಗಿ ತೋರುವನು.

೩. ಭೋಗಲಾಲಸೆಯೆಂಬ ವಿಷದ ವೇಗವು ನಾಶಹೊಂದುತ್ತಲೂ ತಿಮಿರ ರೋಗವು ಕಳೆದ ಕೂಡಲೇ ತೊಲಗುವ ಕುರುಡತನದಂತೆ, ಅಜ್ಞಾನವೂ ತೊಲಗುವುದು.

೪. ಶರತ್ಕಾಲವು ಬರುತ್ತಲೂ ಅಡಗಿ ಹೋಗುವ ಹಿಮದಂತೆ, ಅಧ್ಯಾತ್ಮ ಶಾಸ್ತ್ರಮಂತ್ರದಿಂದ ಆಶೆಯೆಂಬ ವಿಷವಿಷೂಚಿಕೆಯು ಅಡಗಿ ಹೋಗುವುದು.

ಮೌರ್ಖ್ಯೇ ಕ್ಷೀಣೇ ಕ್ಷತಂ ವಿದ್ಧಿ ಚಿತ್ತಂ ರಾಮ ಸಬಾಂಧವಂ |
ವಿಲೀನಾಂಬುಧರೇ ವ್ಯೋಮ್ನಿ ಜಾಡ್ಯಂ ಶಾಮ್ಯತ್ಯವಿಘ್ನತಃ || ೫ ||

ಅಚಿತ್ತತ್ವಂ ಗತೇ ಚಿತ್ತೇ ಕ್ಷೀಯತೇ ವಾಸನಾಭ್ರಮಃ |
ಹಾರಮುಕ್ತಾಸಮಾವೇಶಶ್ಛಿನ್ನೇ ತಂತಾವಿವಾನಘ || ೬ ||

ರಘುನಾಥ ವಿಘಾತಾಯ ಶಾಸ್ತ್ರಾರ್ಥಂ ಭಾವಯಂತಿ ಯೇ |
ಕೃಮಿಕೀಟತ್ವಯೋಗ್ಯಾಯ ಚೇತಸಾ ಸಂಮಿಲಂತಿ ತೇ || ೭ ||

ನವತಾಮರಸಾಕಾರಕಾಂತಲೋಚನಲೋಲತಾ |
ಶಾಂತೇ ಮೌರ್ಖ್ಯೇಽಕ್ಷತಾ ವಾತೇ ಚಲತಾ ಸರಸೋ ಯಥಾ || ೮ ||

ಸ್ಥಿರತಾಮುಪಯಾತೋಽಸಿ ಭಾವಾಭಾವವಿವರ್ಜಿತಃ |
ಪದೇ ಪರಮವಿಸ್ತಾರೇ ನಭಸೀವ ಪ್ರಭಂಜನಃ || ೯ ||

---

೫. ರಾಮನೆ, ಅಜ್ಞಾನವು ಕ್ಷೀಣವಾದೊಡನೆಯೇ ಪರಿವಾರ ಸಹಿತವಾದ ಚಿತ್ತವು, ಮೋಡಗಳಿಲ್ಲದ ಆಕಾಶದಲ್ಲಿ ಶೀತವು ಹೇಗೋ ಹಾಗೆ, ನಿರ್ವಿಘ್ನವಾಗಿ ಶಾಂತಿಹೊಂದುವುದು.

೬. ಚಿತ್ತವು ಅಚಿತ್ತವಾಗಲು, ವಾಸನಾಭ್ರಾಂತಿಯು, ಎಲೆ ಅನಘನಾದ ರಾಮನೆ, ದಾರ ಹರಿದೊಡನೆಯೇ ಮುತ್ತಿನ ಹಾರವು ಇಲ್ಲವಾಗುವಂತೆ, ನಾಶ ವಾಗಿ ಹೋಗುವುದು.

೭. ರಘುನಾಥನೆ, ಯಾರು ಶಾಸ್ತ್ರಾರ್ಥವನ್ನೂ ವಿಪರೀತವಾಗಿ ತಿಳಿಯು ತ್ತಾರೋ ಅವರು ಕೃಮಿಕೀಟ ಜನ್ಮವನ್ನುಂಟುಮಾಡತಕ್ಕ ದುಷ್ಟ ಮನಸ್ಸನ್ನೂ ಹೊಂದುತ್ತಾರೆ.

೮. ಗಾಳಿಯು ಶಾಂತವಾಗಲು, ಹೊಸದ್ದಾದ ಕಮಲದಂತಿರುವ ತರುಣಿಯರ ಕಣ್ಣುಗಳಲ್ಲಿ ಮೆರೆಯುವ, ಸರೋವರದ ಚಪಲತೆಯು ಕೂಡ, ನಿಂತುಹೋಗು ವಂತೆ ಮೌರ್ಖ್ಯವು ಶಾಂತವಾಗಲು,(ಅಂತಹ ದುಷ್ಟ ಬುದ್ಧಿಯು ಇಲ್ಲವಾಗುವುದು) (ಇಲ್ಲಿ ಗ್ರಂಥಪಾತವಾದಂತಿದೆ).

೯. ವಿಶಾಲವಾದ ಗಗನದಲ್ಲಿ ಗಾಳಿಯಂತೆ ಸದಸದ್ವಿಕಲ್ಪವರ್ಜಿತನಾದ ನೀನು ಸ್ಥಿರತೆಯನ್ನು ಹೊಂದಿರುವೆ.

ಮನ್ಯೇ ಮದ್ವಚನೈರ್ಬೋಧಮಾಗತೋಽಸಿ ರಘೂದ್ವಹ ।
ವಿಗತಾಜ್ಞಾನನಿದ್ರೋಽಂತರ್ನೃಪತಿಃ ಪಟಹೈರಿವ ॥ ೧೦ ॥

ಸಾಮಾನ್ಯೇಽಚ ಲಗಂತ್ಯೇವ ಜನೇ ಕುಲಗುರೋರ್ಗಿರಃ ।
ಅತ್ಯುದಾರಮತೌ ರಾಮ ನ ಲಗಂತಿ ಕಥಂ ತ್ವಯಿ ॥ ೧೧ ॥

ಯತ್ರೋಪಾದೇಯವಾಕ್ಯತ್ವಂ ಭಾವಿತಂ ಸ್ವೇನ ಚೇತಸಾ ।
ಮದ್ವಚೋಽಂತರ್ವಿಶತ್ಯುಚ್ಚೈಸ್ತಪ್ತೇ ಕ್ಷೇತ್ರೇ ಯಥಾ ಪಯಃ ॥ ೧೨ ॥

ವಯಮಿಹ ಹಿ ಮಹಾನುಭಾವ ನಿತ್ಯಂ
ಕುಲಗುರುವೋ ಭವತಾಂ ರಘೂದ್ವಹಾನಾಂ ।
ಮದುದಿತಮಿದಮಾಶು ಧಾರ್ಯಮಾರ್ಯ
ಶುಭವಚನಂ ಹೃದಿ ಹಾರವತ್ತ್ವಯೇತಿ ॥ ೧೩ ॥

ಇತ್ಯಾರ್ಷೇ ವಾಸಿಷ್ಠರಾಮಾಯಣೇ ವಾಲ್ಮೀಕೀಯೇ ದೇವದೂತೋಕ್ತೇ ಮೋಕ್ಷೋಪಾಯೇಷು ನಿರ್ವಾಣಪ್ರಕರಣೇ "ಚಿತ್ತಾಭಾವಪ್ರತಿಪಾದನಂ" ನಾಮ ಚತುರ್ಥಃ ಸರ್ಗಃ

---

೧೦. ರಘುಶ್ರೇಷ್ಠನೆ, ನನ್ನ ವಚನಗಳಿಂದ ನೀನು, ವಾದ್ಯಗಳನ್ನು ಕೇಳಿ, ನಿದ್ದೆಯಿಂದ ಎಚ್ಚರಗೊಳ್ಳುವ ರಾಜನಂತೆ, ಅಜ್ಞಾನ ನಿದ್ರೆಯಿಂದ ಎಚ್ಚತ್ತವನಾಗಿರುವೆ.

೧೧. ರಾಮನೆ, ಕುಲಗುರುವಿನ ಮಾತುಗಳು ಸಾಮಾನ್ಯ ಜನರಿಗೂ ಹಿಡಿಯುತ್ತವೆ. ಇನ್ನು ಅತ್ಯುದಾರವಾದ ಮನಸ್ಸುಳ್ಳ ನಿನಗೆ ಹಿಡಿಸುವುದಿಲ್ಲವೆಂದರೇನು ?

೧೨. ನನ್ನಲ್ಲಿ ನೀನು ಆಪ್ತಬುದ್ಧಿಯನ್ನಿಟ್ಟಿರುವೆ. ಅದರಿಂದ ನನ್ನ ಮಾತುಗಳನ್ನು, ಕಾದಿರುವ ನೆಲವು ನೀರನ್ನು ಆತುರದಿಂದ ಕುಡಿಯುವಂತೆ, ನಿನ್ನ ಹೃದಯವು ಚೆನ್ನಾಗಿ ಗ್ರಹಿಸುವುದು.

೧೩. ಮಹಾನುಭಾವನೇ, ನೀನು ಮೊದಲಾದ ರಘುಶ್ರೇಷ್ಠರಿಗೆಲ್ಲಾ ನಾನೇ ಕುಲಗುರುವು. ಆದ್ದರಿಂದ ಆರ್ಯ, ನನ್ನ ಶುಭವಚನಗಳು ಹಾರದಂತೆ ನಿನ್ನ ಹೃದಯದಲ್ಲಿ ಯಾವಾಗಲೂ ಮೆರೆಯಲಿ.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ ನಿರ್ವಾಣಪ್ರಕರಣದ ಪೂರ್ವಾರ್ಧದಲ್ಲಿ "ಚಿತ್ತಾಭಾವಪ್ರತಿಪಾದನ" ಎಂಬ ನಾಲ್ಕನೆಯ ಸರ್ಗವು.

ಪಂಚಮಃ ಸರ್ಗಃ

ಶ್ರೀ ರಾಮ ಉವಾಚಃ—

ಅಹೋ ಅಹಂ ಗತಶ್ಚಿತ್ತ್ವಂ ಭವದ್ವಾಕ್ಯಾರ್ಥಭಾವನಾತ್ ।
ಶಾಂತಂ ಜಗಜ್ಜಾಲಮಿದಮುಗ್ರಸ್ಥಮಪಿ ನಾಥ ಮೇ ॥ ೧ ॥

ಪರಾಮಂತಃ ಪ್ರಯಾತೋಽಸ್ಮಿ ಪರಮಾತ್ಮನಿ ನಿರ್ವೃತಿಂ ।
ದೀರ್ಘಾವಗ್ರಹಸಂತಪ್ತಂ ವೃಷ್ಟ್ಯೇವ ವಸುಧಾತಲಂ ॥ ೨ ॥

ಶಾಮ್ಯಾಮಿ ಶೀತಲಾಕಾರಃ ಸುಖಂ ತಿಷ್ಠಾಮಿ ಕೇವಲಂ ।
ಪ್ರಸಾದಮನುಯಾತೋಽಹಂ ಸರೋ ನಿರ್ವಾರಣಂ ಯಥಾ ॥ ೩ ॥

ಸಮ್ಯಕ್ಪ್ರಸನ್ನಮಖಿಲಂ ದಿಂಙ್ಮಂಡಲಮಿದಂ ಮುನೇ ।
ಯಥಾಭೂತಂ ಪ್ರಪಶ್ಯಾಮಿ ನಿರ್ನೀಹಾರಮಿವಾಧುನಾ ॥ ೪ ॥

ಐದನೆಯ ಸರ್ಗ

೧. ಶ್ರೀರಾಮನು ಹೇಳಿದನು:—ಪ್ರಭುವೆ, ನಿಮ್ಮ ವಾಕ್ಯಾರ್ಥವನ್ನು ಚಿಂತಿಸೋಣದರಿಂದ ಚಿದಾತ್ಮಸ್ವರೂಪವನ್ನೂ ಹೊಂದಿದೆನು. ಎದುರಿಗೆ ಕಾಣುತ್ತಿದ್ದರೂ ಈ ದೃಶ್ಯವೆಲ್ಲವೂ ಉಪಶಾಂತವಾಯಿತು.

೨. ಬಹುಕಾಲದ ಅನಾವೃಷ್ಟಿಯಿಂದ ಬೆಂದು ಬೆಂಡಾದ ಭೂಮಿಯು ಮಳೆಯಿಂದ ಶಾಂತಿಯನ್ನು ಪಡೆಗಂತೆ, ನನ್ನ ಅಂತಃಕರಣದಲ್ಲಿ, ಪರಮಾತ್ಮನಲ್ಲಿ, ಅತ್ಯಂತ ಸೌಖ್ಯವನ್ನೂ ಹೊಂದಿದೆನು.

೩. ಶೀತಲಾಂತಃಕರಣನಾಗಿ ಅತ್ಯಂತ ಸುಖದಿಂದಿರುವೆನು. ಆನೆಯು ಎದ್ದುಹೋದಮೇಲೆ ತಿಳಿಯಾದ ಸರೋವರದಂತೆ ಪ್ರಸನ್ನತೆಯನ್ನೂ ಹೊಂದಿದೆನು.

೪. ಮಂಜೆಲ್ಲವೂ ಅಡಗಿ ಹೋಗಲು ದಿಗ್ಮಂಡಲವೆಲ್ಲವೂ ಪ್ರಕಾಶವಾಗಿ

ಜಾತೋಽಸ್ಮಿ ಗತಸಂದೇಹಃ ಶಾಂತಾಶಾಮೃಗತೃಷ್ಣಿಕಃ ।
ರಾಗನೀರಾಗನಿರ್ಮುಕ್ತೋ ಮೃಷ್ಟಜಂಗಲಶೀತಲಃ ॥ ೫ ॥

ಆತ್ಮನ್ಯೇವಾಂತರಾನಂದಂ ತತ್ಪ್ರಾಪ್ತೋಽಸ್ಮ್ಯಂತವರ್ಜಿತಂ ।
ರಸಾಯನರಸಾಸ್ವಾದೋ ಯತ್ರ ನಾಥ ತೃಣಾಯತೇ ॥ ೬ ॥

ಅದ್ಯಾಹಂ ಪ್ರಕೃತಿಸ್ಥೋಽಸ್ಮಿ ಸ್ವಸ್ಥೋಽಸ್ಮಿ ಮುದಿತೋಽಸ್ಮಿ ಚ ।
ಲೋಕಾರಾಮೋಽಸ್ಮಿ ನಮೋ ಮಹ್ಯಂ ನಮೋಽಸ್ತು ತೇ ॥ ೭ ॥

ತೇ ಸಂಶಯಾಸ್ತಾಃ ಕಲನಾಃ ಸರ್ವಮಸ್ತಂ ಗತಂ ಮಮ ।
ರಾತ್ರಿವೇತಾಲಸಂಸಾರಃ ಪ್ರಭಾತ ಇವ ಭಾಸ್ಕರೇ ॥ ೮ ॥

ಬೆಳಗುವಂತೆ, ನನಗೆ ಈಗ ಎಲ್ಲವೂ ಚೆನ್ನಾಗಿ ಪ್ರಸನ್ನವಾಗಿ ಕಾಣುತ್ತಿರುವುದು. ಎಲ್ಲವನ್ನೂ ಯಥಾಸ್ಥಿತವಾಗಿ ಕಾಣುತ್ತಿರುವೆನು.

೫. ನಾನೀಗ ಸಂದೇಹರಹಿತನಾಗಿಯೂ ಆಶೆಯೆಂಬ ಬಿಸಿಲ್ಗುದುರೆಯು ಅಳಿದವನಾಗಿಯೂ ರಾಗವೆಂಬ ಮಂಜು ತೊಲಗಿದವನಾಗಿಯೂ ಹಬೆಯಡಗಿದ ಅರಣ್ಯ ಪ್ರದೇಶದಂತೆ ಶೀತಲನಾಗಿಯೂ ಇರುವೆನು.

೬. ಯಾವುದನ್ನು ಸೇವಿಸಿದರೆ ರಸಾಯನದ ಸವಿಯೂ ಕೂಡ ತೃಣಕ್ಕೆ ಸಮಾನವಾಗುತ್ತದೆಯೋ, ಅಂತಹ ಕೊನೆಯೇ ಇಲ್ಲದಿರುವ ಆತ್ಮಾನಂದವನ್ನೂ ಹೊಂದಿರುವೆನು.

೭. ಈ ದಿನ ನಾನು ಸ್ವಸ್ವರೂಪವನ್ನು ಹೊಂದಿದೆನು. ಸ್ವಸ್ಥನಾದೆನು. ಸಂತೋಷಗೊಂಡೆನು. ಲೋಕವನ್ನೆಲ್ಲ ಆನಂದಪಡಿಸುವ ಕೇಂದ್ರನಾದೆನು. ಆನಂದಕ್ಕೆ ಖನಿಯಾದೆನು. ನನಗೂ ನಮಸ್ಕಾರವು. ನಿನಗೂ ನಮಸ್ಕಾರವು.

೮. ಇದುವರೆಗೆ ಇದ್ದ ಸಂಶಯಗಳೂ ಭ್ರಾಂತಿಗಳೂ, ರಾತ್ರಿಯಲ್ಲಿ ತೋರಿ ಬಂದ ಭೇತಾಳ ಸಂಚಾರವು ಸೂರ್ಯೋದಯಾನಂತರ ಅಡಗುವಂತೆ ಅಡಗಿ ಹೋದುವು.

ನಿರ್ಮಲೇ ಹೃದಿ ವಿಸ್ತೀರ್ಣೇ ಸಂಪನ್ನೇ ಹಿಮಶೀತಲೇ |
ಮನೋ ನಿರ್ವೃತಿಮಾಯಾತಂ ಸರಸೀ ಶರದೀವ ಮೇ || ೯ ||

ಕಲಂಕ ಆತ್ಮನಃ ಕಸ್ಮಾತ್ಕಥಂ ಚೇತ್ಯಾದಿಸಂಶಯಃ |
ನೂನಂ ನಿರ್ಮೂಲತಾಂ ಯಾತೋ ಮೃಗಾಂಕಾಗ್ರೇ ಯಥಾ ತಮಃ || ೧೦ ||

ಸರ್ವಮಾತ್ಮೈವ ಸರ್ವತ್ರ ಸರ್ವದಾ ಭಾವಿತಾಕೃತಿಃ |
ಇದಮನ್ಯದಿದಂ ಚಾನ್ಯದಿತ್ಯಸತ್ಕಲನಾ ಕುತಃ || ೧೧ ||

ಕೋಽಭವಂ ಪ್ರಾಗಹಂ ತಾದೃಕ್ ತೃಷ್ಣಾನಿಗಡಯಂತ್ರಿತಃ |
ಅಂತರಾತ್ಮಾನಮೇವೇತಿ ವಿಹಸಾಮಿ ವಿಕಾಸವಾನ್ || ೧೨ ||

ಆ ಇದಾನೀಂ ಸ್ಮೃತಂ ಸಮ್ಯಗ್ಯಥೈಷ ಸಕಲೋಽಸ್ಮ್ಯಸೌ |
ಯಸ್ತ್ವದ್ವಾಗಮೃತಾಪೂರಸ್ನಾತೇನಾಯಮಹಂ ಸ್ಥಿತಃ || ೧೩ ||

---

೯. ವಿಶಾಲವಾದ ಹೃದಯವು ನಿರ್ಮಲವಾಗಿಯೂ ಹಿಮದಂತೆ ಶೀತಲವಾಗಿಯೂ ಆಗುತ್ತಿರಲು ಶರತ್ಕಾಲದಲ್ಲಿ ಸರೋವರ ಜಲವು ನಿರ್ಮಲವಾಗುವಂತೆ ಮನಸ್ಸು ಶಾಂತಿಯನ್ನೂ ಹೊಂದಿತು.

೧೦. "ಏಕೆ?" "ಹೇಗೆ?" ಇತ್ಯಾದಿಯಾದ ನನ್ನ ಸಂಶಯಗಳು, ಚಂದ್ರನು ಉದಿಸಲು ಮಾಯವಾಗುವ ಕತ್ತಲೆಯಂತೆ ನಿರ್ಮೂಲವಾದುವು.

೧೧. ಎಲ್ಲೆಲ್ಲೂ, ಯಾವಾಗಲೂ, ಎಲ್ಲವೂ ಆತ್ಮವೇ ಎಂಬುದಾಗಿ ಮನಸ್ಸಿಗೆ ಖಚಿತವಾಗಿ ಗೊತ್ತಾಗಿರಲು, ಇದು ಬೇರೆ ಅದು ಬೇರೆ ಎಂಬ ಭ್ರಾಂತಿಯೆಲ್ಲುಳಿಯುವುದು?

೧೨. ಈಗ ನಾನು ವಿಕಾಸಹೊಂದಿದೆನು. ಹಿಂದೆ ನಾನು ಆತ್ಮನನ್ನು ಹೊಂದದೆ ಹೇಗೆ, ಆಶೆಯ ಸಂಕಲೆಯಲ್ಲಿ ಬದ್ಧನಾಗಿ ಏನಾಗಿ ಹೋಗಿದ್ದೆ ಎಂದು ಯೋಚಿಸಿಕೊಂಡು ನನ್ನೊಳಗೆ ನಾನೇ ನಗುತ್ತಿದ್ದೇನೆ.

೧೩. ನಿನ್ನ ವಚನಾಮೃತದಲ್ಲಿ ಮಿಂದು ಮಡಿಯಾದ ನನಗೆ ಈಗ ನೆನಪಾಯಿತು. ಈ ಸರ್ವವೂ ನಾನೇ!

ಅಹೋ ನು ವಿತತಾಂ ಭೂಮಿಮಧಿರೂಢೋऽಸ್ಮಿ ಪಾವನೀಂ ।
ಇಹಸ್ಥ ಏವ ಯತ್ರಾರ್ಕೋ ನ ಪಾತಾಲಮಿವ ಸ್ಥಿತಃ ॥ ೧೪ ॥

ಮಹ್ಯಂ ಸತಾ ಮುಪೇತಾಯ ಭಾವಾಭಾವಭವಾರ್ಣವಾತ್ ।
ನಮೋ ನಿತ್ಯಂ ನಮಸ್ಯಾಯ ಜಯಾಮ್ಯಾತ್ಮಾऽತ್ಮನಾऽತ್ಮನಿ ॥ ೧೫ ॥

ಅನುಭವವಶತೋ ಹೃದಬ್ಜಕೋಶೇ
ಸ್ಫುಟಮಲಿತಾಂ ಸಮುಪಾಗತೇನ ನಾಥ ।
ತವ ವರವಚಸೇಹ ವೀತಶೋಕಾಂ
ಚಿರಮುದಿತಾಂ ಚ ದಶಾಮುಪಗತೋऽಸ್ಮಿ ॥ ೧೬ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ದೇವದೂತೋಕ್ತೇ ಮೋಕ್ಷೋಪಾಯೇಷು ನಿರ್ವಾಣಪ್ರಕರಣೇ "ರಾಘವವಿಶ್ರಾಂತಿವರ್ಣನಂ" ನಾಮ ಪಂಚಮಃ ಸರ್ಗಃ

---

೧೪. ಆಹಾ ! ನಾನು ಇಲ್ಲಿಯೇ ಇರುವೆನು (ಎಂದು ಎಲ್ಲರೂ ತಿಳಿದು ಕೊಂಡು ಇದ್ದರೂ) ನಾನು ವಿಶಾಲವೂ (ಅಖಂಡವೂ) ಆದ ಪರಮಬ್ರಹ್ಮ ಭೂಮಿಕೆಯನ್ನು ಹೊಂದಿರುವೆನು. ಅಲ್ಲಿ ನಿಂತು ನೋಡಿದರೆ ಸೂರ್ಯನು ಪಾತಾಲ ದಲ್ಲಿ ಇರುವಂತೆ ಕೂಡ ಕಾಣಿಸುವುದಿಲ್ಲ.

ಹೋಲಿಸಿ: ನಷ್ಟೋ ಮೋಹಃ ಸ್ಮೃತಿರ್ಲಬ್ಧಾ ತ್ವತ್ಪ್ರಸಾದಾನ್ಮಯಾಚ್ಯುತ ॥ ಸ್ಥಿತೋऽಸ್ಮಿಗತಸಂದೇಹಃ ಕರಿಷ್ಯೇವಚನಂತವ—ಗೀತಾ ಅ. ೧೮.
(ಕಾರ್ಯಬ್ರಹ್ಮಲೋಕಾದ್ಧಿ ಸೋऽಧಸ್ಸ್ಥಿತೋ ನ ಪರಬ್ರಹ್ಮಲೋಕಾತ್
ನ ತತ್ರ ಸೂರ್ಯೋಭಾತಿ ನ ಚಂದ್ರತಾರಕಂ ಶ್ರುತಿಃ—ತಾ. ಪ್ರ.

೧೫. ಸದಸದ್ರೂಪವಾದ ಸಂಸಾರ ಸಾಗರವನ್ನೂ ದಾಟಿ ಸದ್ರೂಪ ಬ್ರಹ್ಮ ವನ್ನೂ ಹೊಂದಿರುವೆನು. ನಾನು ಯಾವಾಗಲೂ ನಮಸ್ಕಾರಕ್ಕೆ ಅರ್ಹನಾದೆನು. ಪರಸಹಾಯವಿಲ್ಲದೆ, ನನಗೆ ನಾನೇ, ನನ್ನಲ್ಲಿಯೇ, ಗೆದ್ದುಕೊಂಡೆನು.

೧೬. ಪ್ರಭುವೆ, ನನಗೆ ಬ್ರಹ್ಮಾನುಭವವಾಯಿತು. ಈಗ ನಾನು ಹೃದಯ ವೆಂಬ ಕಮಲದ ಮೊಗ್ಗೆಯೊಳಗೆ ಸೇರಿಕೊಂಡಿರುವ ದುಂಬಿಯಾಗಿರುವೆನು. ಶ್ರೇಷ್ಠ ವಾದ ನಿನ್ನ ಉಪದೇಶ ವಚನದಿಂದ, ಶೋಕವೆಲ್ಲ ಅಡಗಿರುವ, ಯಾವಾಗಲೂ ಸಂತೋಷವು ತಾನೇತಾನಾಗಿರುವ ದಶೆಯನ್ನು ಹೊಂದಿರುವೆನು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ ನಿರ್ವಾಣಪ್ರಕರಣದ ಪೂರ್ವಾರ್ಧದಲ್ಲಿ "ರಾಘವವಿಶ್ರಾಂತಿವರ್ಣನ" ಎಂಬ ಐದನೆಯ ಸರ್ಗವು.

ಷಷ್ಠಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ಭೂಯ ಏವ ಮಹಾಬಾಹೋ ಶೃಣು ಮೇ ಪರಮಂ ವಚಃ ।
ಯತ್ತೇಽಹಂ ಪ್ರಿಯಮಾಣಾಯ ವಕ್ಷ್ಯಾಮಿ ಹಿತಕಾಮ್ಯಯಾ ॥ ೧ ॥

ಭೇದಮಭ್ಯುಪಗಮ್ಯಾಪಿ ಶೃಣು ಬುದ್ಧಿವಿವೃದ್ಧಯೇ ।
ಭವೇದಲ್ಪಪ್ರಬುದ್ಧಾನಾಮಪಿ ನೋ ದುಃಖಿತಾ ಯಥಾ ॥ ೨ ॥

ಆರನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು:—ಮಹಾಬಾಹುವಾದ ರಾಮನೆ, ಶ್ರೇಷ್ಠವಾದ ಈ ನನ್ನ ಉಪದೇಶವನ್ನು ಕೇಳು. ನಿನಗೆ ಪ್ರಿಯವಾಗಲಿ, ಹಿತವಾಗಲಿ, ಎಂದು ಮತ್ತೆ ಹೇಳುವೆನು.

೨. ಬುದ್ಧಿಯು ವೃದ್ಧಿಯಾಗಲೆಂದು, ಭೇದವನ್ನು ಅಂಗಿಕರಿಸಿಕೊಂಡು ಕೇಳು. ಹೀಗೆ ನೀನು ಕೇಳುವುದರಿಂದ ಅಲ್ಪ ಬುದ್ಧಿಗಳಿಗೆ ದುಃಖಿತ್ವವು ಇಲ್ಲದೆ ಹೋಗಲಿ.

(ಹಿಂದೆ, ಮುಮುಕ್ಷು ಪ್ರಕರಣದಲ್ಲಿ ವಸಿಷ್ಠರಿಗೆ ಬ್ರಹ್ಮನು ತಾತ್ಕಾಲೀನವಾದ ಮೋಹವು ಬರುವಂತೆ ಮಾಡಿ, ಅನಂತರ ಅದರ ಶಾಂತಿಯನ್ನು ಉಪದೇಶಿಸಿದನು ಎಂದು ಹೇಳಿರುವುದನ್ನು ನೆನೆಸಿಕೊಳ್ಳಿ.)

(ತಾತ್ಪರ್ಯ ಪ್ರಕಾಶವು ಇಲ್ಲಿ ಹೀಗೆ ಹೇಳುತ್ತದೆ. "ಶ್ರೋತೃ, ಶ್ರಾವಯಿತೃ, ಶ್ರೋತವ್ಯ, ಮೊದಲಾದ ಭೇದಗಳನ್ನೆಲ್ಲ ನಿರಾಕರಿಸುವುದರಿಂದ ಈಗ ನನಗೆ ಶ್ರವಣದಲ್ಲಿ ಮನಸ್ಸಾದರೂ ಹೇಗೆ ಬರುವುದು ? ಎಂದರೆ, ನಿರಾಕರಿಸಿದ್ದರೂ ಭೇದವನ್ನುಮತ್ತೆ ಅಂಗೀಕರಿಸಿರುವುದರಿಂದ ಶ್ರವಣದಲ್ಲಿ ಪ್ರವೃತ್ತಿಯುಂಟು ಎಂದಾ

ಯಸ್ಯಾಜ್ಞಾನಾತ್ಮನೋಽಜ್ಞಸ್ಯ ದೇಹ ಏವಾತ್ಮಭಾವನಾ ।
ಉದಿತೇತಿ ರುಷೈವಾಕ್ಷರಿಪವೋಽಭಿಭವಂತಿ ತಂ ॥ ೩ ॥

ಯಸ್ಯ ಜ್ಞಾನಾತ್ಮನೋಽಜ್ಞಸ್ಯ ಸತ್ಯೇವಾತ್ಮನಿ ಸಂಸ್ಥಿತಿಃ ।
ಸಂತುಷ್ಟೈರ್ಯವಾಕ್ಷಸುಹೃದೋ ನ ಘ್ನಂತಿ ತಮುನಿಂದಿತಂ ॥ ೪ ॥

ಪದಾರ್ಥೇ ಸ್ಫುರತೋ ಯಸ್ಯ ನ ಸ್ತುತಿರ್ನಿಂದನಾಗ್ರತೇ ।
ಸ ದೇಹಂ ದೇಹದುಃಖಾರ್ಥಮಾದತ್ತೇ ಕೇನ ಹೇತುನಾ ॥ ೫ ॥

ಗುವುದು: ನಿನಗೆ ಜ್ಞಾನಾಭಿವೃದ್ಧಿಯೂ ಅಲ್ಪಬುದ್ಧರಿಗೆ ಉದ್ಧಾರ(ದ ಮಾರ್ಗವೂ) ಲಭಿಸುವುದು ಎಂದು ಅರ್ಥ.)

(ಇಲ್ಲದಿರುವುದನ್ನೂ ಉಂಟು ಎಂದುಕೊಂಡು ವಿಚಾರವನ್ನು ಮುಂದು ವರಿಸುವ ಪದ್ಧತಿಯು ಶಾಸ್ತ್ರಗಳಲ್ಲುಂಟು. ಇದಕ್ಕೆ ಕೃತ್ವಾಚಿಂತೆಯೆಂದು ಹೆಸರು.)

೩. ನಿಜವನ್ನು ಅರಿಯದೆ, ದೇಹವೇ ಆತ್ಮವೆಂದುಕೊಂಡಿರುವ ಅಜ್ಞಾನಿ ಯನ್ನು ಕಂಡು (ಅನಾತ್ಮದಲ್ಲಿ ಆತ್ಮಬುದ್ಧಿಯನ್ನು ಮಾಡುವನೆಂದು) ಕೋಪಗೊಂಡಿ ವೆಯೋ ಎಂಬಂತೆ, ಇಂದ್ರಿಯಗಳು ಶತ್ರುಗಳಾಗಿ ಅವನನ್ನು ಪೀಡಿಸುವುವು.

೪. ಜ್ಞಾನಿಯಾಗಿ, ಪರಮಾತ್ಮನಲ್ಲಿ ನಿಷ್ಠೆಯಿಟ್ಟುಕೊಂಡಿರುವನನ್ನು ಕಂಡು ಸಂತೋಷಪಟ್ಟಿವೆಯೋ ಎಂಬಂತೆ ಇಂದ್ರಿಯಗಳು ಜ್ಞಾನಿಯನ್ನು ಪೀಡಿಸುವುದಿಲ್ಲ.

(ಯಸ್ತ್ವವಿಜ್ಞಾನವಾನ್ ಭವತ್ಯಯುಕ್ತೇನ ಮನಸಾ ಸದಾ । ತಸ್ಯೇಂದ್ರಿಯಾಣ್ಯವಶ್ಯಾನಿ ದುಷ್ಟಾಶ್ವಾ ಇವ ಸಾರಥೇಃ ॥ ಯಸ್ತು ವಿಜ್ಞಾನವಾನ್ ಭವತಿ ಯುಕ್ತೇನ ಮನಸಾ ಸದಾ। ತಸ್ಯೇಂದ್ರಿಯಾಣಿ ವಶ್ಯಾಣಿ ಸದಶ್ವಾ ಇವ ಸಾರಥೇಃ ॥ —ಶ್ರುತಿಃ ತಾ. ಪ್ರ.)

೫. ವ್ಯವಹಾರದಲ್ಲಿರುವ ಜ್ಞಾನಿಗೆ ಯಾವ ಪದಾರ್ಥವನ್ನು ಕಂಡರೂ ಅದರ ಲ್ಲಿರುವ ನಿಂದೆ (ಅಲ್ಪತೆ) ಯು ತೋರುವುದೇ ಹೊರತು, (ಅದನ್ನು ಗ್ರಹಿಸಲು ಬೇಕಾಗುವ) ದೊಡ್ಡತನವು ಕಾಣುವುದಿಲ್ಲವಾದ್ದರಿಂದ, ಯಾವ ಕಾರಣಕ್ಕಾಗಿ, ಯಾವ ಫಲವನ್ನು ಸಾಧಿಸಬೇಕೆಂದು, ದುಃಖಪ್ರದವಾದ ಶರೀರವನ್ನು ಆತ್ಮಬುದ್ಧಿ ಯಿಂದ ಗ್ರಹಿಸುವನು ?

ನಾತ್ಮಾ ಶರೀರಸಂಬಂಧೀ ಶರೀರಮಪಿ ನಾತ್ಮನಿ ।
ಮಿಥ್ಯೋ ವಿಲಕ್ಷಣಾವೇತೌ ಪ್ರಕಾಶತಮಸೀ ಯಥಾ ॥ ೬ ॥

ಸರ್ವೈರ್ಭಾವ ವಿಕಾರೈಸ್ತು ನಿತ್ಯೋನ್ಮುಕ್ತಸ್ತ್ವಲೇಪಕಃ ।
ನಾತ್ಮಾಸ್ತಮೇತಿ ಭಗವಾನ್ನ ಚೋದೇತಿ ಸದೋದಿತಃ ॥ ೭ ॥

ಜಡಸ್ಯಾಜ್ಞಸ್ಯ ತುಚ್ಛಸ್ಯ ಕೃತಘ್ನಸ್ಯ ವಿನಾಶಿನಃ ।
ಶರೀರಕೋಪಲಸ್ಯಾಸ್ಯ ಯದ್ಭವತ್ಯಸ್ತು ತತ್ತಥಾ ॥ ೮ ॥

ಆದತ್ತೇ ತತ್ಕಥಂ ನಿತ್ಯಂ ಚಿನ್ಮಯತ್ವಂ ಸದೋದಿತಂ ।
ಯಯೋರೇಕಪರಿಜ್ಞಾನೇ ಜಡತೈವಾಪರಸ್ಥಿತಾ ॥ ೯ ॥

ತಯೋಃ ಕೀದೃಗ್ದ್ವಿಧಾಭೂತಾ ಸಮಾನಸುಖದುಃಖತಾ ।
ಯೌ ಸಮೌ ಸಮಧರ್ಮಾಣೌ ನ ಕದಾಚನ ತೌ ಕಥಂ ॥ ೧೦ ॥

---

೬. (ದೇಹಾತ್ಮೈಕ್ಯಭ್ರಮವನ್ನು ನಿವಾರಿಸುವ ಯುಕ್ತಿಗಳಿರಡನ್ನು ಹೇಳಲಾಗುವುದು.) ಆತ್ಮನು ಶರೀರಕ್ಕೆ ಸಂಬಂಧಪಟ್ಟವನಲ್ಲ, ಶರೀರವೂ ಆತ್ಮನಲ್ಲಿ ಸಂಬಂಧವನ್ನು ಹೊಂದಿಲ್ಲ. ಇವೆರಡೂ ವಿರುದ್ಧ ಲಕ್ಷಣಗಳುಳ್ಳವು. ಬೆಳಕು ಕತ್ತಲುಗಳಂತೆ ಒಂದಕ್ಕೊಂದು ವಿರುದ್ಧವಾದವು.

೭. ಆತ್ಮನು ಯಾವಾಗಲೂ ಯಾವ ವಿಕಾರಕ್ಕೂ ಒಳಪಡದವನು. ಯಾವದೊಂದು ಸಂಪರ್ಕವೂ ಇಲ್ಲದ ನಿರಂಜನನು. ಭಗವಾನ್ ಆದ ಆತ್ಮನು ಯಾವಾಗಲೂ ಇರತಕ್ಕವನು. ಅದರಿಂದ ಅವನಿಗೆ ಅಸ್ತವೆನ್ನುವುದೇ ಇಲ್ಲ.

೮. ಈ ಶರೀರವೆಂಬುದು ಕಲ್ಲಿನ ತುಂಡಿನಂತೆ, ಏನಾದರೆ ಅದು ಆಗಲಿ, ಎಂದು ಇರುವ, ಈ ಜಡವೂ, ಅಜ್ಞಾನಿಯೂ, ತುಚ್ಛವೂ, ಮಾಡಿದುಪಕಾರವನ್ನೂ ಅರಿಯಲಾರದ, ನಾಶವಾಗಿ ಹೋಗುವ, (ಈ ಶರೀರವು ಆತ್ಮನಾಗುವುದೆಂತು ?)

೯. ತಾನೇ ತಾನಾಗಿರುವ ಚಿನ್ಮಯತ್ವವು (ದೇಹವು ಎಂದು ಆಗಲಿ ಎಂದರೆ ಅದು) ಅದೆಂತು ದೇಹಕ್ಕೆ ಬರುವುದು ? ಚಿತ್ತನ್ನು ತಿಳಿದರೆ, ಇನ್ನೊಂದು (ದೇಹವು) ಅಚಿತ್ತು, ಜಡ, ಎಂದು ತಾನಾಗಿಯೇ ತಿಳಿಯುವುದಲ್ಲವೆ?)

೧೦. ಚಿತ್ತೂ, ದೇಹಗಳು ಯಾವಾಗಲೂ ಸಮಾನ ಧರ್ಮಗಳೇ ಅಲ್ಲದಿರಲು,

ಯಾವಪ್ಯಸಕ್ತಾವನ್ಯೋನ್ಯಂ ಮಿಥಃ ಸಂನಮಿತೌ ಕಥಂ ।
ಕಥಂ ಸ್ಥೂಲೋಽಣುರೂಪಃ ಸ್ಯಾದಣುಃ ಸ್ಥೂಲಃ ಕಥಂ ಭವೇತ್ ॥ ೧೧ ॥

ಏಕೋದಯೇ ದ್ವಿತೀಯಸ್ಯ ನ ಸತ್ತಾ ದಿನರಾತ್ರಯೋಃ ।
ಜ್ಞಾನಂ ನಾ ಜ್ಞಾನತಾಮೇತಿ ಚ್ಛಾಯಾ ನಾಯಾತಿ ತಾಪತಾಂ ॥ ೧೨ ॥

ಸದ್ಬ್ರಹ್ಮ ನಾಸದ್ಭವತಿ ವಿಚಿತ್ರಾಸ್ವಪಿ ದೃಷ್ಟಿಷು ।
ಮನಾಗಪಿ ನ ಸಂಶ್ಲೇಷಃ ಸರ್ವಗಸ್ಯಾಪಿ ದೇಹಿನಃ ॥ ೧೩ ॥

ಚಿತ್ತ ದೇಹಗಳೆರಡೂ ಸಮಾನ ಧರ್ಮವುಳ್ಳವು, ಸಮಾನ ಸುಖದುಃಖವುಳ್ಳವು ಎನ್ನುವುದು ಹೇಗೆ?

(ಹಾಗಾದರೆ ಮನಸ್ಸಿಗೆ ದುಃಖವುಂಟಾದಾಗ ದೇಹವು ಸೊರಗುವುದು, ದೇಹಕ್ಕೆ ಏಟು ಬಿದ್ದಾಗ ಆತ್ಮನಿಗೆ ದುಃಖವುಂಟಾಗುವುದು ಉಂಟಲ್ಲ ಎಂದರೆ ಆತ್ಮದೇಹಗಳು ಎರಡೂ ಬೆಂಕಿ, ಕಬ್ಬಿಣದ ಗುಂಡುಗಳಂತೆ ಹೊಂದಿಕೆಯುಳ್ಳವು. ಒಂದರಲ್ಲಿ ಇನ್ನೊಂದರ ಧರ್ಮವು ತೋರುವುದುಂಟು ಅಷ್ಟೇ!—ತಾ.ಪ್ರ.)

೧೧. ಆತ್ಮ ದೇಹಗಳು ಒಂದರಲ್ಲೊಂದು ಬೆರೆಯುವುದಿಲ್ಲ. ಹಾಗಿರಲು ಎರಡೂ ಒಟ್ಟುಗೂಡುವುದೆಲ್ಲಿ? ಸ್ಥೂಲವು ಅಣುವಾಗುವುದೂ ಅಣುವು ಸ್ಥೂಲವಾಗುವುದೂ ಎಲ್ಲಿ ತಾನೆ ಉಂಟು?

೧೨. ಒಂದು ಇದ್ದರೆ ಇನ್ನೊಂದು ಇರುವುದು ಸಾಧ್ಯವಿಲ್ಲದ ದಿನರಾತ್ರಿಗಳಂತೆ, (ಇವೆರಡೂ) ಜ್ಞಾನವು ಅಜ್ಞಾನವಾಗುವುದು ಹೇಗೆ? ನೆರಳು ಎಂದಿಗಾದರೂ ಬಿಸಿಲಾಗುವುದೇ?

೧೩. ಸತ್ ಆದ ಬ್ರಹ್ಮವು ಎಂದಿಗೂ ಅಸತ್ ಆಗುವುದಿಲ್ಲ. ಎಂತಹ ವಿಚಿತ್ರವಾದ ದೃಷ್ಟಿಯನ್ನು ಅವಲಂಬಿಸಿದರೂ ಇದು ಸಾಧ್ಯವಿಲ್ಲ. ಆತ್ಮನು ಎಲ್ಲದರಲ್ಲಿಯೂ ಇರುವುದು ನಿಜವಾದರೂ ಆತನು ಇನ್ನು ಯಾವುದರಲ್ಲಿಯೂ ಬೆರೆಯುವುದು ಎನ್ನುವುದು ಎಂದಿಗೂ ಇಲ್ಲ.

ದೇಹೇನ ದೇಹಗಸ್ಯಾಪಿ ಕಮಲಸ್ಯೇವ ವಾರಿಣಾ |
ಮನಾಗಪಿ ನ ಸಂಶ್ಲೇಷೋ ಬ್ರಹ್ಮಣೋ ದೇಹಸತ್ತಯಾ || ೧೪ ||

ತದ್ಗತಸ್ಯಾಪ್ಯತದ್ವೃತ್ತೇರಂಬರಸ್ಯೇವ ವಾಯುತಃ |
ಜರಾಮರಣಮಾಪಚ್ಚ ಸುಖದುಃಖೇ ಭವಾಭವೌ |
ಮನಾಗಪಿ ನ ಸಂತೀಹ ತಸ್ಮಾತ್ತ್ವಂ ನಿರ್ವೃತೋಭವ || ೧೫ ||

ಸ್ಥಿತೌ ದೇಹತಯಾಪ್ಯುಚ್ಚೈಃ ಪಾತೋತ್ಪಾತಮಯೋ ಭ್ರಮಃ |
ದೃಶ್ಯತೇ ಕೇವಲಂ ಬ್ರಹ್ಮಣ್ಯಪ್ಸು ವೀಚಿಚಯೋ ಯಥಾ || ೧೬ ||

ಆತ್ಮಸತ್ತೋಪಜೀವಿತ್ವಾದಾತ್ಮಾನುಭವತೀಹ ಹಿ |
ದೇಹಯಂತ್ರಂ ಪಯಃ ಸತ್ತಾಮಾತ್ರಾದೂರ್ಮಿಮಿವ ಸ್ಥಿತಂ || ೧೭ ||

---

೧೪. ಕಮಲವು ಹೇಗೆ ನೀರಿನೊಡನೆ ಬೆರೆಯುವುದಿಲ್ಲವೋ ಹಾಗೆಯೇ ದೇಹದಲ್ಲಿದ್ದರೂ ಆತ್ಮನು ದೇಹದೊಡನೆ ಬೆರೆತು ಹೋಗುವುದಿಲ್ಲ. ಅದರಿಂದ ಬ್ರಹ್ಮ (ಆತ್ಮ) ಕ್ಕೂ, ದೇಹಕ್ಕೂ, ಬೆರೆಯುವುದು ಎನ್ನುವುದು ಇಲ್ಲವೇ ಇಲ್ಲ.

(ತಥಾಚೋಕ್ತಂ ಭಗವತ್ಪಾದೈಃ"ಯತ್ರ ಹಿ ಯದಧ್ಯಾಸಃ ತತ್ಕೃತೇನ ಗುಣೇನ ದೋಷೇಣ ವಾ ಅಣುಮಾತ್ರೇಣಾಪಿ ಸ ನ ಸಂಬಧ್ಯತೇ" ಇತಿ ತಾ. ಪ್ರ.)

೧೫. ಆಕಾಶವು ವಾಯುವಿನಲ್ಲಿ ಇದ್ದರೂ ವಾಯುವಿಗೆ ಉಂಟಾಗುವ (ಶೋಷ ಕಂಪ ರಜೋಲೇಪಾದಿ) ಗುಣಗಳು ಯಾವುವೂ ಆಕಾಶಕ್ಕೆ ಆಗದಿರುವಂತೆ, (ಆತ್ಮವು ದೇಹದಲ್ಲಿ ಇದ್ದರೂ ದೇಹ ಧರ್ಮಗಳಾದ) ಜರಾ, ಮರಣ, ಆಪತ್ತು, ಸುಖ, ದುಃಖ, ಇರುವಿಕೆ, ಇಲ್ಲದಿರುವಿಕೆ (ಗಳೆಲ್ಲ) ಇಲ್ಲ. ಅದರಿಂದ ನೀನು ಸುಖವಾಗಿರು.

೧೬. ದೇಹದಲ್ಲಿ ಇರುವವರೆಗೂ ಬೀಳುವುದು ಏಳುವುದು ಎಂಬ ಭ್ರಮೆಯು ಬ್ರಹ್ಮದಲ್ಲಿಯೇ ಕಂಡಂತಾಗುವುದಾದರೂ ಅದೆಲ್ಲವೂ ನೀರಿನಲ್ಲಿ ತರಂಗಾದಿಗಳು ಎದ್ದೆದ್ದು ಬಿದ್ದಂತೆಯೇ ಸರಿ.

೧೭. ದೇಹವು ಆತ್ಮನನ್ನು ಆಶ್ರಯಿಸಿಯೇ ಬಾಳಬೇಕಾಗಿರುವುದು. ಹೀಗೆ ಆತ್ಮೋಪಜೀವಿಯಾದ ದೇಹದ ಸುಖದುಃಖಗಳು (ಆತ್ಮನಿಗೂ ಆಗಲಿ ಎಂದರೆ)

ಆಧಾರಸ್ಪಂದನೇನಾಂಗ ಯಥಾ ಕ್ಷೋಭೋ ನ ವಾ ಭವಃ |
ಸೂರ್ಯಾದೇಃ ಪ್ರತಿಬಿಂಬಸ್ಯ ತಥಾ ದೇಹೇನ ದೇಹಿನಃ ॥ ೧೮ ॥

ಸಂಮ್ಯಗ್ದೃಷ್ಟೇ ಯಥಾಭೂತೇ ವಸ್ತುನ್ಯೇವಾಭಿಜಾಯತೇ |
ಸ್ಥಿತಿರ್ದೇಹಮಯೋ ಜ್ಞಾನವಿಭ್ರಮೋ ಲಯಮೇತಿ ಚ ॥ ೧೯ ॥

ದೇಹದೇಹವತೋಜ್ಞಾನಾದ್ಯಥಾಭೂತಾರ್ಥಯೋಃ ಸ್ಥಿತಿಃ |
ಸತ್ತಾಸತ್ತಾತ್ಮಿಕೋದೇತಿ ದೀಪಾದ್ದೀಪಪದಾರ್ಥಯೋಃ ॥ ೨೦ ॥

ಅಸಮ್ಯಗ್ದರ್ಶಿನೋ ದೇಹಸ್ಯಾವರ್ತಪರಿವರ್ತನೈಃ |
ಅಂತಃಶೂನ್ಯಾಃ ಸ್ಫುರಂತೀಹ ತೇ ಮೋಹಾರ್ಜುನಪಾದಪಾಃ ॥ ೨೧ ॥

ದೇಹಯಂತ್ರದಲ್ಲಿ ಆತ್ಮನು ಇರುವನು. ಅದರಿಂದ, ನೀರು ತನ್ನ ಸತ್ತಾಬಲದಿಂದಲೇ ಒಂದು ಗಳಿಗೆ ಅಲೆಯಾಗಿ ಕಾಣುವಂತೆ, ಆತ್ಮನಿಗೂ ಸುಖದುಃಖಾನುಭವವುಂಟಾದಂತೆ ಕಾಣುವುದು.

೧೮. (ಪ್ರತಿಬಿಂಬಗಳಿಗೆ) ಆಧಾರವಾದ (ನೀರು, ಕನ್ನಡಿ ಮೊದಲಾದ) ವು ಕ್ಷೋಭೆಗೊಂಡಾಗ (ಪ್ರತಿಬಿಂಬಕ್ಕೆ ಚಲನಾದಿಗಳು ಕಂಡರೂ) ಬಿಂಬವಾದ ಸೂರ್ಯಾದಿಗಳಿಗೆ ಪ್ರತಿಬಿಂಬದ ಚಲನಾದಿಗಳು ಒಂದೂ ಇಲ್ಲದಿರುವಂತೆ, ದೇಹಕ್ಕೆ ಸುಖದುಃಖಾದಿ ಅನುಭವಗಳು ಇದ್ದರೂ ದೇಹಿ (ಯಾವ ಆತ್ಮನಿ) ಗೆ ಯಾವುದೂ ಇಲ್ಲ.

೧೯. ಸಮ್ಯಗ್ದೃಷ್ಟಿಯು ಲಭಿಸಿದರೆ, ಬ್ರಹ್ಮದರ್ಶನವಾದರೆ (ಬ್ರಹ್ಮದಲ್ಲಿಯೇ ಇರುವಿಕೆ ಎಂಬುದು) ಉಂಟಾಗಿ, ದೇಹವೇ ನಾನು ಎಂಬ ಭ್ರಾಂತಿಮೂಲವಾದ ಅಜ್ಞಾನವು ನಾಶವಾಗುವುದು.

೨೦. (ಅಂತಹ ಸ್ಥಿತಿಯು ಉಂಟಾದಾಗ) ದೇಹವು ಬೇರೆ, ದೇಹದಲ್ಲಿರುವ ಆತ್ಮನು ಬೇರೆ, ಎಂಬ ಜ್ಞಾನವು ಉಂಟಾಗಿ, ಇರುವ ಸ್ಥಿತಿಯು ಯಥಾವತ್ತಾಗಿ ತಿಳಿದಮೇಲೆ, ದೀಪವನ್ನು ಕಂಡವನಿಗೆ ದೀಪವೂ ಪದಾರ್ಥವೂ ಎರಡೂ ತಿಳಿಯುವಂತೆ, ಸದ್ವಸ್ತು ಯಾವುದು, ಅಸದ್ವಸ್ತುವು ಯಾವುದು ಎಂಬ ಶುದ್ಧ ಜ್ಞಾನವು ಉದಿಸುವುದು.

೨೧. ಅಂತಹ ಸಮ್ಯಗ್ದೃಷ್ಟಿಯಿಲ್ಲದವರಿಗೆ, (ಬ್ರಹ್ಮ ದರ್ಶನವಿಲ್ಲದವರಿಗೆ)

ಅಪರ್ಯಾಲೋಚಿತಾತ್ಮಾರ್ಥಾ ಅಪರಾಮೃಷ್ಟಸಂವಿದಃ ।
ಸ್ಪಂದಂತೇ ಚೇತಿತೋನ್ಮುಕ್ತಾ ಸ್ತೃಣವನ್ಮೂಢಬುದ್ಧಯಃ ॥ ೨೨ ॥

ಅನಾಖಾದಿತಚಿತ್ತತ್ವಾಜ್ಜಡಾಃ ಸರ್ವೇ ಖವಾಯುಭಿಃ । ॥ ೨೩ ॥

ಯತ್ರ ತತ್ರೋದಿತಾಕ್ರಾಂತಾ ರಟಂತಿ ಪ್ರಸ್ಫುರಂತಿ ಚ ।
ತೃಣಕಾಷ್ಠಾದಿಕಂ ಸರ್ವಮಾಹರಂತಿ ತ್ಯಜಂತಿ ಚ ॥ ೨೪ ॥

ಸಶಬ್ದಸ್ಪರ್ಶರೂಪಾಢ್ಯಾಸ್ತರಂಗತರಲಾಂಗಕಾಃ ।
ಜಡಾಃ ಸಂತಃ ಸ್ಫುರದ್ರೂಪಾ ಭೃಶಂ ಸ್ಫಾರರಸಾಸಪಾಃ ॥ ೨೫ ॥

ಸವಿಹಾರಾಗಮಾಪಾಯಾ ಮಹೌಘಾ ಇವ ದುರ್ಧಿಯಃ ।
ಸರ್ವೇಷಾಮೇವ ಚೈತೇಷಾಂ ಸ್ಥಿತ್ಯೈವೈಷಾ ಚಿದವ್ಯಯಾ ॥ ೨೬ ॥

ದೇಹವೇ ತಾನೆಂಬ ಜ್ಞಾನವು ದೃಢವಾಗಿದ್ದು, ದೇಹವು ಬರುವಿಕೆ, ಹೋಗುವಿಕೆಗಳಿಂದ ಅಂತಶ್ಶೂನ್ಯಗಳಾದ, ಮೋಹವೆಂಬ ಮತ್ತಿಯ ಮರಗಳು (ಭ್ರಾಂತಿ ಪರಂಪರೆಗಳು) ಕಾಡಿನಂತೆ ಬೆಳೆದುಹೋಗುವುವು.

೨೨-೨೪. ಆತ್ಮವಸ್ತುವನ್ನು ಕುರಿತು ವಿಚಾರ ಮಾಡಿ ತಿಳಿದುಕೊಳ್ಳದವರು, ಸಂವಿತ್ಸ್ವರೂಪವನ್ನು ತಿಳಿಯದವರು, ಮೂಢಬುದ್ಧಿಗಳು, ಆತ್ಮಬುದ್ಧಿ ರಹಿತರಾಗಿ, ಚಿತ್ತ್ವದ ಸ್ವಾರಸ್ಯವನ್ನೇ ಅರಿಯದ ಜಡರಾಗಿ, ಕೇವಲ ಪ್ರಾಣವಾಯುವಿನಿಂದ ಪ್ರೇರಿತರಾಗಿ (ಗಾಳಿಗೆ ಸಿಕ್ಕಿರುವ) ಹುಲ್ಲು (ಹಾರಾಡುವಂತೆ) ವ್ಯಾಪಾರ ಮಾಡುವರು. ಎಲ್ಲಿಂದಲ್ಲಿಗೆ ಹೋಗುವರು. ಏನೆಂದರದನ್ನು ಮಾಡುವರು. ತೃಣ ಕಾಷ್ಠಾದಿಗಳನ್ನು ತರುವುದು, ಬಿಡುವುದು, ಮೊದಲಾದ ಎಲ್ಲಾ ಕಾರ್ಯಗಳನ್ನೂ ಮಾಡುವರು. (ಆದರೂ ಚಿತ್ಸ್ವರೂಪವನ್ನು ಅರಿಯದವರಾದ್ದರಿಂದ ಅವರು ಜಡರೇ !)

೨೫. ಶಬ್ದ, ಸ್ಪರ್ಶ, ರೂಪಾದಿಗಳನ್ನು ಉಳ್ಳವರಾದರೂ ಅಲೆಗಳಂತೆ ಚಂಚಲರಾಗಿದ್ದರೂ, ಸೌಂದರ್ಯವಂತರಾಗಿದ್ದರೂ, ಪ್ರಬಲವಾದ ಭೋಗಾಪೇಕ್ಷೆಯಿಂದ ಕೂಡಿದ್ದರೂ, ಅವರು ಜಡರೇ !

೨೬. ದೊಡ್ಡ ಪ್ರವಾಹವು ಬರುವ ಹಳ್ಳಗಳಂತೆ, ವಿಹಾರ, ಆಗಮ, ಅಪಾಯ, ಇವುಗಳುಳ್ಳವರಾದರೂ, ಈ ದುರ್ಬುದ್ಧಿಗಳು (ಬುದ್ಧಿರಹಿತರು) ಎಲ್ಲ

ಕಿಂತ್ವಬೋಧವಶಾದಸ್ಯಾಃ ಪರಾಂ ಕೃಪಣತಾಂ ಗತಾ ।
ಶ್ವಾಸಸಂತತಯೋ ಹ್ಯಜ್ಞಾಲ್ಲೋಹಕಾರಾದೃತೇರ್ಯಥಾ ॥ ೨೭ ॥

ಸ್ಪಂದಮಾತ್ರಾರ್ಥಮೇಪಾಶು ದೃಶ್ಯಂತೇ ನಾರ್ಥಕಾರಿಣಃ ।
ತರ್ಜನಂ ಗರ್ಜನಂ ಮೂಢಾದ್ಧನುರ್ದಂಡಗುಣಾದಿವ ॥ ೨೮ ॥

ಶ್ರೂಯತೇ ಮರಣಾಯೈವ ಚಿದ್ಬೋಧಪರಿವರ್ಜಿತಂ ।
ಫಲಗೋಪಿ ಯೋ ಮೂಢಾತ್ತದರಣ್ಯತರೋರಿವ ॥ ೨೯ ॥

ತಸ್ಮಿನ್ವಿಶ್ರಮಣಂ ಯತ್ತಚ್ಛಿಲಾಫಲಹಕೇ ಯಥಾ।
ತೇನ ಯತ್ಸಂಗಮಃ ಸ ಸ್ಯಾತ್ಸ್ಥಾಣುನಾ ಭುವಿ ಜಂಗಲೇ ॥ ೩೦ ॥

ರಲ್ಲಿಯೂ, ಚಿತ್ತೇ ಕುಳಿತು, ತಾನು ನಿರ್ವಿಕಾರಿಯಾದರೂ ವ್ಯವಹಾರ ಮಾಡುತ್ತಿರುವುದು.

೨೭. ಆದರೆ, ಅವರಿಗೆ ತಮ್ಮಲ್ಲಿ ಚಿತ್ತು ಇದೆ ಎಂಬುದರ ಅರಿವೇ ಇಲ್ಲವಾಗಿ ಆ ಚಿತ್ತು ಬಹು ಸೂಕ್ಷ್ಮವಾಗಿ ಇರುವುದು. ಅಂಥವರು ಬದುಕಿದ್ದರೂ, ಕಮ್ಮಾರನ ತಿದಿಯಂತೆ ಶ್ವಾಸವಾಡುತ್ತಿದ್ದರೂ ಅವರು ಜಡರೇ !

೨೮. ಅವರು ವ್ಯಾಪಾರ ಮಾಡುತ್ತಿರುವಂತೆ ಕಾಣುತ್ತಿದ್ದರೂ ಅವರ ವ್ಯಾಪಾರದಿಂದ ಏನೂ ಪ್ರಯೋಜನವಿಲ್ಲ. ಬಿಲ್ಲಿನ ಹಗ್ಗವು ಒದರಿದರೇನು? ಅರಚಿದರೇನು ? (ಹಾಗೆ ಅವರ ಜೀವನವೂ ವ್ಯರ್ಥ)

೨೯. ಬ್ರಹ್ಮಜ್ಞಾನ ವರ್ಜಿತವಾದ ಜೀವನಕ್ಕೆ ಫಲವು ಮರಣವೊಂದೇ ಎಂದು ಹಿರಿಯರು ಹೇಳುವರು. ಮೂಢರಿಂದ ಇತರರಿಗೆ ಏನಾದರೂ ಫಲವಾಗುವುದು ಎಂದರೆ ಅದು ಅರಣ್ಯದಲ್ಲಿ ಮರದಿಂದ ಲಭಿಸುವ ಫಲದಂತೆ. (ಆಗಂತುಕವಾಗ ಆದ ವ್ಯಾಪಾರವು.)

೩೦. ಅಂತಹವರೊಡನೆ ವ್ಯವಹರಿಸುವುದು ಕಲ್ಲುಹಲಿಗೆಯ ಮೇಲೆ ಮಲಗಿದಂತೆಯೇ ಸರಿ! ಅವರೊಡನೆ ಸೇರುವುದು ಎಂದರೆ ಕಾಡಿನಲ್ಲಿರುವ ಮೋಟು ಮರದೊಡನೆ ಸಖ್ಯಮಾಡಿಕೊಂಡಂತೆಯೇ !

ತದರ್ಥಂ ಯತ್ಕೃತಂ ಕಿಂಚಿತ್ತದ್ವ್ಯೋಮ್ನಿ ಲಕುಟೈರ್ಹತಂ ।
ತಸ್ಮಿನ್ಯದಧಮೇ ದತ್ತಂ ತತ್ತ್ಯಕ್ತಂ ಕಿಂ ನ ಕರ್ದಮೇ ॥ ೩೧ ॥

ತೇನ ಸಾರ್ಧಂ ಕಥಾ ಯತ್ತತ್ಶ್ವಾಲೇಯಾಹ್ವಾನಮಂಬರೇ ।
ಅಜ್ಞಾನಮಾಪದಾಂ ನಿಷ್ಠಾ ಕಾ ಹಿ ನಾಪದಜಾನತಃ ॥ ೩೨ ॥

ಇಯಂ ಸಂಸಾರಸರಣಿರ್ವಹತ್ಯಜ್ಞಪ್ರಮಾದತಃ ।
ಅಜ್ಞಸ್ಯೋಗ್ರಾಣಿ ದುಃಖಾನಿ ಸುಖಾನ್ಯಪಿ ದೃಢಾನಿ ಚ ॥ ೩೩ ॥

ಪುನಃ ಪುನರ್ನಿವರ್ತಂತೇ ಯುಗಂ ಪ್ರತ್ಯಚಲಾ ಇವ ।
ಶರೀರಧನದಾರಾದಾವಾಸ್ಥಾಂ ಸಮನುಬಧ್ನತಃ ॥ ೩೪ ॥

ಇದಂ ದುರ್ದುಃಖಮಜ್ಞಸ್ಯ ನ ಕದಾಚನ ಶಾಮ್ಯತಿ ।
ಅನಾತ್ಮನಿ ಶಠೇ ದೇಹೇ ಆತ್ಮಭಾವಮುಪೇಯುಷಿ ॥ ೩೫ ॥

---

೩೧. ಅವರಿಗಾಗಿ ಮಾಡಿದುದು ಎಲ್ಲವೂ ಅದೆಲ್ಲವೂ ಆಕಾಶವನ್ನು ದೊಣ್ಣೆಗಳಿಂದ ಹೊಡೆದಂತೆ! ಅಂತಹ ಅಧಮನಿಗೆ ಕೊಟ್ಟುದು ಎಲ್ಲವೂ ಕೊಚ್ಚೆಯಲ್ಲಿ ಎಸೆದಂತೆಯೇ ಅಲ್ಲವೇ !

೩೨ ಅಂಥವನೊಡನೆ ಮಾತನಾಡುವುದು ಬಯಲಲ್ಲಿ ನಾಯನ್ನು ಕೂಗಿ ಕರೆದಂತೆ! ಎಲ್ಲಾ ಆಪತ್ತುಗಳಿಗೂ ಅಜ್ಞಾನವೇ ಸ್ಥಾನವು. ಅಂತಹ ಅಜ್ಞಾನವುಳ್ಳವರಿಗೆ ಯಾವುದು ತಾನೇ ಆಪತ್ತಲ್ಲ!

೩೩. ಈ ಸಂಸಾರ ಸರಣಿಯೆಲ್ಲವೂ ಅಜ್ಞಾನಿಗಳ ಪ್ರಮಾದದಿಂದಲೇ ಹರಿಯುತ್ತಿರುವುದು. ಅಜ್ಞನಿಗೆ ದುಃಖಗಳು ಕ್ರೂರಗಳಾಗಿ ಬರುವುವು. ಸುಖಗಳೂ ಕೂಡ ದೃಢವಾಗಿ ಬಿಗಿಯುವುವು.

೩೪. ಶರೀರ, ಧನ, ದಾರಾದಿಗಳಲ್ಲಿ ಆಸ್ಥೆಯನ್ನು ಇಟ್ಟುಕೊಂಡಿರುವವರಿಗೆ, ಈ ಸುಖದುಃಖಗಳು, ರಥದಲ್ಲಿ ಕುಳಿತು ಹೋಗುವವನಿಗೆ ದಾರಿಯಲ್ಲಿ ಮರಗಳು ಸಿಕ್ಕುತ್ತಲೇ ಇರುವಂತೆ, ಬರುತ್ತಲೇ ಇರುವುವು.

೩೫. ಅನಾತ್ಮವಾದ ದೇಹದಲ್ಲಿ ಆತ್ಮಬುದ್ಧಿಯನ್ನು ಮಾಡುವ ಮೂರ್ಖನಿಗೆ, ಅಜ್ಞನಿಗೆ, ಈ ದುಃಖಗಳು ಎಂದಿಗೂ ಶಮನವಾಗುವುದಿಲ್ಲ.

ಅಸದ್ಬೋಧಮಯೀ ಮಾಯಾ ಕಥಂ ನಾಮಾಪಿ ನಶ್ಯತಿ ।
ದುರ್ಭಾವಸ್ಥಚಿತಧಿಯೋ ವಸ್ತುನ್ಯಂಧಸ್ಯ ದುರ್ಮತೇಃ ॥ ೩೬ ॥

ಅವಸ್ತುನಿ ಸನೇತ್ರಸ್ಯ ಲುಠತಶ್ಚ ಪದೇಪದೇ ।
ವಿಷಮುತ್ಪದ್ಯತೇ ಚಂದ್ರಾದಾಮೋದಃ ಕುಸುಮಾದಿವ ॥ ೩೭ ॥

ಕಂಟಕಶ್ಚೇತಿ ಪಯಸಃ ದೂರ್ವಾಂಕುರ ಇವ ಸ್ಥಲಾತ್ ॥ ೩೮ ॥

ದೇಹಶಾಲ್ಮಲಿಭೋಗಿನ್ಯೋ ಮನೋ ಮಾತಂಗಶೃಂಖಲಾಃ ।
ಅಜ್ಞಸ್ಯಾಶಾಃ ಪ್ರಸೂಯಂತೇ ಸುಕೃಷ್ಟಾದಿವ ಶಾಲಯಃ ॥ ೩೯ ॥

ನರಕಶ್ರೀರಿಹಾಜ್ಞಾನಂ ದುಷ್ಕೃತವ್ಯಾಲವೇಷ್ಟಿತಂ ।
ಪರಿಪಾಲಯತಿ ಪ್ರೀತಾ ಮಯೂರೀ ವಾರಿದಂ ಯಥಾ ॥ ೪೦ ॥

---

೩೬. ಅಸದ್ಬೋಧ (ಅಜ್ಞಾನ) ವು ತುಂಬಿರುವ ಮಾಯೆಯು, ದುರ್ಭಾವಗಳಲ್ಲಿಯೇ ಮನಸ್ಸನ್ನು ಇಟ್ಟುಕೊಂಡು, (ಸತ್) ವಸ್ತುವಿನಲ್ಲಿ ಕುರುಡನಾಗಿರುವ (ಬ್ರಹ್ಮವಸ್ತುವನ್ನೇ ಅರಿಯದಿರುವ) ದುರ್ಮತಿಗೆ ಅದೆಂತು ಶಾಂತವಾಗುವುದು ?

೩೭. ಅವಸ್ತುವಿನಲ್ಲಿಯೇ ಕಣ್ಣಿಟ್ಟುಕೊಂಡು, ಪದೇ ಪದೇ ಮುಗ್ಗರಿಸುತ್ತಿರುವವನಿಗೆ ಹೂವಿನಿಂದ ವಾಸನೆಯು ಹೊರಡುವಷ್ಟು ದಿಟವಾಗಿ, (ಅಮೃತಮಯನಾದ) ಚಂದ್ರನಿಂದಲೂ ವಿಷವೇ ಲಭಿಸುವುದು.

೩೮. (ಅಂತಹವನಿಗೆ) ನೆಲದಲ್ಲಿ ಹುಲ್ಲು ಹುಟ್ಟುವಷ್ಟು ನಿಜವಾಗಿ ಹಾಲಿನಲ್ಲಿಯೂ ಮುಳ್ಳು ಹುಟ್ಟುವುದು. (ಹಾಲು ಕುಡಿದರೆ ಅದು ಮುಳ್ಳಿನಂತೆ ಗಂಟಲಿನಲ್ಲಿ ಸಿಕ್ಕಿಕೊಳ್ಳುವುದು.)

೩೯. ಅಜ್ಞಾನಿಯಾದವನ ಆಶೆಗಳಿಂದ, ಬಲು ಚೆನ್ನಾಗಿ ಉತ್ತು ಕೃಷಿ ಮಾಡಿದ ಕ್ಷೇತ್ರದಲ್ಲಿ ಭತ್ತವು ಹುಲುಸಾಗಿ ಬೆಳೆಯುವಂತೆ, ದೇಹವೆಂಬ ಬೂರಗದ ಮರದಲ್ಲಿರುವ ಹಾವುಗಳೂ ಮನಸ್ಸೆಂಬ ಮದ್ದಾನೆಯನ್ನು ಕಟ್ಟುವ ಸಂಕಲೆಗಳೂ ತಾವೇ ತಾವಾಗಿ ಬರುವುವು.

೪೦. ಹೆಣ್ಣುನವಿಲು ಸಂತೋಷದಿಂದ ಮೋಡವನ್ನು ಕಾದು ನಿಲ್ಲುವಷ್ಟು ನಿಜವಾಗಿ, ದುಷ್ಕೃತಗಳೆಂಬ ಹಾವುಗಳನ್ನು ಸುತ್ತಿಕೊಂಡಿರುವ ಅಜ್ಞಾನಿಯನ್ನು ನರಕಲೋಕವು ನಿರೀಕ್ಷಿಸುತ್ತಿರುವುದು.

ನೇತ್ರಲೋಲಾಲಿನೀಲೋಲಾ ಸ್ಫುರಿತಾಧರಪಲ್ಲವಾ ।
ಮೂರ್ಖಾರ್ಥಮೇವ ವಿಕಸತ್ಯಂಗನಾ ವಿಷವಲ್ಲರೀ ॥ ೪೧ ॥

ಅಜ್ಞಸ್ಯ ಹೃದಿ ಸದ್ಭೂಮಾವೇವ ಪೇಲವಪಲ್ಲವಾ ॥ ೪೨ ॥

ವಿದ್ಯತೇ ಪತಗಚ್ಛಾಯೋ ರಾಗವಿಸ್ರುಮದುದ್ರುಮಃ ॥ ೪೩ ॥
ತರುಚ್ಛದಲಸದ್ಧೂಮಃ ಶಸ್ತ್ರಜಾಲರದೋಲ್ಮುಕಃ ।
ಜ್ವಲತಿ ದ್ವೇಷದಾವಾಗ್ನಿರ್ಹೃನ್ಮರೌ ಕಾಯತಾಪದಃ ॥ ೪೪ ॥

ಅಜ್ಞಮಾತ್ಸರ್ಯಮನಸಿ ಪರಾಪವದನಚ್ಛದಾ ।
ಈರ್ಷ್ಯಾಕಮಲಿನೀ ಚಿಂತಾಷಟ್ಪದಾ ವಿಲಸತ್ಯಲಂ ॥ ೪೫ ॥

---

೪೧. ಲೋಲವಾದ ಹೆಣ್ಣುದುಂಬಿಗಳಂತೆ ಚಂಚಲವಾಗಿರುವ ನೇತ್ರಗಳೂ, (ಕೋಪದಿಂದ) ಕುಣಿಯುತ್ತಿರುವ ಪಲ್ಲವಗಳಂತಿರುವ ಅಧರಗಳೂ, ಉಳ್ಳ ವಿಷ ವಲ್ಲರಿಯೆಂಬ ಅಂಗನೆಯು, ಮೂರ್ಖನಿಗೋಸ್ಕರವೇ ಹುಟ್ಟುವುದು.

೪೨. ಮೂರ್ಖನ ಹೃದಯವೆಂಬ ಸದ್ಭೂಮಿಯಲ್ಲಿ (ಈ ವಿಷವಲ್ಲರಿಯು) ಪಲ್ಲವಗಳಿಂದ ಸುಂದರವಾಗಿ ಫಲವತ್ತಾದ ಭೂಮಿಯಲ್ಲಿ ಬೆಳೆಯುವಂತೆ ಬೆಳೆಯುವುದು.

೪೩–೪೪. ಹಕ್ಕಿಯ ಬಣ್ಣವಾಗಿ, ಆಸಕ್ತಿಯಿಂದ ರಕ್ತವರ್ಣರಂಜಿತವಾಗಿ, ಚಿಗುರುಗಳೆಂಬ ಧೂಮವುಳ್ಳದಾಗಿ, ಶಸ್ತ್ರಜಾಲಗಳಂತಿರುವ ಹಲ್ಲುಗಳಿಂದ ಜ್ವಾಲೆಗಳನ್ನು ಕಾರುತ್ತಿರುವ ಒಂದು ಕೆಟ್ಟ ಭಾರಿಯ ಮರವು ಇದೆ. ಅದು ದ್ವೇಷವೆಂಬ ದಾವಾಗ್ನಿಯಿಂದ ಸುಡುತ್ತಿದೆ. ಅದು (ಅಜ್ಞನ) ಹೃದಯವೆಂಬ ಮರುಭೂಮಿಯಲ್ಲಿ ದೇಹಕ್ಕೆ ಬಹು ಸಂತಾಪವನ್ನು ಕೊಡುತ್ತಿದೆ.

೪೫. ಅಜ್ಞನ ಮಾತ್ಸರ್ಯಪೂರ್ಣವಾದ ಮನಸ್ಸಿನಲ್ಲಿ ಇನ್ನೊಬ್ಬರ ನಿಂದೆಯೆಂಬ ಎಲೆಗಳಿಂದ ಕೂಡಿ ಚಿಂತೆಯೆಂಬ ದುಂಬಿಗಳಿಂದ ಕೂಡಿರುವ, ಈರ್ಷ್ಯೆಯೆಂಬ ಕಮಲದ ಬಳ್ಳಿಯು ಚೆನ್ನಾಗಿ ಮೆರೆಯುತ್ತಿರುವುದು.

ಪ್ರತಿಜನ್ಮಪ್ರವೃಷ್ಟೋಗ್ರದುಃಖಕಲ್ಲೋಲವಿಭ್ರಮಂ ।
ಜಡಮೇವ ಸಮುಭ್ಯೇತಿ ಪುನರ್ಮರಣವಾಡವಃ ॥ ೪೬ ॥

ಜನ್ಮ ಬಾಲ್ಯಂ ವ್ರಜತ್ಯೇತದ್ವ್ಯಾಪಸಂ ಯುವತಾ ಜರಾಂ ।
ಜರಾಮರಣಮುಭ್ಯೇತಿ ಮೂಢಸ್ಯೈವ ಪುನಃ ಪುನಃ ॥ ೪೭ ॥

ಜಗಜ್ಜೀರ್ಣಾರಘಟ್ಟೇಸ್ಮಿನ್ ರಜ್ಜ್ವಾ ಸಂಸೃತಿರೂಪಯಾ ।
ಮಜ್ಜನೋನ್ಮಜ್ಜನೈರಜ್ಞೋ ಯಂತ್ರೇ ಕಲಶತಾಂ ಗತಃ ॥ ೪೮ ॥

---

೪೬. ಜನ್ಮಜನ್ಮದಲ್ಲಿಯೂ ಉಗ್ರೋಗ್ರವಾದ ನಾನಾ ದುಃಖಗಳೆಂಬ ಭಾರಿ ಭಾರಿಯ ತರಂಗಗಳಿಂದ ಚಂಚಲವಾಗಿ ಜರ್ಝರಿತವಾಗಿರುವ ಜಡ (ನೆಂಬ ಸಮುದ್ರವನ್ನು) ಮರಣವೆಂಬ ಬಡಬಾಗ್ನಿಯು ಮತ್ತೆ ಕಬಳಿಸಲು ಬರುತ್ತಲೇ ಇರುವುದು.

೪೭. ಮಗುವಾಗಿ ಹುಟ್ಟಿ ಹುಡುಗನಾಗುವುದು, ಹುಡುಗತನವು ಕಳೆದು ತರುಣನಾಗುವುದು, ಯೌವನವು ಕಳೆದು ಮುದಿತನವು ಬರುವುದು, ಮುದಿತನವು ಮರಣದಲ್ಲಿ ಮುಗಿಯುವುದು, ಎಂಬ ಈ ವಿಕಾರಗಳೆಲ್ಲವೂ ಮೂಢನಿಗೆ ಪದೇ ಪದೇ ಬರುತ್ತಲೇ ಇರುವುವು.

(ಜ್ಞಾನಿಯಾದವನ ದೇಹದಲ್ಲಿಯೂ ಈ ವಿಕಾರಗಳು ಕಾಣಿಸುತ್ತವೆ. ಆದರೆ ತಾನು ನಿರ್ವಿಕಾರಿಯೆಂದರಿತಿರುವ ಜ್ಞಾನಿಯು, ಈ ವಿಕಾರಗಳು ದೇಹಕ್ಕೆ, ತನಗಲ್ಲ ಎಂದು ಬಲ್ಲವನಾಗಿ, ಆತನು ವಿಕಾರಗಳಿಂದ ದುಃಖಪಡುವುದಿಲ್ಲ. ಏನಿದ್ದರೂ ಈ ವಿಕಾರಗಳಿಂದ ದುಃಖವಾಗುವುದು ಮೂಢನಿಗೇ! ಅದು ಅವನು ದೇಹವೇ ತಾನು ಎಂದು ತಿಳಿದಿರುವುದರಿಂದ.)

೪೮. ಜಗತ್ತೆಂಬುದು ಒಂದು ಪುರಾತನ ಘಟೀಯಂತ್ರವು (ಬಾವಿಯ ರಾಟೆಯು.) ಇದಕ್ಕೆ ಸಂಸಾರವೆಂಬುದೊಂದು ಹಗ್ಗವನ್ನು ಕಟ್ಟಿರುವರು. ಈ ಯಂತ್ರದಲ್ಲಿ ಅಜ್ಞನು ಒಂದು ಮಡಕೆಯಂತಾಗಿ, (ಭಾವಿಯನೀರಲ್ಲಿ) ಮುಳುಗುತ್ತಾ ಏಳುತ್ತಾ, ಮುಳುಗುತ್ತಾ ಏಳುತ್ತಾ ಇರುವನು.

ಯದೇವ ಗೋಷ್ಪಾದಾಪೂರಂ ಜ್ಞಧಿಯಃ ಪೇಲವಂ ಜಗತ್ ।
ತದೇವಾಪಾರಪರ್ಯಂತಮಗಾಧಮಮಹಾತ್ಮನಃ ॥ ೪೯ ॥

ಧಿಯೋಽದೃಶ ಇವಾಜ್ಞಸ್ಯ ದೀರ್ಘಂ ಜಠರಕೋಟರಾತ್ ।
ನ ಪ್ರಯಾಂತ್ಯಪರಂ ಪಾರಂ ವಿಹಂಗ್ಯಃ ಪಂಜರಾದಿವ ॥ ೫೦ ॥

ಭಾವಮಾತ್ರಪರಾವೃತ್ತವಾಸನಾಭಾರನಾಭಯಃ ।
ಸ್ಪಷ್ಟೀಕರ್ತುಂ ನ ಶಕ್ಯಂತೇ ಜನ್ಮಚಕ್ರಸ್ಯ ನೇಮಯಃ ॥ ೫೧ ॥

---

೪೯. ತಿಳಿದ ಬುದ್ಧಿವಂತನಿಗೆ ಒಂದು ಹಸುವಿನ ಹೆಜ್ಜೆಯಷ್ಟು ಸಣ್ಣದಾಗಿ, ಬಲು ಹಗುರವಾಗಿ ತೋರುವ ಜಗತ್ತು, ಮಹಾಬುದ್ಧಿಯಲ್ಲದವನಿಗೆ (ಸಮುದ್ರದಂತೆ) ಅಪಾರವೂ ಅಗಾಧವೂ ಆಗುವುದು.

(ಅಮಹಾತ್ಮಾ-ಪರಿಚ್ಛಿನ್ನ ದೇಹಾತ್ಮದರ್ಶಿ—ತಾ. ಪ್ರ.)

೫೦. ಕಣ್ಣಿಲ್ಲದವನಿಗೆ ದಾರಿಯೇ ತಿಳಿಯದೆ ಹೋಗುವಂತೆ, ಅಜ್ಞನಾದವನಿಗೆ ಬುದ್ಧಿಯೂ ಮಂಕಾಗಿ ಹೋಗುವುದು. ಹೊಟ್ಟೆಯನ್ನು ತುಂಬಿಕೊಳ್ಳುವುದು ಒಂದನ್ನು ಬಿಟ್ಟು ಇನ್ನೇನೂ ತಿಳಿಯದೆ ಹೋಗುವುದು. ಪಂಜರವನ್ನು ಬಿಟ್ಟು ಹೋಗಲಾರದ ಹೆಣ್ಣು ಹಕ್ಕಿಗಳಂತೆ (ಈ ಸಂಸಾರ ಸಾಗರದ) ಇನ್ನೊಂದು ದಡವನ್ನು ಸೇರಲು ಇವನ ಬುದ್ಧಿಗಳು ನಿಶ್ಶಕ್ತಗಳಾಗುವುವು.

೫೧. (ಹೀಗಾಗುವುದು ಏಕೆ ಎಂದರೆ ಅಜ್ಞನಾದವನ) ಜನ್ಮ ಚಕ್ರ (ಗಳಾದ ಇಂದ್ರಿಯ) ಗಳು, ಜಗತ್ತನ್ನೇ ನೋಡುವವಾಗಿ, ವಿಷಯವಾಸನೆಗಳೆಂಬ ಭಾರವನ್ನು ಹೊತ್ತಿರುವುದರಿಂದ, ಸ್ಪಷ್ಟವಾಗಿ ಇದು ಗ್ರಾಹ್ಯ, ಇದು ಅಗ್ರಾಹ್ಯ, ಎಂದು ತೋರಿಸಲಾರದವಾಗಿರುವುವು.

(ಇಂದ್ರಿಯಗಳು ಹೊರಗಿನ ವಿಷಯವನ್ನು ತೋರಿಸುವಂತೆ) ಅಂತಸ್ಥವಿಷಯ ಎಂದರೆ ಜಗತ್ತಿನೊಳಗೆ ಅಡಗಿರುವ ಬ್ರಹ್ಮತತ್ವವನ್ನು ಏಕೆ ತೋರಿಸಬಾರದು ಎಂದರೆ ಅದಕ್ಕೆ ಕಾರಣವನ್ನು ಶ್ರುತಿಯು ಹೀಗೆ ಹೇಳಿದೆ:-"ಪರಾಂಚಿ ಖಾನಿ ವ್ಯತೃಣತ್ ಸ್ವಯಂಭೂಃ ತಸ್ಮಾತ್ ಪರಾಂಗ್ ಪಶ್ಯಂತಿ ನಾಂ ತರಾತ್ಮನ್". ಸ್ವಯಂಭೂ ಆದ ಹಿರಣ್ಯಗರ್ಭನು ಈ ಇಂದ್ರಿಯಗಳನ್ನು ಬಹಿರ್ಮುಖವಾಗಿ ಇಟ್ಟನು. ಅದರಿಂದ ಈ ಇಂದ್ರಿಯಗಳೆಲ್ಲವೂ ಬಹಿರ್ಮುಖವಾಗಿವೆ. ಒಳಗನ್ನು ನೋಡಲಾರವು.)

ಅಜ್ಞೇನೇಂದ್ರಿಯಗೃಧ್ರಾರ್ಥಂ ರಾಗಾನ್ಮೃಗಯುಣಾ ತನುಃ ।
ಸಂಸಾರಾರಣ್ಯ ಆಸ್ತೀರ್ಣಾ ದೂರಾದಾಮಿಷಪಿಂಡವತ್ ॥ ೫೨ ॥

ಭೂತಶೈಲಮಯೀ ದೃಷ್ಟಿಃ ವ್ಯರ್ಥಾಂಸಲವಮಾತ್ರಿಕಾ ।
ಮೋಹಾತ್ಸಂಲಕ್ಷ್ಯತೇ ಚಿತ್ರಪದಾರ್ಥಾನಂತ ರಂಜನಃ ॥ ೫೩ ॥

ಜಯತ್ಯನಲ್ಪಸಂಕಲ್ಪಕಲ್ಪನಾಕಲ್ಪಪಾದಪಃ ।
ಅಜ್ಞಾನಾತ್ಪ್ರಸೃತಾ ಯಸ್ಮಾಜ್ಜಗತ್ಪರ್ಣಪರಂಪರಾಃ ॥ ೫೪ ॥

ಯಸ್ಮಿಂಸ್ತಿಷ್ಠಂತಿ ರಾಜಂತೇ ವಿಶಂತಿ ವಿಲಸಂತಿ ಚ ।
ವಿಚಿತ್ರರಚನೋಪೇತಾ ಭೂರಿಭೋಗಿವಿಹಂಗಮಾಃ ॥ ೫೫ ॥

---

೫೨. ಬೇಟೆಗಾರನು ತಾನು ಸಾಕಿರುವ ಗಿಡಗಳಿಗೋಸ್ಕರ ಅಲ್ಲಲ್ಲಿ ಮಾಂಸ ಪಿಂಡಗಳನ್ನು ಹಾಕಿರುವಂತೆ, ಅಜ್ಞನಾದವನು ತನ್ನ ಇಂದ್ರಿಯಗಳಿಗೋಸ್ಕರವಾಗಿ, ಸಂಸಾರವೆಂಬ ಈ ಅರಣ್ಯದಲ್ಲಿ ಅಲ್ಲಲ್ಲಿ ದೇಹ (ಜನ್ಮ) ಗಳೆಂಬ ಮಾಂಸಪಿಂಡ ಗಳನ್ನು ಇಟ್ಟಿರುವನು.

೫೩. ಪ್ರಾಣಿಗಳು, ಬೆಟ್ಟಗಳು, ಮೊದಲಾದವುಗಳಿಂದ ದೊಡ್ಡದಾಗಿರು ವುದು ಈ ಜಗತ್ತು ಎಂದು ನೋಡುವ ದೃಷ್ಟಿಯು (ತತ್ತ್ವವಿಚಾರಿಯಾದವನಿಗೆ) ಸಣ್ಣ ಮಾಂಸದ ತುಂಡಿನಂತೆ ಅಪ್ರಯೋಜಕವು. ಆದರೆ ಜನವು ಮೋಹದಿಂದ ತನ್ನೊ ಳಗೇ ಚಿತ್ರವಿಚಿತ್ರ ಪದಾರ್ಥಗಳನ್ನು ಕಾಣುವುದು.

(ಇಲ್ಲಿ ತಾತ್ಪರ್ಯ ಪ್ರಕಾಶವು ಉತ್ತರಾರ್ಧವನ್ನು ಮುಂದಿನ ಶ್ಲೋಕದ ಕಲ್ಪಪಾದಪಃ ಎಂಬುದರೊಡನೆ ತೆಗೆದುಕೊಂಡಿದೆ.)

೫೪. ಅನಲ್ಪವಾದ ಎಂದರೆ ಬೇಕಾದ ಹಾಗೆ ಇರುವ ಸಂಕಲ್ಪಗಳಿಂದ ಹುಟ್ಟಿದ ಕಲ್ಪವೃಕ್ಷವೊಂದಿದೆ. ಅದು ಅಜ್ಞಾನದಿಂದ ಬೆಳೆಯುತ್ತಿದೆ. ಅದರಿಂದ ಜಗತ್ತುಗಳೆಂಬ ಎಲೆಗಳು ಗುಂಪುಗುಂಪಾಗಿ ಹುಟ್ಟುತ್ತಿವೆ.

೫೫. ಆ ಕಲ್ಪವೃಕ್ಷದಲ್ಲಿ ನಾನಾ ವಿಧ ವ್ಯಾಪಾರಗಳನ್ನುಳ್ಳ ಅನೇಕಾನೇಕ ಹಾವುಗಳೂ ಹಕ್ಕಿಗಳು ಇರುವುವು: ಮೆರೆಯುವುವು: ಬರುವುವು: ಹೋಗುವುವು.

ಯತ್ರ ಜನ್ಮಾನಿ ಪರ್ಣಾನಿ ಕರ್ಮಜಾಲಂ ಚ ಕೋರಕಂ ।
ಫಲಾನಿ ಪುಣ್ಯಪಾಪಾನಿ ಮಂಜರ್ಯೋ ವಿಭವಶ್ರಿಯಃ ॥ ೫೬ ॥

ಅಜ್ಞಾನೇಂದೂದಯೇ ನೈತಾ ಯೋಷಿದೋಷಧಯಃ ಸ್ಫುಟಂ ।
ಸಂಸಾರವನಖಂಡೇಽಸ್ಮಿನ್ಪರಾಂ ಶೋಭಾಮುಪಾಗತಾಂ ॥ ೫೭ ॥

ಜನ್ಮಜಾಲಕಲಾಪೂರ್ಣಃ ತಮಃಕಾಲಕೃತೋದಯಃ ।
ಶೂನ್ಯೋದಿತಾತ್ಮಾ ದೋಷೇಶೋ ಜಯತ್ಯಜ್ಞಾನಚಂದ್ರಮಾಃ ॥ ೫೮ ॥

ಅಜ್ಞಾನೇಂದೋಃ ಪ್ರಸಾದೇನ ವಾಸನಾಮೃತಶಾಲಿನಾ ।
ತರ್ಪಿತಾಶಾ ಚಕೋರೇಣ ಚಿತ್ತರತ್ನ ರಸೈಷಿಣಾ ॥ ೫೯ ॥

ರಾಜಹಂಸವಿಲಾಸನ್ಯಃ ಪ್ರಾಲೇಯಶಿಶಿರಾಂಗಿಕಾಃ ।
ಭಾಂತಿ ಕಾಂತಾಕುಮುದ್ವತ್ಯೋ ಲೋಲಲೋಚನಷಟ್ಪದಾಃ ॥ ೬೦ ॥

ಧಮ್ಮಿಲ್ಲತಿಮಿರೋಲ್ಲಾಸಾ ಲಸತ್ಪಾಂಡುಪಯೋಧರಾಃ ।
ರಾಮಾ ರಜನ್ಯೋ ರಾಜಂತೇ ತಸ್ಮಾತ್ಪ್ರೈಣ ವಿಜೃಂಭಿತಂ ॥ ೬೧ ॥

---

೫೬. ಆ ಕಲ್ಪವೃಕ್ಷಕ್ಕೆ ಜನ್ಮಗಳೇ ಎಲೆಗಳು. ಕರ್ಮಜಾಲಗಳೇ ಮೊಗ್ಗೆಗಳು. ಪುಣ್ಯಪಾಪಗಳೇ ಫಲಗಳು. ವೈಭವ ಸಂಪತ್ತುಗಳೇ ಹೂಗೊಂಚಲುಗಳು.

೫೭. ಸಂಸಾರವೆಂಬ ಅರಣ್ಯದ ಒಂದೆಡೆಯಲ್ಲಿ, ಅಜ್ಞಾನವೆಂಬ ಚಂದ್ರನು ಉದಯಿಸುತ್ತಲೂ, ಸ್ತ್ರೀಯರೆಂಬ (ವನಿತಾದಿಭೋಗವಸ್ತು) ಔಷಧಿಗಳು ಬಹಳ ಚೆನ್ನಾಗಿ ಬೆಳೆಯುವುವು.

೫೮. ಜನ್ಮಪರಂಪರೆಗಳೆಂಬ ಕಳೆಗಳಿಂದ ಪೂರ್ಣನಾಗಿ, ತಮೋಮಯವಾದ ಕಾಲದಲ್ಲಿ ಹುಟ್ಟುವವನಾಗಿ, ತಮೋಮಯವಾದ ಕಾಲದಲ್ಲಿ ಹುಟ್ಟುವವನಾಗಿ, ದೇಶಕಾಲಾದಿ ಪರಿಚ್ಛೇದಗಳಿಗೆ ಒಳಗಾಗದ ಆತ್ಮನನ್ನು ಮರೆಸುವವನಾಗಿ, ಸಮಸ್ತ ದೋಷಗಳಿಗೂ ಪ್ರಭುವಾಗಿ, ಅಜ್ಞಾನ ಚಂದ್ರನು ವಿರಾಜಿಸುತ್ತಿರುವನು.

೫೯-೬೦-೬೧. ಅಜ್ಞಾನವೆಂಬ ಚಂದ್ರನೊಬ್ಬನಿರುವನು. (ಚಿತ್ತದಲ್ಲಿಡಗಿರುವ) ವಾಸನೆಗಳೇ ಅವನಲ್ಲಿರುವ ಅಮೃತವು. ನಾನಾ ವಿಧವಾದ ಆಶೆಗಳೆಂಬ ಚಕೋರಗಳಿಗೆಲ್ಲ ಅವನಿಂದ ತೃಪ್ತಿಯು. ಅವನು ಯಾವಾಗಲೂ ಚಿತ್ತವೆಂಬ

ಆಪಾತಮಾತ್ರಮಧುರತ್ವಮನರ್ಥಸತ್ವ
ಮಾದ್ಯಂತವತ್ತ್ವಮಖಿಲಸ್ಥಿತಿಭಂಗುರತ್ವಂ ।
ಅಜ್ಞಾನಶಾಖಿನ ಇತಿ ಪ್ರಸೃತಾನಿ ರಾಮ
ನಾನಾಕೃತೀನಿ ವಿಪುಲಾನಿ ಫಲಾನಿ ತಾನಿ ॥ ೬೨ ॥

ಇತ್ಯಾರ್ಷೇ ವಾಸಿಷ್ಠರಾಮಾಯಣೇ ವಾಲ್ಮೀಕಿಯೇ ದೇವದೂತೋಕ್ತೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ "ಮೋಹಮಾಹಾತ್ಮ್ಯಂ" ನಾಮ ಷಷ್ಠಃ ಸರ್ಗಃ

ರತ್ನದಲ್ಲಿರುವ ರಸವನ್ನೇ ಅಪೇಕ್ಷಿಸುವನು. ಹಂಸೆಗಳ ವಿಲಾಸವನ್ನುಳ್ಳವರೂ, ಹಿಮದಂತೆ ತಂಪಾಗಿರುವ ಶರೀರವುಳ್ಳವರೂ, ಲೋಲಲೋಚನಗಳೆಂಬ ಷಟ್ಪದಗಳನ್ನುಳ್ಳ ಕನ್ನೈದಿಲೆಯಂತೆ ಮನೋಹರೆಯರು ತುರುಬಿನಲ್ಲಿ ಕತ್ತಲೆಯನ್ನೆಲ್ಲ ತುಂಬಿಟ್ಟುಕೊಂಡವರೂ ಸೊಗಸಾದ ಶುಭ್ರತೆಯನ್ನು ಎದೆಯಲ್ಲಿ ಮುಚ್ಚಿಟ್ಟುಕೊಂಡವರೂ ಆದ ರಜನಿಯರೆಂಬ ನಾರಿಯರು ಮೆರೆಯುವದು ಯಾವುದುಂಟೋ ಅದೆಲ್ಲವೂ ಆ ಮೂರ್ಖಚಂದ್ರನ ಪ್ರಭಾವವು. ಅವನ ಪ್ರಸಾದವು.

೬೨. ಅಜ್ಞಾನವೆಂಬ ಮರವೊಂದಿರುವದು. ಅದು, ರಾಮ, ನಾನಾಕೃತಿಗಳ ಹಣ್ಣುಗಳನ್ನು ಅನೇಕವಾಗಿ ಬಿಡುವುದು. ಆಪಾತಮಾತ್ರ ಮಧುರತ್ವ, ಅನರ್ಥಸತ್ವ, ಆದ್ಯಂತವತ್ತ್ವ, ಅಖಿಲಸ್ಥಿತಿ ಭಂಗುರತ್ವ, ಇವೆಲ್ಲವೂ ಅದರಿಂದಲೇ ಬಂದ ಫಲಗಳು.

(ಆಪಾತಮಾತ್ರ ಮಧುರತ್ವ–ನೋಡುವುದಕ್ಕೆ ಮಾತ್ರ ಮಧುರವಾಗಿ ಕಂಡು ವಿಚಾರ ಮಾಡಿದಾಗ ಹಾಗಲ್ಲವೆಂದು ತಿಳಿದುಬರುವುದು, ಅನರ್ಥಸತ್ವ–ಅನರ್ಥಗಳನ್ನು ಉಂಟುಮಾಡಬಲ್ಲುದು: ಆದ್ಯಂತವತ್ತ್ವ–ಜನ್ಮ ಮರಣಗಳಿಂದ ಕೂಡಿರುವುದು. ಅಖಿಲ ಸ್ಥಿತಿ ಭಂಗುರತ್ವ. ಯಾವ ಸ್ಥಿತಿಯಲ್ಲೂ ಶಾಶ್ವತವಾಗಿರಲು ಸಾಧ್ಯವಿಲ್ಲದ್ದು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ ನಿರ್ವಾಣಪ್ರಕರಣದ ಪೂರ್ವಾರ್ಧದಲ್ಲಿ "ಮೋಹಮಾಹಾತ್ಮ್ಯ" ಎಂಬ ಆರನೆಯ ಸರ್ಗವು.

ಸಪ್ತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ಯನ್ಮುಕ್ತಾವಲಿತಾ ರತ್ನಭೂಷಿತಾ ಭಾಂತಿ ಯೋಷಿತಃ ।
ಮದೇಂದಾವುದಿತೇ ಕ್ಷುಬ್ಧಕಾಮಕ್ಷೀರಾರ್ಣವೋರ್ಮಯಃ ॥ ೧ ॥

ಸೌವರ್ಣಾಂಭೋಜಕೋಶಸ್ಥ ಲೋಲಾಲಿಪಟಲಶ್ರಿಯಂ ।
ಧಾರಯಂತಿ ದೃಶಃ ಸ್ತ್ರೀಣಾಂ ಕಪೋಲತಲದೋಲಿತಾಃ ॥ ೨ ॥

ಉದ್ಯಾನವನಖಂಡೇಷು ಭೂಮೌ ಕೃತಮುದಾ ಮಧೌ ।
ಹೃದ್ಯಾಃ ಸುಮನಸೋ ಭಾಂತಿ ದಾಸಾ ಇವ ಮನೋಭುವಃ ॥ ೩ ॥

ಏಳನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು—ವಿಲಾಸಿನಿಯರು ಮುತ್ತಿನ ಹಾರಗಳನ್ನೂ ರತ್ನ ಭೂಷಣಗಳನ್ನೂ ಧರಿಸಿ ಮೆರೆಯುವುದು ಯಾವುದುಂಟೋ ಅವೆಲ್ಲವೂ ಮದ ವೆಂಬ ಚಂದ್ರನು ಉದಯವಾದಾಗ ಕ್ಷುಬ್ಧವಾದ ಕಾಮನೆಂಬ ಕ್ಷೀರಸಾಗರದ ಅಲೆಗಳು.

೨. ಸ್ತ್ರೀಯರ ಕೆನ್ನೆಗಳ ಮೇಲೆ ಕುಳಿತು ಉಯ್ಯಾಲೆಯಾಡುತ್ತ, ಚಿನ್ನದ ಕಮಲಗಳಲ್ಲಿ ಕುಳಿತಿರುವ ದುಂಬಿಗಳ ಗುಂಪಿನಂತೆ ಹೆಂಗಳ ಕಂಗಳು ಮೆರೆಯು ವುದು (ಕೂಡ ಮದಚೇಷ್ಟೆಯಿಂದಲೇ !)

೩. ವಸಂತ ಕಾಲದಲ್ಲಿ ಮನೋಹರವಾದ ಮಾಲಿಕೆಗಳನ್ನು ಧರಿಸಿ ಮದವು ಬರುವಂತೆ (ಮದ್ಯಪಾನ) ಮಾಡಿಕೊಂಡು, ಉದ್ಯಾನ ಭೂಮಿಗಳಲ್ಲಿ ಮನ್ಮಥನ ದಾಸರಂತೆ ತಿರುಗುವುದು (ಯಾವುದುಂಟೋ ಅದು ಕೂಡ ಮದವಿಚೇಷ್ಟಿತವೇ !)

ಕ್ರವ್ಯಾದಗೃಧ್ರಗೋಮಾಯುಕೌಲೇಯಕವಲಾಂಗಿಕಾಃ |
ಸ್ತ್ರಿಯಃ ಸಮುಪಮೀಯಂತೇ ಚಂದ್ರಚಂದನಪಂಕಜೈಃ || ೪ ||

ಸೌವರ್ಣಕಲಶಾಂಭೋಜಕಲಿಕಾಮಾತುಲಂಗವತ್ |
ಗೃಹ್ಯತೇ ಸ್ತ್ರೀಸ್ತನಶ್ರೇಣೀ ರಕ್ತಪೂತಿಸುಗಂಧಿಕಾ || ೫ ||

ರಸಾಯನೇಂದುನಿಸ್ಯಂದಮಧುಬಿಂಬಾಸವದ್ರವೈಃ |
ಓಷ್ಠಾಭಿಧೋ ಮಾಂಸಲವೋ ಲಾಲಾಕ್ತ ಉಪಮೀಯತೇ || ೬ ||

ಅಲ್ಪಾಲ್ಪಾಷ್ಠೀವದಾಕಾರಾ ಭುಜಾ ಕ್ರೂರಾಸ್ಥಿಶಂಕವಃ |
ಮಹಾಬಾಹುಲತಾಶಬ್ದೈರ್ವರ್ಣ್ಯಂತೇ ಕವಿಭಿಃ ಶುಭೈಃ || ೭ ||

ಕದಲೀಸ್ತಂಭಸಂಭಾರಸುಂದರೀಭಿಸ್ತಥಾ ಭೃತಾ |
ಕುಚಶೋಭೋಚಿತಾನಂದಾ ತೋರಣಾಲಿರ್ವಿರಾಜತೇ || ೮ ||

---

೪. ಹುಲಿ, ಹದ್ದು, ನರಿ, ನಾಯಿಗಳಿಗೆ ಆಹಾರವಾದ ಮಾಂಸ ಪಿಂಡವಾದ ಹೆಂಗಸರನ್ನು ಚಂದ್ರ, ಚಂದನ, ಪಂಕಜಗಳಿಗೆ ಹೋಲಿಸುವುದು (ಯಾವುದುಂಟೋ ಅದೂ ಮದವಿಚೇಷ್ಟಿತವು)

೫. ರಕ್ತದುರ್ಗಂಧದಿಂದ ತುಂಬಿರುವ ಸ್ತ್ರೀ ಸ್ತನಗಳನ್ನು ಸುವರ್ಣ ಕಲಶಗಳು, ತಾವರೆಯ ಮೊಗ್ಗುಗಳು, ಮಾದಲದ ಹಣ್ಣುಗಳು. (ಎಂದು ವರ್ಣಿಸುವದೆಲ್ಲವೂ ಅಜ್ಞಾನದ ಪ್ರಭಾವವು.)

೬. ಎಂಜಲಿನಿಂದ ಯಾವಾಗಲೂ ನೆನೆದಿರುವ ತುಟಿಗಳೆಂಬ ಮಾಂಸಖಂಡಗಳನ್ನು, [ಪ್ರೀತಿ] ರಸಾಯನ, ಅಮೃತ, ಮಧು, ಬಿಂಬಫಲಗಳು ಎಂದು ಉಪಮಾನ ಹೇಳಿ ಹೊಗಳುವುದೂ ಅಜ್ಞಾನದ ಪ್ರಭಾವವು.

೭. ಬೇರೆ ಬೇರೆಯಾಗಿ ತೆಗೆದು ನೋಡಿದರೆ ಬರಿಯ ಮೂಳೆಯ ಗಂಟುಗಳಾಗಿ, ಕ್ರೂರವಾದ ಮೂಳೆಯ ಮೊಳೆಗಳಾಗಿರುವ ಭುಜಗಳನ್ನು ಉತ್ತಮವಾದ ಶುಭ್ರವಾದ ಬಾಹುಲತೆಗಳೆಂದು ಕವಿಗಳು ವರ್ಣಿಸುವುದು [ಅಜ್ಞಾನದ ಪ್ರಭಾವವು.]

೮. ಕದಲೀ ಸ್ತಂಭಗಳಂತಿರುವ ಊರೂ ಸ್ತಂಭಗಳುಳ್ಳ ಸುಂದರಿಯರು

ಆಪಾತಮಂದಮಧುರಾ ಮಥ್ಯೇ ದ್ವಂದ್ವಾನುಬಂಧಿನೀ |
ಶ್ರೀಘ್ರಾವಸಾನವಿರಲಾ ಲಕ್ಷ್ಮೀರಪ್ಯಭಿವಾಂಛತೇ ॥ ೯ ॥

ಸಮುಪೈತಿ ಮತಿರ್ದುಃಖಂ ಸುಖಂಚ ಶತಶಾಖತಾಂ |
ದುಃಖಶಾಖಾಸ್ತು ಜಾಯಂತೇ ನಾನಾಕರ್ಮಫಲಾಃ ಶ್ರಿಯಃ ॥ ೧೦ ॥

ಬದ್ಧಜಾಲಘನಾಕಾರಾಃ ಕಾಂತಾರ್ಥಮಿವ ರಜ್ಜವಃ |
ದಚ್ಛದಃಸದೃಶಾ ವಾಚಃ ಪ್ರತಾನಗಹನೇ ಸ್ಥಿತಾಃ ॥ ೧೧ ॥

ಸಂತತಾ ಮೋಹಮಿಹಿಕಾ ಕಾರ್ಯಾಸಾರವಿಸಾರಿಣೀ |
ಯಮುನಾ ಪ್ರಾವೃಷೀವೈತಿ ತಿಮಿರಶ್ಯಾಮಲಾ ಚಿರಂ ॥ ೧೨ ॥

ಧರಿಸಿರುವ ಕಾಂಚೀದಾಮವು ಅವರ ಕುಚಮಂಡಲದ ಸೌಂದರ್ಯಕ್ಕೆ ತಕ್ಕಂತೆ ಇದ್ದು ನೋಡುವವರ ಕಣ್ಣಿಗೆ ಆನಂದವನ್ನುಂಟುಮಾಡುವ ಮನ್ಮಥ ಮಂದಿರದ ತೋರಣಾವಲಿಯೋ (ಎಂದು ಮುಂತಾಗಿ ವರ್ಣಿಸುವುದೂ ಅಜ್ಞಾನದ ವಿಜೃಂಭಣವು.)

೯. ಬರುವ ಕಾಲದಲ್ಲಿಯೂ ಅಜ್ಞರಿಗೆ ಮಾತ್ರ ಮಧುರವಾಗಿ, ಬಂದಾಗ ರಾಗದ್ವೇಷಗಳನ್ನೂ ಅಭಿವೃದ್ಧಿಗೊಳಿಸುವುದಾಗಿ, ಬಹು ಬೇಗ ಹೋಗುವುದಾಗಿ, ಕೆಲವರಲ್ಲಿ ಮಾತ್ರ ಕಾಣಿಸುವುದಾಗಿರುವ ಸಂಪತ್ತನ್ನು ಬಯಸುವುದು (ಯಾವುದುಂಟೋ ಅದು ಅಜ್ಞಾನ ವೈಭವವು.)

೧೦. ಮನಸ್ಸು ಸುಖದುಃಖಗಳನ್ನು ನೂರಾರು ಕವಲು ಕವಲು ಮಾಡಿ ಅನುಭವಿಸುವುದು ಮತ್ತು ನಾನಾ ಕರ್ಮಗಳನ್ನು ಮಾಡಿ ಆರ್ಜಿಸಿದ ಐಶ್ವರ್ಯಗಳೂ ಕೂಡ ದುಃಖಪ್ರದಗಳೇ ಆಗುವುವು. (ಇವಕ್ಕೂ ಅಜ್ಞಾನವೇ ಕಾರಣವು.)

೧೧. ದೇವರ್ಷಿ ಪಿತೃರುಣಗಳನ್ನು ತೀರಿಸದವರನ್ನು ಬಂಧನದಲ್ಲಿಟ್ಟು ಹಣ್ಣುಗಳಿಗೆ ಕಾವಲಾಗಿರುವ ತುಟಿಗಳಂತೆ, ಬಲವಾಗಿ ಕಾವಲಿಡಲು, ಹೆಣೆದಿರುವ ಹಗ್ಗಗಳೋ, ವಿಸ್ತಾರವಾದ ಅರಣ್ಯದಲ್ಲಿ ಸ್ವೇಚ್ಛೆಯಾಗಿ ಬೆಳೆದಿರುವ ಲತೆಗಳೋ ಎಂಬಂತೆ, (ಕಾಮ್ಯಕರ್ಮಗಳನ್ನು ಬೋಧಿಸುವ ಕರ್ಮಕಾಂಡ) ವಚನಗಳೂ ಇರುವುದೂ;

೧೨. ಮಳೆಗಾಲದಲ್ಲಿ ತುಂಬಿ ಬರುವ ಯಮುನಾ ನದಿಯಂತೆಯೂ, ಕತ್ತಲೆ

ಕಟೂಕೃತಾಂತಃಕರಣೋ ನಾನಾಸುಖವಿಶಾರದಃ |
ವರ್ಧತೇ ಹಿ ಗತಸ್ನೇಹಂ ಜನ್ಮಪ್ರತಿವಿಷಾರಸಃ || ೧೩ ||

ವ್ಯಾಧೂತಜರ್ಜರಾಕೀರ್ಣಜನತಾಪರ್ಣರಾಜಯಃ |
ಸ್ವಕರ್ಮಪಾವನಾ ವಾಂತಿ ನಾನಾಪಕರರೇಣವಃ || ೧೪ ||

ಕಾಲಃ ಕವಲಿತಾನಂತಜಗತ್ಪಕ್ವಫಲೋಽಪ್ಯಯಂ |
ಘಸ್ಮರಾಚಾರಜಠರಃ ಕಲ್ಪೈರಪಿ ನ ತೃಪ್ಯತಿ || ೧೫ ||

ಯಂತೆಯೂ ಕಪ್ಪಗಿರುವ, ಮೋಹವೆಂಬ ಹಿಮವು ಯಾವಾಗಲೂ ನಾನಾ ಕಾರ್ಯಗಳನ್ನು ಮಾಡುವಂತೆ ಮನಸ್ಸನ್ನು ಪ್ರೇರಿಸುತ್ತಲೇ ಇರುವುದೂ;

(ಮೋಹವಶವಾಗಿ ಮನಸ್ಸು ತಾನಾಗಿ ಕಾಮ್ಯಕರ್ಮಗಳಲ್ಲಿ ಪ್ರವೃತ್ತವಾಗಿರುವುದು. ಹಾಗಿರಲು, ಕಾಮ್ಯ ಕರ್ಮಕ್ಕೆ ಶಾಸ್ತ್ರದಿಂದಲೂ ಪ್ರವೃತ್ತಿಯುಂಟಾಗುವುದು ಎಂದರೆ ಅದು ಅಂಧನೂ, ಉನ್ಮತ್ತನೂ ಆಗಿ, ತಾನಾಗಿ ಭಾವಿಗೆ ಬೀಳುತ್ತಿರುವವನನ್ನು ಬಲವಂತವಾಗಿ ಉರುಳಿಸುವಂತೆಯೇ ಸರಿ ! ತಾ. ಪ್ರ.)

೧೩. (ಭೋಗ ಪ್ರವೃತ್ತನಾಗಿರುವವನಿಗೆ ವಿಷಯಾದಿಗಳಲ್ಲಿಯೂ ಪುತ್ರಪೌತ್ರಾದಿಗಳಲ್ಲಿಯೂ ಆಸಕ್ತಿಯು ಬೆಳೆದುಕೊಂಡು ಹೋಗುವುದು. ಆದರೆ ಆ ಆಸಕ್ತಿಯು ಎಂಥದು ಎಂದರೆ) ಮೇಲೆ ನೋಡುವುದಕ್ಕೆ ನಾನಾ ಸುಖಗಳಿಂದ ತುಂಬಿರುವಂತೆ ಇದ್ದರೂ ಅದು ಒಳಗೆ ಕಹಿಯಾಗಿರುವುದು. ಅದಕ್ಕೆ ಬೆಳೆ ಬೆಳೆಯುತ್ತ ಎಲ್ಲರ ಸ್ನೇಹವೂ ತಪ್ಪುವುದು. ಅದು ಹುಟ್ಟಿದಾಗಿನಿಂದಲೂ ವಿಷವಲ್ಲರಿಯ ರಸದಂತೆ ವಿಷವೇ ಆಗಿರುವುದೂ;

೧೪. (ರೋಗಾದಿಗಳಿಂದ) ಜರ್ಜರಿತವಾಗಿ. (ಆಪತ್ತುಗಳಿಂದ) ಹಣ್ಣಾಗಿ ಗುಂಪು ಗುಂಪಾಗಿರುವ ಪುತ್ರಾದಿ ಪರಿವಾರ ಜನಗಳೆಂಬ ಎಲೆಗಳನ್ನು ಉದುರಿಸುತ್ತಾ, ನಾನಾ ರೀತಿಯಾಗಿರುವ ಧೂಳುಗಳನ್ನು ಚೆಲ್ಲುತ್ತಾ ಸ್ವಕರ್ಮಗಳೆಂಬ ಗಾಳಿಗಳು ಬೀಸುತ್ತಿರುವುದೂ;

೧೫. (ಜೊತೆಗೆ) ಜಗತ್ತುಗಳೆಂಬ ಕಳಿತ ಹಣ್ಣುಗಳನ್ನು ಅನಂತಾನಂತವಾಗಿ ಭಕ್ಷಿಸಿದ್ದರೂ, ಕಲ್ಪ ಕಲ್ಪಗಳಿಂದ ಹೀಗೆ ತಿನ್ನುತ್ತಿದ್ದರೂ ತಿಂಡಿಪೋತನಾದ ಈ ಕಾಲನು ಇನ್ನೂ ತೃಪ್ತನಾಗದಿರುವನು.

ಮೋಹಮಾರುತಮಾಪೀಯ ತ್ವಚಾ ವಿಷಮಚಾರಿಣಃ ।
ಸ್ಫುರಂತೀಹಾಪಯಶ್ಚಿತ್ರಾಃ ಶೀತಲಾಚಲದೀಪ್ತಯಃ ॥ ೧೬ ॥

ಚಿಂತಾಪಿಶಾಚೋಪಹತಾ ವಿವೇಕೇಂದೂದಯಂ ವಿನಾ ।
ತಮಸೇವ ನಿರಾಲೋಕಾ ಯಾತಿ ಯೌವನಯಾಮಿನೀ ॥ ೧೭ ॥

ಜಿಹ್ವಾ ಜರ್ಜರತಾಮೇತಿ ಪ್ರಾಕೃತಾನುನಯಜ್ವರೈಃ ।
ಪದ್ಮಕೋಟರಕೋಣಸ್ಥಮಪಿ ಸೂತ್ರಂ ಹಿಮೈರಿವ ॥ ೧೮ ॥

ದುಃಖಶೋಕಮಹಾಷ್ಠೀಲಃ ಕಷ್ಟಕಂಟಕಸಂಕಟಃ ।
ಸಹಸ್ರಶಾಖತಾಂ ಯಾತಿ ದಾರಿದ್ರ್ಯದೃಢಶಾಲ್ಮಲಿಃ ॥ ೧೯ ॥

---

೧೬. ಮೋಹವೆಂಬ ಗಾಳಿಯನ್ನು ಕುಡಿದು, (ದೇಹಗಳೆಂಬ) ಪೊರೆಗಳನ್ನು ಪದೇ ಪದೇ ಬಿಡುತ್ತ, ನೇರವಾಗಿಲ್ಲದೆ ಸೊಟ್ಟ ಸೊಟ್ಟಾಗಿಯೇ, ಹಿಮವತ್ಪರ್ವತದಂತೆ ಹೊಳೆಯುವ, ಆಶೆಗಳೆಂಬ ಹಾವುಗಳು ತಿರುಗುತ್ತಲಿರುವುವು.

(ಶೀತಲಾಚಲ ದೀಪ್ತಯಃ ಎಂಬಲ್ಲಿ ತಾ. ಪ್ರ. ವು ಶೀತಲಸ್ಯ ತ್ರಿವಿಧ ತಾಪ ಶೂನ್ಯಸ್ಯ, ಅಚಲಸ್ಯಚ ಬ್ರಹ್ಮಣೋ ದೀಪ್ತಯಃ ಪ್ರಕಾಶಾಯಮಾನಾ ಜೀವಾ ಇಹ ಸಂಸಾರೇ ಅಹಯಃ ಸ್ಸರ್ಪಾ ಇವ ಸ್ಫುರಂತಿ ಎನ್ನುತ್ತದೆ. ಇಲ್ಲಿ ಈಹಾ ಅಹಯಃ ಸ್ಫುರಂತಿ ಎಂದು ಮಾಡಿಕೊಂಡಿದೆ.)

೧೭. ಚಿಂತೆಯೆಂಬ ಪಿಶಾಚಿಯ ಹಿಡಿತಕ್ಕೆ ಸಿಕ್ಕಿ, ವಿವೇಕವೆಂಬ ಚಂದ್ರನು ಇನ್ನೂ ಉದಯವಾಗದೆ ಇರಲು, ಕತ್ತಲೆಯಂತೆ ಬೆಳಕಿಲ್ಲದೆ, ಯೌವ್ವನವೆಂಬ ರಾತ್ರಿಯು ಕಳೆದುಹೋಗುವುದು.

೧೮. ಪಾಮರರನ್ನು ಆರಾಧಿಸುವುದೇ ದೊಡ್ಡ ಕೆಲಸವಾಗಿ, ಅದಕ್ಕಾಗಿ ಸಂತಾಪಪಡುತ್ತ, ಕಮಲದ ಹೊಟ್ಟೆಯಲ್ಲಿದ್ದರೂ ಕಮಲ ಸೂತ್ರವೂ ಹಿಮದಿಂದ ಜರ್ಜರಿತವಾಗುವಂತೆ, ನಾಲಗೆಯು (ಬಾಯಲ್ಲಿದ್ದು ರಕ್ಷಣೆಯನ್ನು ಪಡೆದಿದ್ದರೂ) ಜರ್ಜರವಾಗಿ ಹೋಗುವುದು.

೧೯. ದುಃಖ, ಶೋಕಗಳೆಂಬ ದೊಡ್ಡ ದೊಡ್ಡ ಗಂಟುಗಳುಳ್ಳದಾಗಿ ಕಷ್ಟಗಳೆಂಬ ಮುಳ್ಳುಗಳಿಂದ ಸಂಕಟಕರವಾಗಿ ಇರುವ ದಾರಿದ್ರ್ಯವೆಂಬ ದೊಡ್ಡ ಬೂರುಗದ ಮರವು ನಾನಾ ಶಾಖೆಗಳಿಂದ ಬೆಳೆಯುತ್ತಿರುವುದು.

ಅಂತಃಶೂನ್ಯೋಽನ್ನತಿಧ್ವಸ್ತಚಿತ್ತಚೈತ್ಯಕೃತಾಲಯಃ ।
ಮಾಯಾಬಹುಲಯಾಮಿನ್ಯಾಂ ಲೋಭೋಲೂಕೋ ವಿವಲ್ಗತಿ ॥ ೨೦ ॥

ಪೂರ್ವಂ ಗೃಹೀತ್ವಾ ಕರ್ಣಾಭ್ಯಾಂ ಸ್ಫುರಂತೀ ಪರಿನಿಶ್ಚಯಂ ।
ಜರಾಜರ್ಜರಮಾರ್ಜಾರೀ ಯೌವನಾಖುಂ ನಿಕೃಂತತಿ ॥ ೨೧ ॥

ನಿಃಸಾರಾ ಕ್ರಮಶಃ ಕ್ರಾಂತಧರಾಧರಸಮುನ್ನತಿಃ ।
ಡಿಂಡೀರಪಿಂಡಿಕೇವೇಯಂ ಸೃಷ್ಟಿರಾಯಾತಿ ಪುಷ್ಟತಾಂ ॥ ೨೨ ॥

ಆಭಾಸಪುಷ್ಪಧವಲಾ ಜಗತ್ಪಲ್ಲವಶಾಲಿನೀ ।
ಸತ್ತಾಲತಾ ವಿಕಸಿತಾ ಧರ್ಮಾರ್ಥಫಲಧಾರಿಣೀ ॥ ೨೩ ॥

ಸುರಾಚಲಮಹಾಸ್ಥೂಣಂ ಚಂದ್ರಸೂರ್ಯಗವಾಕ್ಷಕಂ ।
ಗಗನಾಚ್ಛಾದನಂ ಚಾರು ಧ್ರಿಯತೇ ತ್ರಿಜಗದ್ಗೃಹಂ ॥ ೨೪ ॥

---

೨೦. (ಸತ್ಯವನ್ನು ಹಿಡಿಯದಿರುವಿಕೆಯಿಂದ) ಟೊಳ್ಳಾಗಿರುವ, ತನ್ನ ಬೆಳವಣಿಗೆಯ ಭಾರವನ್ನು ತಾನೇ ತಡೆಯಲಾರದೆ ಮುರಿದುಬೀಳುವಂತಿರುವ, ಚಿತ್ತವೆಂಬ ಚೈತ್ಯವೃಕ್ಷದಲ್ಲಿ ಮನೆಮಾಡಿಕೊಂಡು, ಲೋಭವೆಂಬ ಒಂದು ಗೂಬೆಯು ಕುಳಿತಿರುವುದು. ಅದು ಮಾಯೆಯೆಂಬ ಕೃಷ್ಣಪಕ್ಷದ ರಾತ್ರಿಯಲ್ಲಿ ಹಾರಾಡುವುದು.

೨೧. ಜರೆಯೆಂಬ ಮುದಿಬೆಕ್ಕು ಯೌವನವೆಂಬ ಹೆಗ್ಗಣವನ್ನು ಹುಟ್ಟುತ್ತಿದ್ದ ಹಾಗೆಯೇ ಕಿವಿಗಳಿಂದ ಹಿಡಿದು ತಿಂದುಹಾಕುವುದು.

೨೨. ನಿಜವಾಗಿಯೂ ನಿಸ್ಸಾರವಾಗಿದ್ದರೂ ಬೆಟ್ಟಗಳನ್ನೂ ಮೀರುವಂತೆ ಬೆಳೆದು ಬೆಳೆದು ನಿಲ್ಲುವ ನೊರೆಯ ಹೊರೆಯಂತೆ, ಈ ಸೃಷ್ಟಿಯೂ ಪುಷ್ಟಿಯನ್ನು ಹೊಂದುವುದು.

೨೩. ಆಭಾಸ (ಚಿದಾಭಾಸ ಜೀವ)ರೆಂಬ ಪುಷ್ಪಗಳನ್ನೂ ಜಗತ್ತುಗಳೆಂಬ ಪಲ್ಲವಗಳನ್ನೂ ಹೊಂದಿ ಧರ್ಮಾರ್ಥ (ಆದಿ) ಫಲಗಳನ್ನು ಬಿಡುವ ಸತ್ತಾಸ್ವರೂಪವಾದ ಬಳ್ಳಿಯು ಅರಳಿರುವುದು.

೨೪. ಮೇರುಪರ್ವತವೆಂಬ ಕಂಭವನ್ನೂ ಸೂರ್ಯ ಚಂದ್ರರೆಂಬ ಗವಾಕ್ಷ

ಸಂಸಾರಸರಸಿ ಸ್ಫಾರೇ ಚರಂತಿ ಪ್ರಾಣಷಟ್ಪದಾಃ ।
ಶರೀರಪುಷ್ಕರೇಷ್ವಂತಶ್ಚಿದ್ರೂಪರಸಪಾಯಿನಃ ॥ ೨೫ ॥

ನಭೋಮಾರ್ಗಮಹಾನೀಲಕುಟ್ಟಿಮೈಕಾಂತಶಾಲಿನೀ ।
ಭುವನೌದರರಮ್ಯಾಂತಃ ಸ್ಫುರತ್ಯಾದಿತ್ಯದೀಪಿಕಾ ॥ ೨೬ ॥

ಗಳನ್ನೂ ಆಕಾಶವೆಂಬ ಛಾವಣಿಯನ್ನೂ ಉಳ್ಳ ಜಗತ್ತ್ರಯವೆಂಬ ಗೃಹವು ಸೊಗಸಾಗಿರುವುದು.

೨೫. ಸಂಸಾರವೆಂಬ ವಿಶಾಲ ಸರೋವರದಲ್ಲಿ ಬೆಳೆದಿರುವ ಶರೀರಗಳೆಂಬ ಕಮಲಗಳಲ್ಲಿ ಪ್ರಾಣಗಳೆಂಬ ದುಂಬಿಗಳು ಚಿತ್ತೆಂಬ ರಸವನ್ನು ಪಾನಮಾಡುತ್ತ ತಿರುಗುತ್ತಿರುವುವು.

೨೬. ("ಏತಸ್ಯೈವಾನಂದಸ್ಯ ಅನ್ಯಾನಿ ಭೂತಾನಿ ಮಾತ್ರಾಮುಪಜೀವಂತಿ" "ಆನಂದೇನ ಭೂತಾನಿ ಜೀವಂತಿ" ಈ ಶ್ರುತಿಗಳಿಗನುಸಾರವಾಗಿ ಪ್ರಾಣಷಟ್ಪದಗಳು ಚಿದ್ರೂಪ ರಸಪಾಯಿಗಳಾಗಿ ತಿರುಗುತ್ತಿವೆ ಎಂದು ಹೇಳಿದೆ. ತಾ. ಪ್ರ.)

(ಆನಂದವೇ ಸ್ವರೂಪನಾಗುಳ್ಳ ಬ್ರಹ್ಮವನ್ನು ಲಕ್ಷಿಸಿ ಲೋಕವೆಲ್ಲ, ಸಂಸಾರವೆಲ್ಲ, ಅಷ್ಟು ಆನಂದವಲ್ಲವೆಂದುಕೊಂಡು ಆ ಕಾರಣದಿಂದ ದುಃಖವೆಂದು ಹೇಳುವುದು ವಾಡಿಕೆಯಾಗಿದೆ. ಆದರೂ ಲೋಕವೆಲ್ಲವೂ ಆನಂದವನ್ನೇ ಆಶ್ರಯಿಸಿ ಬದುಕಿದೆ. ನಿರಾನಂದವೇ ನಿಜವಾಗಿದ್ದರೆ ಯಾರೂ ಬದುಕುತ್ತಲೇ ಇರಲಿಲ್ಲ. ಆದರೆ ಈ ಜಗತ್ತಿನಲ್ಲಿರುವುದು ದುಃಖಮಿಶ್ರವಾದ ಆನಂದ. ವಿಷಯಾನಂದವೂ ಇಂತಹ ಸಂಕ್ಲಿಷ್ಟಾನಂದ. ಇದನ್ನು ಬಿಡಬೇಕು ಎನ್ನುವುದು ಇದಕ್ಕಿಂತ ಹೆಚ್ಚಿನ ನಿರ್ವಿಷಯಾನಂದವನ್ನು ಪಡೆಯುವುದಕ್ಕಾಗಿ. ನಿರ್ವಿಷಯಾನಂದದ ಕೊನೆಯೇ ಬ್ರಹ್ಮಾನಂದ" ಎಂಬ ಆನಂದ ಸಿದ್ಧಾಂತವನ್ನು ಹಿಡಿಯುವುದು ಶ್ರೇಯಸ್ಕರ.)

೨೬. ಆಕಾಶವೆಂಬ ನೀಲಮಣಿಯ ನೆಲದಲ್ಲಿ ಏಕಾಂತವಾಗಿ, ಬ್ರಹ್ಮಾಂಡದ ಉದರವನ್ನೆಲ್ಲ ಬೆಳಗುತ್ತ, ಆದಿತ್ಯನೆಂಬ ದೀವಿಗೆಯು ಉರಿಯುತ್ತಿರುವುದು.

ಆಶಾತಂತುನಿಬದ್ಧಾಂಗೀ ಜಾಗತೀ ಜೀರ್ಣಪಕ್ಷಿಣೀ ।
ಸ್ವವಾಸನಾಶಲಾಕೇಂತರ್ನಿಬದ್ಧೇಂದ್ರಿಯಪಂಜರೇ ॥ ೨೭ ॥

ಅನಾರತಪತಜ್ಜಾಲಭೂತಪರ್ಣಪರಂಪರಾ ।
ಸ್ಪಂದತೇ ಮರುತಾ ವೃಷ್ಟಾ ಸಂಸೃತಿವ್ರತತಿಶ್ಚಿರಂ ॥ ೨೮ ॥

ಸೃಷ್ಟೇಃ ಕತಿಪಯಂ ಕಾಲಂ ಪ್ರಹೃಷ್ಟಾಃ ಕುಲಶಾಲಿನಃ ।
ಅಧಃಕೃತೋಗ್ರನರಕಪಂಕಾಃ ಶಂಕೋಜ್ಝಿತಾಃ ಕ್ಷಣಂ ॥ ೨೯ ॥

ಭುಕ್ತೇಂದುಖಂಡಕಣಿಕಾನೀಲನೀರದಶೈವಲೇ ।
ಸ್ವರ್ಗಮಾರ್ಗಸರಸ್ಯತಃ ಸ್ಫುರಂತಿ ಸುರಸಾ ರಸಾಃ ॥ ೩೦ ॥

ನಾನಾಫಲಾಲಿಮಲಿನಾ ವಾಸನಾಜಾಲಮಾಲಿತಾ ।
ಸ್ಪಂದಾಮೋದಮಯೀ ಸ್ಥಿತಾ ಕ್ರಿಯಾವಿಕಸಿತಾಬ್ಜಿನೀ ॥ ೩೧ ॥

---

೨೭. ಆಶಾತಂತುವಿನಿಂದ ಕಟ್ಟುಬಿದ್ದು ಸ್ವ (ಜನ್ಮಾಂತರಕರ್ಮ) ವಾಸನವೆಂಬ ಅಡ್ಡಕಡ್ಡಿಯ ಮೇಲೆ, ಒಳಗೇ ಕಟ್ಟುಬಿದ್ದಿರುವ ಇಂದ್ರಿಯಗಳೆಂಬ ಪಂಜರದಲ್ಲಿ ಜಗತ್ತೆಂಬ ಮುದಿ ಹಕ್ಕಿಯು ಇರುವುದು.

೨೮. ಪ್ರಾಣಗಳೆಂಬ ವಾಯುಗಳು ಅಲ್ಲಾಡಿಸಲು, ಒಂದೇಸಮನಾಗಿ ಪ್ರಾಣಿಗಳೆಂಬ ಎಲೆಗಳನ್ನು ಉದುರಿಸುತ್ತ ಸಂಸಾರವೆಂಬ ಲತೆಯು ಬಹು ಕಾಲದಿಂದ ಹರಡಿರುವುದು.

೨೯-೩೦. ಸ್ವರ್ಗಮಾರ್ಗವೆಂಬ ವಿಶಾಲ ಸರಸ್ಸಿರುವುದು. ಅಲ್ಲಿ ನೀಲವಾಗಿರುವ ಮೋಡಗಳೆಂಬ ಪಾಚಿಯಿರುವುದು. ಅಲ್ಲಿ ದೇವತೆಗಳೆಂಬ ಸಾರಸ ಪಕ್ಷಿಗಳು ತಾವು ಉಚ್ಚ ಕುಲದವರೆಂಬ ಅಭಿಮಾನದಿಂದ ಸಂತೋಷಪಡುತ್ತ, ಚಂದ್ರಕಿರಣಗಳೆಂಬ ಅಮೃತದ ಹನಿಗಳನ್ನು ಕುಡಿಯುತ್ತ, ಕೆಳಗೆ ಇರುವ ಉಗ್ರ ನರಕಗಳೆಂಬ ಕೆಸರನ್ನು ಮರೆತು ಒಂದು ಗಳಿಗೆಯಷ್ಟು ಹೊತ್ತು, ಮೆರೆಯುವುವು.

೩೧. (ಸುಖದುಃಖಗಳೆಂಬ) ನಾನಾ ಫಲಗಳೆಂಬ ದುಂಬಿಗಳ ಗುಂಪಿನಿಂದ ಕೂಡಿ, (ಸ್ವಕರ್ಮ) ವಾಸನಾ ಜಾಲಗಳೆಂಬ ಮಾಲೆಗಳನ್ನು ಧರಿಸಿ, ಪ್ರಾಣವೆಂಬ ಸುವಾಸನೆಯನ್ನು ಉಳ್ಳ ಕಮಲವೊಂದು (ಪ್ರಾಣಿಗಳು ಮಾಡುವ) ಕರ್ಮಗಳಿಂದ ಅರಳುತ್ತಿರುವುದು.

ವರಾಕೀ ಸೃಷ್ಟಿಶಫರೀ ಸ್ಫುರಂತೀ ಭವಪಲ್ವಲೇ ।
ಕೃತಾಂತವೃದ್ಧಗೃಧ್ರೇಣ ಶಠೇನ ವಿನಿಗೃಹ್ಯತೇ ॥ ೩೨ ॥

ತರಂಗಫೇನಮಾಲೇವ ಸೈವಾನ್ಯೇವ ಚ ಭಂಗುರಾ ।
ಶ್ವಃ ಶ್ವೋ ಪರೇಂದುಲೇಖೇವ ಸಮುದೇತಿ ವಿಚಿತ್ರತಾ ॥ ೩೩ ॥

ಭೂರಿಭೂತಶರಾವಾಣೀ ಕ್ಷಣಭಂಗಾನಿ ಕುರ್ವತಾ ।
ಇದಂ ಕಾಲಕುಲಾಲೇನ ಚಕ್ರಂ ಸಂಪರಿವರ್ತ್ಯತೇ ॥ ೩೪ ॥

ಅಸಂಖ್ಯಾತಾನಿ ಕಲ್ಪಾನಿ ಸಂಜಾತಾನ್ಯಚಲೇ ಪದೇ ।
ಜಗಜ್ಜಂಗಲಜಾಲಾನಿ ದಗ್ಧಾನಿ ಯುಗವಹ್ನಿನಾ ॥ ೩೫ ॥

---

೩೨. ಸೃಷ್ಟಿಯೆಂಬ ಸಣ್ಣ ಮೀನೊಂದು ಈ ಸಂಸಾರವೆಂಬ ಕೊಚ್ಚೆಯ ಗುಂಡಿಯಲ್ಲಿ ಬಿದ್ದಿರುವುದು. ಅದನ್ನು ಕೃತಾಂತನೆಂಬ ಮುದಿಯ ಹದ್ದು ಹಟದಿಂದ ಹಿಡಿದುಕೊಂಡು ಹೋಗುವುದು.

೩೩. ದಿನದಿನಕ್ಕೂ ಬೇರೆಬೇರೆಯಾಗುವ ಚಂದ್ರ ಲೇಖೆಯಂತೆ, ಅಲೆಗಳ ಮೇಲೆ ಕಾಣಿಸುವ ನೊರೆಯ ಹೊರಳಿಯಂತೆ, ಕ್ಷಣಕ್ಕೊಂದು ಪರಿಯಾಗಿ, ಈ ಸೃಷ್ಟಿಯೇ, ಗಳಿಗೆ ಗಳಿಗೆಗೂ ಹೊಸದಾಗುತ್ತಿರುವಂತೆ ವಿಚಿತ್ರವಾಗಿ ಕಾಣಿಸುವುದು.

೩೪. ಒಂದು ಸ್ವಲ್ಪ ಹೊತ್ತು ಮಾತ್ರವಿದ್ದು ಒಡೆದುಹೋಗುವ, ಪ್ರಾಣಿಗಳೆಂಬ ಶರಾವೆಗಳನ್ನು ಬೇಕಾದ ಹಾಗೆ ಮಾಡುತ್ತಿರುವ ಕಾಲನೆಂಬ ಕುಂಬಾರನು (ಸಂಸಾರವೆಂಬ) ಈ ಚಕ್ರವನ್ನು ಸುತ್ತಿಸುತ್ತಿರುವನು.

೩೫. ಅಚಲವಾಗಿ ಶಾಶ್ವತವಾಗಿ ಇರುವ ಬ್ರಹ್ಮದಲ್ಲಿ ಅಸಂಖ್ಯಾತ ಕಲ್ಪಗಳು ಆಗಿಹೋದುವು. ಜಗತ್ತುಗಳೆಂಬ ಅರಣ್ಯ ಪಂಕ್ತಿಗಳು ಪ್ರಲಯವೆಂಬ ಕಾಳ್ಗಿಚ್ಚಿನಿಂದ ನಿರ್ಮೂಲವಾದುವು.

(ವೇದಾಂತಿಗಳಿಗೆ ದೇಶ ಕಾಲಗಳೆರಡೂ ಬೇರೆ ಬೇರೆಯಲ್ಲ. ಇವೆರಡೂ ಪರಿಚ್ಛೇದಕಗಳಾದರೂ ಒಂದೇ ಎಂದು ಅಂಗೀಕಾರ. ಆದ್ಯಂತ ಸಹಿತತ್ವವೇ ಕಾಲದ ರೂಪ. ಅದರ ಜೊತೆಗೆ ಘನತಾ ಸಹಿತತ್ವವೇ ದೇಶರೂಪ. ಸಂಚ

ಭಾವಾಭಾವೈರಪರ್ಯಂತೈಃ ಸುಖದುಃಖದಶಾಶತೈಃ ।
ವೈಪರೀತ್ಯಂ ಪ್ರಯಾತ್ಯೇವಮಜಸ್ರಂ ಜಾಗತೀ ಸ್ಥಿತಿಃ ॥ ೩೬ ॥

ಕ್ಷುಬ್ಧೈರ್ಯುಗಪರಾವರ್ತೈರ್ವಾಸನಾಶೃಂಖಲೋಂಭಿತಾ ।
ಮಹಾಶನಿನಿಪಾತೈಶ್ಚ ನ ಭಗ್ನಾ ಬುದ್ಧಧೀರತಾ ॥ ೩೭ ॥

ಶತಶೋ ವಿದ್ರುತಾರಿಘ್ನೈರ್ದನುಪುತ್ರೈರಭಿಷ್ಟುತಾಂ ।
ಭವಭಗ್ನತಯಾಮೈಂದ್ರೀಂ ತನುಂ ವಹತಿ ವಾಸನಾ ॥ ೩೮ ॥

ಭೂತಗಳಲ್ಲಿ ಆಕಾಶವು ವ್ಯಾಪ್ತಿ ಪೂರ್ಣವಾದರೂ ಸಾಂತವಾದುದರಿಂದ ಯಾವಾಗ ಆಕಾಶಭೂತವು ಪ್ರತ್ಯೇಕವಾಗಿ ಬಂತೋ ಆಗಲೇ ಕಾಲ ದೇಶಗಳೂ ವ್ಯಕ್ತವಾದುವು. ಆದರೂ ದೇಶವು ಸ್ಫುಟವಾಗಿ ವ್ಯಕ್ತವಾಗುವುದು, ಆಕಾಶದಿಂದ ವಾಯ್ವಾದಿ ಇತರ ಭೂತಗಳ ಆವಿರ್ಭಾವವಾದ ಮೇಲೆ ಈ ವಿಷಯವನ್ನು ವಿವರವಾಗಿ ತಿಳಿಯಬೇಕೆನ್ನುವವರು ಪಂಚದಶಿಯ ಪಂಚಭೂತ ವಿವೇಕವನ್ನು ನೋಡುವುದು.)

೩೬. ಈ ಜಗತ್ತಿನ ಸ್ಥಿತಿಯು, ಅನಂತವಾದ ಭಾವ (ಜನ್ಮ), ಅಭಾವ (ಮರಣ) ಗಳಿಂದಲೂ, ಸುಖದುಃಖಗಳೆಂಬ ನೂರಾರು ಅವಸ್ಥೆಗಳಿಂದಲೂ ಯಾವಾಗಲೂ ವಿಪರೀತವಾಗುತ್ತಲೇ ಇರುವುದು.

೩೭. ಯುಗಯುಗಾಂತರ ಪರಿವರ್ತನಗಳಿಂದ ಅಲ್ಲೋಲಕಲ್ಲೋಲವಾಗಿ, ವಾಸನಾ ಶೃಂಖಲೆಗಳಿಂದ ಭದ್ರವಾಗಿ ಕಟ್ಟಿಸಿಕೊಂಡು, (ದುಃಖಗಳೆಂಬ) ದೊಡ್ಡ ದೊಡ್ಡ ಸಿಡಿಲುಗಳ ಬೀಳುವಿಕೆಯಿಂದ ಧ್ವಂಸವಾಗಿದ್ದರೂ ಅಜ್ಞರ ಧೈರ್ಯವು ಶಿಥಿಲವಾಗುವುದಿಲ್ಲವಲ್ಲ!

೩೮. ನೂರಾರು ಸಲ ಸೋತಿದ್ದರೂ ಕೂಡ ಹಿಂತೆಗೆಯದೆ ದಾನವರು ಒಂದೇಸಮನಾಗಿ ಉಪ್ರದವ ಮಾಡುತ್ತಿರುವರು. ಆ ಉಪದ್ರವವನ್ನೆಲ್ಲ ತಡೆದುಕೊಂಡು ಇಂದ್ರನು, ಒಂದು ಜನ್ಮಮಾತ್ರವಿರುವ ತನ್ನ ಪದವಿಯನ್ನು (ಬಿಡದೆ) ವಹಿಸಿಕೊಂಡಿರುವುದು. (ಭೋಗ ವಾಸನೆಯ ಬಲದಿಂದಲೇ !)

ವಿಶತ್ಯವಿರತಂ ಭೂತಸರ್ಗಪಾಂಸುಪರಂಪರಾ |
ನಿತ್ಯಂ ನಿಯತಿವಾತ್ಯೇಯಂ ಕಾಲವ್ಯಾಲಗಲಾಂತರಂ || ೩೯ ||

ಪದಾರ್ಥಾಂಭಾಂಸಿ ಸರ್ವಾಣಿ ಫಲಫೇನಾನಿ ಸರ್ವತಃ |
ಪತಂತ್ಯವಿರತಾಪಾತಮಭಾವವಡವಾಮುಖೇ || ೪೦ ||

ಸ್ಫುರಂತ್ಯಾಕಸ್ಮಿಕೋದ್ಭೂತಾ ವಿಚಿತ್ರದ್ರವ್ಯ ಶಕ್ತಯಃ |
ಸ್ವಭಾವಮಾತ್ರಸಂಪನ್ನಾಃ ಸ್ಪಂದಶ್ರಿಯ ಇವಾಂಭಸಃ || ೪೧ ||

ಭೂತಮೌಕ್ತಿಕಸಂಪೂರ್ಣಾಬೃಹತಃ ಸುಬಹೂನಪಿ |
ಜಗತ್ಕಲಭಕಾನತ್ತಿ ಕೃತಾಂತೋದ್ರಿಕ್ತಕೇಸರೀ || ೪೨ ||

ಕುಲಶೈಲಫಲಾ ಮೇಘಪಕ್ಷಪುಂಜಾಃ ಫಲಾನ್ಯುಜಃ |
ಜಾಯಂತೇಜ ಮ್ರಿಯಂತೇ ಚ ಧ್ರಿಯಂತೇ ಚ ಜಗತ್ಖಗಾಃ || ೪೩ ||

---

೩೯. ಪ್ರಾಣಿ ಸೃಷ್ಟಿ ಪರಂಪರೆಯೆಂಬ ಧೂಳಿಯ ಪಟಲವು ನಿಯತಿಯೆಂಬ ಬಿರುಗಾಳಿಗೆ ಸಿಕ್ಕಿ ಯಾವಾಗಲೂ ಕಾಲನೆಂಬ ಭಯಂಕರ ಸರ್ಪದ ದವಡೆಯನ್ನು ಪ್ರವೇಶಿಸುತ್ತಲೇ ಇರುವುದು.

೪೦. ಅಭಾವವೆಂಬ ಬಡಬಾಗ್ನಿ ಮುಖದಲ್ಲಿ ಪದಾರ್ಥಗಳೆಂಬ ನೀರುಗಳು (ಅವುಗಳಿಂದ ಉಂಟಾಗುವ) ಸುಖದುಃಖಗಳೆಂಬ ಫಲರೂಪವಾದ ನೊರೆಗಳೊಡನೆ, ಸುತ್ತಲಿಂದ ಬಂದು ಎಡಬಿಡದೆ ಧುಮುಕುತ್ತಿರುವುವು.

೪೧. ನೀರಿನಿಂದ ಮೇಲಕ್ಕೆ ಚಿಮ್ಮುವ ಹನಿಗಳಂತೆ, ಸ್ವಭಾವ ಮಾತ್ರದಿಂದ ಇರುವವುಗಳಾಗಿ, ಚಿತ್ರ ವಿಚಿತ್ರವಾದ ದ್ರವ್ಯ ಶಕ್ತಿಗಳೆಲ್ಲವೂ ಆಕಸ್ಮಿಕವಾಗಿ ತೋರಿ (ಕೂಡಲೇ ಅಣಗುತ್ತ) ಇರುವುವು.

೪೨. ಕೃತಾಂತನೆಂಬ ರೇಗಿದ ಸಿಂಹವು ಪ್ರಾಣಿಗಳೆಂಬ ದೊಡ್ಡ ಮುತ್ತುಗಳನ್ನು ಬೇಕಾದ ಹಾಗೆ ಧರಿಸಿರುವ ಜಗತ್ತುಗಳೆಂಬ ಆನೆಯ ಮರಿಗಳನ್ನು [ಹೊಡೆದು] ತಿನ್ನುತ್ತಿರುವುದು.

೪೩. ಮೇಘಗಳೆಂಬ ರೆಕ್ಕೆಗಳೂ ಗರಿಗಳೂ ಉಳ್ಳ ಕುಲಶೈಲಗಳಲ್ಲಿ ಬಿಟ್ಟ

ಚಿದ್ಭಿತ್ತೌ ಸ್ಪಂದಶುಭ್ರಾಯಾಂ ರಂಗೈಃ ಪಂಚಭಿರಿಂದ್ರಿಯೈಃ ।
ಉನ್ಮೀಲಯತಿ ಸಂಸಾರ ಚಿತ್ರಾಣಿ ವಿಧಿಚಿತ್ರಕೃತ್ ॥ ೪೪ ॥

ಅಜಸ್ರಗತ್ವರೀಂ ಸರ್ವಪರಿವರ್ತವಿಧಾಯಿನೀಂ ।
ನಿಮೇಷಶತಭಾಗಾಂಗೀಮಸದ್ದುಃಸಾಧಿತಾಂಕುರಾಂ ॥ ೪೫ ॥

ಸೂಕ್ಷ್ಮಾಂ ಕಾಲಸ್ಯ ಕಲನಾಂ ಸ್ವಸಮುತ್ಥಾನಕಾರಿಣೀಂ ।
ಧ್ಯಾನೇನೈವಾನ್ವವೇಕ್ಷ್ಯೈತಾಃ ಸ್ಥಿತಾಃ ಸ್ಥಾವರಜಾತಯಃ ॥ ೪೬ ॥

ರುವ ಹಣ್ಣುಗಳನ್ನು ಹುಡುಕಿಕೊಂಡು ತಿನ್ನುವವು. ಜಗತ್ತುಗಳೆಂಬ ಹಕ್ಕಿಗಳು ಹುಟ್ಟುತ್ತಿವೆ, ಬದುಕಿವೆ, ಸಾಯುತ್ತಿವೆ.

(ಅತ್ರ ಕುಲಾಚಲನಾಂ ಮೂಲ ಮಧ್ಯಾಗ್ರಭಾಗಾನಾಂ ನಾಗಮರ್ತ್ಯ ದೇವೈಃ ಉಪಭೋಗ್ಯತ್ವಾತ್ ಫಲತ್ವೋತ್ಪ್ರೇಕ್ಷಾ ಮೇಘಾನಾಂಚ ದಕ್ಷಿಣಾಯನ ಮಾರ್ಗ ಪರ್ವಸು ಧೂಮತ್ವೇನ ಅಭ್ರಮೇಘತ್ವಾದಿನಾಚ ಊರ್ಧ್ವಾಧೋಗತಿ ನಿರ್ವಾಹಕತ್ವಾತ್ ಪಕ್ಷತ್ವೋತ್ಪ್ರೇಕ್ಷಾ ಬೋಧ್ಯಾ. (ತಾ. ಪ್ರ.)

೪೪. ವಿಧಿಯೆಂಬ ಚಿತ್ರಕಾರನು ಸ್ಪಂದವೆಂಬ ಸುಣ್ಣವನ್ನು ಬೊಳಿದು ಬೆಳ್ಳಗೆ ಮಾಡಿರುವ ಚಿತ್ತೆಂಬ ಭಿತ್ತಿಯಲ್ಲಿ ಇಂದ್ರಿಯಗಳೆಂಬ ಐದು ರಂಗುಗಳಿಂದ ಸಂಸಾರಗಳೆಂಬ ಚಿತ್ರಗಳನ್ನು ರಚಿಸುವನು.

(ದೃಷ್ಟಿ ಮಾತ್ರೇಣ ಸೃಜತೀತಿ ವಿಧಿರ್ದ್ರಷ್ಟಾ ಸ ಏವ ಚಿತ್ರಕೃತ್)

೪೫-೬. ಯಾವಾಗಲೂ ಓಡುತ್ತ, ಎಲ್ಲವನ್ನೂ ಗಳಿಗೆ ಗಳಿಗೆಗೂ ಬದಲಾಯಿಸುತ್ತ, ಒಂದು ನಿಮಿಷದಲ್ಲಿ ನೂರರಲ್ಲಿ ಒಂದು ಪಾಲಿನಷ್ಟು ಮಾತ್ರವಾಗಿದ್ದರೂ ಸಾಧಿಸುವುದಕ್ಕೆ ಆಗದಂತಹ ಅಸತ್ತನ್ನು ಸೃಷ್ಟಿಸಿ ತೋರಿಸುವ, ಸೂಕ್ಷ್ಮವಾದ ಕಾಲ ಭಾಗವು ತಮ್ಮನ್ನೆಲ್ಲ ಸೃಷ್ಟಿಸುತ್ತಿರುವುದನ್ನು ಸ್ಥಾವರ ಜಾತಿಗಳೆಲ್ಲವೂ (ಸ್ಥೂಲವಾಗಿ ಕಾಣಲಾರದೆ) ಸೂಕ್ಷ್ಮವಾಗಿ (ಧ್ಯಾನದಿಂದ)ಕಾಣುತ್ತಿರುವುವು.

ರಾಗದ್ವೇಷಸಮುತ್ಥೇನ ಭಾವಾಭಾವಮಯೇನ ಚ ।
ಜರಾಮರಣರೋಗೇಣ ಜೀರ್ಣಾ ಜಂಗಮಜಾತಯಃ ॥ ೪೭ ॥

ಸುದುಷ್ಕೃತೋತ್ತಮಧ್ಯಾನಚಾರಿಣ್ಯೋ ಧರಣೀತಲೇ ।
ನಿಯತ್ಯಾ ನಿಯತಂ ಕಾಲಂ ಪೀಡ್ಯಂತೆ ಕೀಟಪಂಕ್ತಯಃ ॥ ೪೮ ॥

ಕ್ಷಣೇನಾದೃಶ್ಯ ಏವೇದಂ ನಿಗಿರತ್ಯಖಿಲಂ ಸುಖೀ ।
ಸುದುರ್ಲಕ್ಷ್ಯಬಿಲಃ ಕಾಲವ್ಯಾಲೋ ವಿಪುಲಭೋಗವಾನ್ ॥ ೪೯ ॥

ಕಾಲೇನ ಕಿಂಚಿದಾಲಕ್ಷ್ಯ ಸ್ವಶರೀರಾಕುಲೀಕೃತಾಃ ॥ ೫೦ ॥

ಶೀತವಾತಾತಪಪ್ರೌಢಾಃ ಪ್ರೋಲ್ಲಸತ್ಪುಷ್ಪದೀಪ್ತಯಃ ।
ಫಲಪ್ರದಾಶ್ಚರಂತೀಹ ಶೀಲಿನಃ ಶ್ವಭ್ರವಿಗ್ರಹಾಃ ॥ ೫೧ ॥

---

೪೭. ಜಂಗಮಗಳೆಲ್ಲವೂ ತಮ್ಮ ತಮ್ಮ ರಾಗದ್ವೇಷಗಳಿಂದಲೇ ಹುಟ್ಟಿ ಬರುವ ಜನ್ಮ ಮರಣಗಳಿಂದಲೂ ಜರಾ ರೋಗಗಳಿಂದಲೂ ಜೀರ್ಣವಾಗಿರುವುವು.

೪೮. ಇತರರಿಂದ ಮಾಡಲು ಆಗದ ಧ್ಯಾನಾದಿಗಳನ್ನು ಮಾಡಿದವರಂತೆ, ಕೀಟ ಪಂಕ್ತಿಗಳು ತಮ್ಮ ನಿಯತಿಯನ್ನು ಮೀರದೆ, ನಿಯತವಾದಷ್ಟು ಕಾಲ ಭೂಮಿಯಲ್ಲಿ ಸಂಚರಿಸಿಕೊಂಡಿರುವುವು.

೪೯. ಎಷ್ಟು ಹುಡುಕಿದರೂ ಸಿಕ್ಕದ ಒಂದು ಬಿಲದಲ್ಲಿ ಸೇರಿಕೊಂಡು, ಸುಖವಾಗಿ ವಿಫಲ ಭೋಗವುಳ್ಳ ಕಾಲನೆಂಬ ಭಯಂಕರನಾದ ಸರ್ಪವು ಅದೃಶ್ಯನಾಗಿಯೇ ಇದ್ದುಕೊಂಡು ಒಂದೇಕ್ಷಣದಲ್ಲಿಯೇ ಎಲ್ಲವನ್ನೂ ನುಂಗಿಬಿಡುವನು.

(ಭೋಗ–ಹೆಡೆ, ಸೌಖ್ಯಸಾಧನ.)

೫೦–೧. ಆ ಕಾಲನ ಮಹಿಮೆಯಿಂದಲೇ ಈ ಸ್ಥಾವರಗಳು ತಮ್ಮ ಅರ್ಧ ದೇಹವನ್ನು ಭೂಮಿಯಲ್ಲಿ ಹೂತುಕೊಂಡು (ದೇವಮಾನುಷ ಸರ್ಪಾದಿಗಳಿಂದ) ತಮ್ಮ ದೇಹವು ವ್ಯಾಕುಲಪಡುತ್ತಿದ್ದರೂ ವ್ರತಶೀಲರಂತೆ, ಶೀತ, ವಾತ, ಆತಪಗಳನ್ನು ಸಹಿಸಿಕೊಂಡು, ಪುಷ್ಪಗಳನ್ನು ಮೆರೆಯುತ್ತ, ಕಾಲಕಾಲಕ್ಕೆ ಫಲಗಳನ್ನು ಬಿಡುತ್ತ, ಬದುಕಿರುವುವು.

ಪಯಃ ಪಟಲವಿಶ್ರಾಂತತ್ರೈಲೋಕ್ಯಾಂಭೋಜಕೋಟರೇ ।
ಕರೋತಿ ಘುಂಘುಮಂ ಭೂರಿ ಭೂತಭ್ರಮರಪೇಟಿಕಾ ॥ ೫೨ ॥

ಬ್ರಹ್ಮಾಂಡಭೈಕ್ಷ್ಯಭಾಂಡೇಯಂ ಕಾಲೀ ಭಗವತೀ ಕ್ರಿಯಾ
ಸ್ವಯಂ ದತ್ವೈವ ದತ್ವೈವ ಭೂತಭಿಕ್ಷಾಂ ಜಿಘೃಕ್ಷತಿ ॥ ೫೩ ॥

ತಿಮಿರಾಳೀಕಕಬರೀ ಇಂದ್ವರ್ಕಚಪಲೇಕ್ಷಣಾ ।
ಬ್ರಹ್ಮೋಪೇಂದ್ರಮಹೇಂದ್ರಾದಿಧರಾಗಿರಿವರಾದಿಕಾ ॥ ೫೪ ॥

---

೫೨. ನೀರಿನ ಮಧ್ಯದಲ್ಲಿ ನಿಂತಿರುವ ತ್ರೈಲೋಕ್ಯವೆಂಬ ಪದ್ಮದ ನಡುವೆ ಪ್ರಾಣಿಗಳೆಂಬ ಭ್ರಮರಗಳ ಪೆಟ್ಟಿಗೆಯೊಂದು ಬೇಕಾದ ಹಾಗೆ ಘುಂ ಘುಂ ಎಂದು ಕೂಗುತ್ತಿರುವುದು.

(ಸೃಷ್ಟಿಯು ಆದುದು ಆಪದಲ್ಲಿ. ಮೊದಲು ಪರಬ್ರಹ್ಮನು ನೀರುಗಳನ್ನು ಸೃಜಿಸಿ ಅವುಗಳಲ್ಲಿ ವೀರ್ಯವನ್ನು ಇಟ್ಟನು. ಅದೇ ಬ್ರಹ್ಮಾಂಡ.)

೫೩. (ಕಾಲನ ಹೆಂಡತಿಯಾದ) ಭಗವತೀ ಕಾಲೀದೇವಿಯು, (ನಿಯತವಾದ ಫಲವನ್ನು ಕೊಡುವ) ಕ್ರಿಯಾಸ್ವರೂಪಳಾಗಿ, ಬ್ರಹ್ಮಾಂಡವೆಂಬ ಭಿಕ್ಷಾಪಾತ್ರೆಯನ್ನು ಹಿಡಿದಿರುವಳು. ಅದರಿಂದ ಭೂತ ಜಾತ (ಹುಟ್ಟುತ್ತಿರುವ ಪ್ರಾಣಿಗಳ ಗುಂಪು) ಎಂಬ ಭಿಕ್ಷೆಯನ್ನು ಗಂಡನಿಗೂ ಕೊಡುತ್ತ ತಾನೂ ತೆಗೆದುಕೊಳ್ಳುತ್ತಿರುವಳು.

೫೪. ಕತ್ತಲು ಎಂಬ ತುರುಬನ್ನಿಟ್ಟು, ಚಂದ್ರ ಸೂರ್ಯರೆಂಬ ಚಪಲ ನೇತ್ರಗಳುಳ್ಳವಳಾಗಿ, (ತನ್ನ ಚೇತನ ಸ್ವಭಾವವದಿಂದ) ಬ್ರಹ್ಮ, ಉಪೇಂದ್ರ, ಮಹೇಂದ್ರಾದಿಗಳನ್ನು (ತನ್ನ ಜಡ ಸ್ವಭಾವದಿಂದ) ಧರಣೀಪರ್ವತಾದಿಗಳನ್ನೂ ಮಾಡಿತೋರಿಸುವವಳಾಗಿ),

ಬ್ರಹ್ಮತತ್ತ್ವತ್ವಕಪಿಟಕಾ ಲಂಬಮಾನಪಯೋಧರಾ ।
ಚಿಚ್ಛಕ್ತಿಮಾತೃಕಾ ಸ್ಥೂಲಾ ತರಲಾ ಘನಚಾಪಲಾ ॥ ೫೫ ॥

ತಾರಕಾಜಾಲದಶನಾ ಸಂಧ್ಯಾರುಣತರಾಧರಾ ।
ಸಮಸ್ತಪದ್ಮಿನೀಹಸ್ತಾ ಶತಕ್ರತುಪುರಾನನಾ ॥ ೫೬ ॥

ಸಪ್ತಾಬ್ಧಿಮುಕ್ತಾಲತಿಕಾ ನೀಲಾಂಬರಪರಿವೃತಾ ।
ಜಂಬೂದ್ವೀಪಮಹಾನಾಭಿರ್ವನಶ್ರೀರೋಮರಾಜಿಕಾ ॥ ೫೭ ॥

ಭೂತ್ವಾಭೂತ್ವಾ ವಿನಶ್ಯಂತೀ ತ್ರಿಲೋಕೀವೃದ್ಧಕಾಮಿನೀ ।
ಅಸಕೃಜ್ಜಾಯತೇ ನಷ್ಟಾ ಭೂರಿವಿಭ್ರಮಕಾರಿಣೀ ॥ ೫೮ ॥

ಮಗ್ನಮನ್ಯೈರಥೋನ್ಮಗ್ನಂ ಭೀಮೇ ಕಾಲಮಹಾರ್ಣವೇ ।
ಪ್ರತಿಕಲ್ಪಕ್ಷಣಂ ಕ್ಷೀಣೈರ್ಬ್ರಹ್ಮಾಂಡಸ್ಫುಟಬುದ್ಬುದೈಃ ॥ ೫೯ ॥

೫೫–೫೮. ಬ್ರಹ್ಮತತ್ತ್ವವೆಂಬ ಕುರುವನ್ನು ಲೇಪಬಂಧನಗಳನ್ನು ಮುಚ್ಚಿಕೊಂಡು, ಜೋಲುತ್ತಿರುವ ಸ್ತನಗಳುಳ್ಳವಳಾಗಿ, ಸ್ಥೂಲಳೂ, ಚಪಲಳೂ, ಚಂಚಲಳೂ ಚಿಚ್ಛಕ್ತಿಯಿಂದ ಹುಟ್ಟಿದವಳು ಆದ, ನಕ್ಷತ್ರಗಳೆಂಬ ಹಲ್ಲುಗಳೂ, ಸಂಜೆಗೆಂಪಿಗಿಂತ ಕೆಂಪಾದ ತುಟಿಗಳೂ, (ಮರೆಯುತ್ತಿರಲು) ಎಲ್ಲ ಕೈಗಳೂ ಕಮಲದ ಬಳ್ಳಿಗಳಂತೆ ಕಾಣುತ್ತಿರಲು ಸ್ವರ್ಗವೆಂಬ ಮುಖವೂ, ಸಪ್ತಸಮುದ್ರಗಳೆಂಬ ಮುಕ್ತಾಹಾರಗಳೂ, ನೀಲವಾದ ಆಕಾಶವೆಂಬ ಸೀರೆಯೂ, ಜಂಬೂದ್ವೀಪವೆಂಬ ಮಹಾನಾಭಿಯೂ, ಅರಣ್ಯಪಂಕ್ತಿಗಳೆಂಬ ರೋಮರಾಜಿಗಳೂ, ಉಳ್ಳ ತ್ರೈಲೋಕ್ಯವೆಂಬ ಮುದುಕಿಯು ಹುಟ್ಟಿ ಹುಟ್ಟಿ ಸಾಯುತ್ತಿರುವಳು. ಬಹುರೀತಿಯಾದ ಭ್ರಾಂತಿಗಳಿಗೆ ಕಾರಣಳಾದ ಈ ಮುದುಕಿಯು ಎಷ್ಟೋಸಲ ಸತ್ತುಹೋಗಿದ್ದರೂ ಮತ್ತೆ ಮತ್ತೆ ಹುಟ್ಟುವಳು.

೫೯. ಭಯಂಕರವಾದ ಕಾಲವೆಂಬ ಮಹಾಸಮುದ್ರದಲ್ಲಿ ಕಲ್ಪವೆಂಬ ಪ್ರತಿಯೊಂದು ಕ್ಷಣದಲ್ಲಿಯೂ ಬ್ರಹ್ಮಾಂಡಗಳೆಂಬ ಗುಳ್ಳೆಗಳು ಎಷ್ಟೋ ಕರಗಿಹೋದುವು: ಎಷ್ಟೋ ಮುಳುಗಿಹೋದುವು: ಎಷ್ಟೋ ತೇಲಿಹೋದುವು.

ಕಾಲೇಽಗಾಧರಸಸ್ಯಂದೇ ಸ್ಥಿತ್ವಾಸ್ಥಿತ್ವಾ ಪುನಃಪುನಃ ।
ಕಲ್ಪಮಾತ್ರನಿಮೇಷೇಣೋಡ್ಡೀನಾಃ ಕಾರಣಸಾರಸಾಃ ॥ ೬೦ ॥

ಉತ್ಪತ್ಯೋತ್ಪತ್ಯ ನಾಶಿನ್ಯಃ ಸಂತಪ್ತಾಃ ಸೃಷ್ಟಿವಿದ್ಯುತಃ ।
ಕಾಲಮೇಘೇ ಸ್ಫುರಂತ್ಯೇತಾಶ್ಚಿತ್ಪ್ರಕಾಶವನೋದ್ಯಮಾಃ ॥ ೬೧ ॥

ಪ್ರಪತದ್ಭೂತವಿಹಗಾಃ ಪತಂತ್ಯವಿರತಭ್ರಮಾಃ ।
ಕಾಲತಾಲಾತ್ಕಿಲೋತ್ತಾಲಾದ್ಬ್ರಹ್ಮಾಂಡಫಲಪಾಲಯಃ ॥ ೬೨ ॥

ಉನ್ಮೇಷಕೃತವೈರಿಂಚಸೃಷ್ಟಯೋ ದೇವನಾಯಕಾಃ ।
ನಿಮೇಷಕೃತ ಸಂಹಾರಾಃ ಸಂತಿ ಕೇಚನ ಕುತ್ರಚಿತ್ ॥ ೬೩ ॥

ನಿಮೇಷೋನ್ಮೇಷಸಂಕ್ಷೀಣಕಲ್ಪಜಾಲಾಃ ಸಹಸ್ರಶಃ ।
ರುದ್ರಾಃ ಕೇಚನ ವಿದ್ಯಂತೇ ತಸ್ಮಿಂಶ್ಚಿತ್ಪರಮೇ ಪುನಃ ॥ ೬೪ ॥

---

೬೦. ಕಾಲವೆಂಬ ಅಗಾಧವಾದ ಪ್ರವಾಹದಲ್ಲಿ ಮತ್ತೆ ಮತ್ತೆ ಬಂದು ಕುಳಿತುಕೊಳ್ಳುವ ಕಾರಣರೆಂಬ ಸಾರಸಗಳು ಕಲ್ಪವೆಂಬ ನಿಮಿಷಕ್ಕೊಂದು ಸಲ ಹಾರಿ ಹೋಗುವುವು. (ಕಾರಣ-ಸಮಸ್ತ ಸೃಷ್ಟಿಗೂ ಕಾರಣರಾದ ಹಿರಣ್ಯಗರ್ಭರು.)

೬೧. ಚಿತ್ಪ್ರಕಾಶವೆಂಬ ಬೆಳಕು ಚೆಲ್ಲುವ ಸೃಷ್ಟಿ ಎಂಬ ಮಿಂಚುಗಳು, ಕಾಲವೆಂಬ ಮಹಾಮೇಘದಲ್ಲಿ ಹುಟ್ಟಿ ಹುಟ್ಟಿ ಅಡಗುತ್ತಿರುವುವು.

೬೨. ಪ್ರಾಣಿಸಮೂಹಗಳೆಂಬ ಹಕ್ಕಿಗಳನ್ನು ಕೆಡಹುತ್ತ, ಕಾಲವೆಂಬ ಎತ್ತರವಾದ ಕಾಲವೃಕ್ಷದಿಂದ, ಬ್ರಹ್ಮಾಂಡವೆಂಬ ಹಣ್ಣಿನ ಪಾಲುಗಳು ಸಿಡಿದು, ಸುತ್ತು ಸುತ್ತುತ್ತ ಕೆಳಕ್ಕೆ ಬೀಳುತ್ತಿರುವುವು.

೬೩. ರೆಪ್ಪೆ ಬಿಡುವುದರೊಳಗಾಗಿ ಬ್ರಹ್ಮಾಂಡಗಳನ್ನು ಸೃಷ್ಟಿಮಾಡಿ, ರೆಪ್ಪೆ ಮುಚ್ಚುವುದರೊಳಗಾಗಿ ಉಪಸಂಹಾರಮಾಡುವ ದೇವನಾಯಕರು ಎಷ್ಟೋ ಜನ ಅಲ್ಲಲ್ಲಿರುವರು.

೬೪. ಆ ಪರಮಚಿತ್ತಿನಲ್ಲಿ ಕಣ್ಣುಮುಚ್ಚಿಬಿಡುವುದರೊಳಗಾಗಿ ಎಷ್ಟೋ ಕಲ್ಪ ಸಹಸ್ರಗಳನ್ನು ನುಂಗಿಬಿಡುವ ರುದ್ರರು ಎಷ್ಟೋ ಜನ ಇರುವರು.

ತೇಽಪಿ ಯಸ್ಯ ನಿಮೇಷೇಣ ಭವಂತಿ ನಭವಂತಿ ಚ |
ತಾದೃಶೋಽಪ್ಯಸ್ತಿ ದೇವೇಶೋ ಹ್ಯನಂತೇಯಂ ಕ್ರಿಯಾಸ್ಥಿತಿಃ || ೬೫ ||

ಅನಂತಸಂಕಲ್ಪಮಯೇ ಶೂನ್ಯೇ ಚ ಬ್ರಹ್ಮಣಃ ಪದೇ |
ಸ ಸಂಭವತಿ ಕಾ ನಾಮ ಶಕ್ತಯಶ್ಚಿತ್ರಪೂರಕಾಃ || ೬೬ ||

ಏವಮಕ್ಷೀಣಸಂಕಲ್ಪಲಬ್ಧಾರ್ಥಭರಭಾಸುರಾ |
ಜಾಗತೀ ಕಲ್ಪನಾ ಯೇಯಂ ತದಜ್ಞಾನವಿಜೃಂಭಿತಂ || ೬೭ ||

---

೬೫. ಅಂತಹ ರುದ್ರರನ್ನೂ ಒಂದೇ ರೆಪ್ಪೆ ಹೊಡೆಯುವುದರೊಳಗಾಗಿ ಭವಂತಿ. ನಭವಂತಿ, ಮಾಡಬಲ್ಲಂಥ ದೇವನಾಯಕರು ಎಷ್ಟೋ ಜನರಿರುವರು. ಈ ಕ್ರಿಯಾಸ್ಥಿತಿಯು ಹೀಗೆ ಅನಂತವಾಗಿರುವುದು.

೬೬. ಅನಂತ ಸಂಕಲ್ಪಮಯವಾಗಿರುವ ಬ್ರಹ್ಮಪದದಲ್ಲಿ ಚಿತ್ರವಿಚಿತ್ರವಾದ ಶಕ್ತಿಗಳು ಎಂಥೆಂಥವು ತಾನೇ ಇಲ್ಲ!

೬೭. ಹೀಗೆ, ವರ್ಧಿಸುತ್ತಿರುವ ಸಂಕಲ್ಪಗಳಿಂದ ದೊರಕುವ ಬೆಳವಣಿಗೆಯಿಂದ ವಿರಾಜಿಸುವ ಜಗತ್ತಿನ ಕಲ್ಪನೆಯು ಯಾವುದುಂಟೋ ಅದೆಲ್ಲವೂ ಅಜ್ಞಾನದ ವಿಜೃಂಭಣವೇ!

ಯಾಃ ಸಂಪದೋ ಯದುತ ಸಂತತಮಾಪದಶ್ಚ
ಯದ್ಬಾಲ್ಯಯೌವನಜರಾಮರಣೋಪತಾಪಾಃ ।
ಯನ್ಮಜ್ಜನಂ ಚ ಸುಖದುಃಖಪರಂಪರಾಭಿ
ರಜ್ಞಾನತೀವ್ರತಿಮಿರಸ್ಯ ವಿಭೂತಯಸ್ತಾಃ ॥ ೭೮ ॥

ಇತ್ಯಾರ್ಷೇ ವಾಸಿಷ್ಠರಾಮಾಯಣೇ ವಾಲ್ಮೀಕೀಯೇ ದೇವದೂತೋಕ್ತೇ ಮೋಕ್ಷೋಪಾಯೇಷು ನಿರ್ವಾಣಪ್ರಕರಣೇ "ಅಜ್ಞಾನಮಾಹಾತ್ಮ್ಯಂ" ನಾಮ ಸಪ್ತಮಃ ಸರ್ಗಃ

---

೭೮. ಸಂಪತ್ತು ಎನ್ನುವವು ಯಾವವುಂಟೋ, ಆಪತ್ತು ಎನ್ನುವವು ಯಾವವುಂಟೋ, ಬಾಲ್ಯ, ಯೌವನ, ಜರಾ, ಮರಣಗಳೆಂಬ ಸಂತಾಪ (ಕಾರಣ) ಗಳು ಯಾವವುಂಟೋ, ಸುಖದುಃಖ ಪರಂಪರಗಳಿಗೆ ಸಿಕ್ಕಿ ಮುಳುಗಿಹೋಗುವುದು ಯಾವುದುಂಟೋ, ಅವೆಲ್ಲವೂ ಅಜ್ಞಾನವೆಂಬ ತೀವ್ರತಮಸ್ಸಿನವಿಭೂತಿಗಳೇ !

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ ನಿರ್ವಾಣಪ್ರಕರಣದ ಪೂರ್ವಾರ್ಧದಲ್ಲಿ "ಅಜ್ಞಾನಮಾಹಾತ್ಮ್ಯ" ಎಂಬ ಏಳನೆಯ ಸರ್ಗವು.

ಅಷ್ಟಮಃ ಸರ್ಗಃ

ಶ್ರೀವಸಿಷ್ಠ ಉವಾಚ :—

ಸಂಸಾರವನಖಂಡೇಽಸ್ಮಿಂಶ್ಚಿತ್ತಪರ್ವತತಟೇ ಸ್ಥಿತಾ |
ಕೇದೃಶೀ ಸೃಷ್ಟ್ಯವಿದ್ಯಾಖ್ಯಾ ಲತಾ ವಿಕಸಿತಾ ಕದಾ ‖ ೧ ‖

ಬೃಹತ್ಪರ್ವತಪರ್ವಾಢ್ಯಾ ಬ್ರಹ್ಮಾಂಡತ್ವಕ್ಸಮಾವೃತಾ |
ದೇಹಯಷ್ಟಿರಿಯಂ ಯಸ್ಯಾಸ್ತ್ರಿಲೋಕೀಲೋಕಕಾಸಿನೀ ‖ ೨ ‖

ಸುಖಂ ದುಃಖಂ ಭವೋ ಭಾವೋ ಜ್ಞಾನಮಜ್ಞಾನಮೇವ ಚ |
ಚಿತ್ರಿತಾನ್ಯುರುವೃತ್ತಾನಿ ಮೂಲಾನಿ ಚ ಫಲಾನಿ ಚ ‖ ೩ ‖

ಸುಖಾದವಿದ್ಯೋದೇತ್ಯುಚ್ಚೈಸ್ತದೇವಾಂತೇ ಪ್ರಯಚ್ಛತಿ |
ದುಃಖಾದವಿದ್ಯೋದೇತ್ಯುಚ್ಚೈಸ್ತದೇವೈಷಾ ಫಲತ್ಯಲಂ ‖ ೪ ‖

ಎಂಟನೆಯ ಸರ್ಗ

೧. ಸಂಸಾರವೆಂಬ ಅರಣ್ಯದ ಒಂದು ಮೂಲೆಯಲ್ಲಿ ಚಿತ್ತಪರ್ವತದ ಕಿಬ್ಬದಿಯಲ್ಲಿ ಸೃಷ್ಟಿಗೆ ಕಾರಣವಾದ ಅವಿದ್ಯೆಯೆಂಬ ವಿಚಿತ್ರವಾದ ಒಂದು ಲತೆಯು ಯಾವಾಗಲೋ ಬೆಳೆಯಿತು.

೨. ಆ ಲತೆಗೆ ಪರ್ವತಗಳೇ ಪರ್ವಗಳು. ಬ್ರಹ್ಮಾಂಡವೆಂಬುದೇ ಅದರ ತ್ವಕ್ಕು. ಮೂರು ಲೋಕಗಳಲ್ಲಿಯೂ ಇರುವ ಜನರ ಅಭಿವೃದ್ಧಿಯೇ ಅದರ ಹರಡುವಿಕೆಯು.

೩. ದಿನದಿನವೂ ಬೆಳೆಯುವ, ಸುಖ, ದುಃಖ, ಜನ್ಮ, ಸ್ಥಿತಿ, ಜ್ಞಾನ, ಅಜ್ಞಾನ, ಎಂಬಿವೆಲ್ಲವೂ ಅದರ ಮೂಲದಲ್ಲಿರುವ ಗೆಡ್ಡೆಗಳು. ಅದರ ಕೊನೆಯಲ್ಲಿ ಬಿಡುವ ಹಣ್ಣುಗಳು.

೪: ಸುಖದಿಂದಲೂ ಅವಿದ್ಯೆಯು ಹುಟ್ಟುವುದು: ಅದೇ ಫಲವನ್ನು ಬೇಕಾದ

ಭಾವಾದವಿದ್ಯೋದೇತ್ಯೇಷಾ ತಮೇವ ಫಲತಿ ಸ್ಫುಟಂ ।
ಭಾವಾಸತ್ತಾಮವಾಪ್ನೋತಿ ತಮೇವ ಫಲತಿ ಕ್ಷಣಂ ॥ ೫ ॥

ಅಜ್ಞಾನಾದ್ವೃದ್ಧಿಮಾಯಾತಿ ತದೇವ ಸ್ಯಾತ್ಫಲಂ ಸ್ಫುಟಂ ।
ಜ್ಞಾನೇನಾಯಾತಿ ಸಂವಿತ್ತಿಸ್ತಾಮೇವಾಂತೇ ಪ್ರಯಚ್ಛತಿ ॥ ೬ ॥

ನಾನಾವಿಧೋಲ್ಲಾಸವತೀ ವಾಸನಾ ಮೋದಶಾಲಿನೀ ।
ಘನಪ್ರವಾಲತರಲಾ ತನುರಸ್ಯಾ ವಿಜೃಂಭತೇ ॥ ೭ ॥

ಹಾಗೆ ಬಿಡುವುದು: ಹಾಗೆಯೇ ದುಃಖದಿಂದಲೂ ಅವಿದ್ಯೆಯು ಹುಟ್ಟಿ ಅದೇ ಫಲವನ್ನು ಬೇಕಾದ ಹಾಗೆ ಕಾಯುವುದು.

(ವೇದಾಂತಿಗಳು "ಮಾತ್ರಾಸ್ಪರ್ಶಾಸ್ತು ಸುಖದುಃಖದಾಃ"–ಸುಖದುಃಖ ಎರಡೂ ವಿಷಯೇಂದ್ರಿಯ ಸಂಯೋಗಜನ್ಯಗಳು–ಇಂದ್ರಿಯಗಳ ರಾಗದ್ವೇಷಗಳೇ ಈ ಸುಖದುಃಖ ಕಾರಣಗಳು. ರಾಗದ್ವೇಷಗಳೇ ಅವಿದ್ಯಾಮೂಲ, ಅವಿದ್ಯಾಫಲ ಎನ್ನುವರು.)

೫. ಜನ್ಮದಿಂದ ಅವಿದ್ಯೆಯು ಹುಟ್ಟುವುದು: ಮತ್ತೆ ಅದೇ ಜನ್ಮವೆಂಬ ಫಲವನ್ನೇ ಬೇಕಾದಹಾಗೆ ಕೊಡುವುದು. ಸ್ಥಿತಿಯಿಂದ ಅದು ತನ್ನ ಸ್ಥಿತಿಯನ್ನು ಪಡೆಯುವುದು. ಮತ್ತೆ ಅದೇ ಸ್ಥಿತಿಯೆಂಬ ಫಲವನ್ನೇ ಕೊಡುವುದು.

೬. ಅಜ್ಞಾನದಿಂದ ಅವಿದ್ಯೆಯು ವೃದ್ಧಿಯನ್ನು ಹೊಂದುವುದು: ಮತ್ತೆ ಅದೇ ಅಜ್ಞಾನವೆಂಬ ಫಲವನ್ನೇ ಕೊಡುವುದು. ಜ್ಞಾನದಿಂದ ಅವಿದ್ಯೆಯು ಸಂವಿತ್ತನ್ನು ಹೊಂದಿ ಸಂವಿತ್ತೆಂಬ ಫಲವನ್ನೇ ಕೊಡುವುದು.

(ಜ್ಞಾನವೆಂದರೆ ಪ್ರತ್ಯಕ್ ತತ್ವವಿಮರ್ಶವು. ಸಂವಿತ್ತೆಂದರೆ, ಉತ್ತರೋತ್ತರ ಜ್ಞಾನಭೂಮಿಕೆಗಳಿಗೆ ಕರೆದೊಯ್ಯುವ ಜ್ಞಾನಾಭಿವೃದ್ಧಿಯು.)

೭. ನಾನಾ ವಿಧವಾಗಿ ಆಡುತ್ತ, (ಜನ್ಮಾಂತರ) ವಾಸನಾ ಎಂಬ ಗಂಧವನ್ನು ಬೀರುತ್ತ, ಚಿಗುರುಗಳನ್ನು ದೊಡ್ಡದೊಡ್ಡದಾಗಿ ಬಿಡುತ್ತ ಈ ಲತೆಯು ಬೆಳೆದು ವಿಜೃಂಭಿಸುತ್ತಿರುವುದು.

ದಿವಸವ್ಯೂಹಕುಸುಮಾ ಯಾಮಿನೀ ನೀಲಷಟ್ಪದಾ ।
ಅಜಸ್ರಂ ಸ್ಪಂದಮಾನೈಷಾ ಪ್ರಪತದ್ಭೂತಪಲ್ಲವಾ ॥ ೮ ॥

ಆಗತ್ಯಾಗತ್ಯ ಪತತಿ ವಿವೇಕಕರಿಣೀಂ ಕ್ವಚಿತ್ ।
ವಿಧೂಯತೇ ಧೂತರಜಾಃ ಪ್ರಸಕ್ತಿಂ ಪುನರೇತಿ ಚ ॥ ೯ ॥

ಜಾಯಮಾನಪ್ರವಾಲಾಢ್ಯಾ ಸಂಜಾತಾಂಕುರದಂತುರಾ ।
ಸರ್ವರ್ತುಕುಸುಮೋಪೇತಾ ಸಮಗ್ರರಸಶಾಲಿನೀ ॥ ೧೦ ॥

ಜನ್ಮಪರ್ವಾಹಿನೀರಂಧ್ರಾ ವಿನಾಶಚ್ಛಿದ್ರಚಂಚುರಾ ।
ಭೋಗಾಭೋಗರಸಾಪೂರ್ಣಾ ವಿಚಾರೈಕಘುಣಕ್ಷತಾ ॥ ೧೧ ॥

---

೮. ದಿನದಿನಗಳ ಗುಂಪುಗಳೆಂಬ ಹೂವುಗಳನ್ನೂ, ರಾತ್ರಿಯೆಂಬ ದುಂಬಿಗಳನ್ನೂ ಉಳ್ಳದಾಗಿ, ಪ್ರಾಣಿಗಳೆಂಬ ಎಲೆಗಳನ್ನು ಉದುರಿಸಿಕೊಳ್ಳುತ್ತ ಮೂರು ಹೊತ್ತೂ ಈ ಲತೆಯು ಕುಣಿಯುತ್ತಿರುವುದು.

೯. ಆಗಾಗ ಎಲ್ಲಿಯೋ ಒಂದೊಂದು ಸಲ ಈ ಲತೆಯು ವಿವೇಕವೆಂಬ ಆನೆಯ ಕೈಗೆ ಸಿಕ್ಕುವುದು. ಆ ಆನೆಯು (ತನ್ನ ವಿಚಾರವೆಂಬ ಸೊಂಡಿಲಿಂದ) ಇದನ್ನು ಚೆನ್ನಾಗಿ ಅಲ್ಲಾಡಿಸಿ, ಹತ್ತಿರುವ ಧೂಳನ್ನೆಲ್ಲ ಕೆಡಹುವುದು. ಮತ್ತೆ, ಅದರ ಕೈಯಿಂದ ತಪ್ಪಿಸಿಕೊಂಡು ವಿಷಯಾಸಕ್ತಿಯಿಂದ) ಚಿಗುರಿ ಬೆಳೆಯುವುದು.

(ವಿಷಯಾ ವಿನಿವರ್ತಂತೇ ನಿರಾಹಾರಸ್ಯ ದೇಹಿನಃ ರಸವರ್ಜ್ಯಂ ಎಂಬ ಗೀತೆಯನ್ನು ಧ್ಯಾನಿಸಿ)

೧೦. ಈ ಲತೆಯು ಹುಟ್ಟುತ್ತಿರುವ (ಮಿತ್ರಪಶ್ವಾದಿಲಾಭವೆಂಬ) ಪಲ್ಲವಗಳಿಂದಲೂ, ಹುಟ್ಟಿರುವ (ಮಕ್ಕಳುಮರಿ ಮೊದಲಾದ) ಅಂಕುರಗಳಿಂದಲೂ ಶೋಭಿಸುತ್ತ, ಸರ್ವಋತುಗಳಲ್ಲಿಯೂ (ಸುಖದುಃಖಗಳೆಂಬ) ಹೂವುಗಳನ್ನು ತಾಳುತ್ತ, ಯಾವಾಗಲೂ ಹಸುರಾಗಿಯೇ ಇರುವುದು.

೧೧. ಈ ಲತೆಯ ಪರ್ವಪರ್ವಗಳಲ್ಲಿಯೂ ಜನ್ಮಗಳೆಂಬ ರಂಧ್ರಗಳು ತುಂಬಿರುವುವು. ವಿನಾಶ (ಮರಣ) ವೆಂಬ ಛಿದ್ರಗಳಿಂದ ಈ ಲತೆಯು ವ್ಯಾಕುಲವಾದ್ದು

ವಿಕಸಂತ್ಯಃ ಪ್ರತಿದಿನಂ ಚಂದ್ರಾರ್ಕಾವಲಯೋಽಭಿತಃ |
ವ್ಯೋಮ್ನಿ ವಾತವಿಲೋಲಾನಿ ಪುಷ್ಪಾಣ್ಯಸ್ಯಾಃ ಕಿಲ ಗ್ರಹಾಃ ॥ ೧೨ ॥

ಅಸ್ಯಾಃ ಪ್ರಸ್ಫುರಿತಾಕಾರಾಃ ಕೋರಕತ್ವಮುಪಾಗತಾಃ |
ಪೂರಿತಾಕಾಶ ಕೋಶೇಯಾಸ್ತಾರಕಾ ರಘುನಂದನ ॥ ೧೩ ॥

ಚಂದ್ರಾರ್ಕದಹನಾಲೋಕಾ ಯಸ್ಯಾಸ್ತತ್ಕೌಸುಮಂ ರಜಃ |
ಅನೇನೇಯಂ ಹಿ ಗೌರಾಂಗೀ ಸ್ತ್ರೀವ ಚೇತಾಂಸಿ ಕರ್ಷತಿ ॥ ೧೪ ॥

ಮನೋಮಾತಂಗವಿಧುರಾ ಸಂಕಲ್ಪಕಲಕೋಕಿಲಾ |
ಇಂದ್ರಿಯವ್ಯಾಲಸಂಬಾಧಾ ತೃಷ್ಣಾತ್ವಗುಪರಂಜಿತಾ ॥ ೧೫ ॥

ತ್ತಿರುವುದು. ಭೋಗೇಚ್ಛೆಯೆಂಬ ರಸವು ಯಾವಾಗಲೂ ಇದರಿಂದ ಸುರಿಯುತ್ತಿರುವುದು. ವಿಚಾರವೆಂಬ ಹುಳುಗಳು ಇದನ್ನು ಕೊರೆಯುತ್ತಿರುವುವು.

(ರಸಃ ಭೋಗಾನುಭವವೆಂಬ ರಾಗಮಕರಂದ ತಾ. ಪ್ರ.)

೧೨. ಚಂದ್ರ ಸೂರ್ಯ ಗ್ರಹ ಸಮೂಹಗಳೆಂಬ ಹೂವುಗಳು ದಿನದಿನವೂ ಅರಳಿ ಆಕಾಶದಲ್ಲಿ ವಾಯುವಿಗೆ ಸಿಕ್ಕಿ ಕುಣಿಯುತ್ತಿರುವುವು.

೧೩. ರಾಮ, ಈ ಲತೆಯು ಆಕಾಶವನ್ನೆಲ್ಲ ಆವರಿಸಿರುವುದು. ತೇಜಸ್ಸಿನಿಂದ ವಿರಾಜಿಸುತ್ತಿರುವ ನಕ್ಷತ್ರಗಳೆಲ್ಲವೂ ಈ ಲತೆಯಲ್ಲಿ ಮೊಗ್ಗುಗಳಾಗಿರುವುವು.

೧೪. ಈ ಲತೆಗೆ, ಚಂದ್ರ ಸೂರ್ಯಾಗ್ನಿಗಳ ತೇಜಸ್ಸು ಮೈಗೆ ಬಳಿದುಕೊಳ್ಳುವ ಕುಸುಮ ಧೂಳಿಯಂತಿರುವುದು. ಆ ಧೂಳಿಯನ್ನು ಬಳಿದುಕೊಂಡು ತನ್ನ ಮೈಯೆಲ್ಲ ಬೆಳ್ಳಗಾಗಿರಲು, ಇವಳು ಗೌರಾಂಗಿಯಾದ ಸ್ತ್ರೀಯಂತೆ, ನೋಡಿದವರ ಮನಸ್ಸುಗಳನ್ನು ಅಪಹರಿಸುತ್ತಿರುವಳು.

೧೫. ಮನಸ್ಸೆಂಬ ಆನೆಯು ಈ ಲತೆಯನ್ನು ಹಿಡಿದು ಜಗ್ಗಿಸುವುದು. ಈ ಲತೆಯಲ್ಲಿ ಸಂಕಲ್ಪವೆಂಬ ಗಂಡು ಕೋಗಿಲೆಯು ಸೇರಿಕೊಂಡಿರುವುದು. ಇಂದ್ರಿಯಗಳೆಂಬ ಮಹಾಸರ್ಪಗಳು ಇದನ್ನು ಗೋಳುಗುಟ್ಟಿಸುತ್ತಿರುವುವು : ತೃಷ್ಣೆಯೆಂಬ ಚರ್ಮವು ಇದಕ್ಕೆ ಸುತ್ತಿಕೊಂಡಿರುವುದು.

ನೀಲಾಕಾಶತಮಾಲಾಂಗಸಂಶ್ರಯೇಣೋನ್ನತಿಂ ಗತಾ ।
ರೋದಸೀಜಾನುಸುಸ್ತಂಭಾ ಭುವನೋದ್ಯಾನಭೂಷಿತಾ ॥ ೧೬ ॥

ಅಧೋಬ್ರಹ್ಮಾಂಡಖಂಡೇಷು ಸ್ವಾಲವಾಲೇನ ಜಾಲಿತಾ ।
ನಿಧೃತಾಶೇಷಜಲಧಿಜಲಕ್ಷೀರಾದಿಸೇಚನಾ ॥ ೧೭ ॥

ತ್ರಯೀವಿಲೋಲಭ್ರಮರಾ ರಮಣೀಪುಷ್ಪಪುಂಜಿಕಾ ।
ಚಿತ್ಸ್ಪಂದವಾತಚಲಿತಾ ಕ್ರಿಯಾವಿಪುಲಪತ್ರಿಕಾ ॥ ೧೮ ॥

ಕುಕರ್ಮಾಜಗರವ್ಯಾಪ್ತಾ ಸ್ವರ್ಗಶ್ರೀಪುಷ್ಪಮಂಡಪಾ ।
ಜೀವಜೀವನಸಂರಂಧ್ರಾ ನಾನಾಮೋದಮುದಪ್ರದಾ ॥ ೧೯ ॥

---

೧೬. ನೀಲಾಕಾಶವೆಂಬ ಹೊಂಗೆಯ ಮರವನ್ನು ಹಿಡಿದು ಬಹಳ ಎತ್ತರದ ವರೆಗೂ ಹೋಗಿರುವುದೂ, ಭೂಮ್ಯಾಂತರಿಕ್ಷಗಳೆಂಬ ಊರು ಸ್ತಂಭಗಳುಳ್ಳುದೂ ಆದ ಈ ಲತೆಯು ಬ್ರಹ್ಮಾಂಡವೆಂಬ ಉದ್ಯಾನಕ್ಕೆ ಭೂಷಣವಾಗಿರುವುದು.

೧೭. ಪಾದದಲ್ಲಿರುವ ಬ್ರಹ್ಮಾಂಡಖಂಡಗಳಲ್ಲಿ ಆಗಿರುವ ತನ್ನ ಪಾತಿಯಲ್ಲಿ ಧರಿಸಿರುವ ಸಮಸ್ತ ಸಮುದ್ರಗಳೂ ಸಾಗರಗಳೂ ಉಳ್ಳುದಾಗಿ ನೀರ ಕ್ಷೀರಗಳಿಂದ ಯಾವಾಗಲೂ ನೆನೆದಿರುವುದು.

೧೮. (ಕರ್ಮಕಾಂಡ ಸ್ವರೂಪವಾದ) ವೇದತ್ರಯಗಳು ಎಂಬ ಭ್ರಮರಗಳು ಅಲ್ಲಿ ಆಡುತ್ತಿರುವುವು. ಭೋಗ ಸಾಮಗ್ರಿಗಳೆಂಬ ಪುಷ್ಪಗಳು ತುಂಬಿರುವುವು. ಚಿತ್ಸ್ಪಂದವೆಂಬ ಗಾಳಿಯು ಅದನ್ನು ತೂಗುತ್ತಿರುವುದು. ಅದರ ಬುಡದಲ್ಲಿ (ಪ್ರವೃತ್ತಿಪರರಾದ ಜನರೆಂಬ) ಕೀಟಗಳು ತುಂಬಿರುವವು.

೧೯. ಶಾಸ್ತ್ರ ನಿಷಿದ್ಧ ಕ್ರಿಯಾಕಲಾಪಗಳೆಂಬ ಅಜಗರವು ಅದನ್ನು ಬಳಸಿರುವುದು. ಅದು ಸ್ವರ್ಗಲಕ್ಷ್ಮಿಯ ಪುಷ್ಪ ಮಂಟಪದಂತಿರುವುದು. ಜೀವರುಗಳು ತಮ್ಮ ಜೀವನೋಪಾಯಕ್ಕಾಗಿ ಮಾಡುವ ನಾನಾ ಕರ್ಮಗಳಿಂದ ಅದು ನಿಬಿಡವಾಗಿರುವುದು. ನಾನಾವಿಧವಾದ ವಿಷಯ ವಾಸನೆಗಳೆಂಬ ಆಮೋದಗಳಿಂದ (ಮೂಢರಿಗೆ) ಮತ್ತು ಬರುವಂತೆ ಮಾಡುವುದು.

ನಾನೋಪಶಮವೈಚಿತ್ರ್ಯನಾನಾಕುಸುಮಭಾಸಿನೀ ।
ನಾನಾಫಲಾವಲೀವ್ಯಾಪ್ತಾ ನಾನಾವರ್ಷವಿಕಾಸಿನೀ ॥ ೨೦ ॥

ನಾನಾಲವಾಲವಲಯಾ ನಾನಾವಿಹಗಧಾರಿಣೀ ।
ನಾನಾಪಂಗಪರುಷಾ ನಾನಾಭೂಧರಜಾಲಿಕಾ ॥ ೨೧ ॥

ನಾನಾಕಲಾಕುಡ್ಮಲಿನೀ ನಾನಾವನಗಣೋತ್ಥಿತಾ ।
ನಾನಾಗಿರಿತಟಾರೂಢಾ ನಾನಾದಲನಿರಂತರಾ ॥ ೨೨ ॥

ಜಾತಾ ಚ ಜಾಯಮಾನಾ ಚ ಮ್ರಿಯಮಾಣಾ ತಥಾ ಮೃತಾ ।
ಅರ್ಧಚ್ಛಿನ್ನಾ ತಥಾಚ್ಛಿನ್ನಾ ನಿತ್ಯಮುಚ್ಛೇದಿನೀ ತಥಾ ॥ ೨೩ ॥

---

೨೦. (ಹಾಗೆಯೇ ಈ ಲತೆಯು ವಿವೇಕಿಗಳಿಗೂ ಕೂಡ ಆಶ್ರಯವಾಗಿರುವದು. ಹೇಗೆಂದರೆ) ನಾನಾ ವಿಧವಾದ ಉಪಶಮ ವಿಧಾನಗಳೆಂಬ ಕುಸುಮಗಳಿಂದ ರಂಜಿಸುತ್ತಿರುವುದು. ನಾನಾ ಸತ್ಫಲಗಳಿಂದ ತುಂಬಿರುವುದು. ನಾನಾ ಕುಸುಮಗಳಿಂದ (ವಿವೇಕ ಸಂತೋಷಾದಿ) ಮಕರಂದ ವರ್ಷಗಳನ್ನು ಕರೆಯುತಿರುವುದು.

೨೧. ಈ ಬಳ್ಳಿಗೆ ಎಷ್ಟೋ ಪಾತಿಗಳಿರುವುವು. ಇದನ್ನು ಎಷ್ಟೋ ಪಕ್ಷಿಗಳು ಆಶ್ರಯಿಸಿರುವುವು. ಇದರಲ್ಲಿ ನಾನಾ ಜಾತಿಯ ಹೂಗಳು ಕಂಪು ಬೀಳುತ್ತಿರುವುವು. ನಾನಾ ವಿಧದ ಮರಗಳ ಈ ಲತೆಯು ಹಬ್ಬಿಕೊಂಡಿರುವುದು.

೨೨. ನಾನಾ (ಶುಭ) ವಿದ್ಯೆಗಳೆಂಬ ಮೊಗ್ಗುಗಳನ್ನು ಬಿಟ್ಟಿರುವುದು. ಈ ಬಳ್ಳಿಯು ವನವನದಲ್ಲಿಯೂ ಹುಟ್ಟಿರುವದು. ಎಷ್ಟೋ ಬೆಟ್ಟಗಳ ತಪ್ಪಲುಗಳಲ್ಲಿ ಬೆಳೆದಿರುವುದು. ಯಾವಾಗಲೂ ಎಷ್ಟೋ ಕವಲುಗಳಿಂದ ಕೂಡಿರುವುದು.

೨೩. ಈ ಲತೆಯು ಎಷ್ಟೋ ಕಡೆ ಹುಟ್ಟಿರುವುದು: ಹುಟ್ಟುತ್ತಿರುವುದು. ಕೆಲವು ಕಡೆ ಸತ್ತಿರುವುದು. ಇನ್ನು ಕೆಲವು ಕಡೆ ಸತ್ತಿರುವದು. ಮತ್ತೆ ಕೆಲವೆಡೆ ಕತ್ತರಿಸಿ ಹೋಗಿರುವದು: ಇನ್ನಷ್ಟು ಕಡೆ ಸರಿಯಾಗಿರುವದು: ಹಾಗೆಯೇ ಕತ್ತರಿಸುವದಕ್ಕಾಗದಂತೆಯೂ ಇರುವದು.

ಅತೀತಾ ವರ್ತಮಾನಾ ಚ ಸತ್ಯೇವಾಸತ್ಯವತ್ಸದಾ ।
ನಿತ್ಯಮತ್ಯಂತತರುಣೀ ನಿತ್ಯಂ ಶೋಷಮುಪೇಯುಷೀ ॥ ೨೪ ॥

ಮಹಾವಿಷಲತೈಷಾ ಹಿ ಸಂಸಾರವಿಷಮೂರ್ಛನಾಮ್ ।
ದದಾತಿ ರಭಸಾಶ್ಲಿಷ್ಟಾ ಪರಾಪೃಷ್ಟಾ ವಿನಶ್ಯತಿ ॥ ೨೫ ॥

ಸ್ಥಿತೇಽಂತರ್ಗಲಿತಾ ತಸ್ಯ ಅಜ್ಞೇಽಂತಃ ಸಂಸ್ಥಿತಾನ್ವಿತಾ ।
ಇತೋ ಜಲಮಿತಃ ಶೈಲಾ ಇತೋ ನಾಗಾಃ ಸುರಾ ಇತಃ ॥ ೨೬ ॥

ಇತಃ ಪೃಥ್ವೀತ್ವಮಾಯಾತಾ ತಥೇತೋದ್ಯುತಯಾ ಸ್ಥಿತಾ ।
ಇತಶ್ಚಂದ್ರಾರ್ಕತಾಂ ಪ್ರಾಪ್ತಾ ತಥೇತಸ್ತಾರಕಾಕೃತಿಃ ॥ ೨೭ ॥

---

೨೪. (ಈ ಲತೆಯು) ಜೀರ್ಣವಾಗಿರುವುದು (ಅತೀತ): ಈಗ ಇರುವುದು (ವರ್ತಮಾನ): ಯಾವಾಗಲೂ ಇದ್ದರೂ ಇಲ್ಲದಂತೆಯೇ ಇರುವುದು : ಯಾವಾಗಲೂ ತಾರುಣ್ಯ ಸಂಪತ್ತಿಯಿಂದ ಕೂಡಿರುವುದು : ಯಾವಾಗಲೂ ಒಣಗುತ್ತಲೇ ಇರುವುದು.

೨೫. ಈ ಲತೆಯು ಮಹಾವಿಷಪೂರ್ಣವಾದುದು. ಇದನ್ನು ಅವಿಚಾರಿಗಳಾಗಿ ಆಶ್ರಯಿಸಿದವರಿಗೆ ಸಂಸಾರವೆಂಬ ವಿಷಮೂರ್ಛೆಯನ್ನು ಕೊಡುವುದು. ಇದನ್ನು ವಿಮರ್ಶೆಮಾಡಿ ತಿಳಿದವರಿಗೆ ಇದು ಇಲ್ಲವಾಗುವುದು.

೨೬. ಅದನ್ನು ಕುರಿತು ವಿಚಾರಿಸುವ ಪ್ರಜ್ಞಾವಂತರಿಗೆ ಅದು ಇಲ್ಲವಾಗುವುದಾದರೂ ಅಜ್ಞಾನಿಗಳ ಹೃದಯದಲ್ಲಿಯೇ ಇರುವುದು. ಇದೇ ಬಳ್ಳಿಯೇ ಒಂದೆಡೆ ಜಲವಾಗಿ, ಒಂದೆಡೆ ಬೆಟ್ಟವಾಗಿ, ಒಂದೆಡೆ ನಾಗಗಳಾಗಿ, ಒಂದೆಡೆ ಸುರರಾಗಿ ಮೆರೆಯುವುದು.

೨೭. ಒಂದೆಡೆ (ಕಾಂತಿಹೀನವಾದ) ಪೃಥ್ವಿಯಾಗಿ ತೋರುತ್ತ, ಇನ್ನೊಂದೆಡೆ (ಕಾಂತಿಮತ್ತಾಗಿ) ತೇಜೋರೂಪದಿಂದ ಕಾಣುವುದು. ಒಂದೆಡೆ ಚಂದ್ರಸೂರ್ಯರಾಗಿಯೂ ಇನ್ನೊಂದೆಡೆ ನಕ್ಷತ್ರಗಳಾಗಿಯೂ ಕಾಣುತ್ತಿರುವುದು.

ಇತಸ್ತಮ ಇತಸ್ತೇಜ ಇತಃ ಖಮಿತಿ ಉರ್ವರಾ ।
ಇತಃ ಶಾಸ್ತ್ರಮಿತೋ ವೇದಾ ಇತೋ ದಯುವಿವರ್ಜಿತಾ ॥ ೨೮ ॥

ಕ್ವಚಿತ್ಖಗತಯೋಡ್ಡೀನಾ ಕ್ವಚಿದ್ದೇವತಯೋತ್ಥಿತಾ ।
ಕ್ವಚಿತ್ಸ್ಥಾಣುತಯಾ ರೂಢಾ ಕ್ವಚಿತ್ಪವನತಾಂ ಗತಾ ॥ ೨೯ ॥

ಕ್ವಚಿನ್ನರಕಸಂಲೀನಾ ಕ್ವಚಿತ್ಸ್ವರ್ಗವಿಲಾಸಿನೀ ।
ಕ್ವಚಿತ್ಸುರಪದಂ ಪ್ರಾಪ್ತಾ ಕ್ವಚಿತ್ಕ್ರಿಮಿತಯಾ ಸ್ಥಿತಾ ॥ ೩೦ ॥

ಕ್ವಚಿದ್ವಿಷ್ಣುಃ ಕ್ವಚಿದ್ಬ್ರಹ್ಮಾ ಕ್ವಚಿದ್ರುದ್ರಃ ಕ್ವಚಿದ್ರವಿಃ ।
ಕ್ವಚಿದಗ್ನಿಃ ಕ್ವಚಿದ್ವಾಯುಃ ಕ್ವಚಿಚ್ಚಂದ್ರಃ ಕ್ವಚಿದ್ಯಮಃ ॥ ೩೧ ॥

---

೨೮. ಒಂದೆಡೆ ತಮಸ್ಸಾಗಿ ಇನ್ನೊಂದೆಡೆ ತೇಜಸ್ಸಾಗಿ, ಒಂದೆಡೆ ಶೂನ್ಯವಾದ ಆಕಾಶವಾಗಿ, ಇನ್ನೊಂದೆಡೆ ಸಸ್ಯಪೂರ್ಣವಾದ ಭೂಮಿಯಾಗಿ, ಒಂದೆಡೆ ಶಾಸ್ತ್ರವಾಗಿ ಮತ್ತೊಂದೆಡೆ ವೇದವಾಗಿ, ಇನ್ನೂ ಒಂದೆಡೆಯಲ್ಲಿ ಎರಡೂ ಅಲ್ಲವಾಗಿ ಮೆರೆಯುವುದು.

೨೯. ಒಂದೆಡೆ ಹಕ್ಕಿಯಾಗಿ ಹಾರುವುದು. ಇನ್ನೊಂದೆಡೆ ದೇವತೆಯಾಗಿ ಪೂಜೆಗೊಳ್ಳುವುದು. ಇನ್ನೊಂದೆಡೆ ಕಂಭವಾಗಿ ನಿಂತಿದ್ದು, ಮತ್ತೊಂದೆಡೆ ಗಾಳಿಯಾಗಿ ಬೀಸುವುದು.

೩೦. ಒಂದು ಕಡೆ ನರಕವಾಗಿ ಪಾತಾಲದಲ್ಲಿ ಅಡಗಿರುವುದು: ಇನ್ನೊಂದು ಕಡೆ ಸ್ವರ್ಗವಾಗಿ ಮೇಲೆ ನಿಂತು ಆಡುತ್ತಿರುವುದು: ಒಂದುಕಡೆ ದೇವತೆಯಾಗಿದ್ದು, ಇನ್ನೊಂದು ಕಡೆ ಕ್ರಿಮಿಯಾಗಿರುವುದು

೩೧. ಒಂದೆಡೆ ವಿಷ್ಣುವಾಗಿ, ಇನ್ನೊಂದೆಡೆ ಬ್ರಹ್ಮನಾಗಿ, ಮತ್ತೊಂದೆಡೆ ರುದ್ರನಾಗಿ, ಮುಗಿಯೊಂದುಕಡೆ ಸೂರ್ಯನಾಗಿ, ಹಾಗೆಯೇ ಅಲ್ಲಿ ಅಗ್ನಿಯಾಗಿ, ಇಲ್ಲಿ ವಾಯುವಾಗಿ, ಎಲ್ಲೋ ಚಂದ್ರನಾಗಿ, ಇನ್ನೆಲ್ಲೋ ಯಮನಾಗಿರುವುದು.

ಯತ್ಕಿಂಚನಾಂಗ ಭುವನೇಷು ಮಹಾಮಹಿಮ್ನಾ
ವ್ಯಾಪ್ತಂ ಜರತ್ತೃಣಲವತ್ವಮುಪಾಗತಂ ವಾ ।
ದೃಶ್ಯಂ ಸ್ಫುರನ್ನನು ಹರಾದ್ಯಪಿ ತಾಮವಿದ್ಯಾಂ
ವಿದ್ಧಿ ಕ್ಷಯಾಯ ತದತೀತತಯಾಽಽತ್ಮಲಾಭಃ ॥ ೩೨ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ದೇವದೂತೋಕ್ತೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ "ಅವಿದ್ಯಾಲತಾವಿಲಾಸೋಪದೇಶೋ" ನಾಮ ಅಷ್ಟಮಃ ಸರ್ಗಃ

---

೩೨. ಈ ಭುವನಭುವನಗಳಲ್ಲಿ ಮಹಾಮಹಿಮ ಸಂಪನ್ನವಾಗಿ ವ್ಯಾಪಿಸಿಕೊಂಡು, ಒಣಗಿಹೋದ ಗರಿಕೆಯ ತುಂಡಿನವರೆಗೂ ತಾನೇತಾನಾಗಿರುವ ಈ ದೃಶ್ಯವೆಲ್ಲವೂ, ಅವಿದ್ಯೆಯೆಂದೇ ತಿಳಿ. ಹರಿಹರಾದಿ ರೂಪವಾಗಿದ್ದರೂ ಆ ಅವಿದ್ಯೆಯನ್ನು ತತ್ವಬೋಧದಿಂದ ಅಳಿಸಲೇಬೇಕು. ಹಾಗೆ ಅಳಿಸಿದರೆಯೇ ಆತ್ಮಲಾಭವಾಗುವುದು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ ನಿರ್ವಾಣ ಪ್ರಕರಣದ ಪೂರ್ವಾರ್ಧದಲ್ಲಿ "ಅವಿದ್ಯಾಲತಾ ವಿಲಾಸೋಪದೇಶ" ಎಂಬ ಎಂಟನೆಯ ಸರ್ಗವು.

ನವಮಃ ಸರ್ಗಃ

ಶ್ರೀರಾಮ ಉವಾಚ—

ಆಕಾರಜಾತಮುದಿತಂ ಶುದ್ಧಂ ಹರಿಹರಾದ್ಯಪಿ ।
ಅವಿದ್ಯೈವೇತ್ಯಹಂ ಶ್ರುತ್ವಾ ಬ್ರಹ್ಮಸ್ವ ಭ್ರಮುಮಿವಾಗತಃ ॥ ೧ ॥

ಶ್ರೀವಸಿಷ್ಠ ಉವಾಚ :—

ಸಂವೇದ್ಯೇನಾಪರಾಮೃಷ್ಟಂ ಶಾಂತಂ ಸರ್ವಾತ್ಮಕಂ ಚ ಯತ್ ।
ತತ್ಸಚ್ಚಿದಾಭಾಸಮಯಮಸ್ತೀಹ ಕಲನೋಜ್ಝಿತಂ ॥ ೨ ॥

ಒಂಭತ್ತನೆಯ ಸರ್ಗ

೧. ಶ್ರೀರಾಮನು ಕೇಳಿದನು:— ಆಕಾರವಂತವಾಗಿ ಹುಟ್ಟುವುದೆಲ್ಲವೂ, ಹರಿಹರಾದಿಗಳೇ ಆಗಿದ್ದರೂ ಅವೆಲ್ಲವೂ ಶುದ್ಧವಾಗಿ ಅವಿದ್ಯೆಯೇ ಎಂದು ಕೇಳಿ ನನಗೆ, ಎಲೈ ಬ್ರಹ್ಮಸ್ವರೂಪನೆ, ಭ್ರಮೆಯು ಬಂದಂತಾಗಿದೆ.

(ಹಿಂದಿನ ಶ್ಲೋಕದಲ್ಲಿ "ಹರಾದಿದೃಶ್ಯಗಳು ಕೂಡ ಅವಿದ್ಯೆಯೇ ಎಂದು ತಿಳಿ" ಎಂದು ಹೇಳಿದೆ. ಆದರೆ "ಋತಂ ಸತ್ಯಂ ಪರಂ ಬ್ರಹ್ಮ ಪುರುಷಂ ಕೃಷ್ಣಪಿಂಗಲಂ। ಊರ್ಧ್ವರೇತಂ ವಿರೂಪಾಕ್ಷಂ ವಿಶ್ವರೂಪಾಯ ವೈ ನಮಃ" "ಘೃತರೀತಿಘನೀಭೂತ ಸಚ್ಚಿದಾನಂದ ವಿಗ್ರಹ" ಮೊದಲಾದ ಶ್ರುತಿಸ್ಮೃತಿಗಳಲ್ಲಿ ಪರಬ್ರಹ್ಮತ್ವ ಸಚ್ಚಿದಾನಂದರೂಪ ಪ್ರಸಿದ್ಧಿಯಿರುವುದರಿಂದಲೂ, "ಈಶಾನಃ ಸರ್ವವಿದ್ಯಾನಾಂ । ಈಶ್ವರಃ ಸರ್ವಭೂತಾನಾಂ" ಇತ್ಯಾದಿ ಶ್ರುತಿಗಳಲ್ಲಿ ಪ್ರಸಿದ್ಧವಾದ ಸರ್ವವಿದ್ಯಾಧಿಪತ್ಯವಾಗುವುದರಿಂದಲೂ, ವಾಸುದೇವಮೂರ್ತಿಗೆ ಪುರಾಣಾದಿಗಳಲ್ಲಿ ತುರಿಯತ್ವ ಪರಬ್ರಹ್ಮತ್ವ ಮೊದಲಾದವು ಉಂಟೆಂಬ ಪ್ರಸಿದ್ಧಿಯಿರುವುದರಿಂದಲೂ ಅವಿದ್ಯಾತ್ವವು ಅಸಂಭವವು ಎಂದುಕೊಂಡು ಪ್ರಸಂಗವಶವಾಗಿ ಆ ರಹಸ್ಯವನ್ನೂ ತಿಳಿಯಬೇಕೆಂದು ರಾಮನು ಈ ಪ್ರಶ್ನೆಮಾಡಿದನು. ತಾ. ಪ್ರ.)

೨. ಶ್ರೀ ವಸಿಷ್ಠನು ಹೇಳಿದನು :—ದೃಶ್ಯರೂಪವಾಗಿ ತೋರದಿರುವ,

ಸಮುದೇತಿ ಸ್ವತಸ್ತಸ್ಮಾತ್ಕಲಾ ಕಲನರೂಪಿಣೀ ।
ಜಲಾದಾವರ್ತಲೇಖೇವ ಸ್ಫುರಜ್ಜಲತಯೋದಿತಾ ॥ ೩ ॥

ಸೂಕ್ಷ್ಮಾ ಮಧ್ಯಾ ತಥಾ ಸ್ಥೂಲಾ ಚೇತಿ ಸಾ ಕಲ್ಪ್ಯತೇ ತ್ರಿಧಾ ।
ಪಶ್ಚಾನ್ಮನಸ್ತಯಾ ತೇನ ಜ್ಞಾತ್ವೈವ ವಪುಷಾ ಪುನಃ ॥ ೪ ॥

ತಿಸೃಷ್ವೇತಾಸ್ವವಸ್ಥಾಸು ಭೇದತಃ ಕಲ್ಪ್ಯತೇ ತ್ರಿಧಾ ।
ಸತ್ತ್ವಂ ರಜಸ್ತಮ ಇತಿ ಏಷೈವ ಪ್ರಕೃತಿಃ ಸ್ಮೃತಾ ॥ ೫ ॥

ಅವಿದ್ಯಾಂ ಪ್ರಕೃತಿಂ ವಿದ್ಧಿ ಗುಣತ್ರಿತಯಧರ್ಮಿಣೀಂ ।
ಏಷೈವ ಸಂಸೃತಿರ್ಜಂತೋರಸ್ಯಾಃ ಪಾರಂ ಪರಂ ಪದಂ ॥ ೬ ॥

ಶಾಂತವೂ ಸರ್ವಾತ್ಮಕವೂ ಆದ ಯಾವುದುಂಟೋ ಅದು ಸತ್ ಚಿತ್‌ಗಳ ಪ್ರಕಾಶದಿಂದ ಕೂಡಿರುವ ಆ ಬ್ರಹ್ಮವು ಅದು ಯಾವ ಕಲ್ಪನೆಗೂ ಒಳಗಾಗದಿರುವುದು.

೩. ಜಲವು ತಾನು ಜಲವಾಗಿರುವ ಒಂದೇ ಕಾರಣದಿಂದ, ಕಾರಣಾಂತರಗಳಿಲ್ಲದೆಯೇ ಸುಳಿಯನ್ನು ಕಟ್ಟುವ ಹಾಗೆ, ಬ್ರಹ್ಮದಿಂದ, ಬೇರೆ ಕಾರಣಗಳು ಇಲ್ಲದೆಯೇ ಜಗತ್ತಾಗಿ ಹರಡುವ ಶಕ್ತಿಯು ಉದಯವಾಗುವುದು.

(ಸ್ವತಃ–ಸ್ವಸತ್ತಯಾಸ್ಥಿತ್ಯೈವ ಈಷತ್ ಪೃಥಗಿವ ಗುಣಿಗುಣ ಭೇದ ವ್ಯವಹಾರಯೋಗ್ಯತಯಾ ಆವಿರ್ಭವತಿ । ತಾ. ಪ್ರ.)

೪. ಈ ಶಕ್ತಿಯು ಸೂಕ್ಷ್ಮಾ, ಮಧ್ಯಾ, ಸ್ಥೂಲಾ ಎಂದು ಮೂರು ರೂಪಾಗುವುದು. ಸ್ಥೂಲಶಕ್ತಿಯ ದೇಹದಿಂದ ಮನಸ್ಸು ಹುಟ್ಟುವುದು.

೫. ಈ ಅವಸ್ಥೆಗಳಲ್ಲಿಯೇ ಉಂಟಾಗುವ ಪರಸ್ಪರ ಭೇದಗಳಿಂದ ಸತ್ತ್ವ, ರಜಸ್ಸು, ತಮಸ್ಸು ಎಂಬ ಭೇದಗಳುಂಟಾಗುವುವು. ಈ ಗುಣಗಳೇ (ಗುಣಸಮುದಾಯವೇ) ಪ್ರಕೃತಿ ಎನ್ನಿಸಿಕೊಳ್ಳುವುದು.

೬. ಮೂರು ಗುಣಗಳ ಧರ್ಮಗಳನ್ನುಳ್ಳ ಈ ಪ್ರಕೃತಿಯೇ ಅವಿದ್ಯೆಯು. ಇದೇ ಜಂತುಗಳಿಗೆ ಸಂಸಾರರೂಪವಾಗಿರುವುದು. ಇದರ ಕೊನೆಯೇ ಪರಮಪದವು.

ಅತ್ರ ತೇ ಯೇ ತ್ರಯಃ ಪ್ರೋಕ್ತಾ ಗುಣಾಸ್ತೇಽಪಿ ತ್ರಿಧಾ ಸ್ಮೃತಾಃ ।
ಸತ್ವಂ ರಜಸ್ತಮ ಇತಿ ಪ್ರತ್ಯೇಕಂ ಭಿದ್ಯತೇ ಗುಣಃ ॥ ೭ ॥

ನವಧೈವಂ ವಿಭಕ್ತೇಯಮವಿದ್ಯಾ ಗುಣಭೇದತಃ ।
ಯಾವತ್ಕಿಂಚಿದಿದಂ ದೃಶ್ಯಮನಯೈವ ತದಾಶ್ರಿತಂ ॥ ೮ ॥

ಋಷಯೋ ಮುನಯಃ ಸಿದ್ಧಾ ನಾಗಾ ವಿದ್ಯಾಧರಾಃ ಸುರಾಃ ।
ಇತಿ ಭಾಗಮವಿದ್ಯಾಯಾಃ ಸಾತ್ವಿಕಂ ವಿದ್ಧಿ ರಾಘವ ॥ ೯ ॥

ಸಾತ್ವಿಕಸ್ಯಾಸ್ಯ ಭಾಗಸ್ಯ ನಾಗವಿದ್ಯಾಧರಾಸ್ತಮಃ ।
ರಜಸ್ತು ಮುನಯಃ ಸಿದ್ಧಾಃ ಸತ್ವಂ ದೇವಾ ಹರಾದಯಃ ॥ ೧೦ ॥

ಸತ್ವಜಾತೌ ದೇವಯೋನಾವವಿದ್ಯಾ ಪ್ರಾಕೃತೈರ್ಗುಣೈಃ ।
ನಿರ್ಮಲಂ ಪದಮಾಯಾತಾ ಸತ್ವಂ ಹರಿಹರಾದಯಃ ॥ ೧೧ ॥

---

೭. ಈ ಮೂರು ಗುಣಗಳಲ್ಲಿ ಒಂದೊಂದೂ ಮತ್ತೆ ಮೂರು ಮೂರು ತೆರನಾಗುವುದು.

೮. ಹೀಗೆ ಈ ಗುಣಗಳ ಭೇದವಿಭೇದಗಳಿಂದ ಅವಿದ್ಯೆಯು ಒಂಭತ್ತು ತೆರನಾಗುವುದು. ದೃಶ್ಯರೂಪವಾಗಿರುವ ಈ ಜಗತ್ತೆಲ್ಲವೂ ಇದರಿಂದಲೇ ಆಗಿರುವುದು.

೯. ರಾಮ, ಋಷಿಗಳು, ಮುನಿಗಳು, ಸಿದ್ಧರು, ನಾಗರು, ವಿದ್ಯಾಧರರು, ಸುರರು, ಇವರು ಅವಿದ್ಯೆಯ ಸಾತ್ವಿಕ ಭಾಗದಿಂದ ಆದವರು ಎಂದು ತಿಳಿ.

೧೦. ಅವರಲ್ಲಿಯೂ ನಾಗವಿದ್ಯಾಧರರು ಸಾತ್ವಿಕ ತಾಮಸರು. ಮುನಿಗಳೂ ಸಿದ್ಧರೂ ಸಾತ್ವಿಕ ರಾಜಸರು. ಮಹಾದೇವನೇ ಮುಂತಾದವರು ಸಾತ್ವಿಕ ಸಾತ್ವಿಕರು.

೧೧. ಸತ್ವದಿಂದ ಹುಟ್ಟಿರುವ ದೇವಯೋನಿಯಲ್ಲಿ ಅವಿದ್ಯೆಯು ತನ್ನ ಸಹಜವಾದ ಗುಣಗಳಿಂದ ಇದ್ದರೂ, ನಿರ್ಮಲ ಪದವಿಯನ್ನು ಹೊಂದಿರುವುದು. ಅದರಿಂದ ಹರಿಹರಾದಿಗಳು ಸಾತ್ವಿಕರಾಗುವರು.

(ಸತ್ವಂ ರಜಸ್ತಮ ಇತಿ ಪ್ರಕೃತೇರ್ಗುಣಾಸ್ತೈರ್ಯುಕ್ತಃ ಪರಃ ಪುರುಷ

ಸಾತ್ತ್ವಿಕಃ ಪ್ರಾಕೃತೋ ಭಾಗೋ ರಾಮ ತಜ್ಜ್ಞೋ ಹಿ ಯೋ ಭವೇತ್ |
ನ ಸಮುತ್ಪದ್ಯತೇ ಭೂಯಸ್ತೇನಾಸೌ ಮುಕ್ತ ಉಚ್ಯತೇ || ೧೨ ||

ತೇನ ರುದ್ರಾದಯೋ ಹ್ಯೇತೇ ಸತ್ತ್ವಭಾಗಾ ಮಹಾಮತೇ |
ತಿಷ್ಠಂತಿ ಮುಕ್ತಾಃ ಪುರುಷಾ ಯಾವದ್ದೇಹಂ ಜಗತ್ಸ್ಥಿತೌ || ೧೩ ||

ಯಾವದ್ದೇಹಂ ಮಹಾತ್ಮಾನೋ ಜೀವನ್ಮುಕ್ತಾ ವ್ಯವಸ್ಥಿತಾಃ |
ವಿದೇಹಮುಕ್ತಾ ದೇಹಾಂತೇ ಸ್ಥಾಸ್ಯಂತಿ ಪರಮೇಶ್ವರೇ || ೧೪ ||

ಭಾಗ ಏಷ ತ್ವವಿದ್ಯಾಯಾ ಏವಂ ವಿದ್ಯಾತ್ವಮಾಗತಃ |
ಬೀಜಂ ಫಲತ್ವಮಾಯಾತಿ ಫಲಮಾಯಾತಿ ಬೀಜತಾಂ || ೧೫ ||

ಏಕ ಇಹಾಸ್ಯಧತ್ತೇ | ಸ್ಥಿತ್ಯಾದಯೇ ಹರಿವಿರಂಚಿ ಹರೇತಿ ಸಂಜ್ಞಾಃ|ಶ್ರೇಯಾಂಸಿ ತತ್ರಖಲು ಸತ್ವತನೋರ್ನೃಣಾಂಸ್ಯುಃ ಇತಿ ಭಾಗವತಾದೀನಿ ವಾಕ್ಯಾನಿ | ತಥಾ ಯಸ್ಯ ತಮಃ ಸಾಕ್ಷಾಚ್ಛರೀರಂ ಸಾತ್ವಿಕೋ ಗುಣಃ|ಪಾಲನಾಯ ತ್ರಿಮೂರ್ತೀನಾಂ ಸವಿಷ್ಣುಸ್ಸ್ಯಾನ್ನಚಾಪರಃ || ಇತಿ ಸ್ಕಾಂದ ವಚನಂ—ತಾ. ಪ್ರ.)

೧೨. ಈ ಒಂಭತ್ತು ಭಾಗಗಳಲ್ಲಿ ಶುದ್ಧ ಸಾತ್ವಿಕಾಂಶದಿಂದ ಕೂಡಿದ ಭಾಗವು ಯಾವುದುಂಟೋ ಅದು ತಾನು ಹೀಗೆ ಅವಿದ್ಯೆಯ ಅಂಶದಲ್ಲಿ ಸಿಕ್ಕಿರುವೆನೆಂದು ತಿಳಿಯುವುದು. ಹಾಗೆ ತಿಳಿದ ಅಂಶವು ಮತ್ತೆ ಅವಿದ್ಯೆಯ ಹಿಡಿತದಲ್ಲಿದ್ದು ಜನ್ಮವೆತ್ತುವುದಿಲ್ಲ. ಅದರಿಂದ ಅದನ್ನು ಮುಕ್ತನೆನ್ನುವರು.

೧೩. ಆದರಿಂದ, ಎಲೆ ಮಹಾಮತಿಯೆ, ಸತ್ವಭಾಗದವರಾದ ರುದ್ರಾದಿಗಳು ದೇಹವಿರುವವರೆಗೂ ಜಗತ್ತಿನಲ್ಲಿ ಮುಕ್ತರಾಗಿಯೇ ಇರುವರು.

೧೪. ಹಾಗೆಯೇ ಜೀವನ್ಮುಕ್ತರಾದ ಮಹಾತ್ಮರೂ ದೇಹಾವಸಾನ ಪರ್ಯಂತ ಇರುವರು. ವಿದೇಹ ಮುಕ್ತರಾದವರು ದೇಹಾಂತದಲ್ಲಿ ಶುದ್ಧ ಬ್ರಹ್ಮದಲ್ಲಿ ನಿಲ್ಲುವರು.

೧೫. ಹೀಗೆ ಬೀಜವು ಫಲತ್ವವನ್ನು ಹೊಂದಿ ಮತ್ತೆ ಆ ಫಲವು ಬೀಜತ್ವವನ್ನು ಹೊಂದುವಂತೆ, (ವಿದ್ಯೆಯಿಂದಲೇ ಆದ) ಅವಿದ್ಯೆಯ ಭಾಗವೇ ವಿದ್ಯಾತ್ವವನ್ನು ಹೊಂದುವುದು.

ಉದೇತ್ಯವಿದ್ಯಾ ವಿದ್ಯಾಯಾಃ ಸಲಿಲಾದಿವ ಬುದ್ಬುದಃ ।
ವಿದ್ಯಾಯಾಂ ಲೀಯತೇ ವಿದ್ಯಾ ಪಯಸೀವ ಹಿ ಬುದ್ಬುದಃ ॥ ೧೬ ॥

ಪಯಸ್ತರಂಗಯೋರ್ದ್ವಿತ್ವ ಭಾವನಾದೇವ ಭಿನ್ನತಾ ।
ವಿದ್ಯಾವಿದ್ಯಾದೃಶೋರ್ಭೇದ ಭಾವನಾದೇವ ಭಿನ್ನತಾ ॥ ೧೭ ॥

ಪಯಸ್ತರಂಗಯೋರೈಕ್ಯಂ ಯಥೈವ ಪರಮಾರ್ಥತಃ ।
ನಾವಿದ್ಯಾತ್ವಂ ನ ವಿದ್ಯಾತ್ವಮಿಹ ಕಿಂಚನ ವಿದ್ಯತೇ ॥ ೧೮ ॥

ವಿದ್ಯಾವಿದ್ಯಾದೃಶೌ ತ್ಯಕ್ತ್ವಾ ಯದಸ್ತೀಹ ತದಸ್ತಿ ಹಿ ।
ಪ್ರತಿಯೋಗಿ ವ್ಯವಚ್ಛೇದವಶಾದೇತ್ರ ರಘೂದ್ವಹ ॥ ೧೯ ॥

---

೧೬. ನೀರಿನಿಂದ ಗುಳ್ಳೆಗಳು ಹುಟ್ಟುವಂತೆ ವಿದ್ಯೆಯಿಂದ ಅವಿದ್ಯೆಯು ಹುಟ್ಟುವುದು. ಹಾಗೆಯೇ ಅದೇ ಅವಿದ್ಯೆಯು ತನ್ನ ಉತ್ಪತ್ತಿಸ್ಥಾನವಾದ ವಿದ್ಯೆಯಲ್ಲಿಯೇ ನೀರಿನಲ್ಲಿ ಅಡಗುವ ಗುಳ್ಳೆಯಂತೆ ಲೀನವಾಗುವುದು.

೧೭. ಜಲವು ತರಂಗವೂ ಬೇರೆ ಬೇರೆಯೆಂದು ಭೇದವೆಣಿಸಿದವರಿಗೆ ಮಾತ್ರ ಬೇರೆ ಬೇರೆಯಾಗಿ ತೋರುವಂತೆ, ವಿದ್ಯಾದೃಷ್ಟಿ, ಅವಿದ್ಯಾದೃಷ್ಟಿಗಳೆರಡಕ್ಕೂ ಭೇದಭಾವನೆಯಿಂದ ನೋಡುವವರಿಗೆ ಮಾತ್ರ ಭೇದವು. (ಭಾವನೆಯಿಂದ ಮಾತ್ರ ಬೇರೆ ಬೇರೆಯಾಗಿ ತೋರುವುವು.)

೧೮. ಪರಮಾರ್ಥ ದೃಷ್ಟಿಯಿಂದ ನೋಡಿದಾಗ ಹೇಗೆ ನೀರೂ ಅಲೆಗಳೂ ಒಂದೇಯೋ ಹಾಗೆಯೇ ಅವಿದ್ಯಾತ್ವಗಳೆರಡೂ ಒಂದೇ. ಬೇರೆಯಾಗಿ ಇಲ್ಲವೇಇಲ್ಲ.

೧೯. ವಿದ್ಯಾ ಅವಿದ್ಯಾ ದೃಷ್ಟಿಗಳೆರಡಕ್ಕೂ ಬೇರೆಯಾಗಿ ಯಾವುದಿರುವುದೋ ಅದೊಂದೇ ಇರುವುದು. ಅದಕ್ಕೆ ಪ್ರತಿಯೋಗಿಯಾಗಿ ಯಾವುದೂ ಇಲ್ಲವೇ ಇಲ್ಲವಾಗಿ, ರಾಮ, ಅದು ತಾನೇತಾನಾಗಿ ಇರುವುದು.

(ಪ್ರತಿಯೋಗಿ : ಮನುಷ್ಯನಿಗೆ ಮನುಷ್ಯನಲ್ಲದ್ದು ಎಲ್ಲವೂ ಪ್ರತಿಯೋಗಿ. ಬ್ರಹ್ಮಕ್ಕೆ ಹಾಗೆ ಪ್ರತಿಯೋಗಿಯಾಗಿ, ಅಬ್ರಹ್ಮ ಪದಾರ್ಥವು ಯಾವುದೂ ಇಲ್ಲವಾದ್ದರಿಂದ ಬ್ರಹ್ಮವು ತಾನೇ ತಾನಾಗಿರುವುದು.)

ವಿದ್ಯಾವಿದ್ಯಾದೃಶೌ ನ ಸ್ತಃ ಶೇಷೇ ಬದ್ಧಪದೋ ಭವ |
ನಾವಿದ್ಯಾಸ್ತಿ ನ ವಿದ್ಯಾಸ್ತಿ ಕೃತಂ ಕಲ್ಪನಯಾನಯಾ || ೨೦ ||

ಕಿಂಚಿದಸ್ತಿ ನಕಿಂಚಿದ್ಯಚ್ಚಿತ್ಸಂವಿದಿತಿ ತತ್ಸ್ಥಿತಂ |
ತದೇವಾವಿದಿತಾಭಾಸಂ ಸದವಿದ್ಯೇತ್ಯುದಾಹೃತಂ || ೨೧ ||

ವಿದಿತಂ ಸತ್ತದೇವೇದಮವಿದ್ಯಾಕ್ಷಯಸಂಜ್ಞಿತಂ |
ವಿದ್ಯಾಭಾವಾದವಿದ್ಯಾಖ್ಯಾ ಮಿಥ್ಯೈವೋದೇತಿ ಕಲ್ಪನಾ || ೨೨ ||

ಮಿಥಃ ಸ್ವಾಂತೇ ತಯೋರಂತಶ್ಛಾಯಾತಪನಯೋರಿವ |
ಅವಿದ್ಯಾಯಾಂ ವಿಲೀನಾಯಾಂ ಕ್ಷೀಣೇ ದ್ವೇ ಏವ ಕಲ್ಪನೇ || ೨೩ ||

ಏತೇ ರಾಘವ ಲೀಯೇತೇ ಅವಾಪ್ಯಂ ಪರಿಶಿಷ್ಯತೇ |
ಅವಿದ್ಯಾಸಂಕ್ಷಯಾತ್ ಕ್ಷೀಣೋ ವಿದ್ಯಾಪಕ್ಷೋಽಪಿ ರಾಘವ || ೨೪ ||

---

೨೦. ನಿಜವಾಗಿಯೂ ವಿದ್ಯಾದೃಷ್ಟಿ, ಅವಿದ್ಯಾದೃಷ್ಟಿ, ಎಂದು ಇಲ್ಲ. ಅದರಿಂದ, ಇವೆರಡೂ ಇಲ್ಲದೆ, ಶೇಷವಾಗಿರುವ ಬ್ರಹ್ಮದಲ್ಲಿ ಸ್ಥಿರನಾಗಿ ನಿಲ್ಲು. ಅವಿದ್ಯೆಯೂ ಇಲ್ಲ: ವಿದ್ಯೆಯೂ ಇಲ್ಲ: ಈ ಕಲ್ಪನೆಗಳೆಲ್ಲವೂ ಸಾಕು.

೨೧. ಯಾವುದೋ ಒಂದು (ಇವೆರಡೂ ಅಲ್ಲದ ಇನ್ನೊಂದಾಗಿ) ಇದ್ದೇ ಇರುವುದು. ಅದರಿಂದ ಬೇರೆಯಾದ ಚಿತ್, ಸಂವಿತ್, ಎಂಬ ಇನ್ನು ಯಾವುದೂ ಇಲ್ಲ. ಇರುವ ಆ ಒಂದನ್ನೇ ತಿಳಿದಾಗ ಸತ್, ತಿಳಿಯದಾಗ ಅವಿದ್ಯಾ, ಎಂದು ಹೇಳುವರು.

೨೨. ತಿಳಿದಾಗ ಅದೇ ಅವಿದ್ಯಾಕ್ಷಯವೆಂದೆನ್ನಿಸಿಕೊಳ್ಳುವ ಸತ್, ಎಂದೂ, ತಿಳಿಯದಿದ್ದಾಗ ಮಿಥ್ಯಾಭೂತವಾಗಿ, ಅವಿದ್ಯೆಯೆಂಬ ಹೆಸರಿನಿಂದ (ಪ್ರತ್ಯೇಕವಾಗಿರುವಂತೆಯೂ) ತೋರುವುದು.

೨೩. ಆ ಅವಿದ್ಯೆ, ಸತ್, ಇವೆರಡರೊಳಗೆ ಬಿಸಿಲು ನೆರಳಾಗುವಂತೆ, ಎರಡರ ಕಲ್ಪನೆಯು ತೋರಿದರೂ ಅವಿದ್ಯೆಯು ಕ್ಷೀಣವಾಗುತ್ತಲೂ ಆ ದ್ವಯಕಲ್ಪನೆಯೂ ಕ್ಷೀಣವಾಗುವುದು.

೨೪. ರಾಘವ, ಈ ಎರಡು ಕಲ್ಪನೆಗಳೂ ಲಯವಾದಮೇಲೆ, ಪೂರ್ಣಾ

ಯಚ್ಛಿಷ್ಟಂ ತನ್ನ ಕಿಂಚಿದ್ವಾ ಕಿಂಚಿದ್ವಾಪೀದಮಾತತಂ ।
ತತ್ರೈವಂ ದೃಶ್ಯತೇ ಸರ್ವಂ ನ ಕಿಂಚನ ಚ ದೃಶ್ಯತೇ ॥ ೨೫ ॥

ವಟಶ್ಚ ವಟಧಾನಾಯಾಮಿವ ಪುಷ್ಪಫಲಾದಿಮಾನ್ ।
ಸರ್ವಶಕ್ತಿರ್ಹಿ ಕಿಂಚಿತ್ವಂ ಸರ್ವಶಕ್ತಿಸಮುದ್ಗಕಂ ॥ ೨೬ ॥

ನಭಸೋಽಪ್ಯಧಿಕಂ ಶೂನ್ಯಂ ನ ಚ ಶೂನ್ಯಂ ಚಿದಾತ್ಮಕಂ ॥ ೨೭ ॥

ಸೂರ್ಯಕಾಂತೇ ಯಥಾ ವಹ್ನಿರ್ಯಥಾ ಕ್ಷೀರೇ ಘೃತಂ ತಥಾ।
ತತ್ರೇದಂ ಸಂಸ್ಥಿತಂ ಸರ್ವಂ ದೇಶಕಾಲಕ್ರಮೋದಯೇ ॥ ೨೮ ॥

ಯಥಾ ಸ್ಫುಲಿಂಗಾ ಅನಲಾದ್ಯಥಾ ಭಾಸೋ ದಿವಾಕರಾತ್ ।
ತಸ್ಮಾತ್ತಥೇಮಾ ನಿರ್ಯಾಂತಿ ಸ್ಫುರಂತ್ಯಾಃ ಸಂವಿದಶ್ಚಿತಃ ॥ ೨೯ ॥

ನಂದ ರೂಪವಾದ ಪ್ರಾಪ್ಯವೊಂದೇ ಉಳಿಯುವುದು. ಅವಿದ್ಯೆಯು ಲೀನವಾಗುತ್ತಲೂ ವಿದ್ಯಾಪಕ್ಷವೂ ಲೀನವಾಗುವುದು.

೨೫. ಇವೆರಡೂ ಹೋದಮೇಲೆ, ಯಾವುದು ಉಳಿಯುವುದೋ ಅದು, ಈ ದೃಶ್ಯವಾಗಿ ಹರಡಿಕೊಂಡಿರುವ ಯಾವುದೂ ಅಲ್ಲ. ಆದರೂ ಅದನ್ನು ಕಂಡವರಿಗೆ ಎಲ್ಲವೂ ಕಾಣುವುದು. ಅಷ್ಟೇ ಅಲ್ಲ. ಅದನ್ನು ಕಂಡವರಿಗೆ ಇನ್ನು ಯಾವುದೂ ಕಾಣಿಸುವುದೇ ಇಲ್ಲ.

೨೬. ಆಲದ ಬೀಜದಲ್ಲಿ ಪುಷ್ಪಫಲಾದಿಗಳಿಂದ ಕೂಡಿರುವ ಆಲದ ಮರವೆಲ್ಲವೂ ಅಡಗಿರುವಂತೆ, ಸರ್ವಶಕ್ತಿಗಳ ಸಮುದಾಯಕ್ಕೂ ಕಾರಣವಾಗಿರುವ ಸರ್ವಶಕ್ತಿಮತ್ತ್ವವು ಕೊಂಚವಾಗಿ (ಬ್ರಹ್ಮದಲ್ಲಿ) ಕುಳಿತಿರುವುದು.

೨೭. ಚಿದಾತ್ಮಕವಾದ ಬ್ರಹ್ಮವು ಆಕಾಶಕ್ಕಿಂತ ಶೂನ್ಯವಾಗಿದ್ದರೂ, ಅದು ಶೂನ್ಯವಲ್ಲ.

೨೮. ಸೂರ್ಯಕಾಂತ ಶಿಲೆಯಲ್ಲಿ ಪ್ರಕಟವಾಗದೆ ಅಡಗಿರುವ ದಾಹಕತ್ವದಂತೆ, ಕ್ಷೀರದಲ್ಲಿರುವ ಘೃತದಂತೆ, ಎಲ್ಲವೂ ದೇಶ, ಕಾಲ, ಕ್ರಮಗಳ ಉದಯವನ್ನು ನಿರೀಕ್ಷಿಸುತ್ತ ಕುಳಿತಿರುವುದು.

೨೯. ಬೆಂಕಿಯಿಂದ ಹಾರುವ ಕಿಡಿಗಳಂತೆ, ಸೂರ್ಯನಿಂದ ಹೊರಡುವ ಕಿರಣ

ಯಥಾಂಭೋಧಿಸ್ತರಂಗಾಣಾಂ ಯಥಾಮಲಮಣಿಸ್ತ್ವಿಷಾಂ |
ಕೋಶೋ ನಿತ್ಯಮನಂತಾನಾಂ ತಥಾ ತತ್ಸಂವಿದಾಂ ತ್ವಿಷಾಂ || ೩೦ ||

ಸಬಾಹ್ಯಾಭ್ಯಂತರೇ ಸರ್ವಂ ವಸ್ತುನ್ಯಸ್ತ್ಯೇವ ವಸ್ತು ಸತ್ |
ಸರ್ವದೈವಾವಿನಾಶಾತ್ಮಾ ಕುಂಭಾನಾಂ ಗಗನಂ ಯಥಾ || ೩೧ ||

ಯಥಾ ಮಣೇರಯಃಸ್ಪಂದೇ ಅಯಸ್ಕಾಂತಸ್ಯ ಕರ್ತೃತಾ |
ಅಕರ್ತುರೇವ ಹಿ ತಥಾ ಕರ್ತೃತಾ ತಸ್ಯ ಕಥ್ಯತೇ || ೩೨ ||

ಮಣಿಸಂನಿಧಿಮಾತ್ರೇಣ ಯಥಾಯಃ ಸ್ಪಂದತೇ ಜಡಂ |
ತತ್ಸತ್ತಯಾ ತಥೈವಾಯಂ ದೇಹಶ್ಚೇತತ್ಯಚಿದ್ವಪುಃ || ೩೩ ||

ಗಳಂತೆ, ಸ್ಫುರಿಸುವ ಚಿತ್ಸ್ವರೂಪ ಸಂವಿತ್ತಿನಿಂದ ಈ ಸೃಷ್ಟಿಗಳೆಲ್ಲವೂ ಹೊರ ಬೀಳುವುವು.

೩೦. ಅಷ್ಟೇ ಅಲ್ಲ. ಎಲ್ಲ ತರಂಗಗಳಿಗೂ ಅಂಬೋಧಿಯೇ ಸ್ಥಾನವಾಗಿರುವಂತೆ, ನಿರ್ಮಲವಾದ ಮಣಿಯು ಎಲ್ಲಾ ಹೊಳೆಹುಗಳಿಗೂ ಸ್ಥಾನವು ಹೇಗೋ ಹಾಗೆ, ಆ ಬ್ರಹ್ಮವು ಅನಂತವಾದ ಸಂವಿತ್ತುಗಳಿಗೂ ಕಾಂತಿಗಳಿಗೂ ಯಾವಾಗಲೂ ಭಂಡಾರವಾಗಿರುವುದು.

೩೧. ಅವಿನಾಶಿಯಾದ ಆಕಾಶವು ಯಾವಾಗಲೂ ಕುಂಭಗಳ ಒಳ ಹೊರಗೆಲ್ಲ ವ್ಯಾಪಿಸಿರುವಂತೆ ಸಮಸ್ತ ವಸ್ತುಗಳ ಒಳ ಹೊರಗೆಲ್ಲ ಆ ನಿತ್ಯ ವಸ್ತುವು ತುಂಬಿರುವುದು.

೩೨. ಕಬ್ಬಿಣವನ್ನು ಹಿಡಿದು ಆಡಿಸುವುದರಲ್ಲಿ ಅಯಸ್ಕಾಂತ ಮಣಿಯ ಕರ್ತೃತ್ವವು ಹೇಗೆ ಉಂಟು, ಇಲ್ಲ ಎಂಬಂತಿರುವುದೋ ಹಾಗೆಯೇ ಆ ವಸ್ತುವು ಅಕರ್ತೃವೇ ಆಗಿದ್ದರೂ ಕರ್ತೃವೆನ್ನಿಸಿಕೊಳ್ಳುವುದು.

೩೩-೩೪. ಕಬ್ಬಿಣವು ಅಯಸ್ಕಾಂತಮಣಿಯ ಸನ್ನಿಧಿ ಮಾತ್ರದಿಂದಲೇ ಜಡವಾದರೂ ಚೇತನದಂತೆ ವ್ಯಾಪಾರಮಾಡುವಂತೆ, ಆ ಬ್ರಹ್ಮವಸ್ತುವಿನ ಸತ್ತಾಬಲದಿಂದ ಜಡದೇಹಗಳೆಲ್ಲವೂ ಚೇತನವತ್ ವ್ಯಾಪಾರಮಾಡುವುವು.

ಜಲರಾಶಿಯಲ್ಲಿ ಚಿತ್ರವಿಚಿತ್ರವಾಗಿ ಚಂಚಲಗಳಾದ ತರಂಗಮಾಲೆಗಳು ಏಳುವಂತೆ, ಜಗತ್ತಿನ ಏಕೈಕ ಕಾರಣವಾದ ಚಿತ್ತಿನಲ್ಲಿ ಕೇವಲ ಕಲ್ಪನಾಬಲದಿಂದ

ತತ್ರ ಸ್ಥಿತಂ ಜಗದಿದಂ ಜಗದೇಕಬೀಜೇ
ಚಿನ್ಮಾತ್ರ ಸಂವಿದಿತಕಲ್ಪಿತಕಲ್ಪನೇನ ।
ಲೋಲೋರ್ಮಿಜಾಲಮಿವ ವಾರಿಣಿ ಚಿತ್ರರೂಪಂ
ಖಾದಪ್ಯರೂಪವತಿ ಯತ್ರ ನ ಕಿಂಚಿದಸ್ತಿ ॥ ೩೪ ॥

ಇತ್ಯಾರ್ಷೇ ವಾಸಿಷ್ಠರಾಮಾಯಣೇ ವಾಲ್ಮೀಕೀಯೇ ದೇವದೂತೋಕ್ತೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ "ವಿದ್ಯಾನಿರಾಕರಣಂ" ನಾಮ ಸಪ್ತಮಃ ಸರ್ಗಃ

ಈ ಬ್ರಹ್ಮಾಂಡವೆಲ್ಲವೂ ಇರುವುದು. ಆಕಾಶಕ್ಕಿಂತಲೂ ಅರೂಪ (ಶೂನ್ಯ) ವಾದ ಆ ಬ್ರಹ್ಮದಲ್ಲಿ ಬ್ರಹ್ಮವಲ್ಲದೆ ಇನ್ನೇನೂ ಇಲ್ಲ.

(ತಾತ್ಪರ್ಯಪ್ರಕಾಶವು "ತತ್ರ ಅಜ್ಞಾತೇ ಬ್ರಹ್ಮಣಿ ಪೂರ್ವಸಂವಿದಿತಜಗತ್ಕಲ್ಪಿತವಾಸನಾ ಪ್ರಯುಕ್ತೇನ ಉತ್ತರೋತ್ತರ ಕಲ್ಪನೇನ ಇದಂ ಜಗತ್ಸ್ಥಿತಂ" ಎಂದು ಹೇಳಿದೆ.)

ಇದು ಸರಿಯಲ್ಲ. ಹಿಂದೆ ಆಕಾಶಜೋಪಾಖ್ಯಾನದಲ್ಲಿ ಹೇಳಿದಂತೆ ವಾಸನಾ ಅಥವಾ ವಾಸನಾಬೀಜವಾದ ಕರ್ಮವೇ ಇಲ್ಲದಿರಲು ಈ "ಪೂರ್ವವಾಸನಾ ಪ್ರಯುಕ್ತೇನ'' ಇತ್ಯಾದಿ ಸಿದ್ಧವೇ ಆಗುವುದಿಲ್ಲ. ಮತ್ತು ಹೀಗೆ ಪೂರ್ವವಾಸನಾ ಒಂದುಂಟು ಎಂದರೆ ಮೀಮಾಂಸಕರು ಕೇಳುವ "ಉತ್ತರೋತ್ತರ ಸೃಷ್ಟಿಯು ಪೂರ್ವ ಪೂರ್ವ ಸೃಷ್ಟಿಯಿಂದ ಆಯಿತು ಎನ್ನುವುದಾದರೆ ಆದ್ಯಸೃಷ್ಟಿಯು ಹೇಗಾಯಿತು ?" ಎಂಬ ಪ್ರಶ್ನಕ್ಕೆ ಉತ್ತರವೇ ಇಲ್ಲವಾಗುವುದು.

ಈ ಮಾತು ಒಪ್ಪದಿದ್ದರೆ ''ಧಾತಾ ಯಥಾಪೂರ್ವಮಕಲ್ಪಯತ್'' ಎಂಬ ಶ್ರುತಿವಚನವನ್ನು ನಿರಾಕರಿಸಿದಂತಾಗುವುದಿಲ್ಲವೆ? ಎಂದರೆ, ಈ ಶ್ರುತಿ ವಚನಕ್ಕೆ ಹೀಗೆ ಅರ್ಥಮಾಡಬೇಕು. ದೇಶಾಂತರ ಕಾಲಾಂತರಗಳಲ್ಲಿ ಒಂದು ಜೇಡನು ಬಲೆಯನ್ನು ನೆಯ್ದರೆ, ಬೇರೆ ದೇಶದಲ್ಲಿ ಬೇರೆ ಕಾಲದಲ್ಲಿ ಇನ್ನೊಂದು ಜೇಡನು ನೇದ ಗೂಡನ್ನು ಕಂಡಿದ್ದವನು ಇದು ಅದರಂತೆಯೇ ಇದೆ ಎಂಬಂತೆ ಅಥವಾ ಕಲ್ಪ ಪ್ರಲಯಗಳೂ, ಅವಾಂತರ ಪ್ರಲಯಗಳೂ ಇರುವಾಗ, ಗೀತೆಯಲ್ಲಿ ಹೇಳುವಂತೆ ಬ್ರಹ್ಮನು ಅಹರಹಃ ಮಾಡುವ ಸೃಷ್ಟಿಗೆ ಇದು ಅನ್ವಯಿಸುವುದು ಎಂಬುದೇ ಸರಿ.

ವೇದಾಂತಿಗಳು ಹಿಂದೆ ಇದೇ ಸರ್ಗ ೨೮ನೆಯ ಶ್ಲೋಕದಲ್ಲಿ ಹೇಳಿದಂತೆ,

ದೇಶ ಕಾಲಕ್ರಮಗಳು ಉದಯವಾಗುವುದೇ ಬ್ರಹ್ಮದಿಂದ ಎನ್ನುವರಾಗಿ, ದೇಶ ಕಾಲಕ್ರಮಗಳಿಗೆ ಅತೀತವಾದ ಬ್ರಹ್ಮಕ್ಕೆ ಇದನ್ನು ಅನ್ವಯಿಸುವುದು ಸರಿಯಲ್ಲ ಎಂಬ ಸಿದ್ಧಾಂತವೇ ಸರಿ.

ಹಾಗಲ್ಲದೆ ಪೂರ್ವವಾಸನಾಂಗೀಕಾರ ಮಾಡುವುದಾದರೆ, ಖಾದಸ್ವರೂಪವತ್ ಎನ್ನಿಸಿಕೊಳ್ಳುವ ಬ್ರಹ್ಮದಲ್ಲಿಯೂ ವಾಸನಾ ಇರುವುದು ಎನ್ನುವುದಾದರೆ, ಸೃಷ್ಟಿಗೆ ಬಂದಿರುವ ಜೀವಕ್ಕೂ ಬ್ರಹ್ಮಕ್ಕೂ ಭೇದವೇ ಇಲ್ಲದೆ ಹೋಗುವುದು. ಬ್ರಹ್ಮವು ಅನುಭವಾಮೃತವು ಹೇಳುವಂತೆ "ಮುಚ್ಚುಗೊಂಡೆದ್ದು ಸಚ್ಚಿದಾನಂದವು" ಎರಡಾಯಿತು. ಆಗ ಆ ಎರಡನೆಯ ಜೀವದಲ್ಲಿ ವಾಸನೋದಯವಾಯಿತು. ಜೀವತ್ವನಾಶವಾದಾಗ ಅದರೊಡನೆಯೇ ವಾಸನೆಯೂ ಹೋಯಿತು ಎನ್ನುವುದೇ ಸರಿ.

ಹಾಗಾದರೆ ಸೃಷ್ಟಿಯಾಗುವುದೆಂತು ಎಂದರೆ, ಅದು "ಸಂಭವಾಮಿ ಆತ್ಮಮಾಯಯಾ'' ಎಂದು ಗೀತೆಯು ಹೇಳುವಂತೆ ಸಂಭವವು ಮನುಷ್ಯನ ಬುದ್ಧಿಗೆ ಎಟಕುವುದಿಲ್ಲ. ಪಂಚೀಕರಣದ ಪ್ರಕಾರ ಜ್ಞಾತೃತ್ವವೇ ಆಕಾಶದ ಅರ್ಧ ಭಾಗ, ಬುದ್ಧಿ ಅದರ ನಾಲ್ಕನೆಯ ಒಂದು ಭಾಗ. ಈ ಅರ್ಧ, ಎರಡಾಣೆ ಪಾಲಿನವು ಆಕಾಶಕ್ಕೂ ಆಚೆ ಇರುವ ತತ್ವವನ್ನೆಂತು ತಿಳಿಯುವುವು? ಸೃಷ್ಟಿಯಾದ ಮೇಲೆ ಬಂದವು ಸೃಷ್ಟಿಯನ್ನು ಅರಿಯುವುದಾದರೂ ಎಂತು?

(ಮೋಕ್ಷ ಸುಷುಪ್ತಿಗಳ ಭೇದವನ್ನು ಮುಂದಿನ ಸರ್ಗದಲ್ಲಿ ಭಾವಿಸಿ ನೋಡಿ.)

ಇಂತು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ ನಿರ್ವಾಣಪ್ರಕರಣದ ಪೂರ್ವಾರ್ಧದಲ್ಲಿ "ವಿದ್ಯಾನಿರಾಕರಣ" ಎಂಬ ಒಂಭತ್ತನೆಯ ಸರ್ಗವು.

ದಶಮಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ತಸ್ಮಾನ್ನ ಕಿಂಚಿದೇವೇದಂ ಜಗತ್ಸ್ಥಾವರಜಂಗಮಂ ।
ನ ಕಿಂಚಿದ್ಭೂತತಾಂ ಪ್ರಾಪ್ತಂ ಯತ್ಕಿಂಚಿದಿತಿ ವಿದ್ಧಿ ಹೇ ॥ ೧ ॥

ಯತ್ರ ಕಾಚಿನ್ನ ಕಲನಾ ಭಾವಾಭಾವಮಯಾತ್ಮಿಕಾ ।
ತದಿದಂ ರಾಮ ಜೀವಾದಿ ಸರ್ವಂ ವ್ಯರ್ಥಂ ಕಿಮೀಹಸೇ ॥ ೨ ॥

ಸಂಬಂಧೋಽಯಮಸಾವಂತರ್ಹೃದಿ ಯೋ ವ್ಯಪದಿಶ್ಯತೇ ।
ನ ತಂ ಲಭಾಮಹೇ ಸರ್ಪಂ ರಜ್ಜುಸರ್ಪಭ್ರಮಾದಿವ ॥ ೩ ॥

ಹತ್ತನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು—ಅದರಿಂದ, ರಾಮ, ಸ್ಥಾವರಜಂಗಮಾತ್ಮಕವಾದ ಈ ಜಗತ್ತು ಎಂಬದುದು (ಪ್ರತ್ಯೇಕವಾಗಿ) ಇಲ್ಲ. ಸ್ಥಾವರ ಜಂಗಮ ಭೂತಗಳಾಗಿ ಪರಿಣಾಮವನ್ನು ಹೊಂದಿದುದೂ ಯಾವುದೂ ಇಲ್ಲ ಎಂದು ತಿಳಿ.

೨. ರಾಮ, ಭಾವ, ಅಭಾವ ಎರಡನ್ನೂ ಒಳಗೊಂಡಿರುವ ಜೀವಾದಿಗಳೆಂಬ ಕಲ್ಪನೆಯೂ ಯಾವುದೂ ಇಲ್ಲವೇ ಇಲ್ಲವೆಂದು ತಿಳಿ. (ಅಂತಹುದು ಒಂದಿದ್ದರೆ) ಅದು ಬ್ರಹ್ಮವೇ ಆದುದರಿಂದ) ವ್ಯರ್ಥವಾಗಿ ಏಕೆ ಏನೇನೋ ಊಹಿಸುವೆ?

೩. ಹೇಗೆ ಹಗ್ಗವನ್ನು ನೋಡಿ ಹಾವೆಂದುಕೊಂಡ ಭ್ರಾಂತಿಯಲ್ಲಿ ಹೇಗೆ ಹೇಗೂ ಹಾವು ಸಿಕ್ಕುವುದಿಲ್ಲವೋ, ಹಾಗೆಯೇ ನಾವು ಮನಸ್ಸಿನಲ್ಲಿ ಕಟ್ಟಿಕೊಂಡಿರುವ (ಅಹಂ, ಮಮ ಮುಂತಾದ ದೇಹ) ಸಂಬಂಧವು ಯಾವುದೂ ವಾಸ್ತವವಾಗಿ ಇಲ್ಲ.

ಅಪರಿಜ್ಞಾತ ಆತ್ಮೈವ ಭ್ರಮತಾಂ ಸಮುಪಾಗತಃ ।
ಜ್ಞಾತ ಆತ್ಮತ್ವಮಾಯಾತಿ ಸೀಮಾಂತಃ ಸರ್ವಸಂವಿದಾಂ ॥ ४ ॥

ಅವಿದ್ಯೇತ್ಯುಚ್ಯತೇ ಲೋಕೇ ಚಿಚ್ಚೇತ್ಯಮಲಮಾಶ್ರಿತಾ।
ಚೇತ್ಯಾತೀತಾತ್ಮತಾಮೇತಿ ಸರ್ವೋಪಾಧಿವಿವರ್ಜಿತಾ ॥ ೫ ॥

ಚಿತ್ತಮಾತ್ರಂ ಹಿ ಪುರುಷಸ್ತಸ್ಮಿನ್ನಷ್ಟೇ ಚ ನಶ್ಯತಿ ।
ಸ್ಥಿತೇ ತಿಷ್ಠತಿ ಚಾತ್ಮಾಯಂ ಘಟೇ ಸತಿ ಘಟಾಂಬರಂ ॥ ೬ ॥

ಗಚ್ಛನ್ಪಶ್ಯತಿ ಗಚ್ಛಂತಂ ಸ್ಥಿತಂ ತಿಷ್ಠಶಿ ಶುರ್ಯಥಾ ।
ಭ್ರಾಂತಮೇವಮಿದಂ ಚೇತಃ ಪಶ್ಯತ್ಯಾತ್ಮಾನಮಾಕುಲಂ ॥ ೭ ॥

---

४. ಆತ್ಮನು ನಾನು ತಿಳಿಯದವನು ಎಂದುಕೊಂಡಾಗ, ಜಗದ್ಭ್ರಾಂತಿಯನ್ನು ಹೊಂದುವನು. ತನ್ನ ಸ್ವರೂಪವನ್ನು ತಾನರಿತಾಗ, ಸರ್ವ ಸಂವಿತ್ತಿಗಳಿಗೂ ಕೊನೆಯಾದ ಆತ್ಮತ್ವವನ್ನೇ ಹೊಂದುವನು.

೫. ಚಿತ್ತು ಚೇತ್ಯವೆಂಬ ಮಲವನ್ನು ಹೊಂದಿದಾಗ ಅವಿದ್ಯೆ ಎನ್ನಿಸಿಕೊಳ್ಳುವುದು. ಅದೇ ಚಿತ್ತು ಚೇತ್ಯವನ್ನು ದಾಟಿದರೆ ಸರ್ವೋಪಾಧಿವಿನಿರ್ಮುಕ್ತವಾಗಿ ಆತ್ಮತ್ವವಾಗುವುದು.

೬. ಚಿತ್ತಮಾತ್ರವೇ ಪುರುಷನು. ಅದರಿಂದ ಘಟವಿರುವಾಗ ಇದ್ದು ಘಟವು ಹೋದಾಗ ತಾನೂ ಹೋಗುವ ಘಟಾಕಾಶದಂತೆ, ಪುರುಷನೂ ಈ ಚಿತ್ತವು ಇರುವವರೆಗೂ ತಾನು ಇದ್ದು, ಈ ಚಿತ್ತವು ಅಸ್ತವಾಗುತ್ತಲೂ ತಾನೂ ಅಸ್ತನಾಗುವನು.

(ಏತೇಭ್ಯೋ ಭೂತೇಭ್ಯೋ ಸಮುತ್ಥಾಯ ತಾನ್ಯೇವ ಅನು ವಿನಶ್ಯತಿ। ವಿನಾಶಮೇವ ಅಪೀತೋ ಭವತಿ॥ ಶ್ರುತಿಃ ತಾ. ಪ್ರ.)

೭. ಮುಗುವು ಹೋಗುವವನನ್ನು ಹೋಗುವವನು ಎಂತಲೂ, ನಿಂತಿರುವವನನ್ನು ನಿಂತಿರುವವನು ಎಂತಲೂ ಭಾವಿಸುವ ಹಾಗೆ, ಮನಸ್ಸು ಭ್ರಾಂತಿಗೊಂಡಾಗ ತಾನು ವ್ಯಥೆಪಡುತ್ತಿರುವುದಾಗಿ ಭಾವಿಸಿಕೊಳ್ಳುವುದು.

ಕೋಶಕಾರವದಾತ್ಮಾನಂ ವಾಸನಾತನುತಂತುಭಿಃ ।
ವೇಷ್ಟಯಚ್ಚೈವ ಚೇತೋಂತರ್ಬಾಲತ್ವಾನ್ನಾವಬುಧ್ಯತೇ ॥ ೮ ॥

ಶ್ರೀ ರಾಮ ಉವಾಚ:—

ಮೌಖ್ಯ೯ಮತ್ಯಂತಘನತಾಮಾಗತಂ ಸಮುಪಸ್ಥಿತಂ ।
ಸ್ಥಾವರಾದಿ ತನು ಪ್ರಾಪ್ತಂ ಕೀದೃಶಂ ಭವತಿ ಪ್ರಭೋ ॥ ೯ ॥

ಶ್ರೀ ವಸಿಷ್ಠ ಉವಾಚ:—

ಅಮನಸ್ತ್ವಮಸಂಪ್ರಾಪ್ತಂ ಮನಸ್ತ್ವಾದಪಿ ಚ ಚ್ಯುತಂ ।
ತಟಸ್ಥಂ ರೂಪಮಾಶ್ರಿತ್ಯ ಸ್ಥಿತೈಷಾ ಸ್ಥಾವರೇಷು ಚಿತ್ ॥ ೧೦ ॥

ತತ್ರ ದೂರಸ್ಥಿತಾ ಮುಕ್ತಿರ್ಮನ್ಯೇ ವೇದ್ಯವಿದಾಂ ವರ ।
ಸುಪ್ತಪುರ್ಯಷ್ಟಕಾ ಯತ್ರ ಚಿತ್ಸ್ಥಿತಾ ದುಃಖದಾಯಿನೀ ॥ ೧೧ ॥

---

೮. ರೇಷ್ಮೆ ಹುಳುವು ತನ್ನ ದಾರಗಳಿಂದಲೇ ತನ್ನಿಂದಲೇ ಆದ ಗೂಡಿನಲ್ಲಿಯೇ ತಾನು ಹೂತುಹೋಗುವಂತೆ, ಈ ಚಿತ್ತವು ವಿವೇಕಶೂನ್ಯವಾಗಿ ತನ್ನ ವಾಸನಾತಂತುಗಳಿಂದಲೇ ತಾನೇ ತನ್ನನ್ನು ಕಟ್ಟಿಕೊಂಡು ತಿಳಿಯದೆ ಹೋಗುವುದು.

೯. ಶ್ರೀರಾಮನು ಕೇಳಿದನು—ಪ್ರಭುವೆ, ಮೌಖ್ಯ೯ವು ಘನವಾಗಿ ಸ್ಥಾವರಾದಿಗಳ ದೇಹವನ್ನು ಪಡೆದಾಗ ಆ ಚಿತ್ತವು ಹೇಗಿರುವುದು ?

೧೦. ಶ್ರೀ ವಸಿಷ್ಠನು ಹೇಳಿದನು—ಆ ಸ್ಥಾವರಾದಿಗಳಲ್ಲಿ ಮನಸ್ಸು ಶೂನ್ಯವಾಗಿ ಅಮನಸ್ತ್ವವನ್ನೂ ಪಡೆದಿರುವುದಿಲ್ಲ. (ಹಾಗೆಂದು ಜಂಗಮಾದಿಗಳಲ್ಲಿ ಗೋಚರವಾಗುವ) ಮನಸ್ತ್ವವೂ ಅಲ್ಲಿರುವುದಿಲ್ಲ. ಈ ಎರಡೂ ಅಲ್ಲದ ತಾಟಸ್ಥ್ಯ ಭಾವವನ್ನು ಹೊಂದಿ ಚಿತ್ತು ಸ್ಥಾವರಾದಿಗಳಲ್ಲಿರುವುದು.

೧೧. ಬಲ್ಲವರಲ್ಲಿ ಶ್ರೇಷ್ಠನಾದ ರಾಮನೆ, (ಅಂತಹ ಸ್ಥಾವರಾದಿಗಳಿಗೆ) ಮುಕ್ತಿಯು ಬಹು ದೂರ. ಎಲ್ಲಿ ಪುರ್ಯಷ್ಟಕವು ಸುಪ್ತವಾಗಿರುವುದೋ ಅಲ್ಲಿ ಚಿತ್ತು ಕೇವಲ ದುಃಖಪ್ರದವಾಗಿರುವುದು. ಅಲ್ಲದೆ ಮೂಕರು, ಅಂಧರು, ಜಡರು, ಇವರಂತೆ ಅಲ್ಲಿ ಕೇವಲ ಸತ್ತಾಮಾತ್ರದಿಂದ ಇರುವುದು.

ಸತ್ತಾದ್ವೈತತಯಾ ಯತ್ರ ಸಂಸ್ಥಿತಾ ಸ್ಥಾವರೇಷು ಚಿತ್ ।
ತತ್ರಾದೂರಸ್ಥಿತಾ ಮುಕ್ತಿರ್ಮನ್ಯೇ ವೇದ್ಯವಿದಾಂ ವರ ॥ ೧೨ ॥

ಬುದ್ಧಿಪೂರ್ವಂ ವಿಚಾರ್ಯೇದಂ ಯಥಾವಸ್ತ್ವವಲೋಕನಾತ್ ।
ಸತ್ತಾಸಾಮಾನ್ಯಬೋಧೋ ಯಃ ಸ ಮೋಕ್ಷೋಽಕ್ಷಯೋಽನಂತಕಃ ॥ ೧೩ ॥

(ಪುರ್ಯಷ್ಟಕವೆನ್ನುವುದರಿಂದ ತದಂತರ್ಗವಾದ ಬಾಹ್ಯ-ಅಂತಃಕರಣ ಜಾತವೆಲ್ಲವನ್ನೂ ಹೇಳಿದೆ. ಮೂಕಪದದಿಂದ ಕರ್ಮೇಂದ್ರಿಯ ಶೂನ್ಯತೆಯನ್ನೂ ಅಂಧಪದದಿಂದ ಜ್ಞಾನೇಂದ್ರಿಯ ಪ್ರಚಾರಶೂನ್ಯತೆಯನ್ನೂ ಜಡಪದದಿಂದ ಮಾನಸ ಪ್ರಸಾರಣ ಶೂನ್ಯತೆಯನ್ನು ತೋರಿಸಿದೆ. ತಾ. ಪ್ರ.)

೧೨. ಶ್ರೀರಾಮನು ಕೇಳಿದನು—ಎಲೈ ಬಲ್ಲವರ ವಲ್ಲಭನೆ, ಎಲ್ಲಿ ಚಿತ್ತು (ಕಲನಾದಿರಹಿತವಾಗಿ) ಏಕೈಕವಾಗಿ ಸತ್ತಾಮಾತ್ರದಿಂದಲೇ ಇರುವುದೋ, ಅಂತಹ ಸ್ಥಾವರಗಳಲ್ಲಿ ಮುಕ್ತಿಯು ಅದೂರಸ್ಥಿತವೆಂದು ತಿಳಿಯುವೆನು.

೧೩. ಶ್ರೀ ವಸಿಷ್ಠನು ಹೇಳಿದನು—ಬುದ್ಧಿಪೂರ್ವಕವಾಗಿ (ಇದು ವಿವೇಕ, ಇದು ಅವಿವೇಕ ಎಂದು) ವಿಚಾರಮಾಡಿ ನೋಡಿ, ಯಥಾವತ್ತಾಗಿ ವಸ್ತುವನ್ನು ದರ್ಶನಮಾಡಿದುದರ ಫಲವಾಗಿ ಬರುವ ಸತ್ತಾಸಾಮಾನ್ಯ ಸ್ಥಿತಿಯಾದರೆ ಅದು ಅನಂತವಾದ ಮೋಕ್ಷವಾಗುವುದು.

(ಶಾಸ್ತ್ರವಿಹಿತ ಕರ್ಮಾನುಷ್ಠಾನ ಕೃತಚಿತ್ತಶುದ್ಧಿ, ಸಾಧನಚತುಷ್ಟಯ ಸಂಪತ್ತಿ ಸಹಕೃತ ಶ್ರವಣ ಮನನ ನಿಧಿಧ್ಯಾಸಜನ್ಯ ತತ್ತ್ವಸಾಕ್ಷಾತ್ಕಾರ ಕೃತ ಸಮೂಲವಾಸನಾಕ್ಷಯ ಮನೋನಾಶಗಳಿಂದ (ಲಭಿಸುವ) ಸತ್ತಾಸಾಮಾನ್ಯ ಸ್ಥಿತಿಯೇ ಮೋಕ್ಷವು. ಅದು ಅನಂತ ದುಷ್ಕೃತ ದುರ್ವಾಸನಾ ಬೀಜಸಂಭೃತವಾದ ನಾರಕಿಪ್ರಾಯ ಸ್ಥಾವರಗಳಿಗೆ ದುರ್ಲಭತರವು ಎಂದು ವಸಿಷ್ಠರ ಅಭಿಪ್ರಾಯವು. ತಾ. ಪ್ರ.)

ಪರಿಜ್ಞಾಯ ಪರಿತ್ಯಾಗೋ ವಾಸನಾನಾಂ ಯ ಉತ್ತಮಃ |
ಸತ್ತಾಸಾಮಾನ್ಯರೂಪತ್ವಂ ತತ್ಕೈವಲ್ಯಪದಂ ವಿದುಃ || ೧೪ ||

ವಿಚಾರ್ಯಾರ್ಯೈಃ ಸಹಾಲೋಕ್ಯ ಶಾಸ್ತ್ರಾಣ್ಯಧ್ಯಾತ್ಮಭಾವನಾತ್ |
ಸತ್ತಾಸಾಮಾನ್ಯನಿಷ್ಠತ್ವಂ ಯತ್ತದ್ಬ್ರಹ್ಮ ಪರಂ ವಿದುಃ || ೧೫ ||

ಅಂತಃ ಸುಪ್ತಾ ಸ್ಥಿತಾ ಮಂದಾ ಯತ್ರ ಬೀಜ ಇವಾಂಕುರಃ |
ವಾಸನಾ ತತ್ಸುಷುಪ್ತತ್ವಂ ವಿದ್ಧಿ ಜನ್ಮಪ್ರದಂ ಪುನಃ || ೧೬ ||

ಅಂತಃ ಸಂಲೀನಮನನಂ ಪರಿತಃ ಸುಪ್ತವಾಸನಂ |
ಸುಷುಪ್ತಂ ಜಡಧರ್ಮಾಪಿ ಜನ್ಮ ದುಃಖಶತಪ್ರದಂ || ೧೭ ||

ಸ್ಥಾವರಾದಯ ಏತೇ ಹಿ ಸಮಸ್ತಾ ಜಡಧರ್ಮಿಣಃ |
ಸುಷುಪ್ತಪದಮಾರೂಢಾ ಜನ್ಮಯೋಗ್ಯಾಃ ಪುನಃ ಪುನಃ || ೧೮ ||

---

೧೪. ಜ್ಞಾನಪೂರ್ವಕವಾಗಿ ಮಾಡುವ ವಾಸನಾತ್ಯಾಗವು ಯಾವುದುಂಟೋ, (ಅಂತಹ ವಾಸನಾತ್ಯಾಗದ ಫಲವಾಗಿ ಲಭಿಸುವ ಯಾವ) ಸತ್ತಾಸಾಮಾನ್ಯರೂಪ ಸ್ಥಿತಿ ಯಾವುದುಂಟೋ, ಅದನ್ನು ಕೈವಲ್ಯ ಪದವೆನ್ನುವರು.

೧೫. ಆರ್ಯರಾದವರೊಡನೆ ವಿಚಾರಮಾಡಿ ಅಧ್ಯಾತ್ಮಸಂಪನ್ನನಾಗಬೇಕೆಂಬ ಭಾವನೆಯಿಂದಲೇ ಶಾಸ್ತ್ರಗಳನ್ನು ನೋಡಿ, ಸತ್ತಾಸಾಮಾನ್ಯನಿಷ್ಠನಾಗುವುದು ಯಾವುದೋ ಅದನ್ನು ಶ್ರೇಷ್ಠವಾದ ಬ್ರಹ್ಮವೆನ್ನುವರು.

೧೬. ಯಾವ ಅವಸ್ಥೆಯಲ್ಲಿ ಬೀಜದಲ್ಲಿರುವ ಅಂಕುರದಂತೆ, ವಾಸನೆಯು ಸುಪ್ತವಾಗಿಯೋ ಮಂದವಾಗಿಯೋ ಇರುವುದೋ ಅದು ಸುಷುಪ್ತತ್ವವು. ಅದು ಮುಂದೆ ಜನ್ಮಗಳನ್ನು ಕೊಟ್ಟೇಕೊಡುವುದೆಂದೇ ತಿಳಿ.

೧೭. ಮನನಶಕ್ತಿಯು ಅಂತರ್ಧಾನವಾಗಿ, ವಾಸನೆಗಳೆಲ್ಲ ಹೇಗೆ ಹೇಗೂ ಸುಪ್ತವಾಗಿ ಸುಷುಪ್ತಿಯಲ್ಲಿರುವ ಜಡಧರ್ಮವಾದ (ಪಾಷಾಣಾದಿಗಳಿಗೂ ಕೂಡ ಚಿತ್ತು) ದುಃಖಶತಪ್ರದವಾಗಿರುವುದು.

೧೮. ಸ್ಥಾವರಾದಿಗಳಾದ ಇವೆಲ್ಲವೂ ಜಡಧರ್ಮವುಳ್ಳವು. ಸುಷುಪ್ತ್ಯವಸ್ಥೆಯಲ್ಲಿರುವುವು. ಅದರಿಂದ ಮತ್ತೆ ಮತ್ತೆ ಜನ್ಮವನ್ನು ಪಡೆಯುವುವು.

ಯಥಾ ಬೀಜೇಷು ಪುಷ್ಪಾದಿ ಮೃದೋ ರಾಶೌ ಘಟೋ ಯಥಾ |
ತಥಾಂತಃ ಸಂಸ್ಥಿತಾ ಸಾಧೋ ಸ್ಥಾವರೇಷು ಸ್ವವಾಸನಾ || ೧೯ ||

ಯತ್ರಾಸ್ತಿ ವಾಸನಾಬೀಜಂ ತತ್ಸುಷುಪ್ತಂ ನ ಸಿದ್ಧಯೇ |
ನಿರ್ಬೀಜಾ ವಾಸನಾ ಯತ್ರ ತತ್ತುರ್ಯಂ ಸಿದ್ಧಿದಂ ಸ್ಮೃತಂ || ೨೦ ||

ವಾಸನಾಯಾಸ್ತಥಾ ವಹ್ನೇರ್ಋಣವ್ಯಾಧಿದ್ವಿಷಾಮಪಿ |
ಸ್ನೇಹವೈರವಿಷಾಣಾಂ ಯಃ ಶೇಷಃ ಸ್ವಲ್ಪೋಽಪಿ ಬಾಧತೇ || ೨೧ ||

ನಿರ್ದಗ್ಧವಾಸನಾಬೀಜಸತ್ತಾಸಾಮಾನ್ಯರೂಪವಾನ್ |
ಸದೇಹೋ ವಾ ವಿದೇಹೋ ವಾ ನ ಭೂಯೋ ದುಃಖಭಾಗ್ಭವೇತ್ || ೨೨ ||

ಚಿಚ್ಛಕ್ತಿರ್ವಾಸನಾಬೀಜರೂಪಿಣೀ ಸ್ವಾಪಧರ್ಮಿಣೀ |
ಸ್ಥಿತಾ ರಸತಯಾ ನಿತ್ಯಂ ಸ್ಥಾವರಾದಿಷು ವಸ್ತುಷು || ೨೩ ||

---

೧೯. ಬೀಜಗಳಲ್ಲಿ ಪುಷ್ಪಾದಿಗಳಿರುವಂತೆ, ಮಣ್ಣಿನ ರಾಶಿಯಲ್ಲಿ ಘಟವಿರುವಂತೆ, ಸಾಧುವಾದ ರಾಮನೆ, ಸ್ಥಾವರಗಳಲ್ಲಿ ಸ್ವ(ಕರ್ಮ) ವಾಸನೆಯು ಅಂತಸ್ಸಂಸ್ಥಿತವಾಗಿರುವುದು.

೨೦. ವಾಸನಾಬೀಜವು ಎಲ್ಲಿರುವುದೋ ಅಲ್ಲಿ ಸುಷುಪ್ತಿಯಾಗುವುದೇ ಹೊರತು ಸಿದ್ಧಿಯಾಗುವುದಿಲ್ಲ. ಎಲ್ಲಿ ವಾಸನೆಯು ನಿರ್ಬೀಜವಾಗಿರುವುದೋ ಅಲ್ಲಿಯೇ ಅದು ತುರ್ಯವೆಂಬ ಸಿದ್ಧಿಯನ್ನು ಕೊಡುವುದು.

೨೧. ಬೆಂಕಿ, ಸಾಲ, ವ್ಯಾಧಿ, ಶತ್ರುಗಳು, ಸ್ನೇಹ, ವೈರ, ವಿಷ, ಇವುಗಳು ಕೊಂಚ ಉಳಿದಿದ್ದರೂ, ಎಷ್ಟೇ ಕೊಂಚವಾದರೂ ಬಾಧಿಸುವುವು. ಹಾಗೆಯೇ ವಾಸನೆಯು ಎಷ್ಟೇ ಕೊಂಚವಿರಲಿ, ಬಾಧಿಸುವುದು.

೨೨. ಯಾವನಿಗೆ ವಾಸನೆಯು ನಿರ್ಬೀಜವಾಗುವಂತೆ ದಗ್ಧವಾಗಿ ಹೋಗಿ, ಸತ್ತಾ ಸಾಮಾನ್ಯ ಸ್ಥಿತಿಯಲ್ಲಿರುವನೋ ಅವನು ಸದೇಹನಾಗಿರಲಿ, ವಿದೇಹನಾಗಿರಲಿ, ಮತ್ತೆ ಅವನು ದುಃಖಭಾಗಿಯಾಗುವುದಿಲ್ಲ.

೨೩. ಚಿಚ್ಛಕ್ತಿಯೇ ವಾಸನಾಬೀಜ ರೂಪಿಣಿಯಾಗಿರುವಳು. ಅವಳು ಯಾವಾಗಲೂ ಸ್ವಾಪಧರ್ಮವುಳ್ಳವಳು (ಎಂದರೆ ನಿದ್ದೆ ಮಾಡುತ್ತಲೇ ಇರುವವಳು) ರಸರೂಪಳಾಗಿ ಈಕೆಯು ಸ್ಥಾವರಾದಿಗಳಲ್ಲಿ ಇರುವಳು.

ಬೀಜೇಷೂಲ್ಲಾಸರೂಪೇಣ ಜಾಡ್ಯೇನ ಜಡರೂಪಿಷು ।
ದ್ರವ್ಯೇಷು ದ್ರವ್ಯಭಾವೇನ ಕಾಠಿನ್ಯೇನೇತರೇಷು ಚ ॥ ೨೪ ॥

ಭಸ್ಮನ್ಯಥಾನಿತ್ಯರೂಪಾ ಪಾಂಸುಷ್ವಪ್ಯಣುರೂಪಿಣೀ ।
ಅಸಿತೇಷ್ವಸಿತಸ್ಥಿತ್ಯಾ ಸಿತಧಾರತಯಾಸಿಷು ॥ ೨೫ ॥

ಆತ್ಮಾ ಶಕ್ತಿಃ ಪದಾರ್ಥೇಷು ತಥಾ ಘಟಪಟಾದಿಷು ।
ಸರ್ವತ್ರ ಸತ್ತಾಸಾಮಾನ್ಯರೂಪಮಾಶ್ರಿತ್ಯ ತಿಷ್ಠತಿ ॥ ೨೬ ॥

ಇತೀಯಮಖಿಲಾ ದೃಶ್ಯದಶಾಮಾಪೂರ್ಯ ಸಂಸ್ಥಿತಾ ।
ಯಥಾ ಘಟಾಪಟಾಪಪ್ರಾವೃಡಂಬರಾಲಂಬಿನೀ ತಥಾ ॥ ೨೭ ॥

ಸ್ವರೂಪಮಸ್ಯಾಶ್ಚೈವೈತತ್ಕಥಿತಂ ಪ್ರವಿಚಾರಿತಂ ।
ಅಸರ್ವಂ ಸರ್ವತೋ ವ್ಯಾಪಿ ಸದಿವಾಸನ್ಮಯಾತ್ಮಕಂ ॥ ೨೮ ॥

೨೪-೨೬. ಬೀಜದಲ್ಲಿ ಉಲ್ಲಾಸರೂಪವಾಗಿ, ಜಡರೂಪಿಗಳಲ್ಲಿ ಜಾಡ್ಯವಾಗಿ ದ್ರವ್ಯಗಳಲ್ಲಿ ದ್ರವ್ಯರೂಪವಾಗಿ, ಇತರ ವಸ್ತುಗಳಲ್ಲಿ ಕಾಠಿಣ್ಯ ರೂಪವಾಗಿ, ಭಸ್ಮದಲ್ಲಿ ಅನಿತ್ಯರೂಪವಾಗಿ, ಧೂಳುಗಳಲ್ಲಿ ಅಣುರೂಪವಾಗಿ, ಕಪ್ಪಾಗಿರುವವುಗಳಲ್ಲಿ ಕಪ್ಪಾಗಿ, ಕತ್ತಿಗಳಲ್ಲಿ ಚೂಪಾದ ಅಲಗಿನ ಧಾರೆಯಾಗಿ, ಘಟಪಟಾದಿ ಪದಾರ್ಥಗಳಲ್ಲಿಯೂ ಆತ್ಮನಾಗಿ, ಶಕ್ತಿಯಾಗಿ, ಎಲ್ಲೆಲ್ಲೂ ಸತ್ತಾಸಾಮಾನ್ಯರೂಪವಾಗಿ ಆ ಚಿಚ್ಛಕ್ತಿಯೇ ಇರುವಳು.

೨೭. ಹೀಗೆ, ಈ ಚಿಚ್ಛಕ್ತಿಯೇ ತಾನೇತಾನಾಗಿ ದೃಶ್ಯಮಂಡಲವನ್ನೆಲ್ಲ ಆವರಿಸಿರುವಳು. ಘಟವೂ ಅವಳೇ! ಪಟವೂ ಅವಳೇ! ವರ್ಷಾಕಾಲದಲ್ಲಿ ಆಕಾಶವನ್ನೆಲ್ಲಾ ಆವರಿಸಿರುವಳೂ ಅವಳೇ!

(ಘಟಾ ಮೇಘಜಾಲಮೇವ ಪಟ ಆಚ್ಛಾದಕೋ ಯಸ್ಯಾಃ ತಥಾ ವಿಧಾ ಪ್ರಾವೃಡ್ ವರ್ಷರ್ತುಃ—ತಾ. ಪ್ರ. ಇಲ್ಲಿ ೨೫ನೆಯ ಶ್ಲೋಕದ ವ್ಯಾಖ್ಯಾನದಲ್ಲಿ ಹೇಳಿರುವ ಘಟಪಟಾದಿಷು ಸರ್ವತ್ರ ಸರ್ವವಸ್ತುಷು............ಜಲಾಹರಣ, ಶೀತ ನಿವಾರಣಾದಿ ನಾನಾ ಶಕ್ತಿಃ ಸಂಸ್ಥಿತಿಷ್ಠತಿ" ಎಂಬ ಅರ್ಥವನ್ನು ಇಲ್ಲಿ ತೆಗೆದುಕೊಂಡಿದೆ.)

೨೮. ಈಗ ಹೇಳಿದುದು ವಿಚಾರ ಮಾಡಿದುದು ಎಲ್ಲ ಅವಳ ಸ್ವರೂಪವೇ

ಆತ್ಮದೃಷ್ಟಿರದೃಷ್ಟೈಷಾ ಸಂಸಾರಭ್ರಮದಾಯಿನೀ |
ದೃಷ್ಟಾ ಸತೀ ಸಮಗ್ರಾಣಾಂ ದುಃಖಾನಾಂ ಕ್ಷಯಕಾರಿಣೀ || ೨೯ ||

ಅಸ್ಯಾಸ್ತ್ವದರ್ಶನಂ ಯತ್ತದವಿದ್ಯೇತ್ಯುಚ್ಯತೇ ಬುಧೈಃ |
ಅವಿದ್ಯಾ ಹಿ ಜಗದ್ಧೇತುಸ್ತತಃ ಸರ್ವಂ ಪ್ರವರ್ತತೇ || ೩೦ ||

ಅವಿದ್ಯಾರೂಪರಹಿತಾ ಯಾವದೇವಾವಲೋಕ್ಯತೇ |
ತಾವದೇವ ಗಲತ್ಯಾಶು ತುಹಿನಾಣುರ್ಯಥಾತಪೇ || ೩೧ ||

ಈಕೆಯ ಸ್ವರೂಪವು ಅಸತ್ತೇ ಆಗಿದ್ದರೂ, ಸತ್ತಿನಂತೆಯೇ (ತೋರುತ್ತ) ಅಸರ್ವ ವಾಗಿದ್ದರೂ ಸರ್ವತೋ ವ್ಯಾಪ್ತಿಯಾಗಿರುವುದು.

(ದೇಶ ಕಾಲಗಳೆರಡೂ ಈಕೆಯ ನಿರ್ಮಾಣವಾದ್ದರಿಂದ ಅವೆರಡರಲ್ಲಿಯೂ ಈಕೆಯು ತುಂಬಿರುವಳು. ಆದರೆ ದೇಶ ಕಾಲಾದ್ಯತೀತವಾಗಿರುವ ಬ್ರಹ್ಮದಲ್ಲಿ ಈಕೆಗೆ ವ್ಯಾಪ್ತಿಯಿಲ್ಲ. ಅದರಿಂದಲೇ ಗೀತೆಯಲ್ಲಿ ಸಾಮಾನ್ಯರಿಗೆ ದುರತ್ಯಯಳಾದ ಈ ಮಾಯೆಯನ್ನು ನನ್ನನ್ನು ಆಶ್ರಯಿಸಿದವರು ದಾಟುವರು ಎಂದು ಹೇಳಿರುವುದು.)

೨೯. ಅದೃಷ್ಟಳಾಗಿದ್ದಾಗ ಈಕೆಯು ಸಂಸಾರ ಭ್ರಾಂತಿಯನ್ನುಂಟುಮಾಡುವಳು. ಆತ್ಮದರ್ಶನ ಮಾಡಲೆಳಸಿ ಈಕೆಯ ಸ್ವರೂಪವನ್ನು ತಿಳಿದವರಿಗೆ ಸಮಗ್ರ ದುಃಖಗಳನ್ನೂ ನಿವಾರಣ ಮಾಡುವಳು.

೩೦. ಈಕೆಯ ಕಾಣದಿರುವಿಕೆಯೇ ಅವಿದ್ಯೆಯು. ಅವಿದ್ಯೆಯೇ ಜಗತ್ತಿಗೆ ಕಾರಣವು. ಅದರಿಂದಲೇ ಎಲ್ಲವೂ ಹುಟ್ಟುವುದು.

(ಅಸ್ಯಾಃ ಆತ್ಮದೃಷ್ಟೇಃ ಅದರ್ಶನಂ ದರ್ಶನ ವಿರೋಧ್ಯಾವರಣರೂಪಂ.—ತಾ. ಪ್ರ.)

೩೧. ರೂಪರಹಿತವಾದ ಈ ಅವಿದ್ಯೆಯನ್ನು ಕಂಡದ್ದೇ ಆದರೆ, ಕೂಡಲೇ, ಬಿಸಿಲಿನಲ್ಲಿ ಕಣ್ಮರೆಯಾಗುವ ಹಿಮಕಣದಂತೆ, ಈ ಅವಿದ್ಯೆಯೂ ನಾಶವಾಗುವುದು.

ಯಥಾ ನರೋ ಗಲನ್ನಿದ್ರೋ ಯಾವತ್ಕಲನಯಾ ಮನಾಕ್ ।
ವಿಮೃಶತ್ಯಾಶಯಂ ತಾವನ್ನಿದ್ರಾ ತಸ್ಯ ವಿಲೀಯತೇ ॥ ೩೨ ॥

ಯಥಾ ಕೀದೃಗವಸ್ತ್ವೇತದಿತಿ ಯಾವದ್ವಿಕಲ್ಪ್ಯತೇ ।
ಅವಿದ್ಯಾ ಕ್ಷೀಯತೇ ತಾವದಾಲೋಕೇನಾಂಧತಾ ಯಥಾ ॥ ೩೩ ॥

ದೀಪಹಸ್ತೋ ಯಥಾಭ್ಯೇತಿ ತಮೋರೂಪದಿದೃಕ್ಷಯಾ ।
ತಥಾ ವಿಲೀಯತೇ ಸರ್ವಂ ತಮಸ್ತಾಪೈಃ ಘೃತಂ ಯಥಾ ॥ ೩೪ ॥

ನ ಚ ಸಂಲಕ್ಷ್ಯತೇ ದೀಪೇ ತಮಸೋ ರೂಪನಿಶ್ಚಯಃ।
ಉದೇತಿ ಕೇವಲಂ ಧ್ವಾಂತಧ್ವಂಸೋ ವಿಮಲಮೂರ್ತಿಮಾನ್ ॥ ೩೫ ॥

ಏವಮಾಲೋಕ್ಯಮಾನೈಷಾ ಕ್ವಾಪಿ ಯಾತಿ ಪಲಾಯತೇ ।
ಅಸದ್ರೂಪಾ ಹ್ಯವಸ್ತುತ್ವಾದ್ದೃಶ್ಯತೇ ಹ್ಯವಿಚಾರಣಾತ್ ॥ ೩೬ ॥

---

೩೨. ಯಾವನಾದರೊಬ್ಬನಿಗೆ ಯೋಚನೆಯಿಂದ ನಿದ್ದೆ ಹತ್ತದಿದ್ದರೆ, ಆ ಯೋಚನೆಯನ್ನು ಕುರಿತು ಚಿಂತಿಸುತ್ತಿರುವವರೆಗೂ ನಿದ್ದೆಯೇ ಬರುವುದಿಲ್ಲ.

೩೩. ಹಾಗೆಯೇ ಅವಸ್ತುವೆಂಬುದು ಎಂಥದು ? ಈ ಅವಸ್ತುವೆಂಬುದು ಅದೋ ಇದೋ ? ಎಂದು ವಿಚಾರ ಮಾಡಲಾರಂಭಿಸಿದರೆ, ಆ ಅವಿದ್ಯೆಯು ಕ್ಷಯ ವಾಗುವುದು. ಬೆಳಕು ಬಂದ ಮೇಲೆ ಕಣ್ಣು ಕಾಣಿಸದಿರುವುದೆಂತು ?

೩೪. ಕತ್ತಲೆಂದರೇನು ಎಂದು ಕತ್ತಲೆಯನ್ನು ನೋಡಬೇಕೆಂದು ದೀಪವನ್ನು ತೆಗೆದುಕೊಂಡು ಹೊರಟರೆ, ಬೆಂಕಿಯ ಮುಂದಿಟ್ಟ ತುಪ್ಪವು ಕರಗುವಷ್ಟು ನಿಜವಾಗಿ ಅವನ ಸುತ್ತಮುತ್ತಲೂ ಇದ್ದ ಕತ್ತಲೆಲ್ಲವೂ ಮಾಯವಾಗುವುದು.

೩೫. ದೀಪವಿರಲು ಕತ್ತಲೆಯ ರೂಪವನ್ನು ಕಾಣುವುದೆಂತು ? ಕತ್ತಲೆ ಯನ್ನು ಧ್ವಂಸ ಮಾಡುವ ನಿರ್ಮಲ ಪ್ರಕಾಶದ ದೀಪವೇ ಕಾಣಿಸುವುದು.

೩೬. ಹಾಗೆಯೇ ಈ ಅವಿದ್ಯೆಯು ಏನು ನೋಡೋಣ ಎಂದು ಹೊರಟರೆ ಸಾಕು, ಎಲ್ಲಿಯೋ ಓಡಿಬಿಡುವುದು. ಅವಿದ್ಯೆಯು ಅವಸ್ತುವಾದ್ದರಿಂದ ಅದಕ್ಕೆ ಸ್ವತಂತ್ರವಾದ ರೂಪವಿಲ್ಲವಾಗಿ, ಅವಿಚಾರ ದಶೆಯಲ್ಲಿ ಮಾತ್ರ ಇರುವಳು.

ಆಲೋಕ ಆಗತೇ ಯದ್ವೃತ್ತಮಸ್ತದ್ದೃಶ್ಯತೇ ತಥಾ ।
ಯಾ ವಸ್ತುತ್ವೇ ತ್ವವಿದ್ಯಾಯಾಸ್ತ್ವವಸ್ತುತ್ವಂ ಪ್ರತೀಯತೇ ॥ ೩೭ ॥

ಯಾವನ್ನಾಲೋಕ್ಯತೇ ತಾವನ್ನ ಕಿಂಚಿದಪಿ ದೃಶ್ಯತೇ ।
ಆಲೋಕಿತೇ ಯಥಾ ವಿದ್ಯಾ ತತ್ತಥಾ ಪ್ರತಿಪಾದ್ಯತೇ ॥ ೩೮ ॥

ರಕ್ತಮಾಂಸಾಸ್ಥಿಯಂತ್ರೇಽಸ್ಮಿನ್ಕಃ ಸ್ಯಾಮಹಮಿತಿ ಸ್ವಯಂ ।
ಯಾವದ್ವಿಚಾರ್ಯತೇ ತಾವತ್ಸರ್ವಮಾಶು ವಿಲೀಯತೇ ॥ ೩೯ ॥

ಆದ್ಯಂತಯೋರಸದ್ರೂಪೇ ನೂನಂ ಪರಿಹೃತೇ ಹೃದಾ ।
ಸರ್ವಸ್ಮಿನ್ನೇವ ಯಃ ಶೇಷಸ್ತಮವಿದ್ಯಾಕ್ಷಯಂ ವಿದುಃ ॥ ೪೦ ॥

(ಮಂದಮಾಲೋಕಮಾಸಾ ಮಂದಂಯಾತಿ।ಸಮ್ಯಗಾಲೋಕಮಾಸಾ ಪಲಾಯತೇ—ತಾ. ಪ್ರ.)

೩೭. ದೀಪವು ಬರುತ್ತಿದ್ದ ಹಾಗೆಯೇ ತಮಸ್ಸು (ಪ್ರಕಾಶವಿಲ್ಲದಿರುವಿಕೆಯೇ ತಾನು ಎಂದು) ತನ್ನ ರೂಪವನ್ನು ತೋರಿಸಿಕೊಳ್ಳುವಂತೆ, ಅವಿದ್ಯೆಯೂ ತನ್ನ ವಾಸ್ತವವಾದ ಅವಸ್ತುತ್ವವನ್ನು ತೋರಿಸಿಕೊಳ್ಳುವುದು.

೩೮. ಕಣ್ಣಿಟ್ಟು ನೋಡುವವರೆಗೆ ಯಾವುದೂ ಕಾಣಿಸುವುದೇ ಇಲ್ಲ. ಕಣ್ಣಿಟ್ಟು ನೋಡಿದರೆ, ಅವಿದ್ಯೆಯು ಯಥಾರ್ಥ ಸ್ವರೂಪವು ತಿಳಿಯುವುದು.

೩೯. ರಕ್ತ, ಮಾಂಸ, ಅಸ್ಥಿಗಳಿಂದಾದ ಈ ಯಂತ್ರದಲ್ಲಿ "ನಾನು" ಎಂಬುದು ಏನು? ಎಂದು ವಿಚಾರ ಮಾಡಲು ಹೊರಟರೆ ಸಾಕು, ಎಲ್ಲಾ (ಅವಿದ್ಯೆಯೂ) ಮಾಯವಾಗುವುದು.

೪೦. ಆದಿಯಲ್ಲಿಯೂ, ಅಂತ್ಯದಲ್ಲಿಯೂ, ಇರುವ ಅಸದ್ರೂಪಗಳು ಮನಸ್ಸಿನಿಂದ ಕಳೆದುಹೋದರೆ, ದೃಶ್ಯಜಾತದಲ್ಲೆಲ್ಲ ಶೇಷವಾಗಿ ಉಳಿಯುವುದು ಯಾವುದೋ ಅದನ್ನೇ ಅವಿದ್ಯಾಕ್ಷಯ ಎನ್ನುವರು.

ತನ್ನ ಕಿಂಚಿಚ್ಚ ಕಿಂಚಿದ್ವಾ ತತ್ಸದ್ಬ್ರಹ್ಮೈವ ಶಾಶ್ವತಂ ।
ತದ್ವಸ್ತು ತದುಪಾದೇಯಂ ಯದವಿದ್ಯಾ ನಿವರ್ತತೇ ॥ ೪೧ ॥

ರೂಪಂ ಸ್ವನಾಮ್ನ ಏವಾಸ್ಯಾ ಜ್ಞಾಯತೇ ನಿಃಸ್ವಭಾವಕಂ ।
ನಹಿ ಜಿಹ್ವಾಗತಖಾದ್ಯಖಾದೋನ್ಯಸ್ಮಾತ್ಪ್ರತೀಯತೇ ॥ ೪೨ ॥

ನಾವಿದ್ಯಾ ಕ್ವಚಿದಪ್ಯಸ್ತಿ ಬ್ರಹ್ಮೈವೇದಮಖಂಡಿತಂ ।
ಸದಸತ್ಕಲನಾಸ್ಫಾರಮಶೇಷಂ ಯೇನ ಮಂಡಿತಂ ॥ ೪೩ ॥

ಏತಾವದೇವಾವಿದ್ಯಾಯಾ ನೇದಂ ಬ್ರಹ್ಮೇತಿ ನಿಶ್ಚಯಃ ।
ಏತದೇವ ಕ್ಷಯೋ ಯಸ್ಯಾ ಬ್ರಹ್ಮೇದಮಿತಿ ನಿಶ್ಚಯಃ ॥ ೪೪ ॥

---

೪೧. ಯಾವಾಗ ಅವಿದ್ಯಾಕ್ಷಯವಾಗುವುದೋ ಆಗ ದೊರೆಯುವ ಅದೇ ಶಾಶ್ವತವಾದ ಬ್ರಹ್ಮವು. ಅದು ಇದೂ ಅಲ್ಲ; ಅದೂ ಇಲ್ಲ. ಅದೇ ವಸ್ತುವು. ಅದೇ ಉಪಾದೇಯವು.

೪೨. ಈ ಅವಿದ್ಯೆಯ ಹೆಸರಿನಿಂದಲೇ ಇದು ಅವಸ್ತುವೆಂಬುದು ತಿಳಿಯುವದು. ನಾಲಗೆಯ ಮೇಲಿರುವ ಮಧುರ ಪದಾರ್ಥದ ಮಾಧುರ್ಯವನ್ನು ತಿಳಿಯಲು ಇನ್ನೊಬ್ಬರ ಸಹಾಯವು ಬೇಕೇ ?

೪೩. (ಆದರಿಂದ) ಅವಿದ್ಯೆಯೆಂಬುದು ಎಲ್ಲಿಯೂ ಇಲ್ಲವೇ ಇಲ್ಲ ! ಇರುವುದೆಲ್ಲ ಬ್ರಹ್ಮವೊಂದೇ ! ಅಷ್ಟೇ ಅಲ್ಲ ! ಅಖಂಡವಾದ ಬ್ರಹ್ಮವೊಂದೇ ! ಸತ್-ಅಸತ್ ರೂಪವಾಗಿರುವ ಈ ದೃಶ್ಯವೆಲ್ಲವೂ ಅದೇ ! ಅದರಿಂದಲೇ ಇದೆಲ್ಲವೂ ಇರುವುದು.

೪೪. ಇದು ಬ್ರಹ್ಮವಲ್ಲ ಎಂಬ ನಿಶ್ಚಯವು ಯಾವುದುಂಟೋ ಅದೇ ಅವಿದ್ಯೆಯು. ಇದೆಲ್ಲವೂ ಬ್ರಹ್ಮವೇ ಎಂಬ ನಿಶ್ಚಯವೇ ಅದರ ಕ್ಷಯವು.

ಘಟಪಟಶಕಟಾವಭಾಸಜಾಲಂ
ನ ವಿಭುರಿತೀತ್ಯುದಿತೇ ಹ ಸಾ ತ್ವವಿದ್ಯಾ ।
ಘಟಪಟಶಕಟಾವಭಾಸಜಾಲಂ
ವಿಭುರಿತಿ ಚೇದ್ಗಲಿತೈವ ಸಾ ತ್ವವಿದ್ಯಾ ॥ ೪೫ ॥

ಇತ್ಯಾರ್ಷೇ ವಾಸಿಷ್ಠರಾಮಾಯಣೇ ವಾಲ್ಮೀಕಿಯೇ ದೇವದೂತೋಕ್ತೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ "ಅವಿದ್ಯಾ ಚಿಕಿತ್ಸಾ" ನಾಮ ದಶಮಃ ಸರ್ಗಃ

---

೪೫. ಘಟ, ಪಟ, ಶಕಟಾದಿಗಳಾಗಿ ಇಂದ್ರಿಯಗೋಚರವಾಗುತ್ತಿರುವ ಈ ದೃಶ್ಯ ಜಾಲವು ವಿಭು (ಬ್ರಹ್ಮ) ವಲ್ಲ ಎಂಬ ನಿಶ್ಚಯವೇ ಅವಿದ್ಯೆಯು ! ಘಟ, ಪಟ, ಶಕಟಗಳಾಗಿ ಕಾಣಿಸುತ್ತಿರುವ ಈ ದೃಶ್ಯವೆಲ್ಲವೂ ವಿಭು ಎಂದು ಅರಿತ ಕೂಡಲೇ ಆ ಅವಿದ್ಯೆಯು ಜೀರ್ಣವಾಗಿ ಹೋಗುವುದು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ ನಿರ್ವಾಣಪ್ರಕರಣದಲ್ಲಿ "ಅವಿದ್ಯಾಚಿಕಿತ್ಸಾ" ಎಂಬ ಹತ್ತನೆಯ ಸರ್ಗವು

ಏಕಾದಶಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಪುನಃಪುನರಿದಂ ರಾಮ ಪ್ರಬೋಧಾರ್ಥಂ ಮಯೋಚ್ಯತೇ ।
ಅಭ್ಯಾಸೇನ ವಿನಾ ಸಾಧೋ ನಾಭ್ಯುದೇತಾತ್ಮ ಭಾವನಾ ॥ ೧ ॥

ಅಜ್ಞಾನಮೇತದ್ಬಲವದವಿದ್ಯೇತರ ನಾಮಕಂ ।
ಜನ್ಮಾಂತರ ಸಹಸ್ರೋತ್ಥಂ ಘನಂ ಸ್ಥಿತಿಮುಪಾಗತಂ ॥ ೨ ॥

ಸಬಾಹ್ಯಾಭ್ಯಂತರಂ ಸರ್ವೈರಿಂದ್ರಿಯೈರನುಭೂಯತೇ ।
ಭಾವಾಭಾವೇಷು ದೇಹಸ್ಯ ತೇನಾತಿಘನತಾಂ ಗತಂ ॥ ೩ ॥

ಆತ್ಮಜ್ಞಾನಂತು ಸರ್ವೇಷಾಮಿಂದ್ರಿಯಾಣಾಮಗೋಚರಂ ।
ಸತ್ತಾಂ ಕೇವಲಮಾಯಾತಿ ಮನಃಷಷ್ಠೇಂದ್ರಿಯಕ್ಷಯೇ ॥ ೪ ॥

ಹನ್ನೊಂದನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು:—ನಿನಗೆ ಪ್ರಬೋಧವಾಗಲೆಂದು ಮತ್ತೆ ಮತ್ತೆ ಇದೇ ಅರ್ಥವನ್ನೇ ಹೇಳುತ್ತಿರುವೆನು. ಸಾಧುವಾದ ರಾಮಚಂದ್ರನೇ, ಅಭ್ಯಾಸ ಮಾಡದಿದ್ದಲ್ಲಿ ಆತ್ಮಭಾವನೆಯು ಲಭಿಸುವುದಿಲ್ಲ.

೨. ಅವಿದ್ಯೆಯೆಂಬ ನಾಮಾಂತರವುಳ್ಳ ಈ ಅಜ್ಞಾನವು ಬಲವಾಗಿ ಬೇರೂರಿವುದು. ಜನ್ಮಾಂತರ ಸಹಸ್ರಗಳಿಂದ ಆಶ್ರಯಿಸಿಕೊಂಡು ಬಂದು ಘನಸ್ಥಿತಿಯನ್ನು ಹೊಂದಿರುವುದು.

೩. ಈ ಅಜ್ಞಾನವು ಒಳಹೊರಗೆಲ್ಲ ನಿಬಿಡವಾಗಿ ತುಂಬಿಕೊಂಡು, ದೇಹದ ಭಾವ-ಅಭಾವಗಳಲ್ಲೆಲ್ಲ ಸರ್ವೇಂದ್ರಿಯಗಳ ಅನುಭವಕ್ಕೆ ಯಾವಾಗಲೂ ಬರುತ್ತಲೇ ಇರುವುದರಿಂದ, (ಪದೇಪದೇ) ದೃಢವಾಗುತ್ತಲೇ ಇರುವುದು.

೪. ಆತ್ಮಜ್ಞಾನವಾದರೋ ಸರ್ವೇಂದ್ರಿಯಗಳಿಗೂ ಅಗೋಚರವಾದುದು.

ಪ್ರೋಲ್ಲಂಘ್ಯೇಂದ್ರಿಯಜಾಂ ವೃತ್ತಿಂ ಯತ್ಸ್ಥಿತಂ ತತ್ಕಥಂ ಕಿಲ |
ಯಾತಿ ಪ್ರತ್ಯಕ್ಷತಾಂ ಜಂತೋಃ ಪ್ರತ್ಯಕ್ಷಾತೀತವೃತ್ತಿಮತ್ || ೫ ||

ತ್ವಮವಿದ್ಯಾಲತಾಮೇತಾಂ ಪ್ರರೂಢಾಂ ಹೃದಯದ್ರುಮೇ |
ಜ್ಞಾನಾಭ್ಯಾಸವಿಲಾಸಾಸಿ ಪಾತೈಶ್ಛಿಂಧಿ ಸ್ವ ಸಿದ್ಧಯೇ || ೬ ||

ಯಥಾ ವಿಹರತಿ ಜ್ಞಾತಜ್ಞೇಯೋ ಜನಕಭೂಪತಿಃ |
ಆತ್ಮಜ್ಞಾನಾಭ್ಯಾಸ ಪರಸ್ತಥಾ ವಿಹರ ರಾಘವ || ೭ ||

ನಿಶ್ಚಯೋಯಮಭೂತ್ತಸ್ಯ ಕಾರ್ಯಾಕಾರ್ಯೇ ವಿಹಾರಿಣಃ |
ಜಾಗ್ರತಸ್ತಿಷ್ಠತೋ ವಾಪಿ ತಜ್ಜ್ಞಾನಾಂ ತೇನ ಸತ್ಯತಾ || ೮ ||

ಆರನೆಯ ಇಂದ್ರಿಯವಾದ ಮನಸ್ಸು ಕ್ಷೀಣವಾದಾಗಲೇ ಅದರ ಸ್ವರೂಪವು ಗೋಚರವಾಗುವುದು.

೫. ಇಂದ್ರಿಯಗಳಿಗೆ ಗೋಚರವಾಗದೆ ಇರುವ ಆತ್ಮಜ್ಞಾನವು ಜಂತುವಿಗೆ ಪ್ರತ್ಯಕ್ಷವಾಗುವುದೆಂತು? ಆ ಆತ್ಮಜ್ಞಾನವಾದರೂ ಪ್ರತ್ಯಕ್ಷದಿಂದ ಆಚೆ ಇರುವುದು.

೬. ಹೃದಯವೆಂಬ ಮರದಲ್ಲಿ ಹುಟ್ಟಿ ಪ್ರರೂಢವಾಗಿ ಬೆಳೆದಿರುವ ಅವಿದ್ಯೆಯೆಂಬ ಈ ಭಾರಿಯ ಲತೆಯನ್ನು, ಜ್ಞಾನಾಭ್ಯಾಸವೆಂಬ ಖಡ್ಗದ ವಿಲಾಸಚ್ಛೇದಗಳಿಂದ ಆತ್ಮಸಿದ್ಧಿಯಾಗಲೆಂದು ಕಡಿದುಹಾಕು.

೭. ಜ್ಞಾತಜ್ಞೇಯ (ತಿಳಿಯಬೇಕಾದುದನ್ನು ತಿಳಿದವ) ನಾದ ಜನಕ ಭೂಪತಿಯು ಹೇಗೆ ಸುಖವಾಗಿರುವನೋ ನೀನೂ ಹಾಗೆಯೇ ಆತ್ಮಜ್ಞಾನಾಭ್ಯಾಸ ಪರನಾಗಿ, ರಾಘವ, ಸುಖವಾಗಿರು.

೮. (ಆತ್ಮಜ್ಞಾನನಿಷ್ಠನಾಗಿರುವುದೇ ಸುಖ. ಇಂದ್ರಿಯಾರಾಮನಾಗಿರುವುದಲ್ಲ ಎಂಬ) ನಿಶ್ಚಯವು ಜಾಗ್ರತ್ತಿನಲ್ಲಿ ತಾನೇ ಕಾರ್ಯ ಮಾಡುತ್ತಿರುವಾಗಲೂ, ಸುಮ್ಮನಿದ್ದು ಇತರರಿಂದ ಕಾರ್ಯಗಳನ್ನು ಮಾಡಿಸುತ್ತಿರುವಾಗಲೂ ಆ ಜನಕನಿಗೆ ಇದ್ದೇ ಇತ್ತು. ಅದರಿಂದ ಬಲ್ಲವರಿಗೆ ಆ ನಿಶ್ಚಯವು ಸತ್ಯವೆಂಬುದು ಗೊತ್ತು.

(ಅಯಂ ಮದನುಭವಾನುಸಾರೀ ನಿಶ್ಚಯಃ ಕಾರ್ಯೇಣ ಬಹಿರ್ವ್ಯವಹಾರೇಣ ಅಕಾರ್ಯೇಣ ಸಮಾಧಿನಾಚ ವಿಹಾರಿಣಃ ತಸ್ಯ ಅಭೂತ್ | ತದೇವಾಭ್ಯಾಸಫಲಂ

ನಿಶ್ಚಯೇನ ಹರಿರ್ಯೇನ ವಿವಿಧಾಚಾರಕಾರಿಣಾ ।
ಯೋನಿಷ್ವವತರತ್ಯುರ್ವ್ಯಾಂ ತತ್ತಜ್ಜ್ಞತ್ವಮುದಾಹೃತಂ ॥ ೯ ॥

ನಿಶ್ಚಯೋ ಯಸ್ತ್ರಿನೇತ್ರಸ್ಯ ಕಾಂತಾಯಾ ಸಹ ತಿಷ್ಠತಃ ।
ಬ್ರಹ್ಮಣೋ ವಾಪ್ಯರಾಗಸ್ಯ ಸ ತೇ ಭವತು ರಾಘವ ॥ ೧೦ ॥

ಜ್ಞಾನಂ । ತೇನ ಜ್ಞಾನೇನ ಏವ ಅಭಿವ್ಯಕ್ತಸ್ಯ ಸ್ವರೂಪಸ್ಯ ಸತ್ಯತಾ ನ ಆಪಾತ ಜ್ಞಾನೇನ ಇತ್ಯರ್ಥಃ—ತಾ. ಪ್ರ.)

(ಇಲ್ಲಿ ಜಾಗ್ರತಃ ಕಾರ್ಯೇ ತಿಷ್ಠತಃ ಅಕಾರ್ಯೇಚ ವಿಹಾರಿಣಃ ಎಂದು ತೆಗೆದುಕೊಂಡಿದೆ.)

(ವೇದಾಂತಿಗಳು ಅನುಭವದಲ್ಲಿ ಅನುಷ್ಠಾನಾದಾತ್ಮ್ಯ, ಅನುಭವ ತಾದಾತ್ಮ್ಯ, ಆನಂದ ತಾದಾತ್ಮ್ಯ, ಅಖಂಡೈಕರಸತಾದಾತ್ಮ್ಯ ಎಂಬ ನಾಲ್ಕು ಘಟ್ಟಗಳನ್ನು ಹೇಳುವರು. ಗುರುವು ಏನು ಮಾಡಿ ಕೃತಾರ್ಥನಾದನೋ ಅದನ್ನು ತಾನೂ ಮಾಡುವುದು ಅನುಷ್ಠಾನ ತಾದಾತ್ಮ್ಯ. ಅನುಷ್ಠಾನದಿಂದ ಗುರುವಿಗೆ ಲಭಿಸಿದ ಅನುಭವವು ತನಗೂ ಲಭಿಸಿತು ಎಂಬುದು ಎರಡನೆಯ ಅನುಭವ ತಾದಾತ್ಮ್ಯ. ಆ ಅನುಭವದಿಂದ ಗುರುವಿಗೆ ಲಭಿಸಿದ ಆನಂದವು ತನಗೂ ಲಭಿಸಿತು ಎಂಬುದು ಆನಂದತಾದಾತ್ಮ್ಯವೆಂಬ ಮೂರನೆಯ ಘಟ್ಟ. ಆ ಆನಂದವು ಅಖಂಡವಾಗಿರುವುದು, ಏಕರಸವಾಗಿರುವುದು ಎಂಬುದನ್ನು ತನ್ನ ಅನುಭವಕ್ಕೆ ತಂದುಕೊಳ್ಳುವುದು ಕೊನೆಯ ಘಟ್ಟ. ಈ ಕೊನೆಯ ಘಟ್ಟದಲ್ಲಿರುವವರು ಈ ಶ್ಲೋಕದಲ್ಲಿ ಹೇಳಿರುವ ನಿಶ್ಚಯವನ್ನು ಉಳ್ಳವರು.)

೯. ಶ್ರೀಹರಿಯು ವಿವಿಧಾಚಾರಗಳನ್ನು ಮಾಡಿಸುವ ಯಾವ ನಿಶ್ಚಯವನ್ನು ಅವಲಂಬಿಸಿ, ನಾನಾ ಯೋನಿಗಳಲ್ಲಿ ಜನ್ಮತೆತ್ತುವನೋ ಆ ನಿಶ್ಚಯವು ತಜ್ಜ್ಞತ್ವ (ಆತ್ಮಜ್ಞಾನ ಸಂಪನ್ನತೆ) ಎನ್ನಿಸಿಕೊಳ್ಳುವುದು.

೧೦. ಕಾಂತಾಲಿಂಗಿತಾರ್ಧ ದೇಹನಾಗಿ ಕುಳಿತಿದ್ದರೂ ತ್ರಿನೇತ್ರನೂ (ಸಕಲಸೃಷ್ಟಿಕಾರ್ಯಗಳನ್ನೂ ನಿರ್ವಹಿಸುತ್ತಿದ್ದರೂ ಅದರಲ್ಲಿ ಆಸಕ್ತಿಯಿಲ್ಲದೆ) ಅರಾಗನಾಗಿರುವ ಚತುರ್ಮುಖನೂ ಯಾವ ನಿಶ್ಚಯವನ್ನೂ ಪಡೆದಿರುವರೋ ಆ ನಿಶ್ಚಯವು, ರಾಘವ, ನಿನಗೂ ಬರಲಿ.

ಯೋ ನಿಶ್ಚಯಃ ಸುರಗುರೋರ್ವಾಕ್ಪತೇರ್ಭಾರ್ಗವಸ್ಯಚ ।
ದಿವಾಕರಸ್ಯ ಶಶಿನಃ ಪವನಸ್ಯಾನಲಸ್ಯ ಚ ॥ ೧೧ ॥

ನಾರದಸ್ಯ ಪುಲಸ್ತ್ಯಸ್ಯ ಮಮ ಚಾಂಗಿರಸಸ್ತಥಾ ।
ಪ್ರಚೇತಸೋ ಭೃಗೋಶ್ಚೈವ ಕ್ರತೋರತ್ರೇಃ ಶುಕಸ್ಯ ಚ ॥ ೧೨ ॥

ಅನ್ಯೇಷಾಮೇವ ವಿಪ್ರೇಂದ್ರ ರಾಜರ್ಷಿಣಾಂ ಚ ರಾಘವ ।
ಯೋ ನಿಶ್ಚಯೋ ವಿಮುಕ್ತಾನಾಂ ಜೀವತಾಂ ತೇ ಭವತ್ವಸೌ ॥ ೧೩ ॥

ಶ್ರೀ ರಾಮ ಉವಾಚ:—

ಯೇನ್ಯೈತೇ ಭಗವನ್ಧೀರಾ ನಿಶ್ಚಯೇನ ಮಹಾಧಿಯಃ ।
ವಿಶೋಕಾಃ ಸಂಸ್ಥಿತಾಸ್ತನ್ಮೇ ಬ್ರಹ್ಮನ್ಪ್ರಬ್ರೂಹಿ ತತ್ತ್ವತಃ ॥ ೧೪ ॥

ಶ್ರೀ ವಸಿಷ್ಠ ಉವಾಚ:—

ರಾಜಪುತ್ರ ಮಹಾಬಾಹೋ ವಿದಿತಾಖಿಲವೇದ್ಯ ಹೇ ।
ಸ್ಫುಟಂ ಶೃಣು ಯಥಾ ಪೃಷ್ಟಮಯಮೇಷಾಂ ಹಿ ನಿಶ್ಚಯಃ ॥ ೧೫ ॥

೧೧–೧೩. ಸುರಗುರುವಾದ ವಾಕ್ಪತಿಗೂ (ಅಸುರ ಗುರುವಾದ) ಭಾರ್ಗವನಿಗೂ, ದಿವಾಕರನಿಗೂ ಚಂದ್ರನಿಗೂ ವಾಯುವಿಗೂ ಅಗ್ನಿಗೂ ನಾರದ ಪುಲಸ್ತ್ಯರಿಗೂ ವರುಣ ಭೃಗು ಕ್ರತು ಅತ್ರಿ ಶುಕ ಇವರಿಗೂ ಇನ್ನೂ ಇತರ ಬ್ರಹ್ಮರ್ಷಿ ರಾಜರ್ಷಿಗಳೂ, ಜೀವನ್ಮುಕ್ತರಿಗೂ ಇರುವ ಈ ನಿಶ್ಚಯವು, ರಾಘವ, ನಿನಗೂ ಲಭಿಸಲಿ.

೧೪. ಶ್ರೀ ರಾಮನು ಕೇಳಿದನು—ಎಲೈ ಬ್ರಹ್ಮ ಸ್ವರೂಪನೆ, ಧೀರರೂ ಮಹಾಬುದ್ಧಿವಂತರೂ ಆದ (ನೀನು ಹೇಳಿದವರು) ಯಾವ ನಿಶ್ಚಯವನ್ನು ಹಿಡಿದು ಶೋಕರಹಿತರಾಗಿರುವರೋ ಆ ನಿಶ್ಚಯವನ್ನು ತತ್ವತಃ ನನಗೆ ಚೆನ್ನಾಗಿ (ತಿಳಿಯುವಂತೆ) ಹೇಳು.

೧೫. ಶ್ರೀ ವಸಿಷ್ಠನು ಹೇಳಿದನು—ಮಹಾಬಾಹುವಾದ ರಾಜಪುತ್ರನೇ, ತಿಳಿಯಬೇಕಾದುದೆಲ್ಲವನ್ನೂ ಬಲ್ಲವನೇ, ನೀನು ಕೇಳಿದುದನ್ನು ಸ್ಪಷ್ಟವಾಗಿ ಹೇಳುವೆನು. ಅವರ ನಿಶ್ಚಯವು ಇದು.

ಯದಿದಂ ಕಿಂಚಿದಾಭೋಗಿ ಜಗಜ್ಜಾಲಂ ಪ್ರದೃಶ್ಯತೇ ।
ತತ್ಸರ್ವಮಮಲಂ ಬ್ರಹ್ಮ ಭವತ್ಯೇತದ್ವ್ಯವಸ್ಥಿತಂ ॥ ೧೬ ॥

ಬ್ರಹ್ಮ ಚಿದ್ಬ್ರಹ್ಮ ಭುವನಂ ಬ್ರಹ್ಮ ಭೂತಪರಂಪರಾಃ ।
ಬ್ರಹ್ಮಾಹಂ ಬ್ರಹ್ಮ ಮಚ್ಛತ್ರುರ್ಬ್ರಹ್ಮ ಸನ್ಮಿತ್ರಬಾಂಧವಾಃ ॥ ೧೭ ॥

ಬ್ರಹ್ಮ ಕಾಲತ್ರಯಂ ತಚ್ಚ ಬ್ರಹ್ಮಣ್ಯೇವ ವ್ಯವಸ್ಥಿತಂ ॥ ೧೮ ॥

ತರಂಗಮಾಲಯಾಂಭೋಧಿರ್ಯಥಾತ್ಮನಿ ವಿವರ್ಧತೇ ।
ತಥಾ ಪದಾರ್ಥಲಕ್ಷ್ಮ್ಯೇತ್ಥಮಿದಂ ಬ್ರಹ್ಮ ವಿವರ್ಧತೇ ॥ ೧೯ ॥

ಗೃಹ್ಯತೇ ಬ್ರಹ್ಮಣಾ ಬ್ರಹ್ಮ ಭುಜ್ಯತೇ ಬ್ರಹ್ಮ ಬ್ರಹ್ಮಣಾ ।
ಬ್ರಹ್ಮ ಬ್ರಹ್ಮಣಿ ಬೃಂಹಾಭಿರ್ಬ್ರಹ್ಮ ಶಕ್ತ್ಯೈವ ಬೃಂಹತಿ ॥ ೨೦ ॥

---

೧೬. ತಾನೇತಾನಾಗಿ ಹರಡಿಕೊಂಡಿರುವಂತೆ ತೋರುವ ಈ ಜಗತ್ಸಮೂಹವುಂಟಲ್ಲವೇ ಇದೆಲ್ಲವೂ ನಿರ್ಮಲ ಬ್ರಹ್ಮವೇ! ತತ್ಸ್ವರೂಪವೇ!

೧೭. ಬ್ರಹ್ಮವೇ ಚಿತ್ತು: ಬ್ರಹ್ಮವೇ ಭುವನವು: ಬ್ರಹ್ಮವೇ ಪ್ರಾಣಿಪರಂಪರೆಗಳು: ನಾನೂ ಬ್ರಹ್ಮವೇ; ನನ್ನ ಶತ್ರುವೂ ಬ್ರಹ್ಮವೇ: ಸನ್ಮಿತ್ರಬಾಂಧವರೂ ಬ್ರಹ್ಮವೇ:

೧೮. ಬ್ರಹ್ಮವೇ (ಭೂತಭವಿಷ್ಯತ್ ವರ್ತಮಾನ ಗಳೆಂಬ) ಕಾಲತ್ರಯವು: ಆ ಕಾಲತ್ರಯ ವ್ಯವಸ್ಥೆಯೂ ಬ್ರಹ್ಮವೇ :

೧೯. ತರಂಗಮಾಲೆಗಳಿಂದ ಸಮುದ್ರವು ತನ್ನಲ್ಲಿಯೇ ವೃದ್ಧಿಗೊಂಡಂತೆ, (ಜಗತ್ತೆಂಬ)ಪದಾರ್ಥ ಸಂಪತ್ತಿನಿಂದ ಬ್ರಹ್ಮವು ತನ್ನಲ್ಲಿಯೇ (ತಾನೇ ತನ್ನಿಂದಲೇ) ವಿವೃದ್ಧವಾಗುವುದು.

೨೦. ಬ್ರಹ್ಮವು ಬ್ರಹ್ಮವನ್ನೇ ಗ್ರಹಿಸುವುದು: ಬ್ರಹ್ಮವು ಬ್ರಹ್ಮವನ್ನೇ ಭೋಗಿಸುವುದು: ಬ್ರಹ್ಮವು ಬ್ರಹ್ಮದಲ್ಲಿಯೇ ಬ್ರಹ್ಮಶಕ್ತಿ (ಯಾದ ಮಾಯೆ) ಯಿಂದಲೇ ಬೃಂಹ (ವಿವರ್ತ) ಗಳಿಂದ ಬೃಂಹಿತ (ವಿರುದ್ಧ)ವಾಗುವುದು.

(ವಿವರ್ತ-ಅಸತ್ತಾಗಿದ್ದರೂ ಸತ್ತಿನಂತೆ ತೋರುವ ಮಾಯಕ ದೃಶ್ಯ. ರಜ್ಜುಸರ್ಪ ನ್ಯಾಯವು ಇದಕ್ಕೆ ದೃಷ್ಟಾಂತ. ಬೀಜರಸವೇ ಪಲ್ಲವ ಪತ್ರ ಕಾಂಡ

ಬ್ರಹ್ಮಮಚ್ಛತ್ರುರೂಪಂ ಮೇ ಬ್ರಹ್ಮಣೋಪ್ರಿಯಕೃದ್ಯದಿ ।
ತದ್ಬ್ರಹ್ಮಣಿ ಬ್ರಹ್ಮನಿಷ್ಠಂ ಕಿಮನ್ಯತ್ಕಸ್ಯಚಿತ್ಕೃತಂ ॥ ೨೧ ॥

ರಾಗಾದೀನಾಮವಸ್ಥಾನಂ ಕಲ್ಪಿತಾನಾಂ ಖವೃಕ್ಷವತ್ ।
ಅಸಂಕಲ್ಪೇನ ನಷ್ಟಾನಾಂ ಕಃ ಪ್ರಸಂಗೋತ್ರ ವರ್ಧತೇ ॥ ೨೨ ॥

ಬ್ರಹ್ಮಣ್ಯೇವ ಹಿ ಸರ್ವಸ್ಮಿಂಶ್ಚರಣಸ್ಪಂದ ನಾದಿಕಂ ।
ಸ್ಫುರತಿ ಬ್ರಹ್ಮ ಸಕಲಂ ಸುಖಿತಾದುಃಖಿತೇ ಕುತಃ ॥ ೨೩ ॥

ಬ್ರಹ್ಮ ಬ್ರಹ್ಮಣಿ ಸಂತೃಪ್ತಂ ಬ್ರಹ್ಮ ಬ್ರಹ್ಮಣಿ ಸಂಸ್ಥಿತಂ ।
ಸ್ಫುರತಿ ಬ್ರಹ್ಮಣಿ ಬ್ರಹ್ಮ ನಾಹಮಸ್ಮೀತರಾತ್ಮಕ ॥ ೨೪ ॥

ಪುಷ್ಪಾಫಲಾದಿಗಳಾಗಿ ವ್ಯವಹಾರ ಕ್ಷಮವಾಗಿದ್ದರೂ ಸತ್ಯತಾದೃಷ್ಟಿಯಿಂದ ಬೀಜ ರಸವೊಂದೇ ಸತ್ಯವಾಗಿ ಮಿಕ್ಕ ತದ್ವಿಕಾರಗಳೆಲ್ಲವೂ ಅಸತ್ಯವಾಗುವುದರಿಂದ, ಬೀಜ ರಸವಲ್ಲದ ಮಿಕ್ಕೆಲ್ಲವೂ ವಿವರ್ತ.)

೨೧. ಬ್ರಹ್ಮವು ಬ್ರಹ್ಮಕ್ಕೆ ಅಪ್ರಿಯವನ್ನು ಮಾಡುವಾಗ ಅದು ನನಗೆ ಶತ್ರುರೂಪವಾಗುವುದು. ಅದೂ ಬ್ರಹ್ಮದಲ್ಲಿಯೇ ಇರುವುದಾದ್ದರಿಂದ ಉಳಿದ ಇನ್ನು ಯಾವುದು ಇನ್ನು ಯಾರಿಗೆ ಅಪ್ರಿಯವನ್ನು ಮಾಡುವುದು ?

೨೨. ರಾಗಾದಿಗಳೆಲ್ಲವೂ (ಮನಃ) ಕಲ್ಪಿತಗಳಾದ್ದರಿಂದ, ಅವುಗಳ ಸ್ಥಿತಿಯೇ ಆಕಾಶ ವೃಕ್ಷದಂತೆ ಭ್ರಾಂತಿಜನ್ಯವು. ಸಂಕಲ್ಪದಿಂದ ಹುಟ್ಟಿದ ಆ ರಾಗಾದಿಗಳು ಅಸಂಕಲ್ಪದಿಂದ ನಷ್ಟವಾದರೆ, ಅದರಿಂದ ಆಗುವುದಾದರೂ ಏನು ?

೨೩. ಸರ್ವಸ್ವರೂಪವಾದ ಬ್ರಹ್ಮದಲ್ಲಿ ಕೈಕಾಲು ಆಡಿಸುವುದು ಮುಂತಾದ ಕಾರ್ಯಸ್ವರೂಪವಾಗಿ ಬ್ರಹ್ಮವೇ ಸ್ಫುರಿಸುವುದು. ಹೀಗಿರಲು ಸುಖಿತಾ ದುಃಖಿತಾ ಎನ್ನುವುದು ಎಲ್ಲಿಂದ ?

೨೪. ಬ್ರಹ್ಮವು ಬ್ರಹ್ಮದಲ್ಲಿಯೇ ತೃಪ್ತವಾಗುವುದು: ಬ್ರಹ್ಮವು ಬ್ರಹ್ಮದಲ್ಲಿಯೇ ಪ್ರತಿಷ್ಠಿತವಾಗಿರುವುದು: ಬ್ರಹ್ಮವು ಬ್ರಹ್ಮದಲ್ಲಿಯೇ ವ್ಯಾಪಾರಮಾಡುತ್ತಿರಲು ನಾನು ಬ್ರಹ್ಮವೇ ಅಲ್ಲದೆ ಇನ್ನು ಏನೂ ಅಲ್ಲ.

ಘಟೋ ಬ್ರಹ್ಮ ಪಟೋ ಬ್ರಹ್ಮ ಬ್ರಹ್ಮಾಹಮಿದಮಾತತಂ ।
ಅತೋ ರಾಗವಿರಾಗಾಣಾಂ ವೃಷೇವ ಕಲನೇಹ ಕಾ ॥ ೨೫ ॥

ಮರಣ ಬ್ರಹ್ಮಣಿ ಸ್ವೈರಂ ದೇಹಬ್ರಹ್ಮಣಿ ಸಂಗತೇ ।
ದುಃಖಿತಾನಾಮ ಕೈವ ಸ್ಯಾದ್ರಜ್ಜುಸರ್ಪಭ್ರಮೋಪಮಾ ॥ ೨೬ ॥

ಸಂಭೋಗಾದೌ ಸುಖಂ ಬ್ರಹ್ಮಣ್ಯಾಸ್ಥಿತೇ ದೇಹಬ್ರಹ್ಮಣಿ ।
ಸಂಪನ್ನಮೇತನ್ಮ ಇತಿ ಮುಧಾ ಸ್ಯಾತ್ಕಲನಾ ಕುತಃ ॥ ೨೭ ॥

ವೀಚ್ಯಂಭಸೋಃ ಸ್ಪಂದವತೋರ್ನ ತ್ವನ್ಯದಂಬುನೋ ಯಥಾ ।
ತ್ವತ್ತಾಮತ್ತೆ ತಥಾ ನ ಸ್ತೋ ಬ್ರಹ್ಮಣಿ ಸ್ಪಂದರೂಪಿಣೀ ॥ ೨೮ ॥

ಯಥಾವರ್ತಮೃತೇ ತೋಯೇ ನ ಕಿಂಚಿನ್ಮ್ರಿಯತೇ ಕ್ವಚಿತ್ ।
ಮೃತಿಬ್ರಹ್ಮತ್ವಮಾಯಾತೇ ದೇಹಬ್ರಹ್ಮಣಿ ವೈ ತಥಾ ॥ ೨೯ ॥

---

೨೫. ಘಟವೂ ಬ್ರಹ್ಮವೇ: ಪಟವೂ ಬ್ರಹ್ಮವೇ: ನಾನೂ ಬ್ರಹ್ಮವೇ: ಈ ಜಗತ್ತೂ ಬ್ರಹ್ಮವೇ: ಅದರಿಂದ, ರಾಗವಿರಾಗಗಳಿಗೆ (ಬೇರೆಯಾಗಿ ಉಂಟೆಂಬ) ಈ ವೃಥಾಕಲ್ಪನೆಯಲ್ಲಿಯದು ?

೨೬. ಮರಣಬ್ರಹ್ಮದಲ್ಲಿ ದೇಹಬ್ರಹ್ಮವು ಸಂಗತವಾದರೆ, ದುಃಖಿತಾ ಎನ್ನು ವುದು ಅದೇನು ? ಅದೂ ರಜ್ಜು ಸರ್ಪನ್ಯಾಯದಂತೆ ಕೇವಲ ಭ್ರಾಂತಿಯೇ ಸರಿ !

೨೭. ಸಂಭೋಗಾಗಿಗಳಲ್ಲಿ ಬ್ರಹ್ಮವು ದೇಹಬ್ರಹ್ಮದಲ್ಲಿ ಸೇರಲು ಸುಖಪಟ್ಟೆನು ಎಂಬ ಭ್ರಾಂತಿಯು ಎಲ್ಲಿಂದ ಬಂತು ?

೨೮. ನೀರಿನಲ್ಲಿ ಚಲನವಾದಾಗ ತೋರುವ ನೀರೂ ಅಲೆಯೂ ನೀರಲ್ಲದೆ ಇನ್ನೇನೂ ಹೇಗೆ ಅಲ್ಲವೋ ಹಾಗೆಯೇ, ತ್ವತ್ತಾ, ಮತ್ತಾ, (ನೀನು ಎಂಬುವಿಕೆ, ನಾನು ಎಂಬುವಿಕೆ) ಎಂಬ ಪ್ರತ್ಯೇಕ ವಸ್ತುಗಳು ಬೇರೆಯಲ್ಲ: ಅವೆರಡೂ ವ್ಯಾಪಾರಾತ್ಮಕವಾದ ಬ್ರಹ್ಮದಲ್ಲಿ ಕಾಣುವ ಭ್ರಾಂತಿಗಳು.

೨೯. ನೀರು ಸುಳಿಗೆ ಸಿಕ್ಕಿ ಸತ್ತುಹೋಯಿತು ಎಂದರೆ, ಅಲ್ಲಿ ಸತ್ತುದು ಏನು ? ಹಾಗೆಯೇ ದೇಹಬ್ರಹ್ಮವು ಮರಣಬ್ರಹ್ಮತ್ವವನ್ನು ಪಡೆದರೆ ಅಲ್ಲಿ ಹೋದುದೇನು ?

ಯಥಾ ಚಲಾಚಲೇ ತೋಯೇ ತ್ವತ್ತಾಮತ್ತೇ ನ ತಿಷ್ಠತಃ |
ತಥಾ ಜಡಾಜಡೇ ರೂಪೇ ನ ಸ್ಥಿತೇ ಪರಮಾತ್ಮನಿ ॥ ೨೦ ॥

ಕಟಕತ್ವಂ ಯಥಾ ಹೇಮ್ನೋ ಯಥಾವರ್ತೋ ಜಲಸ್ಯಚ |
ತದತದ್ಭಾವರೂಪೇಯಂ ತಥಾ ಪ್ರಕೃತಿರಾತ್ಮನಃ ॥ ೨೧ ॥

ಇದಂ ಹಿ ಜೀವಭೂತಾತ್ಮ ಜಡರೂಪಮಿದಂ ಭವೇತ್ |
ಇತ್ಯಜ್ಞಾನಾತ್ಮನೋ ಮೋಹೋ ನ ಚ ಜ್ಞಾನಾತ್ಮನಃ ಕ್ವಚಿತ್ ॥ ೨೨ ॥

ಅಜ್ಞಸ್ಯ ದುಃಖೌಘಮಯಂ ಜ್ಞಸ್ಯಾನಂದಮಯಂ ಜಗತ್ |
ಅಂಧಂ ಭುವನಮಂಧಸ್ಯ ಪ್ರಕಾಶಂ ತು ಸಚಕ್ಷುಷಃ ॥ ೨೩ ॥

ಜಗದೇಕಾತ್ಮಕಂ ಜ್ಞಸ್ಯ ಮೂರ್ಖಸ್ಯಾತೀವ ದುಃಖದಂ |
ಶಿಶೋರಿವ ಸ್ಫುರದ್ಯಕ್ಷಾ ನಿಶಾ ಪುಂಸಸ್ತು ಕೇವಲಾ ॥ ೨೪ ॥

---

೨೦. ನಿಂತಿರುವ ನೀರಿಗೂ ಹರಿಯುತ್ತಿರುವ ನೀರಿಗೂ ನೀನು ನಾನು ಎಂಬ ಭೇದವು ಹೇಗೆ ಸಂಗತವಾಗುವುದಿಲ್ಲವೋ, ಹಾಗೆಯೇ ಆ ಪರಮಾತ್ಮನಲ್ಲಿ ಜಡ ಅಜಡ ಎಂಬ ರೂಪದ್ವಯಗಳು ಸಂಗತವಾಗುವುದಿಲ್ಲ.

೨೧. ಚಿನ್ನದ ಕಟಕತ್ವದಂತೆ, ನೀರಿನ ಸುಳಿಯಂತೆ, ಆತ್ಮನಲ್ಲಿಯೇ ತದ್ಭಾವವಾಗಿಯೂ ಅತದ್ಭಾವವಾಗಿಯೂ ಕಾಣುವ ಪ್ರಕೃತಿಯು ಇರುವುದು.

೨೨. ಇದು ಜೀವಭೂತವಾದ ಆತ್ಮ, ಇದು ಜಡರೂಪವಾದ ಆತ್ಮ, ಎಂಬ ಮೋಹವು ಅಜ್ಞಾನಿಗಳಿಗೆ ಮಾತ್ರವೇ ಹೊರತು, ಜ್ಞಾನಿಗಳಿಗೆ ಎಂದೂ ಇಲ್ಲ.

೨೩. ಲೋಕವು ಕುರುಡನಿಗೆ ಕತ್ತಲೇ ಕತ್ತಲಾಗಿದ್ದು, ಕಣ್ಣುಳ್ಳವನಿಗೆ ಪ್ರಕಾಶವಾಗಿರುವಂತೆ, ಈ ಲೋಕವು ಅಜ್ಞನಿಗೆ ದುಃಖಪರಂಪರೆಯಾಗಿ ಕಂಡು, ಜ್ಞಾನಿಗೆ ಆನಂದಮಯವಾಗಿರುವುದು.

೨೪. ಮಗುವಿಗೆ ಯಕ್ಷನನ್ನು ತಂದು ತೋರಿಸುವ ರಾತ್ರಿಯು ದೊಡ್ಡವರಿಗೆ ಕೇವಲ ರಾತ್ರಿಯೇ ಅಲ್ಲವೆ? ಹಾಗೆ, ಜಗತ್ತು ಜ್ಞಾನಿಗೆ ಏಕಾತ್ಮರೂಪವಾಗಿರುವುದು; ಮೂರ್ಖನಿಗೆ ಅತಿ ದುಃಖಪ್ರದವಾಗಿರುವುದು.

ಅಸ್ಮಿನ್ಬ್ರಹ್ಮಘಟೇ ನಿತ್ಯಮೇಕಸ್ಮಿನ್ಸರ್ವತಃ ಸ್ಥಿತೇ ।
ನ ಕಿಂಚಿನ್ಮ್ರಿಯತೇ ನಾಮ ನ ಚ ಕಿಂಚನ ಜೀವತಿ ॥ ೩೫ ॥

ಯಥೋಲ್ಲಾಸವಿಲಾಸೇಷು ನ ನಶ್ಯತಿ ನ ಜಾಯತೇ ।
ತರಂಗಾದಿಮಹಾಂಭೋಧೌ ಭೂತವೃಂದಂ ತಥಾತ್ಮನಿ ॥ ೩೬ ॥

ಇದಂ ನಾಸ್ತೀದಮಸ್ತೀತಿ ಭ್ರಾಂತಿರ್ನಾಮಾತ್ಮನಾತ್ಮನಿ ।
ಶಕ್ತಿನಿರ್ಹೇತುಕೈವಾಂತಃ ಸ್ಫುರತಿ ಸ್ಫಟಿಕಾಂಶುವತ್ ॥ ೩೭ ॥

ಜಗಚ್ಛಕ್ತ್ಯಾತ್ಮನಾತ್ಮೈವ ಬ್ರಹ್ಮಸ್ವಾತ್ಮನಿ ಸಂಸ್ಥಿತಂ ।
ತರಂಗಕಣಜಾಲೇನ ಪಯಸೀವ ಪಯೋಘನಂ ॥ ೩೮ ॥

ಶರೀರನಾಶೇನ ಕಥಂ ಬ್ರಹ್ಮಣೋ ಮೃತಧೀರ್ಭವೇತ್ ।
ಬ್ರಹ್ಮಣೋ ವ್ಯತಿರಿಕ್ತಂ ಹಿ ನ ಶರೀರಾದಿ ವಿದ್ಯತೇ ॥ ೩೯ ॥

---

೩೫. ನಿತ್ಯವಾಗಿ, ಶಾಶ್ವತವಾಗಿ, ಏಕೈಕವಾಗಿ, ಎಲ್ಲೆಲ್ಲಿಯೂ ತಾನೇತಾನಾಗಿರುವ ಈ ಬ್ರಹ್ಮ ಘಟದಲ್ಲಿ, ಸಾಯುವುದೂ ಯಾವುದೂ ಇಲ್ಲ: ಬದುಕಿರುವುದೂ ಯಾವುದೂ ಇಲ್ಲ.

೩೬. ಮಹಾಸಾಗರದಲ್ಲಿ ಉಲ್ಲಾಸ ವಿಲಾಸಗಳಾಗುವಾಗ, ತರಂಗಾದಿಗಳು ಜನ್ಮವೆತ್ತುವುದಿಲ್ಲ: ಮರಣವನ್ನು ಹೊಂದುವುದಿಲ್ಲ ಎನ್ನುವುದು ಹೇಗೋ ಹಾಗೆಯೇ, ಬ್ರಹ್ಮದಲ್ಲಿ ಭೂತಪರಂಪರೆಗಳು ಕಂಡರೂ (ಅವು ಹುಟ್ಟುವುದೂ ಇಲ್ಲ: ಸಾಯುವುದೂ ಇಲ್ಲ-)

೩೭. ಸ್ಫಟಿಕದಿಂದ ಹೊರಡುವ ಕಿರಣಗಳಂತೆ, ಆತ್ಮನಲ್ಲಿ ಆತ್ಮನಿಂದಲೇ, ಆತ್ಮಶಕ್ತಿಯೇ ಕಾರಣವಾಗಿ ಇದು ಉಂಟು, ಇದು ಇಲ್ಲ, ಎಂಬ ಭ್ರಾಂತಿಯು ತೋರುವುದು.

೩೮. ನೀರಿನಲ್ಲಿ ಅಲೆಗಳಿಂದ ಹಾರುವ ತುಂತುರುಗಳು ಹೇಗೋ ಹಾಗೆ, ಜಗತ್ಕರಣ ಶಕ್ತಿರೂಪವಾಗಿ ಆತ್ಮವೇ ಆತ್ಮದಲ್ಲಿ ಸಂಸ್ಥಿತವಾಗಿರುವುದು.

೩೯. ಬ್ರಹ್ಮವಲ್ಲದ ಶರೀರಾದಿಗಳು ಬೇರೆಯಾಗಿ ಇಲ್ಲದಿರಲು, ಶರೀರನಾಶದಿಂದ ಬ್ರಹ್ಮಕ್ಕೆ ಮೃತವಾಯಿತೆಂಬ ಬುದ್ಧಿಯು ಹೇಗೆ ತಾನೇ ಸಂಭವಿಸೀತು?

ಪಯಸೋ ವ್ಯತಿರೇಕೇಣ ತರಂಗಾದಿ ಮಹಾರ್ಣವೇ ।
ಯಃ ಕಣೋ ಯಾ ಚ ಕಣಿಕಾ ಯಾ ವೀಚಿರ್ಯಸ್ತರಂಗಕಃ ॥ ೪೦ ॥

ಯಃ ಫೇನೋ ಯಾ ಚ ಲಹರೀ ತದ್ಯಥಾ ವಾರಿ ವಾರಿಣಿ ।
ಯೋ ದೇಹೋ ಯಾ ಚ ಕಲನಾ ಯದ್ದೃಶ್ಯಂ ಯೌ ಕ್ಷಯಾಕ್ಷಯೌ ॥ ೪೧ ॥

ಯಾ ಭಾವರಚನಾ ಯೋಽರ್ಥಸ್ತಯಾ ತದ್ಬ್ರಹ್ಮ ಬ್ರಹ್ಮಣಿ ।
ಸಂಸ್ಥಾನರಚನಾ ಚಿತ್ರಾ ಬ್ರಹ್ಮಣಃ ಕನಕಾದಿವ ॥ ೪೨ ॥

ನಾನ್ಯರೂಪಾ ವಿಮೂಢಾನಾಂ ಮೃಷೈವ ದ್ವಿತ್ವಭಾವನಾ ॥ ೪೩ ॥

ಮನೋಬುದ್ಧಿರಹಂಕಾರಸ್ತನ್ಮಾತ್ರಾಣೀಂದ್ರಿಯಾಣಿ ಚ ।
ಬ್ರಹ್ಮೈವ ಸರ್ವಂ ನಾನಾತ್ಮ ಸುಖಂ ದುಃಖಂ ನ ವಿದ್ಯತೇ ॥ ೪೪ ॥

ಅಯಂ ಸೋಽಹಮಿದಂ ಚಿತ್ತಮಿತ್ಯಾದ್ಯರ್ಥೋತ್ಥಯಾ ಗಿರಾ ।
ಶಬ್ದಪ್ರತಿಶ್ರವೇಣಾದ್ರಾವಿವಾತ್ಮಾತ್ಮನಿ ಜೃಂಭತೇ ॥ ೪೫ ॥

---

೪೦. ಮಹಾರ್ಣವದಲ್ಲಿ ನೀರಲ್ಲದ ಜಲಕಣವಾಗುವುದು? ಸಣ್ಣ ಹನಿಯಾವುದು? ಸಣ್ಣಲೆಯಾವುದು? ದೊಡ್ಡಲೆಯಾವುದು?

೪೧–೪೨. ನೀರಿನಲ್ಲಿರುವ ನೊರೆಯೂ ಹರಿಯೂ ನೀರೇ ಆಗಿರುವಂತೆ, ದೇಹವೂ ದೇಹವ್ಯಾಪಾರವೂ, ಕ್ಷಯಾಕ್ಷಯಗಳೂ, ಭಾವರಚನೆಯೂ, ಅರ್ಥವೂ ಎಲ್ಲವೂ ಬ್ರಹ್ಮದಲ್ಲಿರುವ ಬ್ರಹ್ಮವೇ !

೪೩. ಜಗತ್ಸ್ಥಿತಿರೂಪದಾದ ಈ ರಚನೆಯೆಲ್ಲವೂ ಚಿನ್ನದಿಂದ ಮಾಡಿದ ಒಡವೆಗಳಂತೆ, ಬ್ರಹ್ಮದಿಂದ ಆದುದೇ ಹೊರತು ಇನ್ನೇನೂ ಅಲ್ಲ. ಇದನ್ನು ತಿಳಿಯದವರು ಎಂದುಕೊಳ್ಳುವ ಬ್ರಹ್ಮವ್ಯತಿರಿಕ್ತವಾದ ಇನ್ನೂ ಏನೇನೋ ಇವೆ ಎಂಬ ದ್ವೈತಭಾವನೆಯು ಸುಳ್ಳು.

೪೪. ಮನಸ್ಸು, ಬುದ್ಧಿ, ಅಹಂಕಾರ ತನ್ಮಾತ್ರಗಳು, ಇಂದ್ರಿಯಗಳು ಇವೆಲ್ಲ ಬ್ರಹ್ಮವೇ! ನಾನಾರೂಪವಾಗಿರುವ ಈ ಸರ್ವವೂ ಬ್ರಹ್ಮವೇ !

೪೫. ಬೆಟ್ಟಗಳಲ್ಲಿ ಆಗುವ ಧ್ವನಿಯು ಪ್ರತಿಧ್ವನಿರೂಪವಾಗಿ ಸುತ್ತಲೂ ಪ್ರಸರಿಸುವಂತೆ, ಇವನು, ಅವನು, ನಾನು, ಇದು, ಚಿತ್ತ, ಮುಂತಾದ ಅರ್ಥಗಳ

ಬ್ರಹ್ಮೈವಾಜ್ಞಾತಮಜ್ಞತ್ವಮಭ್ಯಾಗತಮಿವ ಸ್ಥಿತಂ ।
ತಥಾ ಹಿ ದೃಶ್ಯತೇ ಸ್ವಪ್ನೇ ಚೇತಸಾತ್ಮಾತ್ಮನಾತ್ಮನಃ ॥ ೪೬ ॥

ಅಭಾವಿತಂ ಬ್ರಹ್ಮತಯಾ ಬ್ರಹ್ಮಾಜ್ಞಾನಮಲಂ ಭವೇತ್ ।
ಅಭಾವಿತಂ ಹೇಮತಯಾ ಯಥಾ ಹೇಮ ಚ ಮೃದ್ಭವೇತ್ ॥ ೪೭ ॥

ಸ್ವಯಂ ಪ್ರಭುರ್ಮಹಾತ್ಮೈವ ಬ್ರಹ್ಮ ಬ್ರಹ್ಮವಿದೋ ವಿದುಃ ।
ಅಪರಿಜ್ಞಾತಮಜ್ಞಾನಮಜ್ಞಾನಾಮಿತಿ ಕಥ್ಯತೇ ॥ ೪೮ ॥

ಜ್ಞಾತಂ ಬ್ರಹ್ಮತಯಾ ಬ್ರಹ್ಮ ಬ್ರಹ್ಮೈವ ಭವತಿ ಕ್ಷಣಾತ್ ।
ಜ್ಞಾತಂ ಹೇಮತಯಾ ಹೇಮ ಹೇಮ್ನೈವ ಭವತಿ ಕ್ಷಣಾತ್ ॥ ೪೯ ॥

ಮಾತುಗಳಿಂದ, (ನಾನಾ ಪದಾರ್ಥಗಳಂತೆ) ಆತ್ಮವೇ ಆತ್ಮನಲ್ಲಿಯೇ ವಿಜೃಂಭಿಸುವುದು.

೪೬. ತಿಳಿಯದಿದ್ದಾಗ್ಗೆ ಬ್ರಹ್ಮವೇ ಜೀವ ಜಗತ್ತುಗಳಂತಿರುವುದು: ಸ್ವಪ್ನದಲ್ಲಿಯೂ ಹಾಗೆಯೇ ಮನಸ್ಸಿನಿಂದ ಆತ್ಮವೇ ಆತ್ಮನಿಂದ ಆತ್ಮವನ್ನೇ ಜೀವಜಗದ್ರೂಪವಾಗಿ ಕಾಣುವುದು.

("ತತ್ರಾತ್ಮನಿಚೈವ ವಿಚಿತ್ರಾಶ್ಚಹಿ" ಇತಿ ಬಾದರಾಯಣೋಕ್ತಂ ಸ್ವಪ್ನದೃಷ್ಟಾಂತಂ-ಅಜ್ಞತ್ವಂ-ಜೀವಜಗದ್ಭಾವಂ. ತಾ. ಪ್ರ.)

೪೭. ಬ್ರಹ್ಮವನ್ನು ಬ್ರಹ್ಮರೂಪದಿಂದ ಭಾವಿಸದಿದ್ದರೆ ಅದೇ ಅಜ್ಞಾನಮಲವಾಗುವುದು. ಚಿನ್ನವನ್ನು ಚಿನ್ನವೆಂದು ಸಂಭಾವಿಸದಿದ್ದರೆ, ಅದೇ ಮಣ್ಣಾಗುವುದು ತಾನೇ!

೪೮. "ಬ್ರಹ್ಮವು ಸ್ವಯಂಪ್ರಭುವು ಮಹಾತ್ಮವು" ಎಂದು ಬ್ರಹ್ಮಜ್ಞರು ತಿಳಿಯುವರು. ಹಾಗೆಂದು ತಿಳಿಯದಿರುವುದೇ ಅಜ್ಞಾನಿಗಳ ಅಜ್ಞಾನವೆನ್ನಿಸಿಕೊಳ್ಳುವುದು.

೪೯. ಬ್ರಹ್ಮವನ್ನು ಬ್ರಹ್ಮವೆಂದು ತಿಳಿದುಕೊಂಡರೆ ಅದು ಕೂಡಲೆ ಬ್ರಹ್ಮವಾಗುವುದು. ಚಿನ್ನವನ್ನು ಚಿನ್ನವೆಂದು ತಿಳಿದಕೂಡಲೇ ಅದು ಚಿನ್ನವೇ ಆಗುವುದು.

ಬ್ರಹ್ಮಾತ್ಮಾ ಸರ್ವಶಕ್ತಿರ್ಹಿ ತದ್ಯಥಾ ಭಾವಯತ್ಯಲಂ |
ನಿರ್ಹೇತುಕಃ ಸ್ವಯಂ ಶಕ್ತ್ಯಾ ತತ್ತಥಾಶು ಪ್ರಪಶ್ಯತಿ || ೫೦ ||

ಅಕರ್ಮಕರ್ತೃಕರಣಮಕಾರಣಮನಾಮಯಂ |
ಸ್ವಯಂ ಪ್ರಭುಂ ಮಹಾತ್ಮಾನಂ ಬ್ರಹ್ಮ ಬ್ರಹ್ಮವಿದೋ ವಿದುಃ || ೫೧ ||

ಅಪರಿಜ್ಞಾತಮಜ್ಞಾನಾಮಜ್ಞಾನಮಿತಿ ಕಥ್ಯತೇ |
ಪರಿಜ್ಞಾತಂ ಭವೇಜ್ಜ್ಞಾನಮಜ್ಞಾನಪರಿನಾಶನಂ || ೫೨ ||

ಬಂಧುರೇವಾಪರಿಜ್ಞಾತೋ ಹ್ಯಬಂಧುರಿತಿ ಕಥ್ಯತೇ |
ಪರಿಜ್ಞಾತೋ ಭವೇದ್ಬಂಧುರಬಂಧುಭ್ರಮನಾಶನಾತ್ || ೫೩ ||

ಇದಂ ತ್ವಯುಕ್ತಮಿತ್ಯಂತರ್ಜ್ಞಾತೇ ಸೋದೇತಿ ಭಾವನಾ |
ಯಸ್ಮಾದಯುಕ್ತಾದ್ವೈರಸ್ಯಾದ್ಯಥಾ ಕಿಲ ವಿರಜ್ಯತೇ || ೫೪ ||

---

೫೦. ಬ್ರಹ್ಮಾತ್ಮವು ಸರ್ವಶಕ್ತಿ ಸಂಪನ್ನವಾದುದು. ಅದು ತನ್ನನ್ನು ಏನೆಂದು ಭಾವಿಸುವುದೋ ಅದೇ, ಆ ಕೂಡಲೇ, ಕಾರಣಾಂತರಗಳು ಬೇಕಿಲ್ಲದೆಯೇ ಆಗಿ ಹೋಗುವುದು.

೫೧. ಬ್ರಹ್ಮವೇತ್ತೃಗಳು ಬ್ರಹ್ಮವನ್ನು "ಕರ್ಮ, ಕರ್ತೃ, ಕರಣಗಳೊಂದೂ ಅಲ್ಲ. ಅದು ಅಕಾರಣವು. ಅದು ಅನಾಮಯವು. ಸ್ವಯಂಪ್ರಭುವು. ಮಹಾತ್ಮವು" ಎಂದು ತಿಳಿಯುವರು.

(ಸ್ವಬೋಧಾತ್ ಸ್ವಭಾವೇ ಸ್ವಯಂ ಪ್ರಭವತೀತಿ ಸ್ವಯಂಪ್ರಭುಃ
—ತಾ. ಪ್ರ.)

೫೨. ಅಪರಿಜ್ಞಾತದಾದಾಗ ಅಜ್ಞರ ಅಜ್ಞಾನವೆಂದು ಹೇಳಿಸಿಕೊಳ್ಳುವ ಬ್ರಹ್ಮವೇ ಪರಿಜ್ಞಾತವಾದರೆ ಜ್ಞಾನವಾಗಿ ಅಜ್ಞಾನನಾಶಕವಾಗುವುದು.

೫೩. ಬಂಧುವಾಗಿರುವವನನ್ನೇ ಬಂಧುವೆಂದು ಗ್ರಹಿಸದಿದ್ದಲ್ಲಿ ಅಬಂಧುವೇ ಆಗುವನು. ಬಂಧುವೆಂದು ಗ್ರಹಿಸಿದಾಗ ಅಬಂಧುವೆಂಬ ಭ್ರಮವು ನಾಶವಾಗಿ ಅವನು ಬಂಧುವಾಗುವನು.

೫೪. ಇದು ಅಯುಕ್ತವೆಂದು ಮನಸ್ಸಿನಲ್ಲಿ ಗೃಹೀತವಾದರೆ ಅದೇ

ದ್ವೈತಂ ತ್ವಸತ್ಯಮಿತ್ಯಂತರ್ಜ್ಞಾತೇ ಸೋದೇತಿ ಭಾವನಾ ।
ತಸ್ಮಾದ್ದ್ವೈತತಾಚ್ಛ ವೈರಸ್ಯಾದ್ಯಥಾ ಕಿಲ ವಿರಜ್ಯತೇ ॥ ೫೫ ॥
ಅಯಂ ನಾಹಮಿತಿ ಜ್ಞಾತೇ ಸ್ಫುಟೇ ಸೋದೇತಿ ಭಾವನಾ ।
ಮಿಥ್ಯಾಹಂಕಾರತಾ ತಸ್ಮಾದ್ಯಥಾ ನೂನಂ ವಿರಜ್ಯತೇ ॥ ೫೬ ॥

ಬ್ರಹ್ಮೈವಾಹಮಿತಿ ಜ್ಞಾನೇ ಸತ್ಯೇ ಸೋದೇತಿ ಭಾವನಾ ।
ತಸ್ಮಿನ್ಸತ್ಯೇ ನಿಜೇ ರೂಪೇ ಯಥಾಂತಃ ಪರಿಲೀಯತೇ ॥ ೫೭ ॥

ಭಾವನೆಯು ಬರುವುದು. ಅಯುಕ್ತವೆಂದು ಅದರಲ್ಲಿ ವೈರಸ್ಯವು ಹುಟ್ಟುವುದು. ಅದು ಬೇಡವಾಗುವುದು.

೫೫. ಹಾಗೆಯೇ ದ್ವೈತವು ಅಸತ್ಯವೆಂದು ಮನಸ್ಸಿನಲ್ಲಿ ನಿಶ್ಚಯವಾದರೆ, ಅದೇ ಭಾವನೆಯು ಬರುವುದು. ಹಾಗೆಯೇ ದ್ವೈತದಲ್ಲಿ ರುಚಿಯು ಇಲ್ಲವಾಗುವುದು. ದ್ವೈತವು ಬೇಡವಾಗುವುದು.

(ಉಕ್ತಾ ವಿಚಾರಣಾ ಜಗದ್ವಿಷಯೇ ತತ್ಪದಾರ್ಥಶೋಧನತಯಾ ಪರ್ಯವಸ್ಯತೀತಿ ಆಶಯೇನ ಜಗದಂಶೇ ಉಕ್ತಮೇವ ಸ್ಫುಟಮಾಹ.—ತಾ.ಪ್ರ.)

೫೬. ಈ ದೇಹಾದಿಯು ನಾನಲ್ಲ ಎಂಬ ಜ್ಞಾನವು ಸ್ಫುಟವಾದರೆ, ಅದೇ ಭಾವನೆಯು ಹುಟ್ಟುವುದು. ಆ ಭಾವನೆಯು ಸ್ಥಿರವಾದಾಗ ಮಿಥ್ಯಾಹಂಕಾರದಲ್ಲಿ ರುಚಿಯು ತಪ್ಪಿ ಅದು ಬೇಡವಾಗುವುದು.

[ಜೀವಾಂಶೇಽಪಿ ಸಾ (ಭಾವನಾ) ತ್ವಂ ಪದಾರ್ಥಶೋಧನತಯಾ ಪರ್ಯವಸ್ಯತಿ ಇತ್ಯಾಶಯೇನ ತದಂಶೇಪ್ಯುಕ್ತಂ ಸ್ಫುಟಯತಿ। ಅಯಂದೇಹಾದಿ ಕಾರ್ಯಕಾರಣ ಸಂಘಾತೋ ನಾಹಮಿತಿ.—ತಾ ಪ್ರ.]

೫೭. ಬ್ರಹ್ಮವೇ ನಾನು ಎಂಬ ಜ್ಞಾನವು ಸತ್ಯವಾದರೆ, ಅದೇ ಭಾವನೆಯು ಹುಟ್ಟುವುದು. ಆ ಭಾವನೆಯು ಸತ್ಯಸ್ವರೂಪವಾದ ಬ್ರಹ್ಮದಲ್ಲಿಯೇ ಪರಿಣತವಾಗುವುದು.

(ಪದಾರ್ಥಶೋಧ ಫಲಭೂತ ಅಖಂಡವಾಕ್ಯಾರ್ಥ ಬೋಧತಯಾಪಿ ಸಾ ಪರ್ಯವಸ್ಯತಿ ಇತ್ಯಾಶಯೇನ ತಸ್ಮಿನ್ ಜೀವಜಗದ್ಭಾವಯೋಃ ಬಾಧ ಲಕ್ಷಣಂ ಲಯಂ ಸ್ಫುಟಯತಿ.—ತಾ.ಪ್ರ.)

ಸತಿ ವಿಸ್ತಾರಜೇ ತಸ್ಮಿನ್ಬ್ರಹ್ಮೇದಮಿತಿ ವೇದ್ಮ್ಯಹಂ ।
ತ್ವಮಹಂತ್ವಾದಿಬಾಧೇ ತತ್ಸದಿತ್ಯಾದಿ ಜಗದ್ಗತಂ ॥ ೫೮ ॥

ಸತ್ಯಂ ಸರ್ವಪ್ರಕಾರಾಢ್ಯಂ ಬ್ರಹ್ಮೇದಮಿತಿ ವೇದ್ಮ್ಯಹಂ ।
ನ ಮೇ ದುಃಖಂ ನ ಕರ್ಮಾಣಿ ನ ಮೇ ಮೋಹೋ ನ ವಾಂಛಿತಂ ॥ ೫೯ ॥

ಸಮಃ ಸ್ವಸ್ಥೋ ವಿಶೋಕೋಽಸ್ಮಿ ಬ್ರಹ್ಮಾಹಮಿತಿ ಸತ್ಯತಾ ।
ಕಲಾಕಲಂಕಮುಕ್ತೋಽಸ್ಮಿ ಸರ್ವಮಸ್ಮಿ ನಿರಾಮಯಃ ॥ ೬೦ ॥

---

೫೮. ಹೀಗೆ ಬ್ರಹ್ಮೈವಾಹಂ ಭಾವನೆಯು ವಿಸ್ತಾರವಾದ ಹಾಗೆಲ್ಲಾ ಬ್ರಹ್ಮೇದಂ ಎಂಬ ಭಾವನೆಯು ಬಲಿಯುವುದು. ನೀನು, ನಾನು, ಇತ್ಯಾದಿ ಭಾವನೆಗಳಿಗೆಲ್ಲ ಬಾಧೆಯು ಸಂಭವಿಸಿ (ಅದಕ್ಕಿಂತ ಪೂರ್ವದಲ್ಲಿದ್ದ) ಸತ್ (ಅಸ್ತಿ) ಚಿತ್ (ಭಾತಿ) ಆನಂದ (ಪ್ರಿಯ) ನಾಮರೂಪ, ಎಂಬ ಜಗದ್ರೂಪವಾಗಿರುವ ಪಂಚ ವೃತ್ತಿಗಳ ಗೋಚರವಾಗಿ ಇದೆಲ್ಲವೂ ಬ್ರಹ್ಮವೆಂಬುದು ತಿಳಿಯುವುದು.

(ಬ್ರಹ್ಮವು ಸತ್ ಚಿತ್ ಆನಂದವೆಂಬ ಮೂರು ಬಗೆಯಾಗಿ ತೋರಿವರೆ, ಜಗತ್ತು ಸತ್ ಚಿತ್ ಆನಂದ ನಾಮರೂಪವೆಂಬ ಐದು ರೂಪವಾಗಿ ತೋರುವುದು. ಕೊನೆಯ ಎರಡನ್ನು ಹಿಡಿದು ಮೊದಲನೆಯ ಮೂರನ್ನು ಮರೆತಾಗ ಆ ಮೊದಲನೆಯ ಮೂರು ಮಲದೂಷಿತಗಳಾಗಿ ಅಲ್ಪತ್ವ, ಕಿಂಚಿಜ್ಞತ್ವ, ದುಃಖತ್ವ, ಎಂಬ ದೋಷಗಳಾಗುವುವು. ಅವೇ ಮತ್ತೆ ನಾಮರೂಪಗಳನ್ನು ಬಿಟ್ಟಾಗ ಮೊದಲಿನಂತೆ ಗುಣಗಳಾಗುವುವು.)

೫೯. ಸರ್ವ ಪ್ರಕಾರಗಳಿಂದಲೂ ಕೂಡಿರುವ ಈ ಜಗತ್ತೇ ಸತ್ಯವಾದ ಬ್ರಹ್ಮವೆಂದು ನಾನು ಬಲ್ಲೆನು. (ಅದರಿಂದ) ನನಗೆ ದುಃಖವಿಲ್ಲ: ಕರ್ಮಗಳಿಲ್ಲ: ಮೋಹವಿಲ್ಲ. ವಾಂಛೆಯಿಲ್ಲ.

೬೦ ನಾನು ಸಮನಾಗಿರುವೆನು (ರಾಗದ್ವೇಷಾದಿಗಳಿಂದ ಉಂಟಾಗುವ ವಿಕಾರಗಳು ಇಲ್ಲದಿರುವೆನು) ಸ್ವಸ್ಥನಾಗಿರುವೆನು. (ಬ್ರಹ್ಮವೆಂಬ ಅಧಿಷ್ಠಾನದಲ್ಲಿ ಪ್ರತಿಷ್ಠಿತನಾಗಿರುವೆನು.) ವಿಶೋಕನಾಗಿರುವೆನು. (ಆನಂದಮಯನಾಗಿರುವೆನು.) ಬ್ರಹ್ಮಾಹಂ ಎಂಬುದೇ ಸತ್ಯವು. ಭ್ರಾಂತಿ ಕಳಂಕರಹಿತನಾಗಿರುವೆನು. ಎಲ್ಲವೂ ನಾನೇ ಆಗಿರುವೆನು. (ಅದರಿಂದಲೇ) ನಿರಾಮಯನಾಗಿರುವೆನು.

ನ ತ್ಯಜಾಮಿ ನ ವಾಂಛಾಮಿ ಬ್ರಹ್ಮಾಹಮಿತಿ ಸತ್ಯತಾ ।
ಅಹಂ ರಕ್ತಮಹಂ ಮಾಂಸಮಹಮಸ್ಥೀನ್ಯಹಂ ವಪುಃ ॥ ೬೧ ॥

ಚಿದಹಂ ಚೇತನಂ ಚಾಹಂ ಬ್ರಹ್ಮಾಹಮಿತಿ ಸತ್ಯತಾ ।
ದ್ಯೌರಹಂ ಖಮಹಂ ಸಾರ್ಕಮಹಮಾಶಾ ಭುವೋಽಪ್ಯಹಂ ॥ ೬೨ ॥

ಅಹಂ ಘಟಪಟಾಕಾರೋ ಬ್ರಹ್ಮಾಹಮಿತಿ ಸತ್ಯತಾ ।
ಅಹಂ ತೃಣಮಹಂ ಚೋರ್ವೀ ಗುಲ್ಮೋಽಹಂ ಕಾನನಾದ್ಯಹಂ ॥ ೬೩ ॥

ಶೈಲಸಾಗರಸಾರ್ಥೋಽಹಂ ಬ್ರಹ್ಮೈಕತ್ವಂ ಕಿಲ ಸ್ಥಿತಂ ।
ಆದಾನದಾನಸಂಕೋಚಪೂರ್ವಿಕಾ ಭೂತಶಕ್ತಯಃ ॥ ೬೪ ॥

---

೬೧. ಬ್ರಹ್ಮಾಹಂ ಎಂಬುದೇ ಸತ್ಯವು. (ಅದರಿಂದ) ನಾನು ಯಾವುದನ್ನೂ ಬಿಡುವುದಿಲ್ಲ. ಯಾವುದನ್ನೂ ಬಯಸುವುದಿಲ್ಲ. ರಕ್ತವೂ ನಾನೇ! ಮಾಂಸವೂ ನಾನೇ! ಅಸ್ಥಿಗಳೂ ನಾನೇ! ದೇಹವೂ ನಾನೇ!

(ದೇಹೋಽಹಂ ಭಾವವಿರುವಾಗ ಇರುವ ಅಜ್ಞಾನವು ಬೇರೆ. ಬ್ರಹ್ಮಾಹಂ ಭಾವವಿರುವಾಗ ಹೇಳುವ ಅಹಂ ರಕ್ತಮಹಂ ಮಾಂಸಂ ಎಂಬ ಜ್ಞಾನವು ಬೇರೆ.)

೬೨. ಬ್ರಹ್ಮಾಹಂ ಎಂಬುದೇ ಸತ್ಯವು. ಅದರಿಂದ ಚಿತ್ತೂ ನಾನೇ! ಚೇತನವೂ ನಾನೇ! ಅಂತರಿಕ್ಷವೂ ನಾನೇ! ಸೂರ್ಯನಿಂದ ಕೂಡಿರುವ ಆಕಾಶವೂ ನಾನೇ! ದಿಕ್ಕುಗಳೂ ಭೂಮಿಯೂ ನಾನೇ!

೬೩. ಬ್ರಹ್ಮಾಹಂ ಎಂಬುದು ಸತ್ಯವಾದ್ದರಿಂದ ಘಟಪಟಾಕಾರನಾಗಿರುವವನೂ ನಾನೇ! ತೃಣವೂ ನಾನೇ! ಭೂಮಿಯೂ ನಾನೇ! ಗುಲ್ಮಗಳೂ ನಾನೇ! ಅರಣ್ಯವೂ ನಾನೇ!

೬೪. ಶೈಲಸಾಗರಗಳೂ ಸಾರ್ಥ (ಪ್ರಾಣಿಸಂಘ) ಗಳೂ ನಾನೇ! ಬ್ರಹ್ಮವೊಂದೇ ತಾನೇ ಇರುವುದು! ಆದಾನ, ದಾನ, ಸಂಕೋಚ, ಮೊದಲಾದವೆಲ್ಲವೂ (ಪಂಚ) ಭೂತಗಳ ಶಕ್ತಿಗಳು.

ಸರ್ವಮೇವ ಚಿದಾತ್ಮಾಸ್ಮಿ ಬ್ರಹ್ಮಣ್ಯಾತತರೂಪಧೃಕ್ ॥ ೬೫ ॥

ಲತಾಗುಲ್ಮಾಂಕುರಾದೀನಾಮಹಂ ಸಂಭವನೈಷಿಣಾಂ।
ಚಿದಾತ್ಮಾಂತರ್ಗತಂ ಶಾಂತಂ ಪರಂ ಬ್ರಹ್ಮರಸಾತ್ಮಕಂ ॥ ೬೬ ॥

ಯಸ್ಮಿನ್ಸರ್ವಂ ಯತಃ ಸರ್ವಂ ಯತ್ಸರ್ವಂ ಸರ್ವತಶ್ಚ ಯತ್ ।
ಯೋ ಮತಃ ಸರ್ವ ಏಕಾತ್ಮಾ ಪರಂ ಬ್ರಹ್ಮೇತಿ ನಿಶ್ಚಯಃ ॥ ೬೭ ॥

ಚಿದಾತ್ಮಾ ಬ್ರಹ್ಮ ಸತ್ಸತ್ಯಮೃತಂ ಜ್ಞ ಇತಿ ನಾಮಭಿಃ ।
ಪ್ರೋಚ್ಯತೇ ಸರ್ವಗಂ ತತ್ತ್ವಂ ಚಿನ್ಮಾತ್ರಂ ಚೇತ್ಯವರ್ಜಿತಂ ॥ ೬೮ ॥

ಆಭಾಸಮಾತ್ರಮಮಲಂ ಸರ್ವಭೂತಾತ್ಮಬೋಧಕಂ ।
ಸರ್ವತ್ರಾವಸ್ಥಿತಂ ಶಾಂತಂ ಚಿದ್ಬ್ರಹ್ಮೇತ್ಯನುಭೂಯತೇ ॥ ೬೯ ॥

---

೬೫. ಬ್ರಹ್ಮದಲಿ ವಿಸ್ತಾರವಾಗಿ ಹರಡಿದಂತೆ ಇದ್ದುಕೊಂಡು ಇರುವ ಸರ್ವವೂ ಚಿದಾತ್ಮನಾದ ನಾನೇ !

೬೬. ಹುಟ್ಟಬೇಕು ಎಂದಿರುವ ಲತಾ, ಗುಲ್ಮ, ಅಂಕುರ, ಇವುಗಳಲ್ಲಿ ಇರುವ, ಶಾಂತವೂ ಸರ್ವಶ್ರೇಷ್ಠವೂ ರಸಾತ್ಮಕವೂ ಆದ ಚಿದಾತ್ಮವೇ ಬ್ರಹ್ಮವು. ಅದೇ ನಾನು.

೬೭. ಯಾವುದರಲ್ಲಿ ಎಲ್ಲವೂ ಇರುವುದೋ, ಯಾವುದರಿಂದ ಎಲ್ಲವೂ ಸಂಭವಿಸುವುದೋ, ಯಾವುದು ತಾನೇ ಎಲ್ಲವೂ ಆಗಿರುವುದೋ ಯಾವುದು ಸರ್ವವೂ ತಾನೇ ಆಗಿರುವ ಒಂದೇ ಒಂದು ಆತ್ಮವೆಂದು ಗೊತ್ತಾಗಿದೆಯೋ ಅದೇ ಪರಬ್ರಹ್ಮವು.

೬೮. ಬ್ರಹ್ಮವು ಸತ್ಯವು: ಸತ್ಯಂ, ಋತಂ, ಜ್ಞಾನಂ ಎಂಬ ಹೆಸರುಗಳಿಂದ ಹೇಳಿಸಿಕೊಳ್ಳುವುದು. ಅದು ಸರ್ವತ್ರ, ಗತಿಯುಳ್ಳದ್ದು. ಅದೇ ತತ್ವವು. ಚಿನ್ಮಾತ್ರವು. ಚೇತ್ಯವರ್ಜಿತವು.

೬೯. ಕೇವಲ ಪ್ರಕಾಶವಾಗಿರುವುದು. ಮಲರಹಿತವಾಗಿರುವುದು. ಸರ್ವಭೂತಗಳಲ್ಲಿಯೂ ಆತ್ಮಸ್ವರೂಪವಾಗಿದ್ದುಕೊಂಡು ಬೋಧಪ್ರದವಾಗಿರುವುದು :

ಮನೋಬುದ್ಧೀಂದ್ರಿಯವ್ರಾತ ಸಮಸ್ತಕಲನಾನ್ವಿತಂ ।
ಭೇದಂ ತ್ಯಕ್ತ್ವಾ ಸ್ವಮಾಭಾಸಂ ಚಿದ್ಬ್ರಹ್ಮಾಹಮನಾಮಯಂ ॥ ೭೦ ॥

ಶಬ್ದಾದೀನಾಮಶೇಷಾಣಾಂ ಕಾರಣಾನಾಂ ಜಗತ್ಸ್ಥಿತೇಃ ।
ತತ್ತ್ವಾವಕಾಶಕಂ ಸ್ವಚ್ಛಂ ಚಿದ್ಬ್ರಹ್ಮಾಸ್ಮಿ ನ ಮೇ ಕ್ಷಯಃ ॥ ೭೧ ॥

ಅನಾರತಗಲತ್ಸ್ವಚ್ಛಚಿದ್ವಾರಾಗಹನಾತ್ಮಕಂ ।
ಆಲೋಕಃ ಸುಮನೋಮೌನಂ ಚಿದ್ಬ್ರಹ್ಮಾಸ್ಮ್ಯನ್ನತಂ ಪರಂ ॥ ೭೨ ॥

ಎಲ್ಲೆಲ್ಲಿಯೂ ಇರುವುದು : ಶಾಂತವಾಗಿರುವುದು : ಇಂತಹ ಚಿತ್‌ಸ್ವರೂಪ ಬ್ರಹ್ಮವು ಇದೇ ರೂಪವಾಗಿ ಬ್ರಹ್ಮಜ್ಞರ ಅನುಭವಕ್ಕೆ ಗೋಚರವಾಗಿರುವುದು.

೭೦. ಮನಸ್ಸು, ಬುದ್ಧಿ, ಇಂದ್ರಿಯ ಸಮೂಹಗಳಿಂದ ಆಗಿರುವ ಸಮಸ್ತ ಕಲನೆ (ಭ್ರಾಂತಿ) ಗಳಿಂದ ಕೂಡಿರುವ ಭೇದವನ್ನು ಬಿಟ್ಟು, ಕೇವಲ ಪ್ರಕಾಶವಾಗಿರುವ, ಸ್ವಪದವಾಚ್ಯವಾದ ಅನಾಮಯವಾದ ಚಿದ್ಬ್ರಹ್ಮವೇ ನಾನು !

(ನನು ಪ್ರತಿಪುರುಷಂ ಮನೋ ಬುದ್ಧೀಂದ್ರಿಯ ವ್ರಾತ.ಭೇದೇನ ಚಿತಿಭೇದಾನುಭವಾತ್ ಕಥಂ ಸಾ ಬ್ರಹ್ಮಸ್ಯಾತ್ ತತ್ರಾಹ–ಮನ ಇತ್ಯಾದಿನಾ–ಸಮಸ್ತಾಸು ಕಲನಾಸು ವೃತ್ತಿಷು ಅನ್ವಿತಂ ಅನುಗತಂ— ತಾ.ಪ್ರ.)

೭೧. ಜಗತ್ಸ್ಥಿತಿಗೆ ಕಾರಣಗಳಾದ ಶಬ್ದಾದಿಗಳಿಗೆಲ್ಲ ಅವಕಾಶವನ್ನು ಕೊಟ್ಟಿರುವ (ಆಧಾರವಾದ) ಚಿತ್ಸ್ವರೂಪವಾದ ಬ್ರಹ್ಮವೇ ನಾನಾಗಿರುವೆನು. ನನಗೆ (ಎಂದಿಗೂ) ನಾಶವಿಲ್ಲ.

(ಶಬ್ದಾದೀನಾಂ ತತ್ಕಾರಣಾದೀನಾಂ ಆಕಾಶಾದೀನಾಂ ತತ್ಕೃತಜಗತ್-ಸ್ಥಿತೇಶ್ಚ ತತ್ತ್ವಾವಕಾಶಕಂ ಸತ್ತಾಪ್ರಥಾ ಸ್ವರೂಪಂ—ತಾ.ಪ್ರ.)

೭೨. (ಬೆಂಕಿಯ ಕೊಂಡದಿಂದ ಕಿಡಿಗಳು ಹಾರುತ್ತಿರುವಂತೆ) ಯಾವ ಸ್ವಚ್ಛ ಚಿತ್ಸರೋವರದಿಂದ ಚೇತೋಧಾರೆಗಳು ಒಂದೇ ಸಮನಾಗಿ ಹರಿದು ಹೋಗುತ್ತಿರುವುವೋ ಅಂತಹ ಪ್ರಕಾಶರೂಪವಾದ, ಸುಮನಸರೂ (ಯೋಗಿಗಳೂ

ಅಸಾರತಗಲದ್ರೂಪಂ ನಿತ್ಯಂ ಚಾನುಭವಾಮೃತಂ ।
ಅಹಂ ನಿಃಶೇಷಚಕ್ರಾಣಿ ಚಿದ್ಬ್ರಹ್ಮಾಹಮಲೇಪಕಂ ॥ ೭೩ ॥

ಸುಷುಪ್ತಸದೃಶಂ ಶಾಂತಮಾಲೋಕವಿಮಲಾತ್ಮಕಂ ।
ಸಂಭೋಗೋತ್ತಮಮವಭಾಸಂ ಚಿದ್ಬ್ರಹ್ಮಾಸ್ಮ್ಯಪವಾಸನಂ ॥ ೭೪ ॥

ಖಂಡಾದಿಸ್ವಾದುಸಂವಿತ್ತಿರೀಷನ್ಮಾತ್ರಾ ತು ತಿಷ್ಠತಿ ।
ಚಿತ್ತಾದಿಷ್ವವಬುದ್ಧೇಷು ತದ್ಧಿ ಬ್ರಹ್ಮಾಹಮಚ್ಯುತಃ ॥ ೭೫ ॥

ದೇವತೆಗಳೂ) ಮೌನದಿಂದ ಆರಾಧಿಸುವ ಶ್ರೇಷ್ಠವಾದ, ಅಮೃತ ಸ್ವರೂಪವಾದ ಚಿದ್ಬ್ರಹ್ಮವೇ ನಾನು.

೭೩. ಯಾವುದರಿಂದ ರೂಪಗಳು (ರೂಪವಿಶಿಷ್ಟವಾದ ಭೂತ ಸಂಘಗಳು) ಒಂದೇ ಸಮನಾಗಿ ಹುಟ್ಟಿ ಬರುತ್ತಿವೆಯೋ, ನಿತ್ಯವೂ ಅನುಭವ ಗೋಚರವಾಗಿ ರುವ ಅಮೃತವು ಯಾವುದೋ, ಅಹಂಕಾರ ವಿಶಿಷ್ಟ ಭೋಕ್ತೃಚಕ್ರಗಳೆಲ್ಲವೂ ತನ್ನಿಂದಲೇ ಬರುತ್ತಿದ್ದರೂ ಯಾವುದು ನಿರ್ಲಿಪ್ತವಾಗಿರುವುದೋ ಆ ಚಿದ್ಬ್ರಹ್ಮವೇ ನಾನು.

೭೪. (ಕರಣ ವ್ಯಾಪಾರಶೂನ್ಯವಾದ) ಸುಷುಪ್ತಿಗೆ ಸದೃಶವಾಗಿರುವ ಸ್ಥಿತಿ ಯುಳ್ಳ, ಶಾಂತವಾದ, ಪ್ರಕಾಶಕ್ಕಿಂತಲೂ ನಿರ್ಮಲವಾಗಿರುವ, ವಿಷಯಾನಂದ ಕ್ಕಿಂತ ಶ್ರೇಷ್ಠವಾದ, ಕೇವಲ ಪ್ರಕಾಶಮಯವಾದ, ವಾಸನಾ ಬೀಜವೂ ಇಲ್ಲದ ಚಿದ್ಬ್ರಹ್ಮವೇ ನಾನು.

(ಸಂಭೋಗಾ ಮಾನುಷಾನಂದಾದಿ ಹೈರಣ್ಯಗರ್ಭಾಂತ ವಿಷಯ ಸುಖಾನಿ । ತಾ.ಪ್ರ.)

೭೫. ಖಂಡಶರ್ಕರಾದಿಗಳಲ್ಲಿ ಕೇವಲ ಸ್ವಲ್ಪವಾಗಿರುವ ಸ್ವಾದುರಸವು, (ಪರಿಚ್ಛೇದ ಕಾರಣಗಳಾದ) ಚಿತ್ತಾದಿಗಳನ್ನು ಯಾವ ಬ್ರಹ್ಮ ದೃಷ್ಟಿಯಿಂದ ನೋಡಿದರೆ ಅನಂತ ಬ್ರಹ್ಮಾನಂದ ರಸವೇ ಆಗುವುದೋ ಅಂತಹ ಅಚ್ಯುತವಾದ ಬ್ರಹ್ಮವೇ ನಾನು.

ಕಾಂತಾಸಂಸಕ್ತಚಿತ್ತಸ್ಯ ಚಂದ್ರೇ ಸಮುದಿತೇ ಸತಿ ।
ಚಂದ್ರಪ್ರತ್ಯಯಸತ್ತಾತ್ಮ ಚಿದ್ಬ್ರಹ್ಮಾಹಮನಾಮಯಂ ॥ ೭೬ ॥

---

೭೬. ಕಾಂತೆಯಲಿ ಆಸಕ್ತನಾಗಿರುವವನಿಗೂ ಚಂದ್ರೋದಯವಾದಾಗ, ಚಂದ್ರನಿವನು ಎಂದು ತಿಳಿಯುವಂತೆ ಮಾಡುವ ಚಿಚ್ಛಕ್ತಿಯು ಯಾವುದುಂಟೋ ಆ ಚಿತ್ಸ್ವರೂಪ ಬ್ರಹ್ಮವೇ ನಾನು.

(ಹಿಂದಿನ ಶ್ಲೋಕದಲ್ಲಿ ಅಖಂಡವಾಗಿರುವ ಬ್ರಹ್ಮಾನಂದವನ್ನು ಖಂಡವಾಗಿ ಮಾಡಿ ಸ್ವಾದುರಸ ರೂಪವಾಗಿ ತೋರಿಸುವ ಚಿತ್ತ ಚೇತ್ಯ ಚೇತಯಿತೃರೂಪವಾದ ಪರಿಚ್ಛೇದ ಕಾರಣಗಳನ್ನು ಬ್ರಹ್ಮಸ್ವರೂಪವಾಗಿ ಅನುಸಂಧಾನ ಮಾಡಿದರೆ ಅಲ್ಪವಾಗಿದ್ದ ಸ್ವಾದುತೆಯ ಅಲ್ಪತ್ವವು ಹೋಗಿ ಅದು ಅನಲ್ಪವಾಗಿ ಬ್ರಹ್ಮವೇ ಆಗುವುದು ಎಂದು ಹೇಳಿ, ಈ ಶ್ಲೋಕದಲಿ ಜ್ಞಾನಸಾಧನವಾದ ಮನಸ್ಸಿಗೆ ಗ್ರಹವಿದ್ದರೂ ಕರಣಾದಿಗಳ ಮೂಲಕ ಕೆಲಸಮಾಡಿಸುವ ಚಿಚ್ಛಕ್ತಿಯು ಯಾವುದುಂಟೋ ಅದೇ ಬ್ರಹ್ಮ ಎಂದು ಹೇಳಿದೆ.)

(ತಾತ್ಪರ್ಯಪ್ರಕಾಶಕಾರರು ಈ ಶ್ಲೋಕಗಳ ವಿಷಯವಾಗಿ ಹೀಗೆ ಹೇಳಿದ್ದಾರೆ:-ರಸನಾದಿಭಿರಿಂದ್ರಿಯೈಃ ಖಂಡಶರ್ಕರಾದಿ ಸ್ವಾದುಸಂವಿತ್ತಿರಸನಾತ್ಪ್ರಾಖಂಡ ರಸಸ್ಯ ಜಿಹ್ವಾತಃ ಕಂಠೋಪಸರ್ಪಣ ಪರ್ಯಂತಾಲ್ಪತರದೇಶಕಾಲ ಪರಿಚ್ಛಿನ್ನಾತಿಪ್ರತೀತಿ ಸೈವತು ಸ್ವಪರಿಚ್ಛೇದಹೇತುಷು ಚಿತ್ತ ಚೇತ್ಯ ಚೇತಯಿತೃಷು ಸ್ವ ಪ್ರ ಕಾ ಶಾ ನಂ ದೈ ಕ ರ ಸ ತ ಯಾ ಅವಬುದ್ಧೇಷು ಪತ್ಸು ಪರಿಚ್ಛೇದೋಪಾಧಿಚ್ಯುತಾವಪಿ ಚ್ಯುತಿರಹಿತಾತ್ಮಾ ತದೇವ ನಿರತಿಶಯಾನಂದಂ ಬ್ರಹ್ಮಾಹಮಿತ್ಯನ್ವಯಃ "—" ನನು ಜ್ಞಾನಸ್ಯ ವಿಷಯೋಪಾಧಿ ನಿರ್ಮುಕ್ತಾಸ್ಥಿತಿರೇವಾಪ್ರಸಿದ್ಧಾ ಇತ್ಯಾಶಂಕ್ಯ ತತ್ಪ್ರಸಿದ್ಧಿಂ ದರ್ಶಯತಿ ಕಾಂತೇತಿ ನಿಶಿ ಕಾಂತಾ ಸಂಸಕ್ತಚಿತ್ತಸ್ಯ ಚಂದ್ರೋದಯೇಸತಿ ಚಂದ್ರಕಾಂತೋಭಯ ದರ್ಶನೇ ಅಂತರಾಲೇದೇಶೇಚಿತ್ತೋ ವಿಚ್ಛೇದಾನನುಭವಾಚ್ಚಂದ್ರಾಕಾರ ಪ್ರತ್ಯಯ ಪರ್ಯಂತಮನವಚ್ಛಿನ್ನ ಸತ್ತಾತ್ಮಕಂ ನಿರ್ವಿಷಯಂ ಚಿದ್ಬ್ರಹ್ಮಪ್ರಸಿದ್ಧಂ ತದೇವಾಹಮಿತ್ಯರ್ಥಃ)

ಭೂಮಿಷ್ಠನರದೃಷ್ಟೀನಾಂ ಲಗ್ನಾನಾಂ ಖೇ ನಿಶಾಕರೇ ।
ಯಾ ಸ್ವಸ್ಥಾ ನನು ಚಿಚ್ಛಕ್ತಿಸ್ತಚ್ಚಿದ್ಬ್ರಹ್ಮಾಸ್ಮಿ ನಿರ್ಮಲಂ ॥ ೭೭ ॥

ಸುಖದುಃಖಾದಿಕಲನಾವಿಕಲೋ ನಿರ್ಮಲಸ್ತಥಾ ।
ಸತ್ತಾನುಭವರೂಪಾತ್ಮ ಚಿದ್ಬ್ರಹ್ಮಾತ್ಮಾಸ್ಮಿ ಶಾಶ್ವತಃ ॥ ೭೮ ॥

ಅಸಂಸ್ಮೃತಾಧ್ವಗಾಲೋಕೇ ಮನಸ್ಯನ್ಯತ್ರ ಸಂಸ್ಥಿತೇ ।
ಯಾ ಪ್ರತೀತಿರನಾಗಸ್ಕಾ ತಚ್ಚಿದ್ಬ್ರಹ್ಮಾಸ್ಮಿ ಸರ್ವಗಃ ॥ ೭೯ ॥

ಭೂವಾರ್ಯನಿಲಬೀಜಾನಾಂ ಸಂಬಂಧೇಂಕುರಕರ್ಮಸು ।
ಶಕ್ತಿರುದ್ಗಮನೀಯಾಂತಸ್ತಚ್ಚಿದ್ಬ್ರಹ್ಮಾಹಮಾತತಂ ॥ ೮೦ ॥

---

೭೭. ಭೂಮಿಯಲ್ಲಿರುವ ಮನುಷ್ಯರ ದೃಷ್ಟಿಗಳು ಆಕಾಶದಲ್ಲಿರುವ ಚಂದ್ರನಲ್ಲಿ ಲಗ್ನವಾದಾಗ, ಮಧ್ಯದ ಅಂತರಾಲ ದೇಶದಲಿ ಯಾವ ಚಿಚ್ಛಕ್ತಿಯಿರುವುದೋ ಆ ಚಿಚ್ಛಕ್ತಿಯೇ ಬ್ರಹ್ಮ. ಆ ನಿರ್ಮಲ ಬ್ರಹ್ಮವೇ ನಾನು.

೭೮. ಸುಖದುಃಖಗಳೆಂಬ ಭಾವನೆಯ ಸಂಪರ್ಕವಿಲ್ಲದೆ ನಿರ್ಮಲವಾಗಿ ಸತ್ತಾನುಭವರೂಪವಾಗಿರುವ ಚಿದ್ಬ್ರಹ್ಮವು ಯಾವುದೋ ಆ ಶಾಶ್ವತ ಬ್ರಹ್ಮವೇ ನಾನು

(ಉದಾಸೀನಾನಾಂ ಸುಖದುಃಖಾದ್ಯಾಕಾರ ವೃತ್ತ್ಯಂತರ ಶೂನ್ಯತಾ ದಶಾಯಾಂ ನಿರ್ವಿಷಯಸ್ಯ ಆತ್ಮಸ್ಫುರಣಾ ಶುದ್ಧಾ—ತಾ. ಪ.)
ಗೀತೆಯ ಸ್ಥಿತಪ್ರಜ್ಞ, ಪಂಡಿತ, ಯೋಗಿ, ಸಮದರ್ಶಿ, ಇವರನ್ನು ಚಿಂತಿಸಿ.

೭೯. ಮಾರ್ಗದಲಿ ಹೋಗುತ್ತಿದ್ದು ಮನಸ್ಸು ಎಲ್ಲಿಯೋ ಯಾವುದೋ ವಿಷಯವನ್ನು ನೆನೆಯುತ್ತಿರುವಾಗ, ಕಣ್ಣೆದುರಿಗೆ ಇರುವುದೂ ಕಾಣಿಸದಿರುವಿಕೆ ಎಂಬ ನಿರ್ವಿಷಯವಾದ ಜ್ಞಾನವು ಯಾವುದುಂಟೋ ಅಂಥಾ ನಿರ್ವಿಷಯ ಜ್ಞಾನ ಸ್ವರೂಪವಾದ ಸರ್ವತ್ರ ಗತಿಯುಳ್ಳ ಚಿದ್ಬ್ರಹ್ಮವೇ ನಾನು.

೮೦. ಭೂಮಿ, ನೀರು, ವಾಯು, ಬೀಜ, ಇವುಗಳ ಸಂಬಂಧವಾಗುವ ವರೆಗೂ ಅಂತಸ್ಥವಾಗಿದ್ದು, ಆ ಬಳಿಕ ಅಂಕುರಾದಿಗಳಾಗಿ ಪ್ರಕಟವಾಗುವ ಶಕ್ತಿಯ ರೂಪವಾಗಿ ಎಲ್ಲೆಲ್ಲಿಯೂ ತಾನೇ ತಾನಾಗಿ ಹರಡಿರುವ ಚಿದ್ಬ್ರಹ್ಮವೇ ನಾನು.

ಖರ್ಜೂರನಿಂಬಬಿಂಬಾನಾಂ ಸ್ವಯಮಾತ್ಮನಿ ತಿಷ್ಠತಾಂ।
ಯಾ ಸ್ವಾದಸಕ್ತಾ ಲೀನಾಂತಸ್ತದ್ಬ್ರಹ್ಮ ಚಿದಹಂ ಸಮಃ ॥ ೮೧ ॥

ಖೇದಾನಂದವಿಮುಕ್ತಾಂತಃ ಸಂವಿತ್ತಿರ್ಮನನೋದಯಾ।
ಲಾಭಾಲಾಭವಿಧೌ ತುಲ್ಯಾ ಚಿದ್ಬ್ರಹ್ಮಾಸ್ಮಿ ನಿರಾಮಯಂ ॥ ೮೨ ॥

ಯಾವದ್ಭೂಮ್ಯರ್ಕಮೇತಾವದ್ದೃಷ್ಟಿಸೂತ್ರಂ ಯದಾತತಂ ।
ತನ್ಮಧ್ಯಸದೃಶಂ ಶಾಂತಂ ನಿರ್ಮಲಂ ಚಿದಹಂ ತತಂ ॥ ೮೩ ॥

ಜಾಗ್ರತ್ಯಪಿ ಸುಷುಪ್ತೇಽಪಿ ತತ್ಸ್ವಪ್ನೇಽಪಿ ತಥೋದಿತಂ ।
ತುರ್ಯಂ ರೂಪಮನಾದ್ಯಂತಂ ಚಿದ್ಬ್ರಹ್ಮಾಹಮನಾಮಯಂ ॥ ೮೪ ॥

---

೮೧. ಜಡವಾಗಿ ಮೂಕವಾಗಿ ಸ್ವಸ್ಥವಾಗಿರುವ ಖರ್ಜೂರ, ಬೇವು, ಮೊದಲಾದ ಫಲಗಳಲ್ಲಿ ಮಧುರಾದಿ ರಸರೂಪವಾಗಿ ಕುಳಿತಿದ್ದು ಜಿಹ್ವಾ ಸಂಪರ್ಕವಾದಾಗ ಪ್ರಕಟವಾಗುವ ರಸರೂಪ ಬ್ರಹ್ಮವು ಯಾವುದುಂಟೋ ಆ ಸಮ (ಸರ್ವಸಂಸ್ಥಿತವಾದ) ಚಿತ್ತೇ ನಾನು.

೮೨. ಸುಖದುಃಖಗಳು ಯಾವವೂ ಇಲ್ಲದೆ ಮನೋವೃತ್ತಿಯಾಗಿ, ಲಾಭನಷ್ಟಗಳಲ್ಲಿ ವಿಕಾರವನ್ನು ಹೊಂದದೆ ನಿರಾಮಯವಾದ ಚಿದ್ಬ್ರಹ್ಮವೇ ನಾನು.

೮೩. ಭೂಮಿಯಲ್ಲಿರುವವನು ತಲೆಯೆತ್ತಿ ಸೂರ್ಯನನ್ನು ನೋಡುವಾಗ ಇಲ್ಲಿಂದ ಅಲ್ಲಿನವರೆಗೂ ಹಬ್ಬಿದ ದೃಷ್ಟಿಯ ಮಧ್ಯದಲ್ಲಿ ವಿಷಯ ಪ್ರಕಾಶನ ಮಾಡಬಲ್ಲ ಸಾಮರ್ಥ್ಯರೂಪವಾಗಿ ಹರಡಿ ಶಾಂತವಾಗಿ, ನಿರ್ಮಲವಾಗಿ (ವಿಷಯ ಸ್ಪರ್ಶವಿಲ್ಲದೆ) ಇರುವ ಚಿತ್ತು ಯಾವುದುಂಟೋ ಅದೇ ನಾನು.

೮೪. ಜಾಗ್ರತ್ತಿನಲ್ಲಿಯೂ ಸ್ವಪ್ನದಲ್ಲಿಯೂ ಸುಷುಪ್ತಿಯಲ್ಲಿಯೂ (ವಿಶ್ವ ತೈಜಸ ಪ್ರಾಜ್ಞರೂಪದಿಂದಿದ್ದು) ತುರ್ಯದಲ್ಲಿ ಆದಿಮಧ್ಯಾಂತಗಳಿಲ್ಲದ ಅನಾಮಯನಾಗಿರುವ ಸಾಕ್ಷಿರೂಪ ಚಿದ್ಬ್ರಹ್ಮವೇ ನಾನು.

ಪುಂಸಾ ಕ್ಷೇತ್ರಶತೋತ್ಥಾನಾಮಿಕ್ಷೂಣಾಂ ಸ್ವಾದುವತ್ಸ್ಥಿತಂ ।
ಸರ್ವೇಷಾಮೇಕರೂಪಂ ತಚ್ಚಿದ್ಬ್ರಹ್ಮಾಸ್ಮಿ ಸಮಃ ಸ್ಥಿತಃ ॥ ೮೫ ॥

ಸರ್ವಗಾ ಪ್ರಕೃತಾ ಸ್ವಚ್ಛರೂಪಾ ಭಾನೋರಿವ ಪ್ರಭಾ ।
ಆಲೋಕಕಾರಿಣೀ ಕಾಂತಾ ಚಿದ್ಬ್ರಹ್ಮೇದಮಹಂ ತತಂ ॥ ೮೬ ॥

ಸಂಭೋಗಾನಂದಲವವದಮೃತಾಸ್ವಾದಶಕ್ತಿವತ್ ।
ಸ್ವಾನುಭೂತ್ಯೇಕಮಾತ್ರಂ ಯಚ್ಚಿದ್ಬ್ರಹ್ಮಾಸ್ಮಿ ತದವ್ಯಯಂ ॥ ೮೭ ॥

---

೮೫. ಬೇರೆ ಬೇರೆ ಕ್ಷೇತ್ರಗಳಲ್ಲಿ ಬೆಳೆದಿರುವ ಕಬ್ಬುಗಳಲ್ಲೆಲ್ಲಾ ಇರುವ ಸ್ವಾದುರಸವು ಏಕರೂಪವಾಗಿಯೇ ಇರುವಂತೆ, ನಾನಾ ಕ್ಷೇತ್ರಗಳಲ್ಲಿರುವ ಕ್ಷೇತ್ರಜ್ಞರಲ್ಲೆಲ್ಲಾ ತಾನೊಬ್ಬನೇ ಆಗಿ ಸಮ (ನಿರ್ವಿಕಾರ)ನಾಗಿ ಇರುವ ಚಿದ್ಬ್ರಹ್ಮವೇ ನಾನು.

(ಗೀತಾ ಅಧ್ಯಾಯ ೧೩ ರಲ್ಲಿ ಕ್ಷೇತ್ರಕ್ಷೇತ್ರಜ್ಞರೂಪ ಕ್ಷರಾಕ್ಷರ ಪುರುಷ ವಿಷಯವನ್ನೂ ಅಧ್ಯಾಯ ೧೫ ರಲ್ಲಿ ಕ್ಷರಾಕ್ಷರರಿಗಿಂತ ಉತ್ತಮನಾದ ಪುರುಷೋತ್ತಮನ ವಿಷಯವನ್ನೂ ನೋಡಿ)

೮೬. ಸೂರ್ಯನ ಪ್ರಭೆಯಂತೆ ಸ್ವಚ್ಛವಾಗಿ, ಪ್ರತ್ಯಕ್ಷವಾಗಿ, ಎಲ್ಲೆಲ್ಲಿಯೂ ಹರಡಿರುವುದಾಗಿ, ಎಲ್ಲವನ್ನೂ ಪ್ರಕಾಶಗೊಳಿಸುವುದಾಗಿ, ಸರ್ವ ಮನೋಹರವಾಗಿರುವ, ಸರ್ವತ್ರ ವ್ಯಾಪ್ತವಾಗಿರುವ ಚಿದ್ಬ್ರಹ್ಮವು ಯಾವುದುಂಟೋ ಅದೇ ನಾನು.

೮೭. ಯಾವುದರೊಡನೆ ಹೋಲಿಸಿದರೆ ವಿಷಯ ಭೋಗದಿಂದ ಲಭಿಸುವ ಆನಂದವು ಲವಮಾತ್ರವಾಗುವುದೋ, ಅಮೃತದಲ್ಲಿರುವ ಮಧುರತೆಯ ಪೂರ್ಣರೂಪವು ಯಾವುದೋ, ಅಂತಹ ಸ್ವಾನುಭೂತಿ ಸ್ವರೂಪನಾದ ಅವ್ಯಯವಾಗಿರುವ ಚಿದ್ಬ್ರಹ್ಮವು ಯಾವುದುಂಟೋ ಅದೇ ನಾನು.

ಪ್ರೋತಾಂಗಮಪಿ ಗುಪ್ತಾಸ್ಯಂ ದೇಹೇ ತಂತುರ್ಬಿಸೇ ಯಥಾ ।
ಭೇದೇ ಭೇದೇ ಸ್ಫುರದ್ರೂಪಂ ಚಿದ್ಬ್ರಹ್ಮಾಹಮನಾಮಯಂ ॥ ೮೮ ॥

ಆಕ್ರಾಂತಭುವನಾಪ್ಯಭ್ರಮಾಲೇವ ಸ್ಪಂದಶಾಲಿನೀ ।
ದುರ್ಲಕ್ಷ್ಯಾಣುಮಯಾಕಾರಾ ಚಿಚ್ಛಕ್ತಿರಹಮಾತತಾ ॥ ೮೯ ॥

ಅನುಭೂತಿಮಯಾಂತಸ್ಥಸ್ನೇಹಮಾತ್ರೋಪಲಕ್ಷಿತಾ ।
ಕ್ಷೀರಾದ್ಘೃತಸ್ಯ ಸತ್ತೇವ ಚಿದಹಂ ಕ್ಷಯವರ್ಜಿತಾ ॥ ೯೦ ॥

ಕಟಕಾಂಗದಕೇಯೂರರಚನಾ ತದತನ್ಮಯೀ ।
ಹೇಮ್ನೀವ ಸಂಸ್ಥಿತಾ ದೇಹೇ ಚಿದ್ಬ್ರಹ್ಮಾತ್ಮಾಸ್ಮಿ ಸರ್ವಗಃ ॥ ೯೧ ॥

---

೮೮. ದೇಹದಲ್ಲಿ ಎಲ್ಲೆಲ್ಲಿ ವ್ಯಾಪಿಸಿದ್ದರೂ ಗುಪ್ತವಾಗಿ, ಕಮಲದ ನಾಳದಲ್ಲಿ ಅಡಗಿರುವ ತಂತುವಿನಂತೆ ಸೂಕ್ಷ್ಮವಾಗಿ ಅಪ್ರಕಟವಾಗಿರುವ, ಭೇದ, ಭೇದ ಗಳಲ್ಲಿ ಮಾತ್ರ ಪ್ರಕಟವಾಗುವ ಅನಾಮಯವಾದ ಚಿದ್ಬ್ರಹ್ಮವು ಯಾವುದುಂಟೋ ಅದೇ ನಾನು.

(ಭೇದ=ಹೃದಯಗ್ರಂಥಿ ವಿಚ್ಛೇದ: ಭೇದ=ಶಕ್ತಿಭೇದ · ಪ್ರಾಣಾಯಾಮ.)

೮೯. ವ್ಯಾಪಾರ ಮಾಡುವುದೇ ಸ್ವಭಾವವಾಗಿ, ಮೇಘಮಾಲೆಯಂತೆ ಭುವನ ಭುವನಗಳನ್ನೆಲ್ಲ ಆಕ್ರಮಿಸಿದ್ದರೂ, ಅಗೋಚರವಾದ ಅಣುವಿನಂತೆ ಸೂಕ್ಷ್ಮ ವಾಗಿರುವ ಚಿಚ್ಛಕ್ತಿಯು ಯಾವುದೋ ಅದೇ ನಾನು.

೯೦. ಹಾಲಿನಲ್ಲಿರುವ ತುಪ್ಪದ ರಸದಂತೆ, ಅನುಭವದ ತಿರುಳಾಗಿ ಮಾತ್ರ ಗೋಚರಿಸುವ ಅಕ್ಷಯವಾದ ಚಿಚ್ಛಕ್ತಿಯು ಯಾವುದೋ ಅದೇ ನಾನು.

೯೧. ಚಿನ್ನದಲ್ಲಿ ಮಾಡಿದ ಕಟಕ, ಕೇಯೂರ ಮೊದಲಾದ ಆಕೃತಿ ಗಳೆಲ್ಲವೂ ತನ್ಮಯವೂ ಹೌದು, ಅತನ್ಮಯವೂ ಹೌದು, ಎಂಬಂತೆ, ದೇಹದಲ್ಲಿ ಸರ್ವತ್ರ ವ್ಯಾಪಿಸಿರುವ ಚಿದ್ಬ್ರಹ್ಮಾತ್ಮವೇ ನಾನು.

ಪದಾರ್ಥೌಘಸ್ಯ ಶೈಲಾದೇರ್ಬಹಿರಂತಶ್ಚ ಸರ್ವದಾ ।.
ಸತ್ತಾ ಸಾಮಾನ್ಯರೂಪೇಣ ಯಾ ಚಿತ್ಸೋಽಹಮಲೇಪಕಃ ॥ ೯೨ ॥

ಸರ್ವಾಸಾಮನುಭೂತೀನಾಮಾದರ್ಶೋ ಯೋ ಹ್ಯಕೃತ್ರಿಮಃ ।
ಅಗಮ್ಯೋ ಮಲಲೇಖಾನಾಂ ತಚ್ಚಿತ್ತತ್ತ್ವಮಹಂ ಮಹತ್ ॥ ೯೩ ॥

ಸರ್ವಸಂಕಲ್ಪಫಲದಂ ಸರ್ವತೇಜಃ ಪ್ರಕಾಶಕಂ ।
ಸರ್ವೋಪಾದೇಯಸೀಮಾಂತಂ ಚಿದಾತ್ಮಾನಮುಪಾಸ್ಮಹೇ ॥ ೯೪ ॥

ಸರ್ವಾವಯವವಿಶ್ರಾಂತಂ ಸಮಸ್ತಾವಯವಾತಿಗಂ ।
ಅನಾರತಕಚದ್ರೂಪಂ ಚಿದಾತ್ಮಾನಮುಪಾಸ್ಮಹೇ ॥ ೯೫ ॥

---

೯೨ ಬೆಟ್ಟ ಮೊದಲಾದ ಪದಾರ್ಥಗಳೆಲ್ಲದರ ಹೊರಗೆ ಒಳಗೆಲ್ಲ ಸತ್ತಾ ಸಾಮಾನ್ಯ ರೂಪದಿಂದ ಸರ್ವದಾ ವ್ಯಾಪಿಸಿದ್ದರೂ ಅಲೇಪಕವಾಗಿರುವ ಯಾವ ಚಿತ್ತು ಉಂಟೋ ಅದೇ ನಾನು.

೯೩. ಸಮಸ್ತವಾದ ಅನುಭವಗಳಿಗೂ ಸಹಜವಾದ ಕನ್ನಡಿಯಂತಿರುವ ಮಲಗಳು ಯಾವವೂ ಸೋಕಲಾರದ, ಮಹತ್ತಾದ ಚಿತ್‌ತತ್ತ್ವವು ಯಾವುದೋ ಅದೇ ನಾನು.

(ಸರ್ವಾಸಾಂ ಅನುಭೂತೀನಾಮಾದರ್ಶೋ ಯೋ ಹ್ಯಕೃತ್ರಿಮಃ=ಎಂಬದರಿಂದ ಕಾಲತ್ರಯಗಳಲ್ಲಿಯೂ ಉಂಟಾದ, ಉಂಟಾಗುವ ಅನುಭವಗಳನ್ನೆಲ್ಲ ಚಿತ್ರಿಸುವ ಕನ್ನಡಿಯು ಈ ಚಿಚ್ಛಕ್ತಿ ಎಂದು ಹೇಳಿದಂತಾಯಿತು. ಕಾಲತ್ರಯಕಾರಿಣಿಯಾದ ಈಕೆಯನ್ನು ಬಲ್ಲವರು ಎಲ್ಲ ಕಾಲಗಳ ಎಲ್ಲಾ ಅನುಭವಗಳನ್ನೂ ಕಾಣಬಲ್ಲರು.)

೯೪. ಸಂಕಲ್ಪಗಳಿಗೆಲ್ಲ ಫಲವನ್ನು ಕೊಡುವುದೂ, ಎಲ್ಲ ತೇಜಸ್ಸುಗಳಿಗೂ ಪ್ರಕಾಶವನ್ನು ಕೊಡುವುದೂ, ಸಂಗ್ರಹಿಸಬೇಕಾದ ವಸ್ತುಗಳಲ್ಲೆಲ್ಲ ಅತ್ಯಂತ ಶ್ರೇಷ್ಠವಾದುದೂ ಆದ ಚಿದಾತ್ಮನನ್ನು ಉಪಾಸನೆ ಮಾಡುವೆನು.

೯೫. ಸಮಸ್ತ ಅವಯವಗಳಿಗೂ ಸ್ಥಾನವಾಗಿ ಸಮಸ್ತ ಅವಯವಗಳಿಗೂ

ಘಟೇ ಪಟೇ ತಟೇ ಕೂಪೇ ಸ್ಪಂದಮಾನಂ ಸದಾ ತನೌ ।
ಜಾಗ್ರತ್ಯಪಿ ಸುಷುಪ್ತಸ್ಥಂ ಚಿದಾತ್ಮಾನಮುಪಾಸ್ಮಹೇ ॥ ೯೬ ॥
ಉಷ್ಣಮಗ್ನೌ ಹಿಮೇ ಶೀತಂ ಮೃಷ್ಟಮನ್ನೇ ಶಿತಂ ಕ್ಷುರೇ ।
ಕೃಷ್ಣಂ ಧ್ವಾಂತೇ ಸಿತಂ ಚಂದ್ರೇ ಚಿದಾತ್ಮಾನಮುಪಾಸ್ಮಹೇ ॥ ೯೭ ॥
ಆಲೋಕಂ ಬಹಿರಂತಸ್ಥಂ ಸ್ಥಿತಂ ಚ ಸ್ವಾತ್ಮವಸ್ತುನಿ ।
ಅದೂರಮಪಿ ದೂರಸ್ಥಂ ಚಿದಾತ್ಮಾನಮುಪಾಸ್ಮಹೇ ॥ ೯೮ ॥
ಮಾಧುರ್ಯಾದಿಷು ಮಾಧುರ್ಯಂ ತೀಕ್ಷ್ಣಾದಿಷು ಚ ತೀಕ್ಷ್ಣತಾಂ ।
ಗತಂ ಪದಾರ್ಥಜಾತೇಷು ಚಿದಾತ್ಮಾನಮುಪಾಸ್ಮಹೇ ॥ ೯೯ ॥
ಜಾಗ್ರತ್ಸ್ವಪ್ನ ಸುಷುಪ್ತೇಷು ತುರ್ಯಾತುರ್ಯಾತಿಗೇ ಪದೇ ।
ಸಮಂ ಸದೈವ ಸರ್ವತ್ರ ಚಿದಾತ್ಮಾನಮುಪಾಸ್ಮಹೇ ॥ ೧೦೦ ॥

ಅತೀತವಾಗಿ, ಒಂದೇ ಸಮನಾಗಿ ವ್ಯಾಪಾರ ಮಾಡುತ್ತಲೇ ಇರುವ ಚಿದಾತ್ಮನನ್ನು ಉಪಾಸನ ಮಾಡುವೆನು.

೯೬. ಘಟದಲ್ಲಿ, ಪಟದಲ್ಲಿ, ತಟದಲ್ಲಿ, ರೂಪದಲ್ಲಿ, (ಉದ್ಭಿಜ್ಜ, ಸ್ವೇದಜ ಅಂಡಜ, ಜರಾಯುಜ ಎಂಬ ನಾಲ್ಕು ದೇಹಗಳಲ್ಲಿಯೂ ಸದಾ ವ್ಯಾಪಾರಮಾಡುತ್ತಿರುವ ಜಾಗ್ರತಿನಲ್ಲಿದ್ದರೂ ಸುಷುಪ್ತನಂತಿರುವ ಚಿದಾತ್ಮನನ್ನು ಉಪಾಸನ ಮಾಡುವೆನು.

೯೭. ಬೆಂಕಿಯಲ್ಲಿ ಶಾಖವಾಗಿ, ಹಿಮದಲ್ಲಿ ತಂಪಾಗಿ, ಅನ್ನದಲ್ಲಿ ಮಾಧುರ್ಯವಾಗಿ ಕತ್ತಿಯಲ್ಲಿ ಚೂಪಾಗಿ, ಕತ್ತಲೆಯಲ್ಲಿ ಕಪ್ಪಾಗಿ, ಚಂದ್ರನಲ್ಲಿ ಬಿಳುಪಾಗಿ ಇರುವ ಚಿದಾತ್ಮನನ್ನು ಉಪಾಸನಮಾಡುವೆನು.

೯೮. ಪ್ರತಿಯೊಂದು ಜೀವದಲ್ಲಿಯೂ ಜ್ಯೋತಿಯಾಗಿದ್ದುಕೊಂಡು ಒಳಹೊರಗನ್ನೆಲ್ಲ ಪ್ರಕಾಶಗೊಳಿಸುತ್ತಿರುವ. ಸಮೀಪದಲ್ಲಿಯೇ ಇದ್ದರೂ (ಅಜ್ಞರಿಗೆ) ದೂರದಲ್ಲಿ ಇರುವಂತೆ ಕಾಣುವ ಚಿದಾತ್ಮನನ್ನು ಉಪಾಸನ ಮಾಡುವೆನು.

೯೯. ಮಧುರವಾದ ಪದಾರ್ಥಗಳ ಮಾಧುರ್ಯವಾಗಿ, ತೀಕ್ಷ್ಣಪದಾರ್ಥಗಳ ತೀಕ್ಷ್ಣತೆಯಾಗಿ, ಪದಾರ್ಥ ಪದಾರ್ಥದಲ್ಲಿಯೂ ನೆಲಸಿರುವ ಚಿದಾತ್ಮನನ್ನು ಉಪಾಸನಮಾಡುವೆನು.

೧೦೦. ಜಾಗ್ರತ್ಸ್ವಪ್ನ ಸುಷುಪ್ತಿಗಳಲ್ಲೂ ತುರ್ಯ, ತುರ್ಯಾತೀತಗಳಲ್ಲಿಯೂ ಸಮನಾಗಿ, ಸದಾ, ಸರ್ವತ್ರ ವ್ಯಾಪಿಸಿರುವ ಚಿದಾತ್ಮನನ್ನು ಉಪಾಸನ ಮಾಡುವೆನು.

ಪ್ರಶಾಂತಸರ್ವಸಂಕಲ್ಪಂ ವಿಗತಾಖಿಲಕೌತುಕಂ ।
ವಿಗತಾಶೇಷಸಂರಂಭಂ ಚಿದಾತ್ಮಾನಮುಪಾಸ್ಮಹೇ ॥ ೧೦೧ ॥

ನಿಷ್ಕೌತುಕಂ ನಿರಾರಂಭಂ ನಿರೀಹಂ ಸರ್ವಮೇವ ಚ ।
ನಿರಂಶಂ ನಿರಹಂಕಾರಂ ಚಿದಾತ್ಮಾನಮುಪಾಸ್ಮಹೇ ॥ ೧೦೨ ॥

ಸರ್ವಸ್ಯಾಂತಃ ಸ್ಥಿತಂ ಸರ್ವಮಪ್ಯಪಾರೈಕರೂಪಿಣಂ ।
ಅಪರ್ಯಂತಚಿದಾರಂಭಂ ಚಿದಾತ್ಮಾನಮುಪಾಗತಃ ॥ ೧೦೩ ॥

ತ್ರೈಲೋಕ್ಯದೇಹಮುಕ್ತಾನಾಂ ತಂತುಮುನ್ನತಮಾತತಂ ।
ಪ್ರಚಾರಸಂಕೋಚಕರಂ ಚಿದಾತ್ಮಾನಮುಪಾಗತಃ ॥ ೧೦೪

---

೧೦೧ ಪ್ರಶಾಂತವಾದ ಸರ್ವ ಸಂಕಲ್ಪಗಳನ್ನುಳ್ಳ, ಯಾವುದೊಂದು ಕಾಮವೂ ಇಲ್ಲದ, ಯಾವುದೊಂದು ರೀತಿಯ ಕಾರ್ಯವನ್ನೂ ಮಾಡದಿರುವ ಚಿದಾತ್ಮನನ್ನು ಉಪಾಸನ ಮಾಡುವೆನು.

(ಇಲ್ಲಿ ನಿಸ್ಸಂಕಲ್ಪ, ನಿಷ್ಕಾಮ ನಿಷ್ಕ್ರಿಯಾ ಎಂಬರ್ಥವನ್ನು ತೆಗೆದುಕೊಂಡಿದೆ. ತಾ. ಪ್ರ. ದಲ್ಲಿ ಸಂರಂಭಃ ಕ್ರೋಧಃ ಎಂದು ಹೇಳಿದೆ)

೧೦೨ ಯಾವ ಭೋಗೇಚ್ಛೆಯೂ ಇಲ್ಲದೆ, ಯಾವ ಕಾರ್ಯವೂ ಇಲ್ಲದೆ, ಯಾವ ಕಾಮನೆಯೂ ಇಲ್ಲದೆ, ತಾನೇ ಸರ್ವವೂ ಆಗಿದ್ದುಕೊಂಡು, ಭಾಗ ಭಾಗ ಭೇಧವಿಲ್ಲದೆ, ತಾನೆಂಬ ಅಹಂಕಾರವಿಲ್ಲದೆ ಇರುವ ಚಿದಾತ್ಮನನ್ನು ಉಪಾಸನ ಮಾಡುವೆನು

೧೦೩. ಎಲ್ಲದರಲ್ಲಿಯೂ ಇದ್ದುಕೊಂಡು, ಎಲ್ಲವೂ ತಾನೇ ಆಗಿದ್ದರೂ, ಅಪಾರವಾಗಿರುವುದೇ ತನ್ನ ರೂಪವಾಗಿರುವ, ಕೊನೆಯಿಲ್ಲದ ಕಾರ್ಯಗಳನ್ನು ಮಾಡುತ್ತ ಇರುವ ಚಿದಾತ್ಮನನ್ನು ಹೊಂದಿದೆನು

೧೦೪. ಮೂರು ಲೋಕಗಳಲ್ಲಿಯೂ ಇರುವ (ಸದೇಹ ವಿದೇಹ) ಮುಕ್ತರನ್ನೆಲ್ಲ ಹಿಡಿದುಕೊಂಡಿರುವ, ಉನ್ನತವೂ ಆತತವೂ ಆದ ತಂತುವಾಗಿರುವ, ಸಂಕೋಚವಿಕಾಸಗಳಿಗೆಲ್ಲ ಕಾರಣವಾದ ಚಿದಾತ್ಮನನ್ನು ಹೊಂದಿದೆನು

(ಪ್ರಚಾರೌ ಜಾಗ್ರತ್ಸ್ವಪ್ನೌ। ಸಂಕೋಚಃ ಸುಷುಪ್ತಿಃ॥ ತಾ, ಪ್ರ.)

ಲೀನಮಂತರ್ಬಹಿಃ ಸ್ವಾಪ್ತಾನ್ಕ್ರೋಡೀಕೃತ್ಯ ಜಗತ್ಖಗಾನ್ ।
ಚಿತ್ರಂ ಬೃಹಜ್ಜಾಲಮಿವ ಚಿದಾತ್ಮಾನಮುಪಾಗತಃ ॥ ೧೦೫ ॥

ಸರ್ವಂ ಯತ್ರೇದಮಸ್ತ್ಯೇವ ನಾಸ್ತ್ಯೇವ ಚ ಮನಾಗಪಿ ।
ಸದಸದ್ರೂಪಮೇಕಂ ತಂ ಚಿದಾತ್ಮಾನಮುಪಾಗತಃ ॥ ೧೦೬ ॥

ಪರಮಪ್ರತ್ಯಯಂ ಪೂರ್ಣಮಾಸ್ಪದಂ ಸರ್ವಸಂಪದಾಂ ।
ಸರ್ವಾಕಾರವಿಹಾರಸ್ಥಂ ಚಿದಾತ್ಮಾನಮುಪಾಗತಃ ॥ ೧೦೭ ॥

ಸ್ನೇಹಧಾರಮಥೋಶಾಂತಂ ಜಡವಾತಾಹತಿಭ್ರಮೈಃ ।
ಯುಕ್ತಂ ಮುಕ್ತಂ ಚ ಚಿದ್ದೀಪಂ ಬಹಿರಂತರುಪಾಸ್ಮಹೇ ॥ ೧೦೮ ॥

---

೧೦೫. ವಿಚಿತ್ರವಾದ ಬಲೆಯಂತೆ ತನ್ನಿಂದಲೇ ವ್ಯಾಪ್ತವಾಗಿರುವ ಜಗತ್ತು ಜಗತ್ತುಗಳೆಂಬ ಹಕ್ಕಿಗಳನ್ನೆಲ್ಲ ಹಿಡಿದುಕೊಂಡಿರುವ ಚಿದಾತ್ಮನನ್ನು ಹೊಂದಿದೆನು.

೧೦೬. ಯಾವುದರಲ್ಲಿ ಇದಂಶಬ್ದವಾಚ್ಯವಾದ ಸರ್ವವೂ ಇದೆಯೋ, ಯಾವುದರಲ್ಲಿ ಏನೊಂದೂ ಇಲ್ಲವೋ, ಸದಸದ್ರೂಪವಾಗಿ ಐಕ್ಯೈಕವಾಗಿರುವ ಆ ಚಿದಾತ್ಮನನ್ನು ಹೊಂದಿದೆನು.

(ಸರ್ಗೇ ಸರ್ವಸತ್ತಾ ನಿರ್ವಾಹಕತ್ವಾತ್ ಸದ್ರೂಪಂ. ಪ್ರಲಯೇ ಸರ್ವ ಸತ್ತಾನಿರ್ವಾಹಕತ್ವಾತ್ ಅಸದ್ರೂಪಮಿತಿಭಾವಃ–ತಾ ಪ್ರ ಬ್ರಹ್ಮವಸ್ತುವನ್ನು ಸದಸದ್ರೂಪವೆಂದು ಹೇಳಲು ಸರ್ಗ ಪ್ರಲಯಗಳೆಂಬ ಕಾಲಪರಿಚ್ಛೇದವನ್ನು ಒಪ್ಪಿಕೊಳ್ಳಬೇಕಾದ ಕಾರಣವಿಲ್ಲ. ನಾವು ಭಾವಿಸುವ ಸತ್, ಅಸತ್ ಎರಡಕ್ಕೂ ವಿಲಕ್ಷಣವೆಂದರೆ ಅದನ್ನು ಸದಸತ್ ಎನ್ನುವುದು.

೧೦೭. ಪರಮ ವಿಶ್ವಾಸಕ್ಕೆ ಸ್ಥಾನವಾಗಿ, ಪೂರ್ಣವಾಗಿ, ಸರ್ವ ಸಂಪತ್ತುಗಳಿಗೂ ಪ್ರತಿಷ್ಠಾಸ್ಥಾನವಾಗಿ, ಸರ್ವ (ನಾಮ) ರೂಪಗಳಿಗೂ ಸ್ಥಾನವಾಗಿರುವ ಚಿದಾತ್ಮನನ್ನು ಹೊಂದಿದೆನು.

೧೦೮. ಸರ್ವ ಪ್ರೇಮಗಳಿಗೂ ಸ್ಥಾನವಾಗಿ, ಯಾವಾಗಲೂ ಬೆಳಗುತ್ತಿರುವದಾಗಿ, (ಭ್ರಾಂತಿಯಿಂದ ನೋಡುವವರಿಗೆ) ಜಡವೆಂಬ ಝಂಝಾವಾತದ ಹೊಡೆತಗಳಿಂದ ತಲ್ಲಣಿಸುವಂತೆ ಕಾಣುತ್ತಿದ್ದರೂ (ಭ್ರಾಂತಿಯಿಲ್ಲದವರಿಗೆ) ಮುಕ್ತವಾಗಿ

ಹೃತ್ಸರಃ ಪದ್ಮಿನೀಕಂದಂ ತಂತುಂ ಸರ್ವಾಂಗಸುಂದರಂ ।
ಜನತಾ ಜೀವನೋಪಾಯಂ ಚಿದಾತ್ಮಾನಮುಪಾಗತಃ ॥ ೧೦೯ ॥

ಅಕ್ಷೀರಾರ್ಣವಸಂಭೂತಮಶಶಾಂಕಮುಪಸ್ಥಿತಂ ।
ಅಹಾರ್ಯಮಮೃತಂ ಸತ್ಯಂ ಚಿದಾತ್ಮಾನಮುಪಾಸ್ಮಹೇ ॥ ೧೧೦ ॥

ತೋರುತ್ತ ಒಳಗೆ ಹೊರಗೆಲ್ಲ ವ್ಯಾಪಿಸಿರುವ ಚಿದ್ದೀಪವನ್ನು ಉಪಾಸನ ಮಾಡುವೆನು.

(ಸ್ನೇಹಸ್ತೈಲಃ ನಿರುಪಾಧಿಪ್ರೇಮಾಚ ತದಾಧಾರಂ, ಜಡಾನಾಂ ಪ್ರಾಣಾನಾಂ ವೃಷ್ಟಿವಾತಾನಾಂ ಚಾಹತೀ ಧ್ಯಾಸೇಽಭಿಘಾತಶ್ಚತತ್ಪ್ರಯುಕ್ತ್ಯ ಭ್ರಮೈರಶಾಂತರವಿನಷ್ಟಂ । ಭ್ರಾಂತಪೃಶಾತ್ಯೈರ್ಯುಕ್ತಂ, ಕತ್ವನೃಶಾತು ಮುಕ್ತಂ ಚ —ತಾ ಪ್ರ.)

(ಚಿದ್ದೀಪವು ಇತರ ದೀಪಗಳಂತೆ ಹೊರಗಿನ ಎಣ್ಣೆಯನ್ನು ಅಪೇಕ್ಷಿಸದೆ ತನಗೆ ಬೇಕಾದ ತೈಲವನ್ನೆಲ್ಲಾ ತಾನೇ ಇಟ್ಟುಕೊಂಡಿರುವುದು. ಮಳೆ ಗಾಳಿಗಳು ಹೊಡೆದರೂ ಶಾಂತವಾಗದೆ, ಪ್ರಕಾಶಯುಕ್ತವಾಗಿ, ಧೂಮಾದಿ ಮುಕ್ತವಾಗಿ ಉರಿಯುವುದು, ಎಂಬ ಕಾವ್ಯಸೌಂದರ್ಯವನ್ನು ನೋಡಿ.)

೧೦೯. ಹೃದಯವೆಂಬ ಸರೋವರದಲ್ಲಿ ಅಡಗಿರುವ ತಾವರೆಯ ಗೆಡ್ಡೆಯಾದ, ಸರ್ವಾಂಗಸುಂದರ(ವಾಗಿ ಎಲ್ಲಕ್ಕೂ ದಾರ್ಢ್ಯವನ್ನು ಕೊಡುವ) ತಂತುವಾಗಿರುವ, ಜನ ಜನಕ್ಕೂ ಅನ್ನಸ್ವರೂಪರಾಗಿರುವ ಚಿದಾತ್ಮನನ್ನು ಹೊಂದಿದೆನು.

(ಅಹಮನ್ನ ಮಹಮನ್ನಾದಃ — ಉಪನಿಷತ್)

೧೧೦. ಅಕ್ಷೀರಾರ್ಣವ ಸಂಭೂತವಾಗಿರುವ ಅಶಶಾಂಕನಂತೆ ಎದುರಿಗೆ ಇದ್ದುಕೊಂಡು ಇದ್ದರೂ ಅಹಾರ್ಯವೂ ಅಮೃತವೂ ಸತ್ಯವೂ ಆದ ಚಿದಾತ್ಮನನ್ನು ಉಪಾಸನಮಾಡುವೆನು.

ಪ್ರಸಿದ್ಧಾಮೃತವೈಲಕ್ಷಣ್ಯಮಾಹ–ಅಕ್ಷೀರಾರ್ಣವೇತಿ । ಅಹಾರ್ಯಂ ಗರುಡಾದಿಭಿರಪಹರ್ತುಮಶಕ್ಯಂ —ತಾ ಪ್ರ.)

ಶಬ್ದರೂಪರಸಸ್ಪರ್ಶಗಂಧೈರಾಭಾಸಮಾಗತಂ ।
ತೈರೇವ ರಹಿತಂ ಶಾಂತಂ ಚಿದಾತ್ಮಾನಮುಪಾಗತಃ ॥ ೧೧೧ ॥

ಆಕಾಶಕೋಶವಿಶದಂ ಸರ್ವಲೋಕಸ್ಯ ರಂಜನಂ ।
ನ ರಂಜನಂ ನ ಚಾಕಾಶಂ ಚಿದಾತ್ಮಾನಮುಪಾಗತಃ । ॥ ೧೧೨॥

ಮಹಾಮಹಿಮ್ನಾ ಸಹಿತಂ ರಹಿತಂ ಸರ್ವಭೂತಿಭಿಃ ।
ಕರ್ತೃಕತ್ವೇ ವಾಪ್ಯಕರ್ತಾರಂ ಚಿದಾತ್ಮಾನಮುಪಾಗತಃ ॥ ೧೧೩ ॥

---

೧೧೧. ಶಬ್ದ, ರೂಪ, ರಸ, ಸ್ಪರ್ಶ, ಗಂಧಗಳೆಂಬ ತನ್ಮಾತ್ರಗಳಿಂದ ಅಭಿವ್ಯಕ್ತವಾದರೂ ತನ್ಮಾತ್ರ ರಹಿತವಾಗಿ, ಶಾಂತವಾಗಿರುವ ಚಿದಾತ್ಮನನ್ನು ಹೊಂದಿದನು

[ಸರ್ವೇಂದ್ರಿಯಗುಣಾಭಾಸಂ ಸರ್ವೇಂದ್ರಿಯ ವಿವರ್ಜಿತಂ । ಅಸಕ್ತಂ ಸರ್ವಭೃಚ್ಚೈವ ನಿರ್ಗುಣಂ ಗುಣಭೋಕ್ತೃ ಚ ॥ ಗೀತಾ ಅ. ೧೩. ಶ್ಲೋ.೧೪]

೧೧೨. ಆಕಾಶಕೋಶದಂತೆ ಸ್ವಚ್ಛವಾಗಿ, ಲೋಕ ಲೋಕಗಳಿಗೆಲ್ಲ ರಂಜನವಾಗಿದ್ದರೂ, ರಂಜನವೂ ಅಲ್ಲದೆ ಆಕಾಶವೂ ಅಲ್ಲದೆ, ಇರುವ ಚಿದಾತ್ಮನನ್ನು ಹೊಂದಿದೆನು

(ರಂಜನಂ ಸ್ವವ್ಯಾಪ್ತ್ಯಾ ಅಭಿವ್ಯಂಜಕಂ)

೧೧೩. ಮಹಾಮಹಿಮಾ ಸಂಪನ್ನವಾಗಿದ್ದರೂ, ಯಾವ ಪ್ರಕಾರವಾದ ಜನ್ಮಗಳೂ ಇಲ್ಲದ, ಸಂಪೂರ್ಣವಾಗಿ ಪ್ರತಿಯೊಂದು ವ್ಯಾಪಾರಕ್ಕೂ ಕರ್ತೃವಾಗಿದ್ದರೂ ಸರ್ವಥಾ ಅಕರ್ತೃವೇ ಆಗಿರುವ ಚಿದಾತ್ಮನನ್ನು ಹೊಂದಿದೆನು.

ಅಖಿಲಮಿದಮಹಂ ಮಮೈವ ಸರ್ವಂ ತ್ವಹಮಪಿ ನಾಹಮಥೇತರಚ್ಚ ನಾಹಂ ।
ಇತಿ ವಿದಿತವತೋ ಜಗತ್ಕೃತಂ ಮೇ ಸ್ಥಿರಮಥವಾಸ್ತು ಗತಜ್ವರೋ ಭವಾಮಿ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ದೇವದೂತೋಕ್ತೇ ಮೋಕ್ಷೋಪಾಯೇಷು ನಿರ್ವಾಣಪ್ರಕರಣೇ "ಜೀವನ್ಮುಕ್ತನಿಶ್ಚಯಯೋಗೋಪದೇಶೋ" ನಾಮ ಏಕಾದಶಃ ಸರ್ಗಃ

---

೧೧೩. ಇದಂ ಶಬ್ದ ವಾಚ್ಯನಾಗಿ ಇರುವದೆಲ್ಲವೂ ನಾನೆ! ಇರುವುದೆಲ್ಲವೂ ನನ್ನದೇ! ಆದರೂ ನಾನು ನಾನಲ್ಲ: ಅಥವಾ ಬೇರೆಯಾವದೂ ನಾನಲ್ಲ : ಎಂದು ತಿಳಿದ ನನಗೆ ಈ ಜಗತ್ತು ಕೃತ್ರಿಮವಾಗಿ ಮಿಥ್ಯೆಯಾದರೂ ಆಗಲಿ: ಸ್ಥಿರವಾದರೂ ಆಗಲಿ. ಅದರಿಂದ ,ಏನೂ ಹಾನಿಯಿಲ್ಲವಾಗಿ ನಾನು ಯಾವದೊಂದು ವಿಕಾರವೂ ಇಲ್ಲದವನಾಗಿ ಸುಖವಾಗಿರುವೆನು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ ನಿರ್ವಾಣಪ್ರಕರಣದ "ಜೀವನ್ಮುಕ್ತನಿಶ್ಚಯಯೋಗೋಪದೇಶ" ಎಂಬ ಹನ್ನೊಂದನೆಯ ಸರ್ಗವು.

ದ್ವಾದಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಇತಿ ನಿಶ್ಚಯವಂತಸ್ತೇ ಮಹಾಂತೋ ವಿಗತೈನಸಃ ।
ಸತ್ಯಾಃ ಸತ್ಯೇ ಪದೇ ಶಾಂತೇ ಸಮೇ ಸುಖಮವಸ್ಥಿತಾಃ ॥ ೧ ॥

ಇತಿ ಪೂರ್ಣಧಿಯೋ ಧೀರಾಃ ಸಮ ನೀರಾಗ ಚೇತಸಃ ।
ನ ನಿಂದಂತಿ ನ ನಂದಂತಿ ಜೀವಿತಂ ಮರಣಂ ತಥಾ ॥ ೨ ॥

ಇತ್ಯಲಕ್ಷ್ಯಚಮತ್ಕಾರಾ ನಾರಾಯಣಭುಜಾ ಇವ ।
ಋಜವಃ ಸ್ಖಲಿತಾಕಾರಾಃ ಅಪರಾ ಇವ ಮೇರವಃ ॥ ೩ ॥

ಹನ್ನೆರಡನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು--ಹಿಂದಿನ ಮಹಾತ್ಮರೆಲ್ಲರೂ ಇದೇ ನಿಶ್ಚಯವನ್ನು ಹಿಡಿದು, ಪಾಪರಹಿತರಾಗಿ, ಶಾಂತವೂ ಸಮವೂ ಆದ ಸತ್ಪದದಲ್ಲಿ ನಿಂತು ಸುಖವಾಗಿದ್ದರು.

(ಸತ್ಯೇಪದೇ=ಶೋಧಿತ ತತ್ಪದಾರ್ಥೇ ತಾ. ಪ್ರ)

೨. ಈ ಸಿದ್ಧಾಂತವನ್ನು ಹಿಡಿದು ಪೂರ್ಣ ಪ್ರಜ್ಞರಾದ ಧೀರರು ವೈರಾಗ್ಯವಂತರಾಗಿ ಜೀವಿತವನ್ನು ನಿಂದಿಸುವುದಿಲ್ಲ: ಮರಣವನ್ನು ಅಭಿನಂದಿಸುವುದಿಲ್ಲ.

೩. ಈ ಸಿದ್ಧಾಂತವನ್ನು ಆಶ್ರಯಿಸಿ, ಮಹಾ ವಿಷ್ಣುವಿನ ಹಸ್ತಗಳು ಹೇಗೆ ಚಮತ್ಕಾರದಿಂದ ಇತರರಿಗೆ ಅಸಾಧ್ಯವಾದ, ಲಕ್ಷ್ಯಗಳನ್ನೂ ಭೇದಿಸುವುವೋ ಹಾಗೇ ಬ್ರಹ್ಮವೆಂಬ ಲಕ್ಷ್ಯವನ್ನು ಸಾಧಿಸಿ, ಎರಡನೆಯ ಮೇರು ಪರ್ವತಗಳೋ ಎಂಬಂತೆ ಸ್ಥಿರವಾಗಿ, ವಿನಯವಿನಮ್ರರಾಗಿ ಬಾಳಿದರು.

ರೇಮಿರೇ ವನಖಂಡೇಷು ದ್ವೀಪೇಷು ನಗರೇಷು ಚ |
ದೇವೋಪವನಮಾಲಾಸು ಸ್ವರ್ಗೇಷು ಚ ಸುರಾ ಇವ ॥ ೪ ॥

ಭ್ರೇಮುಃ ಕುಸುಮಪೂರ್ಣಾಸು ದೋಲಾಂದೋಲಚಲಾಸು ಚ |
ವಿಚಿತ್ರವನಲೇಖಾಸು ಮೇರುಶೃಂಗಶಿಖಾಸು ಚ ॥ ೫ ॥

ಚಕ್ರುಃ ವಿಜಿತಶತ್ರೂಣಿ ಚಾಮರಚ್ಛತ್ರವಂತಿ ಚ |
ವಿಚಿತ್ರಾರ್ಥಾನಿ ರಾಜ್ಯಾನಿ ಚಿತ್ರಾಚಾರಮಯಾನಿ ಚ ॥ ೬ ॥

ಅನುಜಗ್ಮುರಿಮಾಃಸರ್ವಾನ್ನಾನಾಚಾರವಿಚೇಷ್ಟಿತಾನ್ |
ಶ್ರುತಿಸ್ಮೃತ್ಯುದಿತಾರಂಭಾಮಿತಿಕರ್ತವ್ಯತಾಮಿತಿ ॥ ೭ ॥

ಈದೃಶೀ ರಮಣೀಯೇಷು ಲಲನಾಹಾಸ್ಯಹಾರಿಷು |
ವಿಹಾರಾಹಾರರಮ್ಯೇಷು ಭೋಗಾ ಭೋಗೇಷು ಭೂಷಿತಾಃ ॥ ೮ ॥

---

೪. ವನಖಂಡಗಳಲ್ಲಿಯೂ, ದ್ವೀಪಗಳಲ್ಲಿಯೂ, ನಗರಗಳಲ್ಲಿಯೂ. ದೇವೋಪವನಗಳಲ್ಲಿಯೂ, ಸ್ವರ್ಗಗಳಲ್ಲಿಯೂ, ದೇವತೆಗಳಂತೆ ವಿಹರಿಸಿದರು.

೫. ಕುಸುಮ ಸಂಪೂರ್ಣಗಳಾಗಿ ತೂಗುವ ಉಯ್ಯಾಲೆಗಳಲ್ಲಿ ವಿಚಿತ್ರವನಗಳಲ್ಲಿ, ಮೇರುಶೃಂಗಗಳಲ್ಲಿ ಸಂಚರಿಸಿದರು.

೬. ಛತ್ರಚಾಮರಗಳನ್ನು ಹಿಡಿದುಕೊಂಡು ನಾನಾ ಬಗೆಯ ಭೋಗಗಳನ್ನು ಅನುಭವಿಸುತ್ತ, ಚಿತ್ರ ವಿಚಿತ್ರ ಕಾರ್ಯ್ಯಗಳನ್ನು ಮಾಡುತ್ತ ನಿಃಶತ್ರುಗಳಾದ ರಾಜ್ಯಗಳನ್ನು ಆಳಿದರು.

(ವಿಚಿತಾ, ಅರ್ಥಾಃ ತ್ರಿವರ್ಗಾ ಯೇಷು ತಾನಿ-ತಾ. ಪ್ರ.)

೭. ನಾನಾ ರೂಪವಾದ ಶಿಷ್ಟಾಚಾರಗಳಿಂದ ಸುಂದರವಾಗಿರುವ ಶ್ರುತಿಸ್ಮೃತಿ ವಿಹಿತವಾಗಿರುವ ಧರ್ಮಕರ್ಮಗಳನ್ನು ನೆರವೇರಿಸಿದರು.

೮ ಹೀಗೆ ನಾನಾ ಸಾಧನ ಸಂಪನ್ನಗಳಾಗಿ, ಸುಂದರಿಯರ ನಗೆಗಳಿಂದ ಮನೋಹರಗಳಾಗಿ, ವಿಹಾರ, ಆಹಾರಗಳಿಂದ ಮುದ್ದಾಗಿರುವ ಭೋಗಗಳಲ್ಲಿ ಭೋಗಪಟ್ಟರು.

ವಿವಿಶುಶ್ಚಾರುಚೂತಾಸು ಮಂದಾರವಲಿತಾಸು ಚ ।
ಅಪ್ಸರೋಗೀತಪೂರ್ಣಾಸು ನಂದನೋದ್ಯಾನಭೂಮಿಷು ॥ ೯ ॥

ಸಚರಾಚರಭೂತೇಷು ವಿಶ್ರಾಂತಾಖಿಲಜಂತುಷು ।
ಯಜ್ಞಕ್ರಿಯಾಕಲಾಪೇಷು ಗಾರ್ಹಸ್ಥ್ಯೇಷು ಯಥಾಕ್ರಮಂ ॥ ೧೦ ॥

ತೇರುರ್ಹತಗಜೇಂದ್ರಾಸು ಭ್ರಾಂತಭೂರಿಶಿವಾಸು ಚ ।
ಭೇರೀಭಾಂಕಾರಭೀಮಾಸು ಸಂಗ್ರಾಮಾರ್ಣವವೀಥಿಷು ॥ ೧೧ ॥

ತಸ್ಥುಃ ಪರುಷಚಿತ್ತಾಸು ಹೃತವಿತ್ತೋದ್ಧತಾಸು ಚ ।
ಸಂರಂಭಕ್ಷೋಭರೌದ್ರೀಷು ಸರ್ವಾಸು ದ್ವಂದ್ವರೀತಿಷು ॥ ೧೨ ॥

ಮನಸ್ತೇಷಾಂತು ನೀರಾಗಮನುಪಾಧಿ ಗತಭ್ರಮಂ ।
ಅಸಕ್ತಂ ಮುಕ್ತಮಾಶಾಂತಂ ಪರಂ ಸತ್ವಪದಂ ಗತಂ ॥ ೧೩ ॥

---

೯. ಮನೋಹರವಾದ ಮಾವಿನ ಮರಗಳೂ, ಮಂದಾರ ವೃಕ್ಷಗಳೂ, ಅಪ್ಸರೆಯರ ಗೀತೆಗಳೂ ತುಂಬಿರುವ ನಂದನೋದ್ಯಾನ ಭೂಮಿಗಳನ್ನು ಹೊಕ್ಕರು.

೧೦. ಸ್ಥಾವರ ಜಂಗಮಾದಿ ಸರ್ವಭೂತಗಳಿಗೂ ಆಶ್ರಯವಾಗಿರುವ ಯಜ್ಞ ಕ್ರಿಯಾಕಲಾಪಗಳಿಂದ ಗೃಹಸ್ಥಾಶ್ರಮವನ್ನು ನಿರ್ವಹಿಸಿದರು.

೧೧. ಸತ್ತುಬಿದ್ದ ಭಾರಿಯ ಆನೆಗಳೂ ತಿರುಗುತ್ತಿರುವ ನರಿಗಳ ಗುಂಪುಗಳೂ ಉಳ್ಳವಾಗಿ ಭೇರಿಯ ಭಾಂಕಾರಗಳಿಂದ ಭಯಂಕರಗಳಾಗಿರುವ ಸಂಗ್ರಾಮವೀಧಿಗಳಲ್ಲಿ ಮೆರೆದರು

೧೨. ಹಾಗೆಯೇ ಸಂಪತ್ತುಗಳನ್ನೆಲ್ಲ ಕಳೆದುಕೊಂಡು. ಶತ್ರುಗಳಿಗೆ ಸೋತು ಆಪತ್ತು ಬಂದಾಗಲೂ ಮನಸ್ಸು ಗಟ್ಟಿಮಾಡಿಕೊಂಡು ಸ್ಥಿರರಾಗಿದ್ದರು.

೧೩. ಆ ಮಹಾತ್ಮರ ಮನಸ್ಸು ರಾಗರಹಿತವಾಗಿತ್ತು: ಯಾವ ದುರಭಿಮಾನಕ್ಕೂ ಸಿಕ್ಕಿರಲಿಲ್ಲ: ಭ್ರಾಂತಿರಹಿತವಾಗಿತ್ತು: ಯಾವುದರಲ್ಲಿಯೂ ದುರಾಸಕ್ತಿಯನ್ನು ವಹಿಸುತ್ತಿರಲಿಲ್ಲ: ಎಲ್ಲಾ ರಾಗದ್ವೇಷಗಳಿಂದಲೂ ಮುಕ್ತವಾಗಿತ್ತು ಶಾಂತವಾಗಿತ್ತು. ಉತ್ಕೃಷ್ಟವಾದ ಸತ್ವಾತಿಶಯವನ್ನು ಪಡೆದಿತ್ತು.

ನ ಮಮಜ್ಜುಃ ಕ್ವಚಿದಪಿ ಸಂಕಟೇಷು ಮಹತ್ಸ್ವಪಿ ।
ಮಕ ದಪ್ಯುಪಯಾತೇಷು ಕುಲಶೈಲಾಃ ಸರಃಸ್ವಿವ ॥ ೧೪ ॥

ನೋಲ್ಲಲಾಸ ವಿಲಾಸಿನ್ಯಾ ಶ್ರಿಯಾ ಪರಮಕಾಂತಯಾ ।
ಸಂಪೂರ್ಣೇಂದುಲಕ್ಷ್ಮ್ಯೇವ ಜಲರಾಶೀ ರಘೂದ್ವಹ ॥ ೧೫ ॥

ನ ಮಮ್ಲೌ ದುಃಖಶೋಕೇನ ಗ್ರೀಷ್ಮೇಣೇವ ವನಸ್ಥಲಂ ।
ಜಹರ್ಷ ಚ ನ ಭೋಗೌಘೈರವಶ್ಯಾಯೈರಿವೌಷಧೀ ॥ ೧೬ ॥

ತೇ ಹಿ ಕೇವಲಮವ್ಯಗ್ರಾಃ ಕುರ್ವಂತಃ ಕಾಮಮಂಜರೀಃ ।
ಇಷ್ಟಾನಿಷ್ಟಫಲಂ ರಾಮ ನಾಭಿಲೇಷುರ್ನ ತತ್ಯಜುಃ ॥ ೧೭ ॥

ನೋದಗುಃ ಕಾರ್ಯ ಸಂಪತ್ತ್ಯಾ ನಾಕ್ರಾಂತಾ ನಾಸ್ತಮಾಯಯುಃ ।
ಜಹೃಷುರ್ನ ಸುಖಪ್ರಾಪ್ತೌ ಮಮ್ಲುರ್ನೈವ ಚ ಸಂಕಟೇ ॥ ೧೮ ॥

---

೧೪. ಅವರು ಎಂತಹ ಮಹತ್ತರವಾದ ಕಷ್ಟಬಂದರೂ ಮುಳುಗಿ ಹೋಗಲಿಲ್ಲ. ಸರೋವರಗಳಲ್ಲಿ ಕುಲಶೈಲಗಳು ಎಲ್ಲಾದರೂ ಮುಳುಗುವುದುಂಟೆ?

೧೫ ಪೂರ್ಣ ಚಂದ್ರನನ್ನು ಕಂಡಾಗ ಉಬ್ಬುವ ಜಲರಾಶಿಯಂತೆ, ರಾಮ, ಅವರು ಎಂತಹವರನ್ನಾದರೂ ಮೋಹಗೊಳಿಸುವ ಸಂಪತ್ತುಗಳು ಬಂದರೂ ಉಬ್ಬಲಿಲ್ಲ.

೧೬. ಕಾಡುಗಳು ಗ್ರೀಷ್ಮರ್ತುವಿನಲ್ಲಿ ಒಣಗುವಂತೆ, ಅವರು ದುಃಖಶೋಕಗಳಿ ಒಣಗಲಿಲ್ಲ. ಹಿಮಕ್ಕೆ ಸಿಕ್ಕಿದ ಮೂಲಿಕೆಗಳು ಕಂದುವಂತೆ, ಭೋಗಗಳಿಗೆ ಸಿಕ್ಕಿ ಅಪಹೃತರಾಗಲಿಲ್ಲ.

೧೭ ಅವರು ಕರ್ತೃತ್ವಾಭಿಮಾನರಹಿತರಾಗಿ ಕಾಮೋಪಭೋಗಗಳನ್ನೆಲ್ಲ ಅನುಭವಿಸಿದರು: ರಾಮ, ಇಷ್ಟಾನಿಷ್ಟಗಳು ಏನೇನು ಬಂದರೂ ಅವುಗಳನ್ನು ಬರಲಿ ಎನ್ನಲಿಲ್ಲ; ಬಿಡಲಿ ಎನ್ನಲಿಲ್ಲ.

೧೮ ಮಾಡಿದ ಕಾರ್ಯಗಳು ಸಫಲಗಳಾಯಿತೆಂದು ಹಿಗ್ಗಲಿಲ್ಲ. ಮಾಡಿದ ಕಾರ್ಯಗಳು ಕೆಟ್ಟುವೆಂದು ಜಗ್ಗಲಿಲ್ಲ. ಸುಖ ಬಂದಾಗ ಏರಲಿಲ್ಲ. ಸಂಕಟಗಳಲ್ಲಿ ಬೀಳಲಿಲ್ಲ:

ಮುಮುಹುರ್ನ ವಿಮೋಹೇಷು ನ ಮಮಜ್ಜುರ್ವಿಪತ್ಸ್ವಪಿ ।
ನ ಜಹರ್ಷುಃ ಶುಭೈಃ ಶೋಕೈ ರುರುದುರ್ನ ಭವಾನಿವ ॥ ೧೯ ॥

ಪ್ರಾಕೃತಾಚಾರಸಂಪ್ರಾಪ್ತೇ ಕುರ್ವಂತಃ ಕರ್ಮ ಕೇವಲಂ ।
ಸ್ಥಿತಾ ವಿಗತಸಂರಂಭಮಪರಾ ಇವ ಮೇರವಃ ॥ ೨೦ ॥

ತಾಂ ತ್ವಂ ದೃಷ್ಟಿಮವಷ್ಟಭ್ಯ ರಾಘವಾ ಪವಿನಾಶಿನೀಂ ।
ಅನಹಂಕೃತ್ಯಹಂಕಾರೋ ವಿಹರಸ್ವ ಯಥಾಕ್ರಮಂ ॥ ೨೧ ॥

ಯಥಾಭೂತಾಮಿಮಾಮೇವ ಪಶ್ಯನ್ಸರ್ಗಪರಂಪರಾಂ ।
ಮೇರುಸ್ಥಿತೋಽಬ್ಧಿಗಂಭೀರಃ ಸಮಮಾಸ್ಸ್ವ ಗತಭ್ರಮಃ ॥ ೨೨ ॥

---

೧೯ ನಿನ್ನಂತೆಯೇ ಅವರೂ ಮೋಹಗೊಳ್ಳುವಂತಹ ಸ್ಥಿತಿಗಳಲ್ಲಿಯೂ ಮೋಹಗೊಳ್ಳಲಿಲ್ಲ: ವಿಪತ್ತುಗಳಲ್ಲಿ ಮುಳುಗಲಿಲ್ಲ ಶುಭಗಳಲ್ಲಿ ಕೇಕೆ ಹಾಕಲಿಲ್ಲ: ಶೋಕಗಳಲ್ಲಿ ಬಾಯಿ ಬಿಟ್ಟು ಅಳಲಿಲ್ಲ.

೨೦ ಸ್ವವರ್ಣಾಶ್ರಮೋಚಿತವಾದ ಪ್ರಾಕೃತ ಕಾರ್ಯಗಳನ್ನು ಮಾಡುತ್ತ ಮೇರು ಪರ್ವತದಂತೆ ಸ್ಥಿರವಾಗಿ ಸಂಭ್ರಮರಹಿತರಾಗಿ ಇರುತ್ತಿದ್ದರು.

೨೧. ರಾಘವ, ನೀನೂ ಅವರಂತೆಯೇ ಪಾಪವಿನಾಶಕಾರಿಯಾದ ಅವರ ಸಿದ್ಧಾಂತವನ್ನೇ ಹಿಡಿದು, ಬ್ರಹ್ಮಾಹಂ ಬುದ್ಧಿಯಿಂದ ಯಥಾಕ್ರಮವಾಗಿ ವಿಹರಿಸಿಕೊಂಡಿರು.

(ಅನಹಂಕೃತೌ=ಅಹಂಕಾರ ನಿಷ್ಕೃಷ್ಟ ಶುದ್ಧಚಿನ್ಮಾತ್ರೇ ಅಹಂಕಾರ ಆತ್ಮಬುದ್ಧಿರ್ಯಸ್ಯತಥಾವಿಧಸ್ಸನ್—ತಾ. ಪ್ರ)

೨೨ ಎದುರಿಗೆ ಇರುವ ಈ ದೃಷ್ಟಿಪರಂಪರೆಯನ್ನು ಯಥಾಭೂತವಾಗಿ ನೋಡುತ್ತ, ಮೇರುವಿನಂತೆ ಸ್ಥಿರನೂ ಸಮುದ್ರದಂತೆ ಗಂಭೀರನೂ ಆಗಿ, ಭ್ರಾಂತಿರಹಿತನಾಗಿ ಸಮಚಿತ್ತನಾಗಿ ಇರು.

ಚಿನ್ಮಾತ್ರಂ ಸರ್ವಮೇವೇದಮಿತ್ಥಮಾಭಾಸತಾಂ ಗತಂ ।
ನೇಹ ಸತ್ಯಮಸತ್ಯಂವಾಕ್ವಚಿದಸ್ತಿ ನ ಕಿಂಚನ ॥ ೨೩ ॥

ಮಹತ್ತಾಮಲಮಾಲಂಬ್ಯ ತ್ಯಕ್ತ್ವೇದಮವಹೇಲಯಾ ।
ಅಸಕ್ತಬುದ್ಧಿಃ ಸರ್ವತ್ರ ಭವ ಭವ್ಯ ಭವಕ್ಷಯೀ ॥ ೨೪ ॥

ಕಿಂ ರೋದಿಷಿ ಘನೋದ್ವೇಗಂ ಮೂಢವಚ್ಛಾನುಶೋಚಸಿ ।
ಭ್ರಮಸ್ಯದ್ಭ್ರಾಂತಚಿತ್ತಸ್ಯ ಸೌಮ್ಯಾವರ್ತೇ ತೃಣಂ ಯಥಾ ॥ ೨೫ ॥

ಶ್ರೀ ರಾಮ ಉವಾಚ—

ಅಹೋ ನು ಭಗವನ್ನೂನಂ ಸಮ್ಯಗ್ಜಾತಮಲಕ್ಷಯಃ ।
ತ್ವತ್ಪ್ರಸಾದಾತ್ಪ್ರಬುದ್ಧೋಽಸ್ಮಿ ಸೂರ್ಯಸಂಗಾದಿವಾಂಬುಜಂ ॥ ೨೬ ॥

ಭ್ರಾಂತಿರಸ್ತಂ ಗತಾ ನೂನಂ ಮಿಹಿಕಾ ಶರದೀವ ಮೇ ।
ಸಂಶಾಂತಾಖಿಲಸಂದೇಹಃ ಕರಿಷ್ಯೇ ವಚನಂ ತವ ॥ ೨೭ ॥

೨೩–೪ (ಯಥಾಭೂತವಾಗಿ ನೋಡುವುದು ಎಂದರೇನು) ಎಂದರೆ ಇದಂಶಬ್ದ ವಾಚ್ಯವಾಗಿರುವ ಈ ಸರ್ವವೂ ಚಿನ್ಮಾತ್ರವು: ಚಿತ್ತೇ ಈ ರೀತಿಯಾಗಿ ಪ್ರಕಟವಾಗಿರುವುದು: ಇಲ್ಲಿ ಸತ್ಯವು ಇಲ್ಲ: ಅಸತ್ಯವೂ ಇಲ್ಲ: ಎಂದು ನಿಶ್ಚಯಿಸಿಕೊಂಡು ಬ್ರಹ್ಮತ್ವವನ್ನು ಅವಲಂಬಿಸಿ, ಲೀಲೆಯಿಂದ ಜಗತ್ಸತ್ವವನ್ನು ತೊರೆದು, ಉದಾಸೀನನಾಗಿ ಎಲೈ ಭವ್ಯನೇ, ಭವಕ್ಷಯ ಮಾಡಿಕೊಳ್ಳುವವನಾಗು.

೨೫. ನೀನು ಇಷ್ಟು ಉದ್ವೇಗದಿಂದ ಅಳುವುದೇಕೆ? ಮೂಢನಂತೆ ಶೋಕಪಡುತ್ತಿರುವೆಯೇಕೆ? ಹುಚ್ಚು ಹಿಡಿದವನಂತೆ, ಎಲೈ ಸೌಮ್ಯನೆ, ಸುಳಿಗೆ ಸಿಕ್ಕಿದ ಹುಲ್ಲು ಕಡ್ಡಿಯಂತೆ ಅಲೆಯುವುದೇಕೆ?

೨೬. ಶ್ರೀ ರಾಮನು ಹೇಳಿದನು:–ಅಹಹಾ! ಎಲೈ ಭಗವಂತನೆ, ನನಗೆ ಚಿತ್ತದಲ್ಲಿದ್ದ ಮಲವೆಲ್ಲವೂ ಕ್ಷಯವಾಗಿ ಹೋಯಿತು. ನಿನ್ನ ಕೃಪೆಯಿಂದ ಪ್ರಬುದ್ಧನಾದೆನು. ಸೂರ್ಯನ ಸಂಗದಿಂದ ತಾವರೆಗೆ ಆಗುವಂತೆ ಆಯಿತು

೨೭. ಶರದೃತುವಿನಲ್ಲಿ ಮಂಜು ಕರಗಿ ಹೋಗುವಂತೆ ನನ್ನ ಭ್ರಾಂತಿಯೆಲ್ಲವೂ ಅಸ್ತವಾಯಿತು. ಸಂದೇಹವೆಲ್ಲವೂ ಶಾಂತವಾಯಿತು. ನಿನ್ನ ಅಪ್ಪಣೆಯನ್ನು ನೆರವೇರಿಸುವೆನು.

ವ್ಯಪಗತಮದಮೋಹೋ ಮಾನಮಾತ್ಸರ್ಯಮುಕ್ತ
ಸ್ಥಿರತರಮುದಿತಾತ್ಮಾ ಶಾಂತಶೋಕಶ್ಚಿರೇಣ ।
ಪುನರಸುಖಮಗಚ್ಛನ್ನಚ್ಛಯೈಕಾಂತಬುದ್ಧ್ಯಾ
ಯದಿಹ ವದಸಿ ಸಾಧೋ ತತ್ಕರಿಷ್ಯೇ ವಿಶಂಕಂ ॥ ೨೮ ॥

ಇತ್ಯಾರ್ಷೇ ವಾಸಿಷ್ಠರಾಮಾಯಣೇ ವಾಲ್ಮೀಕೀಯೇ ದೇವದೂತೋಕ್ತೇ ಮೋಕ್ಷೋಪಾಯೇಷು ನಿರ್ವಾಣಪ್ರಕರಣೇ "ಜೀವನ್ಮುಕ್ತಸಂಶಯನಿರೂಪಣಂ" ನಾಮ ದ್ವಾದಶಃ ಸರ್ಗಃ

(ನಷ್ಟೋ ಮೋಹಸ್ಸ್ಮೃತಿರ್ಲಬ್ಧಾ ತ್ವತ್ಪ್ರಸಾದಾನ್ಮಯಾಚ್ಯುತ। ಸ್ಥಿತೋಽಸ್ಮಿ ಗತಸಂದೇಹಃ ಕರಿಷ್ಯೇ ವಚನಂ ತವ॥ ಗೀತಾ. ಅ.೧೮. ಶ್ಲೋ)

೨೮. ಮದಮೋಹಗಳು ಕ್ಷಯಿಸಿದುವು. ಮಾನಮಾತ್ಸರ್ಯಗಳು ಬಿಟ್ಟುವು. ಆತ್ಮಜ್ಞಾನವು ಉದಯಿಸಿತು ಶೋಕವು ಶಾಂತವಾಯಿತು. ಈಗ ನಿರ್ಮಲವಾದ ನಿಶ್ಚಯ ಬುದ್ಧಿಯು ಲಭಿಸಿದೆಯಾಗಿ, ಎಲೈ ಸಾಧುವರ್ಯನೆ, ನೀನು ಏನೇ ಹೇಳಿದರೂ, ಶಂಕಾರಹಿತನಾಗಿ, ಮತ್ತೆ ಭ್ರಾಂತಿಗೊಳಗಾಗದಂತೆ, ಮಾಡುವೆನು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ
ನಿರ್ವಾಣಪ್ರಕರಣದ "ಜೀವನ್ಮುಕ್ತಸಂಶಯನಿರೂಪಣ" ಎಂಬ
ಹನ್ನೆರಡನೆಯ ಸರ್ಗವು.

ತ್ರಯೋದಶಃ ಸರ್ಗಃ

ಶ್ರೀರಾಮ ಉವಾಚ—

ಸಮ್ಯಗ್ಜ್ಞಾನವಿಲಾಸೇನ ವಾಸನಾವಿಲಯೋದಯೇ ।
ಜೀವನ್ಮುಕ್ತಪದೇ ಬ್ರಹ್ಮನ್ನೂನಂ ವಿಶ್ರಾಂತವಾನಹಂ ॥ ೧ ॥

ಪ್ರಾಣಸ್ಪಂದನಿರೋಧೇನ ವಾಸನಾವಿಲಯೋದಯೇ ।
ಜೀವನ್ಮುಕ್ತಪದೇ ಬ್ರಹ್ಮನ್ಸದ ವಿಶ್ರಮ್ಯತೇ ಕಥಂ ॥ ೨ ॥

ಶ್ರೀ ವಸಿಷ್ಠ ಉವಾಚ—

ಸಂಸಾರೋತ್ತರಣೇ ಯುಕ್ತಿರ್ಯೋಗಶಬ್ದೇನ ಕಥ್ಯತೇ ।
ತಾಂ ವಿದ್ಧಿ ದ್ವಿಪ್ರಕಾರಾಂ ತ್ವಂ ಚಿತ್ತೋಪಶಮಧರ್ಮಿಣೀಂ ॥ ೩ ॥

ಹದಿಮೂರನೆಯ ಸರ್ಗ

೧ ಶ್ರೀ ರಾಮನು ಹೇಳಿದನು:-ಶುದ್ಧವಾದ ಆತ್ಮಜ್ಞಾನದಿಂದ ವಾಸನಾಕ್ಷಯವಾಯಿತು. ಎಲೈ ಬ್ರಹ್ಮನೆ, ಜೀವನ್ಮುಕ್ತಿಪದದಲ್ಲಿ ವಿಶ್ರಾಂತಿಯನ್ನು ಪಡೆದಿರುವೆನು.

೨. ಪ್ರಾಣ ಚಲನವನ್ನು ನಿರೋಧಮಾಡಿ, ವಾಸನಾಕ್ಷಯವನ್ನು ಸಂಪಾದಿಸಿ ಜೀವನ್ಮುಕ್ತಿಯನ್ನು ಪಡೆಯುವುದೆಂತು ಎಂಬುದನ್ನು ಎಲೈ ಬ್ರಹ್ಮನೇ, ಹೇಳು.

(ಉಪಶಮ ಪ್ರಕರಣದಲ್ಲಿ ಹೇಳಿದ ವಾಸನಾಕ್ಷಯ ಹೇತುಗಳಾದ ಜ್ಞಾನ. ಯೋಗಕ್ರಮಗಳಲ್ಲಿ ಉತ್ತಮಾಧಿಕಾರಿಗೆ ಜ್ಞಾನವೂ ವಾಸನಾವಿಲಯವೆಂಬ ಫಲವನ್ನು ಕೊಟ್ಟು ಕೃತಾರ್ಥನನ್ನು ಮಾಡುವುದು: (ಆದರೆ) ಮಂದಮಧ್ಯಮಾಧಿಕಾರಿಗಳ ಉಪಕಾರಕ್ಕಾಗಿ ಯೋಗಕ್ರಮದಿಂದ ವಾಸನಾನಾಶವಾಗುವುದೆಂತು ಎಂಬುದನ್ನು ರಾಮನು ಕೇಳುವನು.)

೩. ಶ್ರೀ ವಸಿಷ್ಠನು ಹೇಳಿದನು:-ಸಂಸಾರವನ್ನು ದಾಟುವ ಯುಕ್ತಿಯನ್ನೇ

ಆತ್ಮಜ್ಞಾನಂ ಪ್ರಕಾರೋಽಸ್ಯಾ ಏಕಃ ಪ್ರಕಟಿತೋ ಭುವಿ ।
ದ್ವಿತೀಯಃ ಪ್ರಾಣಸಂರೋಧಃ ಶೃಣು ಯೋಽಯಂ ಮಯೋಚ್ಯತೇ ॥ ೪ ॥

ಶ್ರೀರಾಮ ಉವಾಚ—

ಸುಲಭತ್ವಾದದುಃಖತ್ವಾತ್ಕತರಃ ಶೋಭನೋಽನಯೋಃ ।
ಯೇನಾವಗತಮಾತ್ರೇಣ ಭೂಯಃ ಕ್ಷೋಭೋ ನ ಬಾಧತೇ ॥ ೫ ॥

ಶ್ರೀವಸಿಷ್ಠ ಉವಾಚ—

ಪ್ರಕಾರೌ ದ್ವಾವಪಿ ಪ್ರೋಕ್ತೌ ಯೋಗಶಬ್ದೇನ ಯದ್ಯಪಿ ।
ತಥಾಪಿ ರೂಢಿಮಾಯಾತಃ ಪ್ರಾಣಯುಕ್ತಾವಸೌ ಭೃಶಂ ॥ ೬ ॥

ಏಕೋ ಯೋಗಸ್ತಥಾ ಜ್ಞಾನಂ ಸಂಸಾರೋತ್ತರಣಕ್ರಮೇ ।
ಸಮಾವುಪಾಯೌ ದ್ವಾವೇವ ಪ್ರೋಕ್ತಾವೇಕಫಲಪ್ರದೌ ॥ ೭ ॥

ಯೋಗವೆನ್ನುವರು. ಚಿತ್ತದ ಉಪಶಮಕ್ಕೆ ಕಾರಣವಾದ ಆ ಯೋಗವು ಎರಡು ವಿಧವಾಗಿರುವುದು.

೪. ಪ್ರಪಂಚದಲ್ಲಿ ಈ ಚಿತ್ತೋಪಶಾಂತಿಗೆ ಒಂದು ಪ್ರಕಾರವು ಆತ್ಮಜ್ಞಾನವು ಎಂದು ಪ್ರಸಿದ್ಧವಾಗಿರುವುದು. ಇನ್ನೊಂದು ಪ್ರಾಣನಿರೋಧವು. ಅದನ್ನು ಈಗ ಹೇಳುವೆನು ಕೇಳು

೫. ಶ್ರೀ ರಾಮನು ಕೇಳಿದನು:-ಇವೆರಡರಲ್ಲಿ ಯಾವುದು ಸುಲಭವೂ ಸುಖವೂ ಆದುದು? ಯಾವುದನ್ನು ಪಡೆದರೆ ಮತ್ತೆ ಚಿತ್ತಕ್ಷೋಭವು ಉಂಟಾಗುವುದಿಲ್ಲ?

೬. ಶ್ರೀ ವಸಿಷ್ಠನು ಹೇಳಿದನು:-ಈ ಎರಡು ಪ್ರಕಾರಗಳಿಗೂ ಯೋಗ ಎಂದು ಹೇಳುವುದುಂಟಾದರೂ ರೂಢಿಯಲ್ಲಿ ಪ್ರಾಣನಿರೋಧವನ್ನೇ ಯೋಗವೆನ್ನುವುದು.

೭ ಸಂಸಾರವನ್ನು ದಾಟುವುದರಲ್ಲಿ ಯೋಗವೊಂದು, ಜ್ಞಾನವೊಂದು, ಈ ಎರಡೂ ಸಮವು. ಇವೆರಡಕ್ಕೂ ಫಲವು ಒಂದೇ!

ಅಸಾಧ್ಯಃ ಕಸ್ಯಚಿದ್ಯೋಗಃ ಕಸ್ಯಚಿಜ್ಜ್ಞಾನನಿಶ್ಚಯಃ ।
ಮಮ ತ್ವಭಿಮತಃ ಸಾಧೋ ಸುಸಾಧ್ಯೋ ಜ್ಞಾನನಿಶ್ಚಯಃ ॥ ೮ ॥

ಅಜ್ಞಾನಂ ಪುನರಜ್ಞಾತಂ ಸ್ವಪ್ನೇಽಪಿ ನ ತದ್ಭವೇತ್ ।
ಜ್ಞಾನಂ ಸರ್ವಾಸ್ವವಸ್ಥಾಸು ನಿತ್ಯಮೇವ ಪ್ರವರ್ತತೇ ॥ ೯ ॥

---

೮. ಕೆಲವರಿಗ ಯೋಗವು ಅಸಾಧ್ಯವು. ಇನ್ನು ಕೆಲವರಿಗೆ ಜ್ಞಾನವು ಅಸಾಧ್ಯವು. ಆದರೆ, ಎಲೈ ಸಾಧುವೆ, ನನ್ನ ಅಭಿಪ್ರಾಯದಲ್ಲಿ ಜ್ಞಾನವು ಎಲ್ಲರಿಗೂ ಸಾಧ್ಯವು.

(ಸುಕುಮಾರಚಿತ್ತರಾಗಿ ಪ್ರಾಣ ಸಂರೋಧದಿಂದ ಆಗುವ ಕಷ್ಟವನ್ನು ಸಹಿಸದವರಿಗೆ ಹಠಯೋಗವು ಅಸಾಧ್ಯ. ಕಠೋರಚಿತ್ತರಾದರೂ ವಿಚಾರಮಾಡಲು ಕುಶಲರಲ್ಲದವರಿಗೆ ಜ್ಞಾನನಿಶ್ಚಯವು ಅಸಾಧ್ಯ. ಶುದ್ಧಚಿತ್ತನಾಗಿ ವಿಚಾರಕುಶಲನಾದವನಿಗೆ ಜ್ಞಾನನಿಶ್ಚಯವು ಸಾಧ್ಯ ಎಂದು ವಸಿಷ್ಠರ ಅಭಿಪ್ರಾಯವು—ತಾ. ಪ್ರ.)

೯ ಜ್ಞಾನವು ಸರ್ವಾವಸ್ಥೆಗಳಲ್ಲಿಯೂ ನಿತ್ಯವೂ ಇರುವುದಾದರೂ ಅಜ್ಞರಿಗೆ (ವಿಚಾರದಲ್ಲಿ ಸಾಮರ್ಥ್ಯವಿಲ್ಲದವರಿಗೆ) ತಿಳಿಯುವುದಿಲ್ಲ ಸ್ವಪ್ನದಲ್ಲಿಯೂ ಜ್ಞಾನವು ಲಭಿಸುವುದಿಲ್ಲ.

(ತಾತ್ಪರ್ಯ ಪ್ರಕಾಶಕಾರರು ಬೇರೆ ರೀತಿಯಾಗಿ ಹೇಳಿದ್ದಾರೆ:-ವಿಚಾರಾಕುಶಲತಾಽಜ್ಞಾನಾ ಜ್ಞಾನ ಸ್ವರೂಪ ವಿವೇಕಾಸಾಮರ್ಥ್ಯೇಸ್ಯಾತ್ । ತತ್ತು ಪ್ರಮಾಣ ಕುಶಲಸ್ಯ ಸ್ವಪ್ನೇಽಪ್ಯಸಂಭಾವಿತ ಮಿತ್ಯಾಶಯೇನಾಹ-ಅಜ್ಞಾನಮಿತಿ ತಥಾಚಾ ಜ್ಞಾನಸ್ಯ ಸದೈವ ಸಾಕ್ಷಿಣಾ ಪ್ರಸಿದ್ಧತ್ವಾತ್ ಜ್ಞಾನಸ್ಯಚ ಸ್ವಪ್ರಕಾಶಕತಯಾ ಸ್ವತಃ ಪ್ರಸಿದ್ಧೇಃ ವೈಧರ್ಮ್ಯಸ್ಯಚ ಅನುಭವಾದೇವ ಪ್ರಸಿದ್ಧೇರ್ವಿವೇಕ ಸಂಭವಾತ್ ಜ್ಞಾನಂ ಸುಕರಂ ಯೋಗಸ್ತು ನ ತಥೇತಿ ದುಷ್ಕರ ಇತಿ ಭಾವಃ)

ಧಾರಣಾಸನದೇಶಾದಿಸಾಧ್ಯತ್ವೇನ ಸುಸಾಧ್ಯತಾಂ ।
ನಾಯಾತಿ ಯೋಗೋ ಹ್ಯಥವಾ ವಿಕಲ್ಪೇ ನೈವ ಶೋಭನಃ ॥ ೧೦ ॥

ದ್ವಾವೇವ ಕಿಲ ಶಾಸ್ತ್ರೋಕ್ತೌ ಜ್ಞಾನಯೋಗೌ ರಘೂದ್ವಹ ।
ತತ್ರೋಕ್ತಂ ಭವತೇ ಜ್ಞಾನಮಂತಸ್ಥಂ ಜ್ಞೇಯನಿರ್ಮಲಂ ॥ ೧೧ ॥

ಪ್ರಾಣಾಪಾನತಯಾ ರೂಢೋ ದೃಢದೇಹಗುಹಾಶಯಃ ।
ಅನಂತಸಿದ್ಧಿದಃ ಸಾಧೋ ಯೋಗೊ ಯಃ ಬುದ್ಧಿದಃ ಶೃಣು ॥ ೧೨ ॥

---

೧೦ ಧಾರಣ, ಆಸನ, ದೇಶಾದಿಗಳ ಬಲದಿಂದ ಸಾಧ್ಯವಾಗುವ ಯೋಗವು (ಇವುಗಳು ಇಲ್ಲದಿದ್ದರೆ ಸಾಧ್ಯವಾಗುವುದೇ ಇಲ್ಲ. (ನೂಡುವುದಕ್ಕೆ ಹೋಗಿ ಕೆಡಿಸಿಕೊಂಡರೆ) ಅದರಿಂದ ಒಳ್ಳೆಯದಾಗುವುದಿಲ್ಲ.

(ಪ್ರಶಸ್ತದೇಶಕಾಲ ವಿಷಯಾದಿ ಬಾಹ್ಯಹೇತು ಸಾಪೇಕ್ಷತ್ವಾದಪಿ ಯೋಗೋದುಷ್ಕರ ಇತ್ಯಾಹ-ಧಾರಣಾ ದೇಶೋ ಬಾಹ್ಯೋ ಗಿರಿಕೂಟಚಂದ್ರತಾರಾದಿ ಹೃದಯ ಕಂಠತಾಲುಮೂಲಭ್ರೂಮಧ್ಯಾದಿಶ್ಚ ಆಸನದೇಶಸು ಸಮೇಚಾಶರ್ಕರ ವಹ್ನಿ ವಾಲುಕಾ ವಿವರ್ಜಿತೇ ಶಬ್ದ ಜಲಾಶ್ರಯಾದಿಭಿಃ॥ ಮನೋನುಕೂಲೇ ನತುಚಕ್ಷು ಪೀಡನೇ ಗುಹಾ ನಿರ್ವಾತಾಶ್ರಯಣೇ ಪ್ರಯೋಜಯೇತ್॥ ಇತಿ ಶ್ರುತಿಸ್ಮೃತಿ ಶಾಸ್ತ್ರ ಪ್ರಸಿದ್ಧಃ ತಾ. ಪ್ರ.)

೧೧ ರಾಘವೇಂದ್ರನೇ, ಜ್ಞಾನ ಯೋಗ ಎಂಬ ಎರಡು ಮಾರ್ಗಗಳು ಶಾಸ್ತ್ರೋಕ್ತವಾದವು ಅದರಲ್ಲಿ ಅಂತಸ್ಥವೂ ಜ್ಞೇಯಾಕಾರವೃತ್ತಿಯಿಂದ ನಿರ್ಮಲವೂ ಆದ ಜ್ಞಾನವನ್ನು ಹೇಳಿದೆನು.

೧೨ ದೃಢವಾದ ದೇಹವೆಂಬ ಗುಹೆಯಲ್ಲಿ ಪ್ರಸಿದ್ಧವಾಗಿ ಪ್ರಾಣಾಪಾನಗಳಿಂದು ಸುಪ್ತ (ಗುಪ್ತ) ವಾಗಿರುವ ಯೋಗವು ಬುದ್ಧಿಪ್ರದವು. ಅನಂತವಾದ ಸಿದ್ಧಿಗಳನ್ನು ಕೊಡುವುದು, ಸಾಧುವೆ, ಅದನ್ನು (ಹೇಳುವೆನು) ಕೇಳು.

(ಸಿದ್ಧಿಕಾಮಾನಾಂ ಖೇಚರಾದ್ಯನಂತಸಿದ್ಧಿದಃ । ಜ್ಞಾನಕಾಮಾನಾಂತು ಬುದ್ಧಿದಃ ಸಾಕ್ಷಾತ್ಕಾರ ಹೇತುಃ—ತಾ. ಪ್ರ)

ಮುಖಾನಿಲಸ್ಫುರಣನಿರೋಧ ಸಂಭವ ।
ಸ್ಥಿತಿಂ ಗತೋ ನೃಪಸುತ ಚೇತಸಾ ಕ್ಷಯೇ ॥
ಸಮಾಹಿತಸ್ಥಿತಿರಿಹ ಯೋಗಯುಕ್ತಿತಃ ।
ಪರೇ ಪದೇ ಪ್ರಗಲಿತಗೀರ್ನಿವತ್ಸ್ಯಸಿ ॥ ೧೩ ॥

ಇತ್ಯಾರ್ಷೇವಾಸಿಷ್ಠರಾಮಾಯಣೇ ವಾಲ್ಮೀಕೀಯೇ ದೇವದೂತೋಕ್ತೇ ಮೋಕ್ಷೋಪಾಯೇಷು ನಿರ್ವಾಣಪ್ರಕರಣೇ "ಜ್ಞಾನವಿಚಾರಯೋಗೋಪದೇಶೋ" ನಾಮ ತ್ರಯೋದಶಃ ಸರ್ಗಃ

---

೧೩ ಎಲೈ ರಾಜಪುತ್ರನೇ, ಪ್ರಾಣದ ಗತಿಯನ್ನು ನಿರೋಧಿಸುವುದರಿಂದ ಲಭಿಸುವ ಮನೋಲಯ ಸ್ಥಿತಿಯನ್ನು ಪ್ರಯತ್ನ ಪೂರ್ವಕವಾಗಿ ಸಂಪಾದಿಸು. (ಅಭ್ಯಾಸ ಬಲದಿಂದ) ನೀನು ಆ ಸಮಾಧಿಸ್ಥಿತಿಯನ್ನು ಪಡೆದರೆ, (ಆಗ) ಅಕ್ಷಯವೂ ವಾಗಗೋಚರವೂ ಆದ ಪರಮಪದದಲ್ಲಿ ನಿಲ್ಲುವೆ.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ ನಿರ್ವಾಣಪ್ರಕರಣದ "ಜ್ಞಾನವಿಚಾರಯೋಗೋಪದೇಶ" ಎಂಬ ಹದಿಮೂರನೆಯ ಸರ್ಗವು.

ಚತುರ್ದಶಃ ಸರ್ಗಃ

ಶ್ರೀವಸಿಷ್ಠ ಉವಾಚ—

ಅಸ್ತಿ ತಾವದನಂತಸ್ಯ ತಸ್ಯ ಕ್ವಚಿದಯಂ ಕಿಲ ।
ಜಗದ್ರೂಪಃ ಪರಿಸ್ಪಂದೋ ಮೃಗತೃಷ್ಣಾ ಮರಾವಿವ ॥ ೧ ॥

ತತ್ರ ಕಾರಣತಾಂ ಯಾತೋ ಬ್ರಹ್ಮಾ ಕಮಲಸಂಭವಃ ।
ಸ್ಥಿತಃ ಪಿತಾಮಹತ್ವೇನ ಸೃಷ್ಟಭೂತಭರಭ್ರಮಃ ॥ ೨ ॥

ಹದಿನಾಲ್ಕನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು:— ಅನಂತವಾಗಿರುವ ಬ್ರಹ್ಮಪದದಲ್ಲಿ ಎಲ್ಲಿಯೋ ಒಂದು ಕಡೆ ಮರುಭೂಮಿಯಲ್ಲಿ ಕಾಣುವ ಮರೀಚಿಕೆಯಂತೆ, ಜಗದ್ರೂಪವಾದ ಒಂದು ಪರಿಸ್ಪಂದವು ಇರುವುದು.

(ಯೋಗಿ ವಿಶ್ರಾಂತಿ ಸ್ಥಾನವೆಂದು ವರ್ಣಿತವಾಗಿರುವ ಪರಮಪದದಲ್ಲಿ ಅವಿದ್ಯಾವೃತವಾಗಿರುವ ಒಂದು ಪ್ರದೇಶದಲ್ಲಿ "ಪಾದೋಽಸ್ಯವಿಶ್ವಾಭೂತಾನಿ" ಎಂದು ಶ್ರುತಿಯು ವರ್ಣಿಸಿರುವಂತೆ ಜಗದ್ರೂಪವಾದ ಬ್ರಹ್ಮಾಂಡಾಕಾರ ಪರಿಸ್ಪಂದ ಅಥವಾ ವಿವರ್ತವು ಇರುವುದು.

ಹಿಂದಿನ ಸರ್ಗದಲ್ಲಿ ಹೇಳಿದ ಪ್ರಾಣಾಯಾಮಾದಿ ಯೋಗಕ್ರಮವನ್ನು ಭುಶುಂಡೋಕ್ತಿಯಿಂದ ವಿಸ್ತಾರವಾಗಿ ವರ್ಣಿಸಬೇಕೆಂದು ಈ ಭುಶುಂಡಾಖ್ಯಾಯಿಕೆಯು ಆರಂಭವಾಗಿದೆ. —ತಾ. ಪ್ರ.)

೨. ಆ ಬ್ರಹ್ಮಾಂಡಕ್ಕೆ ಕಾರಣನಾದ ಕಮಲಸಂಭವ ಬ್ರಹ್ಮನು ಪಿತಾಮಹನಾಗಿ ತಾನು ಸೃಜಿಸಿದ ಪ್ರಾಣಿಗಳ ಭಾರವನ್ನು ಹೊತ್ತುಕೊಂಡು ಇರುವನು.

ತಸ್ಯಾಹಂ ಮಾನಸಃ ಪುತ್ರೋ ವಸಿಷ್ಠಃ ಶ್ರೇಷ್ಠಚೇಷ್ಟಿತಃ |
ಋಕ್ಷಚಕ್ರೇ ಧ್ರುವಧೃತೇ ನಿವಸಾಮಿ ಯುಗಂ ಪ್ರತಿ || ೩ ||

ಸೋಽಹಂ ಕದಾಚಿದಾಸ್ಥಾನೇ ಸ್ವರ್ಗೇ ಶಿಷ್ಟ್ವಶತಕ್ರತೋಃ |
ಶ್ರುತವನ್ನಾರದಾದಿಭ್ಯಃ ಕಥಾಂ ಸುಚಿರಜೀವಿನಾಂ || ೪ ||

ಕಥಾಪ್ರಸಂಗೇ ಕಸ್ಮಿಂಶ್ಚಿದಥ ತತ್ರಾಭ್ಯುವಾಚ ಹ |
ಶಾತಾತಪೋ ನಾಮ ಮುನಿರ್ಮೌನೀ ಮಾನೀ ಮಹಾಮತಿಃ || ೫ ||

ಮೇರೋರೀಶಾನಕೋಣಸ್ಥೇ ಪದ್ಮರಾಗಮಯೇ ದಿವಿ |
ಅಸ್ತಿ ಕಲ್ಪತರುಃ ಶ್ರೀಮಾನ್ ಶೃಂಗೇ ಚೂತ ಇತಿ ಶ್ರುತಃ || ೬ ||

---

೩. ಆ ಬ್ರಹ್ಮನ ಮಾನಸಪುತ್ರನಾಗಿ, ಸದಾಚಾರ ಸಂಪನ್ನನಾದ ವಸಿಷ್ಠನು ನಾನು. ಧ್ರುವನು ಧರಿಸಿರುವ ನಕ್ಷತ್ರ ಚಕ್ರದಲ್ಲಿ ಯುಗಯುಗಗಳು ವಾಸಮಾಡಿ ಕೊಂಡಿರುವೆನು.

(ಯುಗ ಶಬ್ದೇನ ಯುಗ ಸಮೂಹೋ ವೈವಸ್ವತಮನ್ವಂತರಂ ಲಕ್ಷ್ಯತೇ—
ತಾ. ಪ್ರ.)

೪ ನಾನು ಒಮ್ಮೆ ಸ್ವರ್ಗದಲ್ಲಿ ಇಂದ್ರನ ಆಸ್ಥಾನದಲ್ಲಿ, ನಾರದಾದಿ ಮಹರ್ಷಿಗಳಿಂದ ಬಹುಕಾಲವಿರುವ ಚಿರಂಜೀವಿಗಳ ಕಥೆಯನ್ನು ಕೇಳಿದೆನು.

೫. ಆ ಚಿರಂಜೀವಿಗಳ ಕಥೆಯೊಂದನ್ನು ಹೇಳುತ್ತಿದ್ದಾಗ ಮೌನಿಯೂ ಮಾನಿಯೂ ಮಹಾಮತಿಯೂ ಆದ ಶಾತಾತಪನೆಂಬ ಮಹರ್ಷಿಯು ಹೇಳಿದನು.

(ಮೌನೀ–ಅಲ್ಪಭಾಷಿತಾ | ಮಾನೀಮಾನನಾರ್ಹಃ ಪ್ರಮಾಣ ಕುಶಲಶ್ಚ
ತಾ. ಪ್ರ.)

೬. ಮೇರು ಪರ್ವತದ ಈಶಾನ್ಯ ದಿಕ್ಕಿನಲ್ಲಿ ಪದ್ಮರಾಗಮಯವಾಗ ಸ್ವರ್ಗವುಂಟು. ಅಲ್ಲಿ ಒಂದು ಪರ್ವತಶೃಂಗದಲ್ಲಿ ಚೂತವೆಂದು ಪ್ರಸಿದ್ಧವಾದ ಕಲ್ಪತರುವೊಂದುಂಟು.

ತಸ್ಯ ಕಲ್ಪತರೋರ್ಮೂರ್ಧ್ನಿ ದಕ್ಷಿಣಸ್ಕಂದಕೋಟರೇ ।
ಕಲಧೌತಲತಾಪ್ರೋತೇ ವಿದ್ಯತೇ ವಿಹಗಾಲಯಃ ॥ ೭ ॥

ತಸ್ಮಿನ್ನಿವಸತಿ ಶ್ರೀಮಾನ್ ಭುಶುಂಡೋ ನಾಮ ವಾಯಸಃ ।
ವೀತರಾಗೋ ಬೃಹತ್ಕೋಶೇ ಬ್ರಹ್ಮೇವ ನಿಜಪಂಕಜೇ ॥ ೮ ॥

ಸ ಯಥಾ ಜಗತಾಂ ಕೋಶೇ ಜೀವತೀಹ ಸುರಾಶ್ಚಿರಂ ।
ಚಿರಂಜೀವೀ ತಥಾ ಸ್ವರ್ಗೇ ನ ಭೂತೋ ನ ಭವಿಷ್ಯತಿ ॥ ೯ ॥

ಸ ದೀರ್ಘಾಯುಃ ಸ ನೀರಾಗಃ ಸ ಶ್ರೀಮಾನ್ ಸಮುಹಾಮತಿಃ ।
ಸ ವಿಶ್ರಾಂತಮತಿಃ ಶಾಂತಃ ಸ ಕಾಂತಃ ಕಾಲಕೋವಿದಃ ॥ ೧೦ ॥

ಸ ಯಥಾ ಜೀವತಿ ಖಗಸ್ತಥೇಹ ಯದಿ ಜೀವ್ಯತೇ ।
ತದ್ಭವೇಜ್ಜೀವಿತಂ ಪುಣ್ಯಂ ದೀರ್ಘಂ ಚೋದಯಮೇವ ಚ ॥ ೧೧ ॥

---

೭. ಕಲ್ಪತರುವಿನ ನೆತ್ತಿಯಲ್ಲಿ, ದಕ್ಷಿಣ ಭಾಗದ ಗುತ್ತಿಯಲ್ಲಿ, ಚಿನ್ನದ ಬಣ್ಣದ ಲತೆಗಳು ತುಂಬಿರುವ ಕಡೆ ಹಕ್ಕಿಗಳ ಬೀಡು ಒಂದುಂಟು.

೮. ಅಲ್ಲಿ ಶ್ರೀಮಾನ್ ಭುಶುಂಡನೆಂಬ ಒಬ್ಬ ಕಾಕನಿರುವನು. ಆತನು ವೈರಾಗ್ಯ ಸಂಪನ್ನನು ಬಹಳ ಬಲ್ಲವನು ಬ್ರಹ್ಮನು ತನ್ನ ಆಸನವಾದ ಕಮಲದಲ್ಲಿ ಸ್ವಸ್ಥನಾಗಿರುವಂತೆ ಸ್ವಸ್ಥನಾಗಿ ಇರುವನು.

೯. ಸ್ವರ್ಗದಲ್ಲಿ ದೇವತೆಗಳು ಇರುವಂತೆ, ಆತನೂ ಬ್ರಹ್ಮಾಂಡದಲ್ಲಿ ಚಿರಂಜೀವಿಯಾಗಿ ಬಹುಕಾಲದಿಂದಿರುವನು. ಆತನಷ್ಟು ಚಿರಂಜೀವಿಯು ಹಿಂದೆ ಇರಲಿಲ್ಲ. ಮುಂದೆ ಆಗುವುದಿಲ್ಲ.

೧೦. ಆತನು ದೀರ್ಘಾಯುವು. ರಾಗರಹಿತನು. ಶ್ರೀಮಂತನು. ಮಹಾಮತಿಯು. ಅಷ್ಟೇ ಅಲ್ಲ. ಆತನು ವಿಶ್ರಾಂತಮತಿಯು (ಅಮನಸ್ಕನು) ಶಾಂತನು, ಕಾಂತನು, ಕಾಲವೇದಿಯು.

೧೧ ಆ ಹಕ್ಕಿಯು ಬಾಳುವ ಹಾಗೆ ಬಾಳಿದುದೇ ಆದರೆ, ಆ ಬಾಳು ಪುಣ್ಯವೂ, ದೀರ್ಘವೂ, ಶ್ರೇಯಸ್ಕರವೂ ಆಗಿಯೇ ಆಗುವುದು.

ಇತಿ ತೇನ ಭುಶುಂಡೋಸೌ ಭೂಯಃ ಪೃಷ್ಟೇನ ವರ್ಣಿತಃ |
ಯಥಾವದೇವ ದೇವಾನಾಂ ಸಭಾಯಾಂ ಸತ್ಯಮುಕ್ತವಾನ್ || ೧೨ ||

ಕಥಾವಸರಸಂಶಾಂತಾವಥ ಯಾತೇ ಸುರವ್ರಜೇ |
ಭುಶುಂಡಂ ವಿಹಗಂ ದ್ರಷ್ಟುಮಹಂ ಯಾತಃ ಕುತೂಹಲಾತ್ || ೧೩ ||

ಭುಶುಂಡಃ ಸಂಸ್ಥಿತೋ ಯತ್ರ ಮೇರೋಃ ಶೃಂಗಂ ತದುತ್ತಮಂ |
ಸಂಪ್ರಾಪ್ತವಾನ್ ಕ್ಷಣೇನಾಹಂ ಪದ್ಮರಾಗಮಯಂ ಬೃಹತ್ || ೧೪ ||

ರತ್ನಗೈರಿಕಕಾಂತೇನ ತೇಜಸಾ ವಹ್ನಿವರ್ಚಸಾ |
ಮಧ್ವಾಸವರಸೇನೇವ ರಂಜಯತ್ಕಕುಭಾಂ ಗಣಂ || ೧೫ ||

ಕಲ್ಪಾಂತಜ್ವಲನೋಜ್ಜ್ವಲಾಪಿಂಡಾದ್ರಿಮಿವ ಸಂಚಿತಂ |
ಇಂದ್ರನೀಲಶಿಖಾಧೂಮಮಾಲೋಕಾರುಣಿತಾಂಬರಂ || ೧೬ ||

(ದೀರ್ಘಂ ಜೀವಿತಂ ಸಾಧನ ದಶಾಯಾಂ. ಪುಣ್ಯಂ ಫಲದಶಾಯಾಂ, ಉದಯಂ ಪರಮ ಪುರುಷಾರ್ಥ ಅಭ್ಯುದಯ ಯುಕ್ತಂ — ತಾ. ಪ್ರ)

೧೨. ಹೀಗೆಂದು ಆ ಭುಶುಂಡನನ್ನು ಆತನು ವರ್ಣಿಸಿದನು. ದೇವಸಭೆಯಲ್ಲಿ ಮತ್ತೆ ಮತ್ತೆ ಕೇಳಿದರೂ ಸತ್ಯಮಾಡಿ ಆತನು ಹೇಳಿದನು.

೧೩. ಕಥೆಯೆಲ್ಲವೂ ಮುಗಿದಮೇಲೆ, ಸುರಗಣವೆಲ್ಲವೂ ಹೊರಟುಹೋಯಿತು. ಆಗ ನಾನು ಆ ಭುಶುಂಡ ಪಕ್ಷಿಯನ್ನು ನೋಡಬೇಕೆಂದು ಕುತೂಹಲದಿಂದ ಹೊರಟೆನು.

೧೪. ಒಂದು ಕ್ಷಣದಲ್ಲಿ ಆ ಭುಶುಂಡನಿರುವ ಪದ್ಮರಾಗಮಯವಾದ ಬೃಹತ್ತಾದ ಆ ಮೇರು ಶಿಖರವನ್ನು ಸೇರಿದೆನು.

೧೫. ಅಲ್ಲಿ ರತ್ನಗಳು ಗೈರಿಕಾದಿ ಧಾತುಗಳು ಇವುಗಳ ಅಗ್ನಿಯಂತೆ ಜಾಜ್ವಲ್ಯಮಾನವಾದ ತೇಜಸ್ಸಿನಿಂದ. ದಿಕ್ಕುಗಳು ಮಧು ಆಸವ ಮೊದಲಾದ ಪಾನಗಳಿಂದ ಆರಕ್ತವಾಗಿರುವಂತೆ ಕಾಣುತ್ತಿರಲು,

೧೬. ಕಲ್ಪಾಂತದಲ್ಲಿ ಪ್ರಕಟವಾಗುವ ಮಹಾಗ್ನಿಯ ಜ್ವಾಲೆಗಳನ್ನೆಲ್ಲ ಶೇಖರಿ

ಸರ್ವೇಷಾಮೇವ ರಾಗಾಣಾಂ ರಾಶಿಮುದ್ರಾವಿವ ಸ್ಥಿತಂ ।
ಸರ್ವಸಂಧ್ಯಾಭ್ರಜಾಲಾನಾಂ ಘನಮೇಕಮಿವಾಕರಂ ॥ ೧೭ ॥

ಉತ್ಕ್ರಾಂತಿಂ ಕುರ್ವತೋಮೇರೋರ್ಬ್ರಹ್ಮನಾಡ್ಯೇವ ನಿರ್ಗತಂ ।
ಮೂರ್ಧಾನಮಾಗತಂ ಕಾಂತಂ ಬಾಡವಂ ಜಠರಾನಲಂ ॥ ೧೮ ॥

ಸುಮೇರುವನದೇವ್ಯೇವ ನವಾಲಕ್ತಕರಂಜಿತಂ ।
ಲೀಲಯಾ ದಾತುಮಿಂದುಂ ಖೇ ನೀತಂ ಹಸ್ತಶಿಖಾಂಗುಲಿಂ ॥ ೧೯ ॥

ಜ್ವಾಲಾಭಿರಿವ ಮಾಲಾಭಿರರುಣಾಭಿಃ ಪಯೋಮುಖಂ ।
ಖಂ ಗಂತುಮಿವ ಸಸ್ಪಂದಂ ಶೈಲಸ್ಥಮಿವ ಬಾಡವಂ ॥ ೨೦ ॥

ಸಿಟ್ಟ ಬೆಟ್ಟವೋ, ಇಂದ್ರನೀಲ ಮಣಿಗಳ ಜ್ವಾಲೆಯಿಂದ ಹೊರಬಿದ್ದ ಧೂಮದಿಂದ ಆಕಾಶವೆಲ್ಲ ಕೆಂಪಾಗಿರುವುದೋ.

೧೭. ಎಲ್ಲಾ ಜಾತಿಯ ಕೆಂಪು ಬಣ್ಣಗಳೂ ಈ ಪರ್ವತದಲ್ಲಿಯೇ ಇರುವುವೋ. ಸರ್ವಸಂಧ್ಯಾಕಾಲಗಳ ಕೆಂಪು ಮೋಡಗಳ ಗುಂಪೆಲ್ಲವೂ ಒಂದೇ ಮೊಟ್ಟೆ ಕಟ್ಟಿಕೊಂಡು ಇಲ್ಲಿ ಬಂದಿರುವುದೋ,

೧೮. ಮೇರುವಿನ ಗರ್ಭದಲ್ಲಿರುವ ಬಡಬಾಗ್ನಿಯಂತಹ ಜಠರಾಗ್ನಿಯು ಉತ್ಕ್ರಾಂತಿಯೋಗದಿಂದ ಬ್ರಹ್ಮನಾಡಿಯಿಂದ ಹೊರಬಿದ್ದು ತಲೆಯ ಮೇಲಕ್ಕೆ ಬಂದಿರುವುದೋ,

೧೯. ಸುಮೇರು ಪರ್ವತದ ವನದೇವಿಯು ಲೀಲೆಯಿಂದ ಚಂದ್ರನನ್ನು ಹಿಡಿದುಕೊಳ್ಳಬೇಕೆಂದು ಹೊಸದಾಗಿ ಅಲಕ್ತರಸದಿಂದ ಅಲಂಕರಿಸಿಕೊಂಡಿರುವ ತನ್ನ ಕೈಯ ಬೆರಳುಗಳನ್ನು ಚಾಚಿರುವಳೋ,

೨೦. ಮೇರುಪರ್ವತದಲ್ಲಿರುವ ಅಗ್ನಿಹೋತ್ರಗಳ ಬೆಂಕಿಯೇನಾದರೂ ಕೆಂಪಗಿರುವ ತನ್ನ ಜ್ವಾಲಾಮಾಲೆಗಳಿಂದ, ನಿರ್ಝರಿಣಿಗಳ ರೂಪವಾಗಿ ಆಕಾಶಕ್ಕೆ ಹಾರುತ್ತಿದೆಯೋ,

ತಾರಾಃ ಸ್ಪ್ರಷ್ಟುಮಿವಾಕಾಶಮಂಗುಲೀಭಿರಿವ ತ್ರಿಭಿಃ ।
ಕಚದಂಶುನಖಾಗ್ರಾಭಿಃ ಪರಿಚಂಬದಿವೋನ್ನತಂ ॥ ೨೧ ॥

ಗರ್ಜಜ್ಜೀಮೂತಮುರಜಂ ಭೂಭೃತಾನಾಂ ತು ಮಂಡಪಂ ।
ಹಸತ್ಕುಸುಮಗುಚ್ಛಾಢ್ಯಂ ಧ್ವನತ್ಷಟ್ಪದಪೇಟಕಂ ॥ ೨೨ ॥

ದಂತತಾಲದಲಾವಲ್ಯಾ ಪರಿಹಾಸಾದಿವ ಸ್ಫುರತಾ ।
ದೋಲಾಲೋಲಾಪ್ಸರೋವೃಂದ ಮುದಾರ ಮದಮನ್ಮಥಂ ॥ ೨೩ ॥

ಶಿಲಾವಿಶ್ರಾಂತ ವಿಬುಧ ಮಿಥುನಾಶ್ರಿತ ಕಂದರಂ ।
ವರಾಂಬರಾಜಿನಂ ಶುಭ್ರಗಂಗಾಯಜ್ಞೋಪವೀತಿನಂ ಚ ॥ ೨೪ ॥

ತಾಪಸಂ ಪಿಂಗಲಮಿವ ವೇಣುದಂಡಧರಂ ಸ್ಥಿತಂ ।
ಗಂಗಾನಿರ್ಝರ ನಿಹಾರಾದಿ ಲತಾಗೃಹಗತಾಮರಂ ॥ ೨೫ ॥

---

೨೧. ಆ ಪರ್ವತವು ತನ್ನ ರತ್ನಪ್ರಭಾಜಾಲ ಸುಂದರವಾದ ಬೆರಳುಗಳನ್ನು ನಕ್ಷತ್ರಗಳನ್ನು ಮುಟ್ಟಿ ಮುಟ್ಟಿ ಎಣಿಸುವುದಕ್ಕಾಗಿ ಎತ್ತಿದೆಯೋ ಎಂಬಂತಿರುವ ಮೂರು ಶೃಂಗಗಳು ಮೆರೆಯುತ್ತಿರಲು,

೨೨. ಗರ್ಜಿಸುತ್ತಿರುವ ಗುಡುಗುಗಳೆಂಬ ಮದ್ದಲೆಯೂ ನಗುನಗುತ್ತಿರುವ ಕುಸುಮ ಗುಚ್ಛಗಳೂ ಮೊರೆಯುತ್ತಿರುವ ದುಂಬಿಗಳ ಪೆಟ್ಟಿಗೆಗಳೂ ಇರುವ, ಪರ್ವತಗಳ ನೃತ್ಯಮಂಟಪವೋ,

(ಭೂಭೃತಾನಾಂ ವನಲಕ್ಷ್ಮೀಣಾಂ—ತಾ. ಪ್ರ.)

೨೩. ದಂತಪಂಕ್ತಿಗಳಂತೆ ಮುದ್ದಾಗಿರುವ ತಾಲಪತ್ರಗಳ ಸಾಲುಗಳಿಂದ ಪರಿಹಾಸ ಮಾಡುತ್ತಿರುವರೋ ಎಂಬಂತೆ ಇದ್ದು ಉಯ್ಯಾಲೆ ಮಾಡುತ್ತಿರುವ ಅಪ್ಸರೋ ಗಣಗಳನ್ನು ನೋಡಿ ಮದನವ್ಯಥೆಯೂ ಹುಟ್ಟುತ್ತಿರಲು,

೨೪–೨೫. ಹಾಸುಗಲ್ಲುಗಳ ಮೇಲೆ ಕಿಬ್ಬರಿಗಳಲ್ಲಿ ದೇವಮಿಥುನಗಳ ವಿಹರಿಸುತ್ತಿರಲು. ಆಕಾಶವೇ ವಸ್ತ್ರವಾಗಿ. ಶುಭ್ರಗಂಗೆಯೇ ಯಜ್ಞೋಪವೀತವಾಗಿ, ವೇಣುದಂಡವನ್ನು ಧರಿಸಿ, ಕೆಂಪಗಿರುವ ತಾಪಸನೊಬ್ಬನು ಕುಳಿತಿರುವನೋ ಎಂಬಂತೆ

ಗಂಧರ್ವಗೀತಸುಭಗಮಾಮೋದಮಧುರಾನಿಲಂ ।
ಫುಲ್ಲಹೇಮಾಂಬುಜೋತ್ತಂಸಂ ತಾರಾರತ್ನವಿಭೂಷಿತಂ ॥ ೨೬ ॥

ವ್ಯೋಮ್ನಃ ಪಾರಮಿವ ಪ್ರಾಪ್ತಂ ಪಿಂಗಲಂ ಮೈರವಂ ಶಿರಃ ॥ ೨೭ ॥

ಸಿತಹರಿತಪೀತಪಾಟಲಧವಲೈರ್ವನಕುಸುಮರಾಶಿನವರಂಗೈಃ ।
ದಿವಿ ವಿಹಿತಾಮಲಚಿತ್ರಂ ಲೀಲಾಚಲಮಮರಯುವತಿನರ್ಗಸ್ಯ ॥ ೨೮ ॥

ಇತ್ಯಾರ್ಷೇವಾಸಿಷ್ಠರಾಮಾಯಣೇ ವಾಲ್ಮೀಕೀಯೇ ದೇವದೂತೋಕ್ತೇ ಮೋಕ್ಷೋಪಾಯೇಷು ನಿರ್ವಾಣಪ್ರಕರಣೇ ಭುಶುಂಡೋಪಾಖ್ಯಾನೇ "ಮೇರುಶಿಖರವರ್ಣನಂ" ನಾಮ ಚತುರ್ದಶಃ ಸರ್ಗಃ

ಇರಲು, ಗಂಗಾ ನಿರ್ಝರವು ಸದ್ದುಮಾಡುತ್ತಿರಲು, ಲತಾಗೃಹಗಳಲ್ಲಿ ಅಮರರು ಆಶ್ರಯಪಡೆದಿರಲು,

೨೬. ಗಂಧರ್ವ ಗಾನದಿಂದ ಮುದ್ದಾಗಿರಲು, ಸುವಾಸನೆಯಿಂದ ಮಧುರ ವಾದ ಗಾಳಿಯು ತೀಡುತ್ತಿರಲು, ಅರಳಿರುವ ಹೇಮಾಂಭೋಜಗಳು ಮೆರೆಯು ತ್ತಿರಲು ತಾರಾ ರತ್ನಗಳಿಂದ ಈ ಗಿರಿರಾಜನು ಅಲಂಕರಿಸಿಕೊಂಡಿರುವನೋ ಎಂಬಂತಿರಲು.

೨೭. ಆ ಮೇರುವಿನ ಶಿಖರವು ಆಕಾಶದ ಕೊನೆಯನ್ನು ಮುಟ್ಟಿದಂತೆ ಇತ್ತು.

೨೮. ಕಪ್ಪು. ಹಸುರು, ಹಳದಿ, ಕೆಂಪು, ಬಿಳುಪು, ಬಣ್ಣಗಳ ವನಕುಸುಮ ರಾಶಿಗಳಿಂದ ಆಕಾಶದಲ್ಲಿ ಬರೆದಿರುವ ಚಿತ್ರವೆಂಬಂತೆ ಅಮರಾಂಗನೆಯರ ಲೀಲಾ ಪರ್ವತವೋ ಎಂಬಂತೆ ಆ ಪರ್ವತಶಿಖರವಿತ್ತು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ ನಿರ್ವಾಣಪ್ರಕರಣದ ಭುಶುಂಡೋಪಾಖ್ಯಾನದಲ್ಲಿ "ಮೇರುಶಿಖರವರ್ಣನ" ಎಂಬ ಹದಿನಾಲ್ಕನೆಯ ಸರ್ಗವು.

ಪಂಚದಶಃ ಸರ್ಗಃ

ಶ್ರೀವಸಿಷ್ಠ ಉವಾಚ—

ಕುಸುಮಾಪೂರ್ಣಕಲ್ಪಾಭ್ರಕುಂತಲೇ ತಸ್ಯ ಮೂರ್ಧನಿ ।
ಕಲ್ಪಾಂಗನುಹಮುದ್ರಾಕ್ಷಂ ಶಾಖಾಚಕ್ರಮಿವ ಸ್ಥಿತಂ ॥ ೧ ॥

ಪುಷ್ಪರೇಣ್ವಭ್ರವಲಿತಂ ರತ್ನಸ್ತಬಕದಂತುರಂ ।
ಉತ್ಸೇಧನಿರ್ಜಿತಾಕಾಶಂ ಶೃಂಗೇ ಶೃಂಗಮಿವಾರ್ಪಿತಂ ॥ ೨ ॥

ತಾರಾದ್ವಿಗುಣಪುಷ್ಪೌಘಂ ಮೇಘದ್ವಿಗುಣಪಲ್ಲವಂ ।
ರಶ್ಮಿದ್ವಿಗುಣರೇಣ್ವಭ್ರಂ ತಡಿದ್ದ್ವಿಗುಣಮಂಜರೀಂ ॥ ೩ ॥

ಹದಿನೈದನೆಯ ಸರ್ಗ

೧ ಆ ಮೇರು ಪರ್ವತದ ತುದಿಯಲ್ಲಿ ಕಲ್ಪಕಾಲದ ಮೇಘಗಳೆಂಬ ಕೇಶಗಳಲ್ಲಿ ಹೂಗಳನ್ನು ಮುಡಿದುಕೊಂಡು ಬೇಡಿದವರಿಗೆ ಬೇಕಾದುದನ್ನು ಕೊಡುವ, ವಿಸ್ತಾರವಾಗಿ ಹರಡಿರುವ ಕೊಂಬೆಗಳುಳ್ಳ ಆ ಕಲ್ಪವೃಕ್ಷವನ್ನು ಕಂಡೆನು.

೨. ಆ ಮರದಲ್ಲಿ ಬಿಟ್ಟಿರುವ ಹೂಗಳಿಂದ ಉದುರುವ ಧೂಳಿಯು ಮೋಡಗಳಂತೆ ದಟ್ಟವಾಗಿತ್ತು. ಆ ಪುಷ್ಪಗುಚ್ಛಗಳು ರತ್ನಸ್ತಬಕಗಳಂತೆ ಮನೋಹರವಾಗಿದ್ದುವು. ಆ ಮರವು ಎತ್ತರವಾಗಿ ಬೆಳೆದು ಆಕಾಶವನ್ನು ಮೀರಿದಂತಿತ್ತು. ಹಾಗೆಯೇ ನೋಡಿದರೆ,ಮೇರುಶೃಂಗದ ಮೇಲೆ ನಿಂತಿರುವ ಇನ್ನೊಂದು ಶೃಂಗವೋ ಎಂಬಂತಿತ್ತು

೩. ಆಕಾಶದಲ್ಲಿರುವ ನಕ್ಷತ್ರಗಳ ಎರಡರಷ್ಟು ಹೂಗಳು ಆ ಮರದಲ್ಲಿ ಇದ್ದುವು. ಮೇಘಮಂಡಲದಲ್ಲಿರುವ ಮೋಡಗಳ ಎರಡರಷ್ಟು ಚಿಗುರುಗಳು ಇದ್ದುವು. ಸೂರ್ಯಮಂಡಲದಲ್ಲಿರುವ ಕಿರಣಗಳೆರಡರಷ್ಟು ಪುಷ್ಪರೇಣುಗಳಿಂದಾದ ಮೋಡಗಳಿದ್ದುವು. ಮೇಘಗಳಲ್ಲಿ ಕಾಣಿಸುವ ಮಿಂಚುಗಳ ಎರಡರಷ್ಟು ಹೂವಿನ ಗೊಂಚಲುಗಳು ಇದ್ದುವು.

ಸ್ಕಂಧೇಷು ಕಿನ್ನರೀಗೀತದ್ವಿಗುಣಭ್ರಮರಸ್ವನಂ ।
ದೋಲಾಲೋಲಾಪ್ಸರೋಲೋಕದ್ವಿಗುಣೀಕೃತಪಲ್ಲವಂ ॥ ೪ ॥

ಸಿದ್ಧಗಂಧರ್ವಸಂಘಾತದ್ವಿಗುಣೋತ್ಥವಿಹಂಗಮಂ ।
ರತ್ನಕಾಂತ್ಯಚ್ಛನೀಹಾರದ್ವಿಗುಣತ್ವಕ್ಪ್ರತಾಂಶುಕಂ ॥ ೫ ॥

ಚಂದ್ರಬಿಂಬಸಮಾಶ್ಲೇಷದ್ವಿಗುಣಾಂಗಬೃಹತ್ಫಲಂ ।
ಮೂಲಸಂಲೀನಕಲ್ಪಾಭ್ರದ್ವಿಗುಣೀಕೃತಪರ್ವಕಂ ॥ ೬ ॥

ಸುರಸಂವಲಿತಸ್ಕಂಧಂ ಪತ್ರವಿಶ್ರಾಂತಕಿನ್ನರಂ ।
ನಿಕುಂಜಕುಂಜಜೀಮೂತಂ ಕಚ್ಛಸುಪ್ತಸುರಾದಿಕಂ ॥ ೭ ॥

ಸ್ವಾಕಾರವಿಪುಲಂ ಭೃಂಗಾನುತ್ಸಾರ್ಯ ವಲಯಸ್ವನೈಃ ।
ಅಪ್ಸರೋಭ್ರಮರೀಭಿಶ್ಚ ಗೃಹೀತಕುಸುಮಾಂತರಂ ॥ ೮ ॥

---

೪. ಆ ಮರದ ಕೊಂಬೆಗಳಲ್ಲಿ ಕಿನ್ನರೀ ಗೀತದ ಎರಡರಷ್ಟು, ದುಂಬಿಗಳ ಝೇಂಕಾರವು ತುಂಬಿತ್ತು. ಉಯ್ಯಾಲೆಗಳನ್ನು ಕಟ್ಟಿಕೊಂಡು ತೂಗುತ್ತಿರುವ ಅಪ್ಸರೆಯರ ಗುಂಪಿನಿಂದ ಆ ಮರದಲ್ಲಿ ಚಿಗುರುಗಳು ಒಂದಕ್ಕೆರಡಾದಂತೆ ಇತ್ತು.

೫. ಸಿದ್ಧ ಗಂಧರ್ವರ ಗುಂಪುಗಳು ಅದನ್ನು ಆಶ್ರಯಿಸಿರಲು ಅಲ್ಲಿರುವ ಹಕ್ಕಿಗಳು ಒಂದಕ್ಕೆರಡಾದುವೋ ಎಂಬಂತಿತ್ತು. ಅವರ ರತ್ನಾಭರಣಗಳಿಂದ ಹೊರಡುವ ಕಾಂತಿಯು ಆ ಮರವನ್ನು ಬಳಸಿರಲು ಆ ಮರಕ್ಕೆ ಸೀರೆಯನ್ನು ಉಡಿಸಿದಂತಿತ್ತು.

೬. ಆ ಮರದ ಕೊಂಬೆಗಳಲ್ಲಿ ಚಂದ್ರಮಂಡಲವು ಸಿಕ್ಕಿಕೊಂಡಿರಲು ಇನ್ನೊಂದು ಭಾರಿಯ ಹಣ್ಣು ಬಿಟ್ಟಂತಿರುವುದು. ಹಾಗೆಯೇ ಕಲ್ಪಮೇಘವು ಬುಡದಲ್ಲಿ ಸಿಕ್ಕಿಕೊಂಡಿರಲು. ಆ ಮರಕ್ಕೆ ಇನ್ನೊಂದು ಗಂಟು ಹುಟ್ಟಿದಂತಿರುವುದು.

೭. ಆ ಮರದ ಬುಡವನ್ನು ದೇವತೆಗಳು ಆಶ್ರಯಿಸಿರುವರು. ಎಲೆಗಳಲ್ಲಿ ಕಿನ್ನರರು ವಿಶ್ರಮಿಸಿಕೊಳ್ಳುವರು ಆ ಮರದ ಕೊಂಬೆಗಳಲ್ಲಿ ಮೋಡಗಳು ಸಿಕ್ಕಿಕೊಂಡಿರುವುವು. ಆ ಮರದ ಅಕ್ಕಪಕ್ಕಗಳಲ್ಲಿ ಸುರಾಸುರಾದಿಗಳೆಲ್ಲರೂ ಮಲಗಿರುವರು.

೮. ವಿಸ್ತಾರವಾಗಿ ಹರಡಿರುವ ಆ ಮರದಲ್ಲಿ ಅಪ್ಸರೆಯರೆಂಬ ಭ್ರಮರಿಯರು

ಸುರಕಿಂನರಗಂಧರ್ವವಿದ್ಯಾಧರವರಾನ್ವಿತಂ |
ಜಗಜ್ಜಾಲಮಿವಾನಂತಂ ದಶಾಶಾಕಾಶಪೂರಕಂ ॥ ೯ ॥

ನೀರಂಧ್ರಕಲಿಕಾಜಾಲಂ ನೀರಂಧ್ರಮೃದುಪಲ್ಲವಂ |
ನೀರಂಧ್ರವಿಕಸತ್ಪುಷ್ಪಂ ನೀರಂಧ್ರವನಮಾಲಿತಂ ॥ ೧೦ ॥

ನೀರಂಧ್ರಮಂಜರೀಪುಂಜಂ ನೀರಂಧ್ರಮಣಿಗುಚ್ಛಕಂ |
ನೀರಂಧ್ರಾಂಶುಕರತ್ನಾಢ್ಯಂ ಲತಾವಿಲಸನಾಕುಲಂ ॥ ೧೧ ॥

ಸರ್ವತ ಕುಸುಮಾಪೂರ್ಯೈಃ ಸರ್ವತ್ರಫಲಪಲ್ಲವೈಃ |
ಸರ್ವಾಮೋದರಜಃಪುಂಜೈಃ ಪರಂ ವೈಚಿತ್ರ್ಯಮಾಗತಂ ॥ ೧೨ ॥

ತಸ್ಯ ಕಕ್ಷೇಷು ಕುಂಜೇಷು ಲತಾಪತ್ರೇಷು ಪರ್ವಸು |
ಪುಷ್ಪೇಷ್ವಾಲಯಸಂಲೀನಾನ್ವಿಹಗಾನ್ದೃಷ್ಟವಾನಹಂ ॥ ೧೩ ॥

ತಮ್ಮ ಕಡಗಗಳ ಸದ್ದಿನಿಂದ ಹೂಗಳಲ್ಲಿದ್ದ ದುಂಬಿಗಳನ್ನು ಓಡಿಸಿ, ಆ ಹೂಗಳನ್ನು ಕೊಯ್ದುಕೊಳ್ಳುವರು.

೯. ಸುರರು, ಕಿಂನರರು, ಗಂಧರ್ವರು, ವಿದ್ಯಾಧರರು ಮೊದಲಾದ ಶ್ರೇಷ್ಠರೆಲ್ಲರೂ ತನ್ನನ್ನು ಆಶ್ರಯಿಸಿರಲು, ಹತ್ತು ದಿಕ್ಕುಗಳಲ್ಲಿಯೂ ಇರುವ ಆಕಾಶವನ್ನೆಲ್ಲ ತುಂಬಿ ಆ ಮರವು ಇನ್ನೊಂದು ಬ್ರಹ್ಮಾಂಡವೋ ಎಂಬಂತಿರುವುದು.

೧೦ ಆ ಮರದಲ್ಲಿ ಮೊಗ್ಗುಗಳೂ, ಮೃದುವಾದ ಚಿಗುರುಗಳೂ, ಅರಳುತ್ತಿರುವ ಹೂಗಳೂ, ವನಮಾಲೆಗಳೂ ಎಡೆಬಿಡದೆ ತುಂಬಿರುವುವು

೧೧. ಮಂಜರೀ ಪುಂಜಗಳೂ ಮಣಿಗುಚ್ಛಗಳೂ ವಸ್ತ್ರಗಳೂ ರತ್ನಗಳೂ ತುಂಬಿರುವುವು. ಅಳ್ಳಿಗೊಂಬೆಗಳು ಒಂದೇ ಸಮನಾಗಿ ಕುಣಿಯುತ್ತಿರುವುವು.

೧೨. ಎಲ್ಲೆಲ್ಲಿಯೂ ಕುಸುಮಗಳಿಂದ ಸುರಿಯುತ್ತಿರುವ ಮಕರಂದ ಪ್ರವಾಹಗಳು, ಎಲ್ಲೆಲ್ಲಿಯೂ ಫಲಗಳೂ ಪಲ್ಲವಗಳೂ, ಎಲ್ಲೆಲ್ಲಿಯೂ ವಾಸನಾಪೂರ್ಣವಾದ ಪುಷ್ಪರಜಸ್ಸುಗಳೂ ತುಂಬಿರಲು ಆ ಮರವು ಬಹಳ ವಿಚಿತ್ರವಾಗಿತ್ತು.

೧೩. ಅದರ ಪಕ್ಕಗಳಲ್ಲಿಯೂ ಗುತ್ತಿಗಳಲ್ಲಿಯೂ ಕೊಂಬೆಗಳಲ್ಲಿಯೂ ಎಲೆ

ನಿಶಾನಾಥಕಲಾಖಂಡಮೃಣಾಲಶಕಲೈರ್ಧಿತಾನ್ ।
ಅರ್ಜುನಾಂಭೋಜಿನೀಕಂದಕವಲಾನ್ಬ್ರಹ್ಮಸಾರಸಾನ್ ॥ ೧೪ ॥

ವಿರಂಚೇರಥ ಹಂಸಾನಾಂ ಪೋತಕಾನ್ಸಾಮಗಾಯಿನಃ ।
ಓಂಕಾರವೇದಸುಹೃದೋ ಬ್ರಹ್ಮವಿದ್ಯಾನುಶಾಸನಾನ್ ॥ ೧೫ ॥

ಉದ್ಗೀರ್ಣಮಂತ್ರನಿಚಯಾನ್ಸ್ವಾಹಾಕಾರನಿಭಸ್ವನಾನ್ ।
ಅಸ್ಥಿನೈಕತಡಿತ್ಪುಂಜನೀಲಮೇಘಸಮೋಪಮಾನ್ ॥ ೧೬ ॥

ದೇವೈರ್ನಿರೀಕ್ಷಿತಾನ್ನಿತ್ಯಂ ಯಜ್ಞವೇದಿಲತಾದಲಾನ್ ।
ಶುಕಾನ್ಕಾರ್ಶಾನವಾನ್ಶ್ಯಾಮಾನ್ ಶಿರ್ಶಿಖಿಶಿಖಾಶಿಖಾನ್ ॥ ೧೭ ॥

ಗಳಲ್ಲಿಯೂ ಪರ್ವಗಳಲ್ಲಿಯೂ ಹೂವುಗಳಲ್ಲಿಯೂ ಹಕ್ಕಿಗಳು ಮನೆಮಾಡಿಕೊಂಡು ಸುಖವಾಗಿರುವುದನ್ನು ಕಂಡೆನು.

೧೪ ಅಲ್ಲಿ ಚಂದ್ರಮಂಡಲದ ಕಲಾಖಂಡಗಳಂತಿರುವ ತಾವರೆಯ ದಂಟುಗಳ ತುಂಡುಗಳಿಂದ ವರ್ಧಿತಗಳಾಗಿ, ಬಿಳಿಯ ಕಮಲಗಳ ಗೆಡ್ಡೆಗಳನ್ನು ಮಾತ್ರ ತಿನ್ನುವ ಬ್ರಹ್ಮವಾಹನಗಳಾದ ಹಂಸಗಳನ್ನು ಕಂಡೆನು.

೧೫. ಆ ಬ್ರಹ್ಮಹಂಸಗಳ ಸಂತತಿಗಳು ಸಾಮಗಾನ ಮಾಡುತ್ತಿದ್ದುವು. ಪ್ರಣವದ ಮತ್ತು ವೇದಗಳ ರಹಸ್ಯಗಳನ್ನೆಲ್ಲ ಬಲ್ಲ ಆ ಮರಿಗಳು ಬ್ರಹ್ಮವಿದ್ಯೆಯನ್ನು ಅಧ್ಯಯನ ಮಾಡುತ್ತಿದ್ದುವು

೧೬-೧೭. ಸ್ವಾಹಾಕಾರವನ್ನು ಉಚ್ಚರಿಸುವಾಗ ಹೊರಡುವ ಮನೋಹರವಾದ ಧ್ವನಿಯಂತೆ ಧ್ವನಿಯುಳ್ಳವಾಗಿ, ಮಂತ್ರಪಟಲಗಳನ್ನು ಉಚ್ಚೈಃ ಪಾಠ ಮಾಡುವವುಗಳಾಗಿ, ಬೆಳ್ಳಗಿರುವ ಬೇಕಾದಷ್ಟು ಮಿಂಚಿನ ಬಳ್ಳಿಗಳು ಉಳ್ಳ ನೀಲ ಮೇಘಗಳೋ ಎಂಬಂತಿರುವ, ಯಜ್ಞಕುಂಡಗಳ ಮೇಲೆ ಹರಡಿರುವ ಹಸಿರು ಬಣ್ಣದ ಚಿಗುರು ದರ್ಭೆಗಳಂತಿದ್ದು, ದಿನದಿನವೂ ದೇವ ದೇವತೆಗಳ ದರ್ಶನವನ್ನು ಪಡೆಯುವ, ಅಗ್ನಿದೇವನ ಬಳಗವಾದ, ಗಿಣಿಗಳನ್ನೂ ಅವುಗಳ ಗರಿಕೆಯ ಬಣ್ಣದ ಮರಿಗಳನ್ನೂ ಅಗ್ನಿಶಿಖೆಯಂತೆ ಮೆರೆಯುವ ಶಿಖೆಯುಳ್ಳ ನವಿಲುಗಳನ್ನು ಕಂಡೆನು.

ಗೌರೀರಕ್ಷಿತಬರ್ಹೌಘಾನ್ಕೌಮಾರಾನ್ವರಬರ್ಹಿಣಃ |
ಸ್ಕಂದೋಪನ್ಯಸ್ತನಿಃಶೇಷಶೈವವಿಜ್ಞಾನಕೋವಿದಾನ್ || ೧೮ ||

ವ್ಯೋಮ್ನೀವಜಾತನಷ್ಟಾನಾಂ ಮಹತಾಂ ವ್ಯೋಮಪಕ್ಷಿಣಾಂ |
ಬಂಧೂನಾಬದ್ಧಶಿಲಯಾ್ ಶರದಭ್ರಸಮಾಕೃತೀನ್ || ೧೯ ||

ವಿರಂಚಿಹಂಸಜಾನನ್ಯಾನನ್ಯಾನಗ್ನಿಶುಕೋದ್ಭವಾನ್ |
ಕೌಮಾರಬರ್ಹಿಜಾನನ್ಯಾನನ್ಯಾನಂಬರಪಕ್ಷಿಜಾನ್ || ೨೦ ||

ದ್ವಿತುಂಡಾಂಶ್ಚ ಭರದ್ವಾಜಾನ್ಹೇಮಚೂಡಾನ್ವಿಹಂಗಮಾನ್ |
ಕಲವಿಂಕಬಲಾನ್ಗೃಧ್ರಾನ್ಕೋಕಿಲಾನ್ಕ್ರೌಂಚಕುಕ್ಕುಟಾನ್ || ೨೧ ||

ಭಾಸಚಾಷಬಲಾಕಾದೀನ್ಬಹೂನನ್ಯಾಂಶ್ಚ ರಾಘವ |
ಭೂತೌಘಂ ಜಗತೀವಾಹಂ ದೃಷ್ಟವಾಂಸ್ತತ್ರ ಪಕ್ಷಿಣಃ || ೨೨ ||

---

೧೮ ಆ ನವಿಲುಗಳೆಲ್ಲವೂ ಕುಮಾರಸ್ವಾಮಿಯವು. ಆ ಶ್ರೇಷ್ಠ ಜಾತಿಯ ನವಿಲುಗಳ ಬಾಲಗಳನ್ನು ಗೌರೀದೇವಿಯು ಪ್ರೀತಿಯಿಂದ ರಕ್ಷಿಸುವಳು ಆ ಹಕ್ಕಿಗಳಿಗೆ ಸ್ಕಂದಸ್ವಾಮಿಯು ಶೈವವಿಜ್ಞಾನವನ್ನು ಪೂರ್ಣವಾಗಿ ಉಪದೇಶಮಾಡಿ ಅವನ್ನು ವಿದ್ವಾಂಸರನ್ನು ಮಾಡಿರುವನು.

(ಮೇಘಸಂದೇಶದಲ್ಲಿರುವ 'ಪುತ್ರಪ್ರೇವಣ್ಣಾ—ಎಂಬ ಶ್ಲೋಕವನ್ನು ನೋಡಿ. ಯೋಗವಾಸಿಷ್ಠವು ಕಾಲಿದಾಸನ ಈಚೆಯದಿರಬಹುದೋ ?)

೧೯-೨೦. ಆಕಾಶದಲ್ಲಿ ಹುಟ್ಟಿ ಆಕಾಶದಲ್ಲಿಯೇ ಸಾಯುವ ದೊಡ್ಡ ದೊಡ್ಡ ವ್ಯೋಮ ಪಕ್ಷಿಗಳನ್ನೂ, ಅವುಗಳಿಗೆ ಬಂಧುಗಳಾಗಿ, ಎತ್ತರವಾದ ಪ್ರದೇಶದಲ್ಲಿ ಗೂಡು ಕಟ್ಟಿಕೊಂಡಿರುವ ಶರತ್ಕಾಲದ ಮೋಡಗಳಂತೆ ಬೆಳ್ಳಗಿರುವ ಬ್ರಹ್ಮ ಹಂಸಗಳ ಸಂತಾನಗಳನ್ನೂ, ಹಾಗೆಯೇ ಅಗ್ನಿ ಶುಕ ಸಂತಾನಗಳನ್ನೂ, ಕುಮಾರಸ್ವಾಮಿಯ ಮಯೂರಗಳ ಸಂತಾನಗಳನ್ನೂ, ವ್ಯೋಮಪಕ್ಷಿಗಳ ಸಂತಾನಗಳನ್ನೂ ಕಂಡೆನು

(ಈಜಿಪ್ಟ್, ಅರಬ್ ದೇಶಗಗಳಲ್ಲಿ ಹ್ಯೂಮ ಎಂಬ ಪಕ್ಷಿಯ ಪ್ರಸಿದ್ಧಿಯುಂಟು. ಅದು ಹೀಗೇ ಆಕಾಶದಲ್ಲಿ ಹುಟ್ಟಿ, ಆಕಾಶದಲ್ಲಿಯೇ ಸಾಯುವುದೆಂದೂ ಪ್ರತೀತಿ.)

೨೧-೨೨. ಎರಡು ಕೊಕ್ಕಿನ ಹಕ್ಕಿಗಳನ್ನೂ ಭರದ್ವಾಜ, ಹೇಮಚೂಡ,

ದಕ್ಷಿಣಸ್ಕಂಧಶಾಖಾಯಾಂ ಸ್ಥಿತಾಯಾಂ ವೈ ದವೀಯಸಿ |
ಅಥಾಹಂ ದೃಷ್ಟವಾರ್ನಷ್ಟಪಾತ್ರಾಯಾಮಂಬರಸ್ಥಿತಃ || ೨೩ ||

ಕಾಲಾ ಕಾಕೋಲವಲಯಂ ಮಂಜರೀಜಾಲಮಾಲಿತಂ |
ಲೋಕಾಲೋಕಾಚಲೇರಣ್ಯೇ ಕಲ್ಪಾಭ್ರೌಘಮಿವ ಸ್ಥಿತಂ || ೨೪ ||

ತತ್ರ ಪಶ್ಯಾಮ್ಯಹಂ ಯಾವದೇಕಾಂತೇ ಸ್ಕಂಧಕೋಟರೇ |
ವಿಚಿತ್ರಕುಸುಮಾಸ್ತೀರ್ಣೇ ವಿವಿಧಾಮೋದಶಾಲಿನಿ || ೨೫ ||

ಪುಣ್ಯಕೃದ್ಯೋಷಿತಾಂ ಸ್ವರ್ಗೇ ಪ್ರಿಯಸ್ತಬಕವಾಸಿತಾಃ |
ಆಪರಿಕ್ಷುಭಿತಾಕಾರಾಃ ಸಭಾಯಾಂ ವಾಯಸಾಃ ಸ್ಥಿತಾಃ || ೨೬ ||

ವಿಭೇದ್ಯಮೇಘೌ ವಾತೇನ ಸಮೇನೇವಾಪಸಾರಿತಾಃ |
ತೇಷಾಂ ಮಧ್ಯೇ ಸ್ಥಿತಃ ಶ್ರೀಮಾನ್ ಭುಶುಂಡಃ ಪ್ರೋನ್ನತಾಕೃತಿಃ || ೨೭ ||

ಹಕ್ಕಿಗಳನ್ನೂ; ಕಲವಿಂಕ, ಗೃಧ್ರ, ಕೋಕಿಲ, ಕ್ರೌಂಚ, ಕುಕ್ಕುಟಗಳನ್ನೂ; ಭಾಸ, ಚಾಕ್ಷ, ಬಲಾಕಾ-ಮೊದಲಾದ ಇನ್ನೂ ಅನೇಕ ಜಾತಿಯ ಹಕ್ಕಿಗಳನ್ನೂ ಜಗತ್ತಿನಲ್ಲಿರುವ ಇನ್ನೂ ಅನೇಕ ಪ್ರಾಣಿಗಳನ್ನೂ ಅಲ್ಲಿ ನೋಡಿದೆನು.

೨೩-೨೪. ಆ ಮರದಲ್ಲಿ ದಕ್ಷಿಣ ದಿಕ್ಕಿಗೆ ಹೋಗಿರುವ ದೊಡ್ಡ ದೊಡ್ಡ ಎಲೆಗಳುಳ್ಳ ಭಾರಿಯ ಕೊಂಬೆಯೊಂದರಲ್ಲಿ ಲೋಕಾಲೋಕ ಪರ್ವತದ ಅರಣ್ಯ ಪ್ರಾಂತದಲ್ಲಿ ನೆಲಸಿರುವ ಕಲ್ಪಮೇಘಗಳ ಸಮೂಹವೋ ಎಂಬಂತಿರುವ ಕಾಕೋಲಗಳ ಗುಂಪನ್ನು ಆಕಾಶದಲ್ಲಿಯೇ ನಿಂತು ನಾನು ನೋಡಿದೆನು.

(ಕಾಕೋಲಾ ದ್ರೋಣಕಾಕಾಖ್ಯಾಃ ಕಾಕಜಾತಿ ಭೇದಾಃ—ತಾ. ಪ್ರ.)

೨೫-೨೬. ಅಲ್ಲಿ, ಏಕಾಂತವಾಗಿ, ಆ ಮರದ ಕೊಂಬೆಯ ಪೊಟ್ಟರೆಯೊಂದರಲ್ಲಿ ನಾನಾವಿಧವಾದ ಹೂಗಳನ್ನು ಹರಡಿರಲು, ವಿವಿಧ ಪುಷ್ಪಗಂಧಗಳಿಂದ ಮನೋಹರವಾಗಿ, ಪುಣ್ಯವಂತೆಯರಾದ ಸ್ವರ್ಗವಾಸಿನಿಯರು ಬಯಸುವ ಭೋಗ ಮಂಟಪದಂತಿರುವ ಸಭಾಮಂದಿರದಲ್ಲಿ ಆ ಕಾಕಸಮೂಹವು, ಹೂಮಾಲೆಗಳನ್ನು ಧರಿಸಿಕೊಂಡು ಶಾಂತ ಚಿತ್ತವಾಗಿ ಕುಳಿತಿರುವುದನ್ನು ಕಂಡೆನು.

೨೭ ಆ ವಾಯಸಗಳು ಮೇಘಗಳನ್ನು ವಾಯುವಿನಿಂದ ಭೇಧಿಸಿ, ಅತ

ಮಧ್ಯೇ ಚ ಕಾಚಖಂಡಾನಾಮಿಂದ್ರನೀಲ ಇವೋನ್ನತಃ ।
ಪರಿಪೂರ್ಣಮನಾ ಮಾನೀ ಸಮಃ ಸರ್ವಾಂಗಸುಂದರಃ ॥ ೨೮ ॥

ಪ್ರಾಣಸ್ಪಂದಾವಧಾನೇನ ನಿತ್ಯಮಂತರ್ಮುಖಃ ಸುಖೀ ।
ಚಿರಂಜೀವೀತಿ ವಿಖ್ಯಾತಶ್ಚಿರಜೀವಿತಯಾ ತಯಾ ॥ ೨೯ ॥

ಜಗದ್ವಿದಿತದೀರ್ಘಾಯುರ್ಭುಶುಂಡ ಇತಿ ವಿಶ್ರುತಃ ।
ಯುಗಾಗಮಾಪಾಯದಶಾದರ್ಶನಪ್ರೌಢಮಾನಸಃ ॥ ೩೦ ॥

ಪ್ರತಿಕಲ್ಪಂ ಚ ಗಣಯನ್ಭಿನ್ನಶ್ಚಕ್ರಪರಂಪರಾಂ ।
ಜನ್ಮನಾಂ ಲೋಕಪಾಲಾನಾಂ ಶರ್ವಶಕ್ರಮರುತ್ವತಾಂ ॥ ೩೧ ॥

ತಳ್ಳಿ ಕುಳಿತಂತೆ ಕುಳಿತಿದ್ದುವು. ಆ ಕಾಗೆಗಳ ಬಳಗದ ನಡುವೆ, ಎತ್ತರವಾಗಿರುವ ಭುಶುಂಡನು ಕುಳಿತಿದ್ದನು.

೨೮. ಕಾಚಮಣಿಗಳ ಗುಂಪಿನಲ್ಲಿ ಇಟ್ಟಿರುವ ಎತ್ತರವಾದ ಇಂದ್ರನೀಲವೋ ಎಂಬಂತೆ, ಪ್ರಸನ್ನಚಿತ್ತನೂ, ಮಾನಯೋಗ್ಯನೂ, ಸಮವಾಗಿ ಸುಂದರವಾಗಿರುವ ಸರ್ವಾಂಗಗಳಿಂದ ಸಂಪನ್ನನೂ ಆಗಿ ಕುಳಿತಿದ್ದನು.

೨೯. ಶ್ವಾಸವನ್ನು ನಿರೋಧಮಾಡಿ, ಸದಾ ಅಂತರ್ಮುಖಿಯಾಗಿ, ಬ್ರಹ್ಮ ಸುಖವನ್ನು ಅನುಭವಿಸುತ್ತ, ಚಿರಂಜೀವಿಯೆಂಬ ಪ್ರಸಿದ್ಧಿಯನ್ನು ಪಡೆದ ಚಿರಂಜೀವಿಯೇ ಆಗಿರುವ (ಆತನನ್ನು ಕಂಡೆನು.)

೩೦. ಜಗತ್ತಿಗೆಲ್ಲ ತಿಳಿದಂತೆ ದೀರ್ಘಾಯುವಾಗಿ ಭುಶುಂಡನೆಂದು ಪ್ರಖ್ಯಾತನಾಗಿ, ಯುಗಗಳು ಮರಳಿ ಮರಳಿ ಬಂದು ಬಂದು ಹೋಗುವುದನ್ನು ನೋಡಿ ನೋಡಿ, ಸಂತೃಪ್ತಮನಸ್ಸುಳ್ಳವನಾತನು.

೩೧. ಆತನು ಕಲ್ಪಕಲ್ಪದಲ್ಲಿಯೂ ಚಕ್ರಪರಂಪರೆಗಳಂತೆ ಬಂದು ಬಂದು ಹೋಗುವ, ರುದ್ರ, ಇಂದ್ರ ಮೊದಲಾದ ಲೋಕಪಾಲರುಗಳ ಜನ್ಮಗಳನ್ನು ಲೆಕ್ಕ ಮಾಡಿ ಮಾಡಿ ಆಯಾಸ ಪಟ್ಟಿರುವನು.

ಸಂಸ್ಮರ್ತಾ ಸಮತೀತಾನಾಂ ಸುರಾಸುರಮಹೀಭೃತಾಂ ।
ಪ್ರಸನ್ನಗಂಭೀರಮನಾಃ ಪೇಶಲಃ ಸ್ನಿಗ್ಧಮುಗ್ಧವಾಕ್ ॥ ೩೨ ॥

ಅವ್ಯಕ್ತವಕ್ತಾ ವಿಜ್ಞಾತಾ ನಿರ್ಮಮೋ ನಿರಹಂಕೃತಿಃ ।
ಸುಹೃದ್ಬಂಧುಸ್ತಥಾ ಮಿತ್ರಂ ಮೃತ್ಯುಪುತ್ರೋ ಗುರುಪ್ರಭುಃ ॥ ೩೩ ॥

ಸರ್ವದಾ ಸರ್ವಥಾ ಸತ್ಯಂ ಸರ್ವಂ ಸರ್ವಸ್ಯ ಸಂಸ್ತವೇ ॥ ೩೪ ॥

ಸೌಮ್ಯಃ ಪ್ರಸನ್ನಮಧುರೋ ರಸವಾನ್ಮಹಾತ್ಮಾ
ಹೃದ್ಯಃ ಸರೋವರ ಇವಾಂತರಖಂಡಶೈತ್ಯಃ ।
ಹೃತ್ಪುಂಡರೀಕಕುಹರಂ ವ್ಯವಹಾರವೇತ್ತಾ
ಗಾಂಭೀರ್ಯಮಚ್ಛಮಜಹತ್ಪ್ರಕಟಾಶಯಶ್ರೀಃ ॥ ೩೫ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ದೇವದೂತೋಕ್ತೇ ಮೋಕ್ಷೋಪಾಯೇಷು ನಿರ್ವಾಣಪ್ರಕರಣೇ ಭುಶುಂಡೋಪಾಖ್ಯಾನೇ "ಭುಶುಂಡ ದರ್ಶನಂ" ನಾಮ ಪಂಚದಶಃ ಸರ್ಗಃ

---

೩೨. ಕಳೆದುಹೋಗಿರುವ ಸುರ, ಅಸುರ ಚಕ್ರವರ್ತಿಗಳನ್ನೆಲ್ಲಾ ಬಲ್ಲವನಾತನು. ಆತನು ಪ್ರಸನ್ನವೂ ಗಂಭೀರವೂ ಆದ ಮನಸ್ಸುಳ್ಳವನು. ಸೌಂದರ್ಯ ಸಂಪನ್ನನು. ಸ್ನೇಹಸಂಪನ್ನವೂ ಸರಳವೂ ಆದ ಮಾತಿನವನು.

(ಪೇಶಲಃ ಚತುರಃ—ತಾ. ಪ್ರ.)

೩೩-೪. ಎಲ್ಲರಿಗೂ ತಿಳಿಯದಂತಹ ಸೂಕ್ಷ್ಮವಾದ ಅರ್ಥಗಳನ್ನೂ ಹೇಳ ಬಲ್ಲವನೂ, ಅಂತಹ ಸೂಕ್ಷ್ಮಾರ್ಥಗಳನ್ನೂ ತಿಳಿಯಬಲ್ಲವನೂ, ಮಮಕಾರ ಅಹಂಕಾರಗಳಿಲ್ಲದವನೂ, ಯಾವಾಗಲೂ, ಎಲ್ಲ ವಿಧದಲ್ಲೂ (ಒಳ್ಳೆಯದನ್ನೇ ಆಶಿಸುವ) ಸುಹೃತ್ತಾಗಿ, (ಒಳ್ಳೆಯದನ್ನೇ ಮಾಡುವ) ಬಂಧುವಾಗಿ, ಮಿತ್ರನಾಗಿ, ಮೃತ್ಯುವಿಗೂ ಮಗನಂತೆ ಪ್ರಿಯನಾಗಿ, ದೇವಗುರುವಿಗೂ (ಜ್ಞಾನವಿಷಯದಲ್ಲಿ) ಪ್ರಭುವಾಗಿ, ಹೊಗಳಬೇಕಾದ ಸಂದರ್ಭದಲ್ಲಿಯೂ ಸತ್ಯವನ್ನು ಬಿಡದವನಾಗಿ (ಆತನು ಇರುವನು.)

೩೫. ಆತನು ಸರೋವರದಂತೆ ತನ್ನೊಳಗೆ ಅಖಂಡವಾಗಿರುವ ಶೈತ್ಯ (ತಂಪು, ಶಾಂತಿ) ವನ್ನು ಪಡೆದಿರುವನು. ಸೌಮ್ಯನಾಗಿರುವನು. ಪ್ರಸನ್ನನೂ ಮಧು

ರನೂ ಆಗಿ ಯಾವಾಗಲೂ ರಸಪೂರ್ಣ ಆಗಿರುವನು: (ರಸ=ಜಲ, ಸಂತೋಷ) ಮಹಾತ್ಮನು: ಸರ್ವರಿಗೂ ಬೇಕಾದವನು: ಹೃದಯದಲ್ಲಿರುವ ಪುಂಡರೀಕದಲ್ಲಿ ನೆಲಸಿರುವ ಮನಸ್ಸುಳ್ಳವನು. (ಸರೋವರದ ಮಧ್ಯದಲ್ಲಿ ತಾವರೆಗಳ ಗೆಡ್ಡೆಗಳಿರುವ ಚೀಲವಿರುವುದು.) ಪ್ರವೃತ್ತಿ ನಿವೃತ್ತಿರೂಪ ವ್ಯವಹಾರಗಳೆರಡನ್ನೂ ಬಲ್ಲವನು. (ಸರೋವರವು ವಿ-ಪಕ್ಷಿಗಳ, ಆವಹಾರ-ವಿಶ್ರಾಂತಿಗೆ ವೇತ್ತಾ ಅವಕಾಶಕೊಡುವುದು.) ಸ್ವಚ್ಛವಾದ, ಗಾಂಭೀರ್ಯವನ್ನು ಬಿಡದ, ತನ್ನ ಹೃದಯದಲ್ಲಿರುವ ಆಶಯವನ್ನು ಸ್ಪಷ್ಟವಾಗಿ ತೋರಿಸಿಕೊಳ್ಳುವವನೂ ಆಗಿದ್ದನು.

(ಭುವನೇಷು ಸರ್ವೇಷು ಸುಖೇನ ಜಯತ ಇತಿ ಭುಶುಂಡಃ ಎಂದು ಲಘು ಯೋಗವಾಸಿಷ್ಠ ವ್ಯಾಖ್ಯಾನಕಾರರು ಹೇಳಿದ್ದಾರೆ.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ ನಿರ್ವಾಣಪ್ರಕರಣದ ಭುಶುಂಡೋಪಾಖ್ಯಾನದಲ್ಲಿ "ಭುಶುಂಡ ದರ್ಶನ" ಎಂಬ ಹದಿನೈದನೆಯ ಸರ್ಗವು.

ಷೋಡಶಃ ಸರ್ಗಃ

ಶ್ರೀವಸಿಷ್ಠ ಉವಾಚ—

ಅಥ ತಸ್ಯಾಹಮುಪತಂ ದೀಪ್ಯಮಾನವಪುಃ ಪುರಃ ।
ಕಿಂಚಿದ್ವಿಕ್ಷೋಭಿತಸಭಃ ಖಾನ್ನಕ್ಷತ್ರಮಿವಾಚಲೇ ॥ ೧ ॥

ಚುಕ್ಷೋಭ ವಾಯಸಾಸ್ಥಾನಂ ನಿಲೋತ್ಪಲಸರಃ ಸಮಂ ।
ಮತ್ಪಾತಮಂದವಾತೇನ ಭೂಕಂಪೇನೇವ ಸಾಗರಃ ॥ ೨ ॥

ಅಶಂಕಿತಮಪಿ ಪ್ರಾಪ್ತಂ ದರ್ಶನಾನ್ಮಾಮನಂತರಂ ।
ಭುಶುಂಡಸ್ತು ವಸಿಷ್ಠೋಽಯಂ ಪ್ರಾಪ್ತ ಇತ್ಯವಬುದ್ಧವಾನ್ ॥ ೩ ॥

ಪತ್ರಪುಂಜಾತ್ಸಮುತ್ತಸ್ಥೌ ಮೇಘಶಾವ ಇವಾಚಲಾತ್ ।
ಹೇ ಮುನೇ ಸ್ವಾಗತಮಿತಿ ಪ್ರೋವಾಚ ಮಧುರಾಕ್ಷರಂ ॥ ೪ ॥

ಹದಿನಾರನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು—ಅನಂತರ, ನಾನು ಆಕಾಶದಿಂದ ಬೆಟ್ಟದ ಮೇಲೆ ಬೀಳುವ ನಕ್ಷತ್ರದಂತೆ ಪ್ರಕಾಶಮಾನವಾದ ದೇಹವುಳ್ಳವನಾಗಿ, ಆತನ ಮುಂದೆ ಇಳಿದೆನು. ಆ ಕಾಕ ಸಭೆಯಲ್ಲಿ ಅದರಿಂದ ಕೊಂಚ ಗದ್ದಲವಾಯಿತು.

೨. ನಾನು ಅಲ್ಲಿ ಇಳಿಯಲು ವಾಯುವಿನಿಂದ ಕ್ಷುಬ್ಧವಾದ ಕನ್ನೈದಿಲೆಗಳ ಕೊಳದಂತೆಯೂ, ಭೂಕಂಪದಿಂದ ಕ್ಷುಬ್ಧವಾದ ಸಾಗರದಂತೆಯೂ ಆ ವಾಯಸ ಸ್ಥಾನವು ಕೊಂಚ ಕ್ಷುಬ್ಧವಾಯಿತು.

೩. ನಿಶ್ಶಂಕೆಯಿಂದ ಎದುರಿಗೆ ಬಂದು ಇಳಿದ ನನ್ನನ್ನು ನೋಡಿ ಆ ಭುಶುಂಡನು "ಈತನು ವಸಿಷ್ಠನು ಬಂದಿರುವನು" ಎಂದು ತಿಳಿದುಕೊಂಡನು.

೪. ಕೂಡಲೇ ತಾನು ಕುಳಿತಿದ್ದ ಪತ್ರಪುಂಜಾಸನದಿಂದ ಬೆಟ್ಟದ ಮೇಲಿ

ಸಂಕಲ್ಪಮಾತ್ರಜಾತಾಭ್ಯಾಂ ಕರಾಭ್ಯಾಂ ಕುಸುಮಾಂಜಲಿಂ ।
ಮಹ್ಯಮಾಶು ತದೈವಾದಾನ್ಮೇಘೋ ಹೈಮಮಿವೋತ್ಕರಂ ॥ ೫ ॥

ಇದಮಾಸನಮಿತ್ಯುಕ್ತ್ವಾ ನವಂ ಕಲ್ಪತರುಚ್ಛದಂ ।
ಉಪಾನೀತವತಿ ತ್ಯಕ್ತಭೃತ್ಯೇ ವಾಯಸನಾಯಕೇ ॥ ೬ ॥

ಭುಶುಂಡ ಉತ್ಥಿತೇ ಸ್ವೀಯಕಲಾಪಕ್ಷೇಷು ಪಕ್ಷಿಷು ।
ಉಪವಿಷ್ಟಂ ಮುನಿಂ ದೃಷ್ಟ್ವಾ ಸ್ವಾಸನೋನ್ಮುಖದೃಷ್ಟಿಷು ॥ ೭ ॥

ಸಮಂತಾತ್ಖಗವೃಂದೇನ ಭುಶುಂಡೇನ ಸಮಂ ತತಃ ।
ತಸ್ಮಿನ್ಸ್ವಲ್ಪಲತಾಪುಂಜೇ ಹ್ಯುಪವಿಷ್ಟೋಽಹಮಾಸನೇ ॥ ೮ ॥

ಅರ್ಘ್ಯಪಾದ್ಯಾದಿ ಸಂಪಾದ್ಯ ಭುಶುಂಡಸ್ತುಷ್ಟಮಾನಸಃ ।
ಮಾಮುವಾಚ ಮಹಾತೇಜಾಃ ಸೌಹೃದಾನ್ಮಧುರಾಕ್ಷರಂ ॥ ೯ ॥

ನಿಂದ ಏಳುವ ಮೋಡದ ಮರಿಯಂತೆ ಮೇಲೆದ್ದು, "ಎಲೈ ಮುನಿಯೇ, ಸ್ವಾಗತವು, ಬಾ" ಎಂದು ಮಧುರವಾಗಿ ನುಡಿದನು.

೫. ಮೇಘವು ಕೈಯೆತ್ತಿ ಹಿಮದ ಅರ್ಘ್ಯವನ್ನು ಕೊಡುವಂತೆ, ಆತನು ತನ್ನ ಸಂಕಲ್ಪಮಾತ್ರದಿಂದಲೇ ಹುಟ್ಟಿದ ಕೈಗಳಿಂದ ನನಗೆ ಕುಸುಮಾಂಜಲಿಯನ್ನು ಕೊಟ್ಟನು.

೬. ವಾಯಸ ನಾಯಕನಾದ ಭೃತ್ಯನೊಬ್ಬನನ್ನು ಕಳುಹಿಸಿ ಕಲ್ಪತರುವಿನ ಕೊನೆಯೊಂದನ್ನು ತರಿಸಿ, ಆಸನವನ್ನಾಗಿ ಕೊಟ್ಟನು.

೭. ಭುಶುಂಡನೇಳುತ್ತಲೂ, ತಮ್ಮ ತಮ್ಮ ದೇಹಕಾಂತಿಗಳನ್ನು ಪ್ರಸರಿಸುತ್ತ ಪಕ್ಷಿಗಳೂ ಎದ್ದುವು. ನಾನು ಕುಳಿತುಕೊಳ್ಳಲು ತಾವೂ ಕುಳಿತುಕೊಳ್ಳಲು ಮನಸ್ಸುಮಾಡಿದುವು.

೮. ನಾನು ಕುಳಿತುಕೊಳ್ಳಲು, ಆ ವಾಯಸಗಳೆಲ್ಲವೂ ಭುಶುಂಡನೊಡನೆಯೇ ಕಲ್ಪವೃಕ್ಷ ಕೋಟರದಲ್ಲಿ ಕುಳಿತುಕೊಂಡುವು

೯. ಅರ್ಘ್ಯಪಾದ್ಯಾದಿಗಳೆಲ್ಲವನ್ನೂ ನನಗೆ ಕೊಟ್ಟು ಪರಮಸಂತುಷ್ಟ ಮನ

ಭುಶುಂಡ ಉವಾಚ—

ಅಹೋ ಭಗವತಾಸ್ಮಾಕಂ ಪ್ರಸಾದೋ ದರ್ಶಿತಶ್ಚಿರಾತ್ ।
ದರ್ಶನಾಮೃತಸೇಕೇನ ಯತ್ಸಿಕ್ತಾಃ ಸದ್ದ್ರುಮಾ ವಯಂ ॥ ೧೦ ॥

ಮತ್ಪುಣ್ಯಚಿರಸಂಭಾರಪ್ರೇರಿತೇನ ತ್ವಯಾಧುನಾ ।
ಮುನೇ ಮಾನ್ಯೈಕಮಾನ್ಯೇನ ಕುತಶ್ಚಾಗಮನಂ ಕೃತಂ ॥ ೧೧ ॥

ಕಚ್ಚಿದಸ್ಮಿನ್ಮಹಾಮೋಹೇ ಚಿರಂ ವಿಹರತಸ್ತವ ।
ಅಖಂಡಿತೈವ ಸಮತಾ ಸ್ಥಿತಾ ಚೇತಸಿ ಪಾವನೇ ॥ ೧೨ ॥

ಕಿಮರ್ಥಮದ್ಯಾಗಮನಕ್ಲೇಶೇನಾತ್ಮಾ ಕದರ್ಥಿತಃ ।
ವಚನಶ್ರವಣೋತ್ಕಾನಾಮಾಜ್ಞಾಂ ನೋ ವಕ್ತುಮರ್ಹಸಿ ॥ ೧೩ ॥

ಸ್ಕನಾಗಿ, ಆ ಮಹಾತೇಜಸ್ವಿಯು, ಪ್ರೀತಿಯಿಂದ, ಮಧುರವಾಗಿ ನನ್ನನ್ನು ಕುರಿತು ಹೀಗೆ ಹೇಳಿದನು :—

೧೦ ಭುಶುಂಡನು ಹೇಳಿದನು—ಬಹು ಕಾಲಕ್ಕೆ ಈಗ ಭಗವಂತನಾದ ನಿನ್ನ ಪ್ರಸಾದವು ಲಭಿಸಿತು. ನಾವು ಎಂಬ ಈ ಮರಗಳಿಗೆ ತಮ್ಮ ದರ್ಶನವೆಂಬ ಅಮೃತದ ಸೇಚನವು ದೊರೆಯಿತು.

೧೧. ಚಿರಕಾಲದಿಂದ ಸಂಪಾದಿಸಿದ ನನ್ನ ಪುಣ್ಯವು ನಿನ್ನನ್ನು ಇಲ್ಲಿಗೆ ಕರೆ ತಂದಿತು. ಮಾನ್ಯನಾದ ಮುನಿಯೆ, ಏಕಮಾನ್ಯನಾದ ನೀನು ಎಲ್ಲಿಂದ ಬಂದೆ?

೧೨. ಮಹಾಮೋಹ (ಕರ) ವಾದ ಈ ಜಗದ್ವ್ಯಾಪಾರದಲ್ಲಿ ಚಿರಕಾಲದಿಂದ ವ್ಯವಹಾರವೆಂಬ ವಿಹಾರವನ್ನು ಮಾಡುತ್ತಿರುವ ನಿನಗೆ, ಮನಸ್ಸಿನಲ್ಲಿ ಬ್ರಹ್ಮಭಾವವು ಅಖಂಡವಾಗಿ ಇರುವುದಷ್ಟೆ ?

೧೩. ಯಾವ ಕಾರ್ಯವನ್ನು ಕುರಿತು ನೀನು ಆಗಮನ ಮಾಡಿ ಆತ್ಮನಿಗೆ ಕ್ಲೇಶವನ್ನು ಕೊಟ್ಟು ಬಳಲಿಸಿದೆ? ನೀನು ಏನು ಹೇಳುವೆಯೋ ಕೇಳಬೇಕೆಂದು ಕುತೂಹಲಿಗಳಾಗಿರುವ ನಮಗೆ ನಿನ್ನ ಆಜ್ಞೆಯೇನೆಂಬುದನ್ನು ತಿಳಿಸು.

ತ್ವತ್ಪಾದದರ್ಶನಾದೇವ ಸರ್ವಂ ಜ್ಞಾತಂ ಮಯಾ ಮುನೇ ।
ತ್ವದಾಗಮನಪುಣ್ಯೇನ ವಯಮಾಯೋಜಿತಾಸ್ತ್ವಯಾ ॥ ೧೪ ॥

ಚಿರಂಜೀವಿತಚರ್ಚಾಭಿರ್ವಯಂ ವಃ ಸ್ಮೃತಿಮಾಗತಾಃ ।
ತೇನೇದಮಾಸ್ಪದಂ ಪಾದೈಸ್ತ್ವಂ ಪವಿತ್ರಿತವಾನಯಂ ॥ ೧೫ ॥

ಜ್ಞಾತತ್ವದಾಗಮೋಽಪ್ಯೇವಂ ತ್ವಾಂ ಪೃಚ್ಛಾಮೀಹ ಯನ್ಮುನೇ ।
ಭವದ್ವಾಕ್ಯಾಮೃತಾಸ್ವಾದವಾಂಛಿತಂ ಪ್ರವಿಜೃಂಭತೇ ॥ ೧೬ ॥

ಇತ್ಯುಕ್ತವಾನಸೌ ಪಕ್ಷೀ ಭುಶುಂಡಶ್ಚಿರಜೀವಿತಃ ।
ತ್ರಿಕಾಲಾಮಲಸಂವೇದೀ ತತ್ರ ಪ್ರೋಕ್ತಮಿದಂ ಮಯಾ ॥ ೧೭ ॥

ಶ್ರೀವಸಿಷ್ಠ ಉವಾಚ—

ವಿಹಂಗಮ ಮಹಾರಾಜ ಸತ್ಯಮೇತತ್ತ್ವಯೋಚ್ಯತೇ ।
ದ್ರಷ್ಟುಮಭ್ಯಾಗತೋಽಸ್ಮ್ಯದ್ಯ ತ್ವಾಮೇವ ಚಿರಜೀವಿತಂ ॥ ೧೮ ॥

---

೧೪. ನಿನ್ನ ಪಾದಗಳ ದರ್ಶನವಾಗುತ್ತಿದ್ದ ಹಾಗೆಯೇ, ಎಲೆ ಮುನೀಂದ್ರನೆ, ನಾನು ಎಲ್ಲವನ್ನೂ ತಿಳಿದೆನು ನಿನ್ನ ಆಗಮನದಿಂದ ನಾವು ಪುಣ್ಯವಂತರಾದೆವು.

೧೫. ಚಿರಂಜೀವಿಗಳ ಕಥೆಯನ್ನು ಕೇಳುವ ಪ್ರಸಂಗದಲ್ಲಿ ನಮ್ಮ ನೆನೆಪು ನಿಮಗಾಯಿತು. ಆದರಿಂದ ನಿಮ್ಮ ಪಾದಗಳು ಇಲ್ಲಿಯವರೆಗೆ ಬೆಳೆದು ನಾವು ಪವಿತ್ರರಾದೆವು

೧೬. ನೀವು ಬಂದಿರುವುದೇಕೆ ಎಂಬುದನ್ನು ಬಲ್ಲೆನಾದರೂ, ನಿಮ್ಮ ವಾಕಾಮೃತವನ್ನು ಆಸ್ವಾದಿಸಬೇಕೆಂಬ ವಾಂಛೆಯು ಬಲವಾಗಿರುವುದರಿಂದ ನಿಮ್ಮನ್ನು ಕೇಳುತ್ತಿರುವೆನು.

೧೭. ತ್ರಿಕಾಲಜ್ಞನೂ ಚಿರಂಜೀವಿಯೂ ಆದ ಭುಶಂಡನು ಹೀಗೆ ಹೇಳಲು, ನಾನು ಹೀಗೆ ಹೇಳಿದೆನು.

೧೮. ವಿಹಂಗಮ ಮಹಾರಾಜ, ನೀನು ಹೇಳಿದುದೆಲ್ಲವೂ ನಿಜ. ಚಿರಂಜೀವಿಯಾದ ನಿನ್ನ ದರ್ಶನ ಮಾಡಬೇಕೆಂದು ಬಂದೆನು.

ಅಶೀತಲಾಂತಃಕರಣೋ ದಿಷ್ಟ್ಯಾ ಕುಶಲವಾನಸಿ ।
ಪತಿತೋಸಿ ನ ಬುದ್ಧಾತ್ಮ ಭೀಷಣಾಂ ಭವವಾಗುರಾಂ ॥ ೧೯ ॥

ತದೇತಂ ಸಂಶಯಂ ಛಿಂಧಿ ಭಗವನ್ಮಮ ಸತ್ಯತಃ ।
ಕಸ್ಮಿನ್ಕಾಲೇ ಭವಾನ್ ಜಾತೋ ಜ್ಞಾತಜ್ಞೇಯಃ ಕಥಂ ಭವಾನ್ ॥ ೨೦ ॥

ಕಿಯದಾಯುಶ್ಚ ತೇ ಸಾಧೋ ವೃತ್ತಂಸ್ಮರಸಿ ಕಿಂಚ ವಾ ।
ಕೇನಾಯಂ ವಾ ನಿವಾಸಸ್ತೇ ನಿರ್ದಿಷ್ಟೋ ದೀರ್ಘದರ್ಶಿನಃ ॥ ೨೧ ॥

ಭುಶುಂಡ ಉವಾಚ —

ಯತ್ಪೃಚ್ಛಸಿ ಮುನೇ ಸರ್ವಂ ತದಿದಂ ವರ್ಣಯಾಮ್ಯಹಂ ।
ಅನುದ್ವೇಗಿತಯಾ ಯತ್ನಾತ್ಕಥಾ ಶ್ರಾವ್ಯಾ ಮಹಾತ್ಮನಾ ॥ ೨೨ ॥

---

೧೯. ದೈವಕೃಪೆಯಿಂದ ನೀನು ಪ್ರಶಾಂತನಾಗಿ ಕುಶಲಿಯಾಗಿರುವೆ. ನೀನು ಪ್ರಬುದ್ಧನಾಗಿರುವೆಯಾಗಿ, ಸಂಸಾರವೆಂಬ ಬಲೆಗೆ ಸಿಕ್ಕದಿರುವೆ.

೨೦. ಆದರಿಂದ, ಎಲೈ ಭಗವಂತನೆ, ನನಗಿರುವ ಸಂಶಯವೊಂದನ್ನು ಪರಿಹರಿಸು. ನೀನು ಯಾವಕಾಲದಲ್ಲಿ ಹುಟ್ಟಿದೆ? ನೀನು ಬ್ರಹ್ಮವಿದ್ಯೆಯನ್ನು ಹೇಗೆ ಸಂಪಾದಿಸಿದೆ?

೨೧. ಎಲೇ ಸಾಧುವೆ, ನಿನ್ನ ವಯಸ್ಸು ಎಷ್ಟು? ಹಿಂದೆ ನಿನಗೆ ಏನೇನು ಆಯಿತು ಎಂಬುದೆಲ್ಲಾ ನೆನಪಿದೆಯೇ? ದೀರ್ಘದರ್ಶಿಯಾದ ನಿನ್ನನ್ನು ಇಲ್ಲಿರು ಎಂದು ಗೊತ್ತುಮಾಡಿದವರು ಯಾರು?

೨೨. ಭುಶುಂಡನು ಹೇಳಿದನು:—ಎಲೆ, ಮುನಿಯೆ, ನೀನು ಕೇಳಿದುದೆಲ್ಲವನ್ನು ಉದ್ವೇಗರಹಿತನಾಗಿ, ಕೊಂಚಶ್ರಮವಾದರೂ ವರ್ಣಿಸುವೆನು. ನೀನು ಅದನ್ನು ಕೇಳುವವನಾಗು.

ಯುಷ್ಮದ್ವಿಧಾಸ್ತ್ರಿಭುವನಪ್ರಭುಪೂಜ್ಯರೂಪಾ |
ಕರ್ಣಯಂತಿ ಯಮುದಾರಧಿಯೋ ಮಹಾಂತಃ ||
ತೇನಾಶುಭಂ ಪ್ರಕಥಿತೇನ ವಿನಾಶಮೇತಿ |
ಮೇಘಾಸ್ಪದೇನ ವಿಭವೇನ ಯಥಾರ್ಕತಾಪಃ || ೨೩ ||

ಇತ್ಯಾರ್ಷೇವಾಸಿಷ್ಠರಾಮಾಯಣೇ ವಾಲ್ಮೀಕೀಯೇ ದೇವದೂತೋಕ್ತೇ ಮೋಕ್ಷೋಪಾಯೇಷು ನಿರ್ವಾಣಪ್ರಕರಣೇ ಭುಶುಂಡೋಪಾಖ್ಯಾನೇ "ವಸಿಷ್ಠ ಭುಶುಂಡ ಸಮಾಯೋಗೋ" ನಾಮ ಷೋಡಶಃ ಸರ್ಗಃ

---

೨೩. ನಿಮ್ಮಂತಹವರು ಮೂರು ಲೋಕಗಳಿಗೂ ಅಧಿಪತಿಗಳಾದವರಿಗೂ ಪೂಜ್ಯರು. ನಿಮ್ಮಂತಹ ಮಹಾತ್ಮರೂ ಉದಾರಮತಿಗಳೂ (ನಮ್ಮಂತಹವರ) ಕಥೆಯನ್ನು ತಾಪವು ಕೇಳಿದರೆ. (ನಾವು ಕೇಳಿದರೆ) ಮೇಘ ವ್ಯಾಪಾರದಿಂದ ಸೂರ್ಯನ ಬಿಸಿಲು ಶಾಂತವಾಗುವಂತೆ, ಅಶುಭವು ಶಾಂತವಾಗುವುದು

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ ನಿರ್ವಾಣಪ್ರಕರಣದ ಭುಶುಂಡೋಪಾಖ್ಯಾನದಲ್ಲಿ "ವಸಿಷ್ಠಭುಶುಂಡ ಸಮಾಯೋಗ" ಎಂಬ ಹದಿನಾರನೆಯ ಸರ್ಗವು.

ಸಪ್ತದಶಃ ಸರ್ಗಃ

ಶ್ರೀವಸಿಷ್ಠ ಉವಾಚ—

ಅಥ ರಾಮ ಭುಶುಂಡೋಽಸೌ ನ ಪ್ರಹೃಷ್ಟೋ ನ ವಕ್ರಧೀಃ ।
ಸರ್ವಾಂಗಸುಂದರಃ ಶ್ಯಾಮಃ ಪ್ರಾವೃಷೀವ ಪಯೋಧರಃ ॥ ೧ ॥

ಸ್ನಿಗ್ಧಗಂಭೀರವಚನಃ ಸ್ಮಿತಪೂರ್ವಾಭಿಭಾಷಣಃ ।
ಕರಸ್ಥಬಿಲ್ವ ಫಲವತ್ಪ್ರತೋಲಿತ ಜಗತ್ತ್ರಯಃ ॥ ೨ ॥

ತೃಣವದ್ದೃಷ್ಟಸಕಲಃ ಪ್ರಮೇಯೀಕೃತಸಂಸೃತಿಃ ।
ಲೋಕಾಜವಂ ಜವೀಭಾವೇ ದೃಷ್ಟಜ್ಞಾನಪರಾವರಃ ॥ ೩ ॥

ಹದಿನೇಳನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು:—ರಾಮ, ಪ್ರಹೃಷ್ಟನೊ ವಕ್ರಬುದ್ಧಿಯು ಅಲ್ಲದೆ ಭುಶುಂಡನು ಸರ್ವಾಂಗ ಸುಂದರನು. ಮಳೆಗಾಲದ ಮೋಡದಂತೆ ಸುಶ್ಯಾಮವರ್ಣನು.

(ಪ್ರಹೃಷ್ಟಃ-ಇಷ್ಟಲಾಭ ಪ್ರಯುಕ್ತ ಹರ್ಷವಾ—ತಾ. ಪ್ರ.)

೨. ಆತನು ಸ್ನೇಹದಿಂದ, ಗಂಭೀರವಾಗಿ ಮಾತನಾಡುವನು. ನಗು ನಗುತ್ತ ತಾನೇ ಮೊದಲು ಮಾತನಾಡಿಸುವನು. ಅಂಗೈಯಲ್ಲಿರುವ ಬಿಲ್ವಫಲದಂತೆ ಜಗತ್ತ್ರಯಗಳನ್ನೂ ತೂಗಿ ನೋಡಿ ಬೆಲೆಕಟ್ಟಿದವನು.

೩. ಭೋಗವೆಲ್ಲವನ್ನು ತೃಣದಂತೆ ಕಂಡವನು. ಸಂಸಾರದ ಮೂಲವೇನು? ಇಲ್ಲಿಂದ ಪಾರಾಗುವುದು ಹೇಗೆ? ಎಂಬ ಎಲ್ಲವನ್ನೂ ಅರಿತವನು. ಲೋಕಗಳು ಭೋಗಕ್ಕಾಗಿ ಹೇಗೆ ಹಾತೊರೆಯುವುವೆಂಬುದನ್ನು ಬಲ್ಲನನು. ಬ್ರಹ್ಮಜ್ಞಾನ ಸಂಪನ್ನನು.

ಧೀರಸ್ಥಿರಮಹಾಕಾರೋ ವಿಶ್ರಾಂತಿಂ ಗತಮಂದರಃ |
ಪರಿಪೂರ್ಣಮನಾಃ ಶುದ್ಧಃ ಕ್ಷೀರಾರ್ಣವ ಇವಾಗತಃ ॥ ೪ ॥

ಪರಿವಿಶ್ರಾಂತಧೀಃ ಶಾಂತಃ ಪರಮಾನಂದಘೂರ್ಣಿತಃ |
ಆವಿರ್ಭಾವತಿರೋಭಾವತಜ್ಜ್ಞಃ ಸಂಸಾರಜನ್ಮನಾಂ ॥ ೫ ॥

ಸಂಭಷವರ್ಣನಾಭಿರಾಮಯಾ ಸಃ ಪ್ರಿಯಮಧುರೋಚಿತಗಾನಕೃದ್ವಾಕ್ಯಃ |
ಸ್ವಯಮಿವ ನವಮಾಶ್ರಿತಃ ಶರೀರಂ ಸಕಲಭಯಾಪಹರಂ ಪ್ರಹರ್ಷಯುಕ್ತಃ ॥ ೬ ॥

---

೪. ಕಡೆಯುವುದಕ್ಕಾಗಿ ಹಾಕಿದ್ದ ಮಂದರವನ್ನು ತೆಗೆದ ಮೇಲೆ ವಿಶ್ರಾಂತಿಯನ್ನು ಪಡೆದಿರುವ ಕ್ಷೀರಸಾಗರದಂತೆ ಧೀರನೂ ಸ್ಥಿರನೂ ಮಹಾಕಾರಣ ಪರಿಪೂರ್ಣಮನಸ್ಕನೂ ಶುದ್ಧನೂ ಆದವನು.

೫. ಹೊರಗೆ ನೋಡುವುದಕ್ಕೆ ಸಮಾಹಿತನೂ ಶಾಂತನೂ ಆಗಿರುವಂತೆ, ಅಂತರಂಗದಲ್ಲಿಯೂ ಬ್ರಹ್ಮಾನಂದ ಸಂಪನ್ನನು. ಸಂಸಾರಕ್ಕೆ ಬಂದಿರುವ ಬರುವ ಪ್ರಾಣಿಗಳ ಆಗಮನ, ನಿರ್ಗಮನಗಳನ್ನೆಲ್ಲ ಬಲ್ಲವನು.

೬. ಪ್ರಿಯವೂ ಮಧುರವೂ ಉಚಿತವೂ ಗಾನದಂತೆ ಹೃದಯಂಗಮವೂ ಆದ ಮಾತುಗಳನ್ನಾಡುತ್ತ ಪರಬ್ರಹ್ಮವೇ ಜಗತ್ತಿಗೆ ಅನುಗ್ರಹಮಾಡಲು ಹೊಸದೊಂದು ಅವತಾರವನ್ನೆತ್ತಿ ಬಂದಿರುವುದೋ ಎಂಬಂತೆ, ಆನಂದ ಪರಿಪೂರ್ಣನಾಗಿ, ತನ್ನ ಕಥೆಯನ್ನು ಹೇಳಲು ಆರಂಭಿಸಿ ಮನೋಹರನಾಗಿ ವಿರಾಜಿಸಿದನು.

ಇದಮುಮಲಗಿರಾ ಸಮೂಹ ಶುದ್ಧಮಮೃತಮನುಜ್ಝಿತಸಂಭ್ರಮಕ್ರಮೇಣ |
ಕಥಯಿತುಮಖಿಲಂ ನಿಜಂಸ್ವರೂಪಂ ಮಧುಪಮಿವಸ್ತನಿತೇನಮುಗ್ಧಮೇಘಃ || ೭ ||

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕಿಯೇ ದೇವದೂತೋಕ್ತೇ ಮೋಕ್ಷೋಪಾಯೇಷು
ನಿರ್ವಾಣ ಪ್ರಕರಣೇ ಭುಶುಂಡೋಪಾಖ್ಯಾನೇ "ಭುಶುಂಡ ಸ್ವರೂಪ ವರ್ಣನಂ"
ನಾಮ ಸಪ್ತದಶಃ ಸರ್ಗಃ

---

೭. ಯಾವುದೊಂದು ಉದ್ವೇಗವೂ ಇಲ್ಲದೆ, ಶ್ರದ್ಧಾವಚನಗಳಿಂದ ಶುದ್ಧವೂ ಅಮೃತದಂತೆ ಹೃದ್ಯವೂ ಆಗಿರುವ ತನ್ನ ಕಥೆಯೆಲ್ಲವನ್ನೂ ಹೇಳಲು, ಸುಂದರ ಮೇಘವು (ಪುಷ್ಪದಲ್ಲಿರುವ) ದುಂಬಿಯನ್ನು ಗುಡುಗಿನಿಂದ ಸಂಬೋಧಿಸುವಂತೆ, ನನ್ನನ್ನು ಸಂಬೋಧಿಸಿದನು.

(ತಥಾಚ ಪ್ರಾಗೇವ ಪ್ರಬುದ್ಧ ಬ್ರಹ್ಮಾನಂದ ರಸಿಕೇ ಮಯಿ, ತದುಕ್ತಿನೋಪದೇಶಃ ಕಿಂತ್ವನುವಾದ ಮಾತ್ರಮಿತಿ ಭಾವಃ—ತಾ.ಪ್ರ.)

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ
ನಿರ್ವಾಣಪ್ರಕರಣದ ಭುಶುಂಡೋಪಾಖ್ಯಾನದಲ್ಲಿ "ಭುಶುಂಡ ಸ್ವರೂಪ ವರ್ಣನ"
ಎಂಬ ಹದಿನೇಳನೆಯ ಸರ್ಗವು

ಅಷ್ಟಾದಶಃ ಸರ್ಗಃ

ಭುಶುಂಡ ಉವಾಚ,

ಅಸ್ತ್ಯಸ್ಮಿನ್ ಜಗತಿ ಶ್ರೇಷ್ಠಃ ಸರ್ವನಾಕನಿವಾಸಿನಾಂ |
ದೇವದೇವೋ ಹರೋ ನಾಮ ದೇವದೇವಾಧಿವಂದಿತಃ || ೧ ||

ಷಟ್ಪದಶ್ರೇಣಿನಯನಾ ಯಸ್ಯೋಚ್ಚಸ್ತಬಕಸ್ತನೀ |
ವಿಲಾಸಿನೀ ಶರೀರಾರ್ಧೇ ಲತಾ ಚೂತತರೋರಿವ || ೨ ||

ಹಿಮಹಾರಸಿತಾ ಯಸ್ಯ ಲಹರೀಸ್ತಬಕೋಜ್ಜಿತಾ |
ಆವೇಷ್ಟಿತಜಟಾಜೂಟಾ ಗಂಗಾಕುಸುಮಮಾಲಿಕಾ || ೩ ||

ಹದಿನೆಂಟನೆಯ ಸರ್ಗ

೧. ಶ್ರೀ ಭುಶುಂಡನು ಹೇಳಿದನು :—ಸರ್ವ ದೇವತೆಗಳಿಗೂ ಶ್ರೇಷ್ಠನಾಗಿ, ದೇವದೇವತೆಗಳೆಲ್ಲ ಅಭಿವಂದಿಸುವ, ಹರನೆಂದು ಪ್ರಸಿದ್ಧನಾದ ದೇವದೇವನು ಈ ಜಗತ್ತಿನಲ್ಲಿ ಉಂಟಲ್ಲವೆ ?

೨. ಆತನಿಗೆ ಶರೀರಾರ್ಧದಲ್ಲಿ ಭ್ರಮರ ಮಾಲೆಯಂತೆ ಮೆರೆಯುವ ನಯನಗಳೂ ಎತ್ತರವಾದ ಸ್ತನಮಂಡಲವೂ ಉಳ್ಳ, ಚೂತವೃಕ್ಷದ ಲತೆಯಂತೆ ಮೆರೆಯುವ ವಿಲಾಸವತಿಯಾದ ದೇವಿಯಿರುವಳು.

೩. ಆತನು, ಹಿಮಹಾರದಂತೆ ಶುಭ್ರವಾಗಿ ಲಹರಿಗಳೆಂಬ ಸ್ತಬಕಗಳಿಂದ ಚಿಮ್ಮುತ್ತ ಇರುವ ಗಂಗೆಯೆಂಬ ಕುಸುಮ ಮಾಲಿಕೆಯನ್ನು ಜಟಾಜೂಟಗಳಲ್ಲಿ ಮುಡಿದಿರುವನು.

ಕ್ಷೀರಸಾಗರಸಂಭೂತಃ ಸ್ರುತಾಮೃತನಿರ್ಝರಃ ।
ಪ್ರತಿಬಿಂಬಕರಃ ಶ್ರೀಮಾನ್ಯಸ್ಯ ಚೂಡಾಮಣಿಃ ಶಶೀ ॥ ೪ ॥

ಅನಾರತಶಿರಶ್ಚಂದ್ರಪ್ರಸ್ರವೇಣಾಮೃತೀಕೃತಃ ।
ಯಸ್ಯೇಂದ್ರನೀಲವತ್ಕಾಲಕೂಟಃ ಕಂಠೇ ವಿಭೂಷಣಃ ॥ ೫ ॥

ಧೂಲಿಲೇಖಾಮಹಾವರ್ತಂ ಸ್ವಚ್ಛಪಾವಕಸಂಭವಂ ।
ಪರಮಾಣುಮಯಂ ಭಸ್ಮ ಯಸ್ಯ ಜ್ಞಾನಜಲಂ ಸಿತಂ ॥ ೬ ॥

---

೪. ಆತನ ಮುಡಿಯಲ್ಲಿ ಕ್ಷೀರಸಾಗರ ಸಂಭೂತನೂ, ಅಮೃತ ನಿರ್ಝರಿಣಿಗಳನ್ನು ಬಿಡುವವನೂ ದರ್ಪಣದಂತೆ ಶುದ್ಧನೂ ಆದ ಶ್ರೀಮಚ್ಚಂದ್ರನು ಚೂಡಾಮಣಿಯಾಗಿರುವನು.

೫. ಮುಡಿಯಲ್ಲಿರುವ ಚಂದ್ರನಿಂದ ಒಂದೇಸಮನಾಗಿ ಪ್ರಸುವಿಸುತ್ತಿರುವ ಅಮೃತಧಾರೆಯಿಂದ ಆತನ ಕತ್ತಿನಲ್ಲಿರುವ ಕಾಳಕೂಟವು (ತನ್ನ ವಿಷಶಕ್ತಿಯನ್ನೆಲ್ಲ ನೀಗಿಕೊಂಡು) ಅಮೃತೀಕೃತವಾಗಿ, ಒಂದು ಇಂದ್ರನೀಲದ ಮಣಿಯಂತೆ ಆಭರಣವಾಗಿರುವುದು.

೬. ಶುದ್ಧವಾದ ತನ್ನ ಫಾಲಾಕ್ಷನ ಅಗ್ನಿಯಿಂದ ಸಂಭೂತವಾದ, ಪ್ರಳಯ ಕಾಲದ ಮಹಾವಾತದಲ್ಲಿ ಎದ್ದ ಧೂಲಿಯೋ ಎಂಬಂತಿರುವ ಪರಮಾಣು ಮಯವಾದ ಭಸ್ಮವು ಆತನಿಗೆ ಶರೀರದಲ್ಲಿರುವ ಬಿಳಿಯ ಜ್ಞಾನಜಲವೆ ಬಂತಿರವದು.

(ಸ್ವಚ್ಛಾತ್ ಸ್ವಾಕ್ಷಿಪಾವಕಾತ್ ಜಗತ್ಪ್ರಲಯ ಹೇತೋಃ ಸಂಭವತೀತಿ ತಥಾವಿಧಂ । ಧೂಲಿಲೇಖಾಧೂಲಿಶ್ರೇಣಿರೂಪಾ ಮಹಾಂತಃ ಪ್ರಲಯ ವಾತ್ಯಾವರ್ತಾ ಯಸ್ಮಾತ್ತಥಾವಿಧಂ ಸ್ಥೂಲಭೂತಾನಾಂ ಸೂಕ್ಷ್ಮಸೂಕ್ಷ್ಮ ಪ್ರವೇಶ ಕ್ರಮೇಣ ಪರಮಸೂಕ್ಷ್ಮಾವ್ಯಕ್ತಮಾತ್ರ ಪರಿಶೇಷಾತ್ ಪರಮಾಣು ಮಯಂ । ಸಿತಂ ಶುಭ್ರಂ ತತ್ಸಾಕ್ಷಿ ಚಿನ್ಮಾತ್ರ ಲಕ್ಷಣ ಜಲಪ್ಲಾವಿತತ್ವಾತ್ ಜ್ಞಾನಜಲಂ ಮಾಂಗಲಕ್ಷಣಂ ಭಸ್ಮ, ಯಸ್ಯ ಮಾಯಾಶಬಲಬ್ರಹ್ಮಣೋ ವಿಭೂಷಣ ಮಿತ್ಯನುಷಜ್ಜತೇ ! ॥ ಹರಃ ಸಾಕ್ಷ್ಯೈನ ಭಜತಿ ಭಸಿತೋದ್ಧೂಲನವಿಧಿಂ ॥ ಇತಿ ಭಗವತ್ಪಾದಾಃ । ತಾ. ಪ್ರ)

ನಿರ್ಮಲಾನಿ ಜಿತೇಂದೂನಿ ವೃಷ್ಟಾನಿ ಘಟಿತಾನಿ ಚ ।
ಯಸ್ಯಾಸ್ಥೀನ್ಯೇವ ರತ್ನಾನಿ ದೇಹಕಾಂತಮಯಾನಿ ಚ ॥ ೭ ॥

ಸುಧಾಕರಸುಧಾಧೌತಂ ನೀಲನೀರದಪಲ್ಲವಂ ।
ತಾರಕಾಬಿಂದುಶಬಲಂ ಯಸ್ಯ ಚಾಂಬರಮಂಬರಂ ॥ ೮ ॥

ಭ್ರಮುಚ್ಛಿವಾಂಗನಾಪಕ್ವಮಹಾಮಾಂಸೌದನಾಕುಲಂ ।
ಬಹಿರ್ಧೂತ ಗೃಹಂ ಯಸ್ಯ ಶ್ಮಶಾನಂ ಹಿಮಪಾಂಡುರಂ ॥ ೯ ॥

ಕಪಾಲಮಾಲಾಭರಣಾಃ ಪೀತರಕ್ತವಸಾಸವಾಃ ।
ಅಂತ್ರಸ್ರಗ್ದಾಮವಲಿತಾ ಬಂಧವೋ ಯಸ್ಯ ಮಾತರಃ ॥ ೧೦ ॥

---

೭ ನಿರ್ಮಲಗಳಾಗಿ ಚಂದ್ರನನ್ನು ಗೆದ್ದು, ಸಾಣೆಯಿಂದ ಶುದ್ಧಗಳಾಗಿ, ಕಂಠಾದಿಗಳಲ್ಲಿ ಘಟಿತಗಳಾಗಿರುವ ಬ್ರಹ್ಮಾದಿ ಶರೀರ ವಿಕಾರಗಳಾಗಿರುವ ಅಸ್ಥಿಗಳು ಆತನ ಶರೀರದಲ್ಲಿ ರತ್ನಗಳಾಗಿರುವುವು.

೮ ಚಂದ್ರನ ಅಮೃತದಲ್ಲಿ ಒಗೆಯಿಸಿಕೊಂಡು, ನೀಲವಾಗಿರುವ ಮೇಘಗಳೆಂಬ ಪಲ್ಲವಗಳಿಂದಲೂ ತಾರಕೆಗಳೆಂಬ ಬಿಂದುಗಳಿಂದ ಕೂಡಿರುವ ಆಕಾಶವು ಆತನಿಗೆ ವಸ್ತ್ರವಾಗಿರುವುದು.

೯ ಅಲೆಯುತ್ತಿರುವ ಶಿವಾಂಗನೆಯರು ಬೇಯಿಸುವ ಮಹಾಮಾಂಸವೆಂಬ ಅನ್ನವು ಚೆಲ್ಲಿರುವ, ಹಿಮದಿಂದ ಬಿಳಿಯಗಿರುವ, ಊರಹೊರಗಿರುವ ಶ್ಮಶಾನವು ಆತನಿಗೆ ಗೃಹವು.

(ಶಿವಾಂಗನಾ=ಹೆಣ್ಣು ನರಿ–ಶಿವನ ಹೆಂಡಿರು ಮಹಾಮಾಂಸಮನುಷ್ಯ ಮಾಂಸ (ಶ್ರೇಷ್ಠವಾದ ಮಾಂಸ.)

೧೦. ಕಪಾಲಮಾಲೆಗಳನ್ನು ಆಭರಣಗಳಾಗಿ ಧರಿಸಿಕೊಂಡು, ಹಳದಿಯೂ ರಕ್ತವೂ ಆದ ವಸಾಧಾತುವನ್ನು ಪಾನಮಾಡುತ್ತ ಕರುಳಿನ ಮಾಲೆಗಳನ್ನು ಮುಡಿಯುವ ಮಾತೃಗಣವು ಆತನ ಬಂಧುಗಳು.

ಪ್ರಸ್ಫುರನ್ಮೂರ್ಧಮಣಯಶ್ಚರಂತೋ ಮಸೃಣಾಂಗಕಾಃ
ಭುಜಗಾವಳಯಾ ಯಸ್ಯ ಪ್ರಚಕತ್ಕನಕತ್ವಿಷಃ ॥ ೧೧ ॥

ದೃಕ್ಪಾತದಗ್ಧಶೈಲೇಂದ್ರಂ ಜಗತ್ಕವಲಲಾಲಸಂ ।
ಭೈರವಾಚರಿತಂ ಯಸ್ಯ ಲೀಲಾ ಸ ತ್ರಾಸಿತಾಸುರಂ ॥ ೧೨ ॥

ಸ್ವಸ್ಥೀಕೃತಜಗಜ್ಜಾತ ಸ್ವವಾ ಪಾರಸ್ಥಜೀವಸಃ ।
ಯದೃಚ್ಛಯಾ ಕರಸ್ಪಂದೋ ಯಸ್ಯಾಸುರಪುರಕ್ಷಯಃ ॥ ೧೩ ॥

ಏಕಾಗ್ರಮೂರ್ತಯಃ ಸ್ನೇಹರಾಗದ್ವೇಷವಿವರ್ಜಿತಾಃ ।
ಸ್ವಶನಾ ಯಸ್ಯ ತೇ ಶೈಲಾಃ ಸರಸಾ ಅಪಿ ನೀರಸಾಃ ॥ ೧೪ ॥

ಶಿರಃ ಖುರಾಃ ಖುರಕರಾಃ ಕರದಂತಮುಖೋದರಾಃ ।
ಋಕ್ಷೋಷ್ಟ್ರಜಾಹಿವಕ್ತ್ರಾಶ್ಚ ಪ್ರಥಮಾ ಯಸ್ಯ ಲಾಲಕಾಃ ॥ ೧೫ ॥

---

೧೧. ತಲೆಯಲ್ಲಿರುವ ಮಣಿಗಳನ್ನು ಮೆರೆಸುತ್ತ ಸುವರ್ಣಕಾಂತಿಯಿಂದ ಮೆರೆಯುತ್ತಾ, ಮೃದುವಾದ ದೇಹವುಳ್ಳ ಸರ್ಪಭೂಷಣಗಳು ಆತನ ಮೈಯಲ್ಲೆಲ್ಲಾ ಚರಿಸುತ್ತಿರುವುವು.

೧೨. ನೋಡುತ್ತಿದ್ದ ಹಾಗೆಯೇ ಬೆಟ್ಟಗಳನ್ನೆಲ್ಲ ಸುಟ್ಟುರುಹುವುದು, ಜಗತ್ತು ಜಗತ್ತುಗಳನ್ನೆಲ್ಲ ಕಬಳಿಸುವುದು. ಲೀಲಾಮಾತ್ರದಿಂದ ಅಸುರರನ್ನೆಲ್ಲ ಗೋಳಿಡಿಸುವದು. ಇವೇ ಆತನ ಭೈರವಲೀಲೆಗಳು.

೧೩ ಆತನು ಕಲ್ಯಾಣಚಿಂತನೆ ಮಾಡುತ್ತಿದ್ದರೂ ಜಗತ್ತುಗಳೆಲ್ಲ ತಣ್ಣಗಾಗುವುವು. ಆತನು ಯಾವಾಗಲೂ ಸಮಾಧಿಯಲ್ಲಿರುವುದೇ ವ್ಯಾಪಾರವಾಗುಳ್ಳವನು. ಆತನು ಯಾವಾಗಲಾದರೂ ಒಂದು ಸಲ ಕೈಯಿಂದ ಹಾಗೆಂದರೆ ಅಸುರಪುರಗಳೆಲ್ಲವೂ ಕ್ಷಯವಾಗಿ ಹೋಗುವುವು.

೧೪. ಸ್ನೇಹರಾಗದ್ವೇಷಗಳೊಂದೂ ಇಲ್ಲದೆ, ಸರಸಗಳಾಗಿದ್ದರೂ ಚೆನ್ನಾಗಿ ಭೋಜನಮಾಡಿದವರಂತೆ ಆಶಾರಹಿತರಾಗಿ ಕುಳಿತಿರುವ ಶೈಲಗಳು ಆತನ ಏಕಾಗ್ರಧ್ಯಾನದಲ್ಲಿ ಕುಳಿತಿರುವ ಮೂರ್ತಿಗಳು.

(ರಸ=ನೀರು, ಭೋಗಾಶೆ.)

೧೫. ತಲೆಯಲ್ಲಿ ಕೈಗಳಲ್ಲಿ ನಡೆಯುತ್ತ, ಕೈ, ಹಲ್ಲು, ಮುಖಗಳಲ್ಲೆಲ್ಲಾ ಉದರವುಳ್ಳವರಾಗಿ, ಕರಡಿ, ಒಂಟೆ, ಆಡು, ಹಾವು ಮೊದಲಾದವುಗಳಂತೆ ಮುಖವುಳ್ಳ ಪ್ರಮಥರು ಆತನಿಗೆ ಆಳುಗಳು

ತಸ್ಯ ನೇತ್ರ ತ್ರಯೋದ್ಭಾಸಿವದನಸ್ಯಾಮಲಪ್ರಭಾಃ |
ಯಥಾ ಗಣಾಸ್ತಥೈವಾನ್ಯಾಃ ಪರಿವಾರೋ ಹಿ ಮಾತರಃ ॥ ೧೬ ॥

ನೃತ್ಯಂತಿ ಮಾತರಸ್ತಸ್ಯ ಪುರೋಭೂತಗಣಾನತಾಃ |
ಚತುರ್ದಶವಿಧಾನಂತಭೂತ ಜಾತೈಕ ಭೋಜನಾಃ ॥ ೧೭ ॥

ಖರೋಷ್ಟ್ರಾಕಾರವದನಾ ರಕ್ತಮೇದೋ ವಸಾಸವಾಃ |
ದಿಗಂತರವಿಹಾರಿಣ್ಯಃ ಶರೀರಾವಯವಸ್ರಜಃ ॥ ೧೮ ॥

ವಸಂತಗಿರಿಕೂಟೇಷು ವ್ಯೋಮ್ನಿ ಲೋಕಾಂತರೇಷು ಚ |
ಅವಟೇಷು ಶ್ಮಶಾನೇಷು ಶರೀರೇಷು ಚ ದೇಹಿನಾಂ ॥ ೧೯ ॥

ಜಯಾ ಚ ವಿಜಯಾ ಚೈವ ಜಯಂತೀ ಚಾಪರಾಜಿತಾ |
ಸಿದ್ಧಾ ರಕ್ತಾಲಂಬುಸಾ ಚ ಉತ್ಪಲಾ ಚೇತಿ ದೇವತಾಃ ॥ ೨೦ ॥

---

೧೬. ಹಾಗೆಯೇ ಮೂರು ಕಣ್ಣುಗಳುಳ್ಳ ಮುಖಗಳಿಂದ ಹೊರಡುತ್ತಿರುವ ನಿರ್ಮಲ ಪ್ರಭೆಗಳುಳ್ಳ ಮಾತೃಗಣಗಳು ಆತನ ಪರಿವಾರವು.

೧೭. ಹದಿನಾಲ್ಕು ವಿಧವಾದ ಅನಂತ ಪ್ರಾಣಿ ಕೋಟಿಗಳನ್ನು ಭೋಜನ ಮಾಡುವ ಮಾತೃಗಣವು ಭೂತಗಣಗಳ ಸ್ತೋತ್ರಗಳೊಡನೆ ಆತನ ಮುಂದೆ ಕುಣಿಯುವರು.

೧೮. ಕತ್ತೆ, ಒಂಟೆಗಳ ಆಕಾರವಾದ ವದನವುಳ್ಳವರಾಗಿ, ರಕ್ತ ಮೇದಸ್ಸು, ವಸಾ ಮೊದಲಾದುವನ್ನು ಪಾನಮಾಡುವರಾಗಿ, ದಿಕ್ಕು ವಿದಿಕ್ಕುಗಳಲ್ಲಿ ನರ್ತನ ಮಾಡಿಕೊಂಡು ಶರೀರದ ಅಂಗೋಪಾಂಗಗಳನ್ನು ಮಾಲೆಗಳಾಗಿ ಧರಿಸುವವರು ಆ ಮಾತೆಯರು.

೧೯. ಮತ್ತು ಅವರ ವಸಂತಗಿರಿ ಕೂಟಗಳಲ್ಲಿಯೂ ಆಕಾಶದಲ್ಲಿಯೂ ಲೋಕಾಂತರಗಳಲ್ಲಿಯೂ, ಹಳ್ಳಗಳಲ್ಲಿಯೂ, ಶ್ಮಶಾನಗಳಲ್ಲಿಯೂ, ಪ್ರಾಣಿಗಳ ಶರೀರಗಳಲ್ಲಿಯೂ ಇರುವರು.

೨೦–೨೧. ಜಯಾ, ವಿಜಯಾ, ಜಯಂತೀ, ಅಪರಾಜಿತಾ, ಸಿದ್ಧಾ,

ಸರ್ವಾಸಾಮೇವ ಮಾತೄಣಾಮಷ್ಟಾವೇತಾಸ್ತು ನಾಯಿಕಾಃ |
ಆಸಾಮನುಗತಾಸ್ತ್ವನ್ಯಾಸ್ತಾಸಾಮನುಗತಾಃ ಪರಾಃ || ೨೧ ||

ತಾಸಾಂ ಮಧ್ಯೇ ಮಹಾರ್ಹಾಣಾಂ ಮಾತೄಣಾಂ ಮುನಿನಾಯಕ|
ಆಲಂಬುಸೇತಿ ವಿಖ್ಯಾತಾ ಮಾತಾ ಮಾನದ ವಿದ್ಯತೇ || ೨೨ ||

ವಜ್ರಾಸ್ಥಿತುಂಡಶ್ಚಂಡಾಖ್ಯ ಇಂದ್ರನೀಲಾಚಲೋಪಮಃ |
ತಸ್ಯಾಸ್ತು ವಾಹನಂ ಕಾಕೋ ವೈಷ್ಣವ್ಯಾ ಗರುಡಾ ಯಥಾ || ೨೩ ||

ಇತ್ಯಷ್ಟೈಶ್ವರ್ಯಯುಕ್ತಾಸ್ತಾ ಮಾತರೋ ರೌದ್ರ ಚೇಷ್ಟಿತಾಃ |
ಕದಾಚಿನ್ಮಿಲಿತಾ ವ್ಯೋಮ್ನಿ ಸರ್ವಾಃ ಕೇನಾಪಿ ಹೇತುನಾ || ೨೪ ||

ಉತ್ಸವಂ ಪರಮಂ ಚಕ್ರುಃ ಪರಮಾರ್ಥಪ್ರಕಾಶಕಂ |
ವಾಮಸ್ರೋತೋಗತಾ ಏತಾಂಸ್ತುಂಬರಂ ರುದ್ರಮಾಶ್ರಿತಾಃ || ೨೫ ||

ರಕ್ತಾ, ಅಲಂಬುಸಾ, ಉತ್ಪಲಾ, ಎಂಬ ಎಂಟು ಜನ ದೇವತೆಯರು ಎಲ್ಲಾ ಮಾತೃಗಣಗಳಿಗೂ ನಾಯಿಕೆಯರಾಗಿರುವರು. ಇತರರೆಲ್ಲರೂ ಇವರೆಂಟು ಮಂದಿಯನ್ನೇ ಅನುಸರಿಸುವರು. ಉಳಿದವರೆಲ್ಲ ಅವರನ್ನು ಅನುಸರಿಸುವರು.

೨೨. ಆ ಮಾತೃಗಣದ ನಡುವೆ, ಎಲೈ ಮುನೀಂದ್ರನೆ, ಅಲಂಬುಸಾ ಎಂದು ವಿಖ್ಯಾತಳಾದ ಮಾತೃಕೆಯೊಬ್ಬಳಿರುವಳು.

೨೩. ವೈಷ್ಣವೀ ದೇವಿಗೆ ಗರುಡನು ಹೇಗೋ ಹಾಗೆ ಆಕೆಗೆ ವಜ್ರದಂತಹ ಮೂಳೆಯ ಕೊಕ್ಕುಳ್ಳ, ಇಂದ್ರನೀಲ ಪರ್ವತದಂತಿರುವ, ಚಂಡಾಖ್ಯನೆಂಬ ಕಾಕನು ವಾಹನನಾಗಿರುವನು.

೨೪. ಈ ಮಾತೆಯರು ಅಷ್ಟೈಶ್ವರ್ಯಯುಕ್ತರು. ರೌದ್ರ ಚೇಷ್ಟೆಗಳನ್ನು ಮಾಡುವ ಆ ಮಾತೃಗಣ ದೇವತೆಗಳು ಒಮ್ಮೆ ಏನೋ ಕಾರಣದಿಂದ ಆಕಾಶದಲ್ಲಿ ಸೇರಿದರು.

೨೫. ಪರಮಾರ್ಥ ಸ್ವರೂಪವನ್ನು ಪ್ರಕಾಶಗೊಳಿಸುವ ಶ್ರೇಷ್ಠವಾದ ಪಾನೋತ್ಸವವನ್ನು ವಾಮಮಾರ್ಗದಿಂದ ಆಚರಿಸಿ ತುಂಬುರುವನ್ನೂ ರುದ್ರನನ್ನೂ ಪೂಜೆ ಮಾಡಿದರು.

ಪೂಜಯಿತ್ವಾ ಜಗತ್ಪೂಜೌ ದೇವ್ಯೌತು ಬುರುಭೈರವೌ |
ವಿಚಿತ್ರಾರ್ಥಾಃ ಕಥಾಶ್ಚಕ್ರುರ್ನರ್ಮದತೋಷಿತಾಃ || ೨೬ ||

ಅಥೇಯಮಾಯತೌ ತಾಸಾಂ ಕಥಾವಸರತಃ ಕಥಾ |
ಅಸ್ಮಾನುಮಾಪತಿರ್ದೇವಃ ಕಿಂ ಪಶ್ಯತ್ಯವಹೇಲಯಾ || ೨೭ ||

ಪ್ರಭಾವಂ ದರ್ಶಯಾವೋಽಸ್ಯ ಪುನರ್ನಾಸ್ಮಾಂಸ್ತ್ವಸೌ ಯಥಾ |
ದೃಷ್ಟಮಾತ್ರ ಮಹಾಶಕ್ತಿಃ ಕರಿಷ್ಯತ್ಯವಧೀರಣಂ || ೨೮ ||

ಇತಿ ನಿಶ್ಚಿತ್ಯ ತಾ ದೇವ್ಯೋ ವಿವರ್ಣವದನಾಂಗಿಕಾಂ |
ಉಮಾಮೇವ ವಶಿ ಕೃತ್ವ ಪ್ರೋಕ್ಷಯಾಮಾಸುರಾವೃತಾಃ || ೨೯ ||

ಮಾಯಯಾಪಹೃತಾ ಭರ್ತುರ್ ರಂಗಾದ್ರಂಗಮುಪಾಗತಾಂ |
ತಾಮಾಲೋಲಕಚಾಂ ದೇವ್ಯಃ ಕ್ಷೇಪ್ತುರೋದನತಾಂ ಗತಾಂ || ೩೦ ||

---

೨೬. ಜಗತ್ಪೂಜ್ಯರಾದ ತುಂಬುರು ಭೈರವ ದೇವರುಗಳನ್ನು ಪೂಜೆ ಮಾಡಿ ಮದ್ಯ ಮದದಿಂದ ಸಂತೋಷಪಡುತ್ತಾ ಬೇಕು ಬೇಕಾದ ಕಥೆಗಳನ್ನೆಲ್ಲ ಹೇಳಿ ಕೊಂಡರು.

೨೭. ಹಾಗೆಯೇ ಆ ಕಥಾ ಪ್ರಸಂಗವಲ್ಲಿ "ನಮ್ಮನ್ನು ಉಮಾಪತಿಯಾದ ಮಹಾದೇವನು ಲಘುವಾಗಿ ಕಾಣುವನಲ್ಲ" ಎಂಬ ಮಾತು ಬಂತು.

೨೮–೨೯. ಇನ್ನು ಮುಂದೆ ಆತನು ನಮ್ಮನ್ನು ಹಾಗೆ ಕಡೆಗಾಣದಂತೆ ಆತನಿಗೆ ನಮ್ಮ ಪ್ರಭಾವವನ್ನು ತೋರಿಸೋಣ ಎಂದು ನಿಶ್ಚಯಿಸಿಕೊಂಡು ರುದ್ರಶಕ್ತಿಯಾದ ಉಮಾದೇವಿಯನ್ನೇ ವಶಪಡಿಸಿಕೊಂಡು, ಆಕೆಯ ಮೇಲೆ ಮಂತ್ರೋದಕವನ್ನು ತಳಿದರು.

೩೦. ಗಂಡನ ಪಕ್ಕದಲ್ಲಿದ್ದವಳನ್ನು ಮಾಯೆಯಿಂದ ಅಪಹಾರ ಮಾಡಿಕೊಂಡು ರಂಗಕ್ಕೆಳೆದುಕೊಂಡುಬಂದು ಕೂದಲುಗಳೆಲ್ಲ ಕೆದರಿಹೋಗಿರುವ ಆಕೆಯನ್ನು ತಿಂದುಹಾಕಬೇಕು ಎಂದುಕೊಂಡರು.

ಪಾರ್ವತೀಪ್ರೋಕ್ಷಣದಿನೇ ತಸ್ಮಿಂಸ್ತತ್ರ ಮಹೋತ್ಸವಃ |
ಬಭೂವ ತಾಸಾಂ ಸರ್ವಾಸಾಂ ನೃತ್ಯಗೇಯಮನೋಹರಃ ॥ ೩೧ ॥

ಅತ್ಯಾನಂದಮನುದ್ಧಾಮರವಮೇವಾಂಬರಂ ಬಭೌ ॥ ೩೨ ॥

ದೀರ್ಘಾವಯವ ವಿಕ್ಷೇಪ ವಿಕಾಸಿಜಘನೋದರಾಃ |
ಅನ್ಯಾ ಜಹಸುರುದ್ದಾಮತಾಲಕ್ಷ್ವೇಡಘನಾರವಂ ॥ ೩೩ ॥

ಲಸದಂಗವಿಕಾರಂ ಚ ಧ್ವನತ್ಸಗಿರಿಕಾನನಾಃ |
ಅನ್ಯಾಜಗುರ್ಧ್ವನಚ್ಛೈಲಗೃಹಮಾ ಪಾನತೋಷಿತಾಃ ॥ ೩೪ ॥

ವಾರೀವ ರವವದ್ಬ್ರಂಜಜ್ಜಗನ್ಮಂಡಲಕೋಟರೇ |
ಅನ್ಯಾಃ ಪಾನಂ ಪಪುಃ ಪುಷ್ಪಚರ್ಚಿತಾಂಗಶಿರಃ ಖರಾ | ॥ ೩೫ ॥

---

೩೧. ಹಾಗೆ ಆ ಪಾರ್ವತಿಯನ್ನು ಪಶುವನ್ನಾಗಿ ಮಾಡಿದ ದಿನ ಅಲ್ಲಿ ಆ ಮಾತೃಗಣಗಳಿಗೆಲ್ಲ ಮಹೋತ್ಸವವಾಯಿತು. ಅವರೆಲ್ಲ ಸೇರಿ ನರ್ತನ, ಗಾನಗಳಿಂದ ಮನೋಹರವಾದ ಉತ್ಸವ ಮಾಡಿದರು.

೩೨. ಆ ದಿನ ಆಕಾಶದಲ್ಲಿ ಆನಂದವೇ ಆನಂದ. ಬೇಕಾದಷ್ಟು ಗದ್ದಲವೂ ಆಯಿತು.

೩೩. ಕೈಕಾಲುಗಳನ್ನು ದೀರ್ಘವಾಗಿ ಬೀಸಿ ಹಾಕುತ್ತ ಜಘನ ಉದರಗಳನ್ನೆಲ್ಲ ಪ್ರದರ್ಶನ ಮಾಡಿಕೊಳ್ಳುತ್ತ, ಘಟ್ಟಿಯಾಗಿ ತಾಲಗಳನ್ನು ಕುಟ್ಟುತ್ತ, ಸಿಂಹನಾದಗಳನ್ನೂ, ಮೇಘ ಗರ್ಜನಗಳನ್ನೂ ಮಾಡುತ್ತ ನಕ್ಕರು.

೩೪. ಬೇಕಾದಹಾಗೆ ಅಂಗವಿಕಾರಗಳನ್ನು ಮಾಡುತ್ತ, ಗಿರಿಕಾನನಗಳನ್ನೆಲ್ಲ ಮೊಳಗುವಂತೆ ಧ್ವನಿಮಾಡುತ್ತ, ಪಾನೋನ್ಮತ್ತರಾಗಿ ಬೆಟ್ಟವೆಲ್ಲ ಮೊಳಗುವಂತೆ ಹಾಡಿದರು.

೩೫. ಬ್ರಹ್ಮಾಂಡಮಂಡಲದ ಕೋಟರಗಳಲ್ಲಿ (ಚಂದ್ರೋದಯವಾದಾಗ) ವಿಶ್ವಾಸದಿಂದ ಗರ್ಜಿಸುತ್ತಾ ಹೆಚ್ಚುವ ಸಮುದ್ರೋದಕದಂತೆ ಗರ್ಜಿಸಿದರು.

ಲೀಲಾಘುರಘುರಾರಾವರಣದಾಕಾಶಕೋಟರೇ || ೩೬ ||

ಸಪ್ರುದುವದಗುರಥೋಜ್ಝೈಃ ಸತ್ವರಾ ಜಗ್ಮುರೂಚುಃ |
ಜಹಸುರ ಪುರಹೌಷುಃ ಪೇತುರುಚ್ಚೈರ್ವವಲ್ಗುಃ ||
ನನೃತುರನಿಶಮಾದುಃ ಸ್ವಾದುಮಾಂಸಂ ಚ ದೇವ್ಯ-
ಸ್ತ್ರಿಭುವನಮುಪವೃತ್ತಂ ಚಕ್ರುರುನ್ಮತ್ತವೃತ್ತಾಃ || ೩೭ ||

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ದೇವದೂತೋಕ್ತೇ ಮೋಕ್ಷೋಪಾಯೇಷು ನಿರ್ವಾಣಪ್ರಕರಣೇ ಭುಶುಂಡೋಪಾಖ್ಯಾನೇ "ಮಾತೃವ್ಯವಹಾರ ವರ್ಣನಂ" ನಾಮ ಅಷ್ಟಾದಶಃ ಸರ್ಗಃ

---

೩೬. ಇನ್ನು ಕೆಲವರು ತಲೆಯಿಂದ ಕಾಲಿನವರೆಗೂ ತಮ್ಮ ಬೃಹದ್ದೇಹಗಳಿಗೆ ಗಂಧವನ್ನು ತೊಡೆದುಕೊಂಡು ತಮ್ಮ ಲೀಲೆಗಳಿಂದ ಘುರಘುರ ಎಂದು ಶಬ್ದವಾಗುತ್ತಿರುವ ಆಕಾಶ ಕೋಟರದಲ್ಲಿ ನಿಂತು ಪಾನವನ್ನು ಮಾಡಿದರು.

೩೭. ಆ ದೇವಿಯರು ಪಾನಮಾಡಿದರು. ಗಟ್ಟಿಯಾಗಿ ಹಾಡಿದರು. ಓಡಿದರು. ನುಡಿದರು. ನಕ್ಕರು. ಒಬ್ಬರ ಬಾಯಲ್ಲಿ ಇನ್ನೊಬ್ಬರು ತಿಂಡಿಯನ್ನು ತುರುಕಿದರು. ಹಾರಿದರು. ಕುಣಿದರು. ನರ್ತಿಸಿದರು. ರುಚಿಯಾದ ಮಾಂಸವನ್ನು ಒಂದೇ ಸಮನಾಗಿ ತಿಂದರು. ಹುಚ್ಚರಂತೆ ಕುಣಿದಾಡುತ್ತ ಮೂರು ಲೋಕವೂ ಹುಚ್ಚು ಹುಚ್ಚಾಗುವಂತೆ ಮಾಡಿದರು.

ಇಂತಿದು ಆರ್ಷವು ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ ನಿರ್ವಾಣಪ್ರಕರಣದ ಭುಶುಂಡೋಪಾಖ್ಯಾನದಲ್ಲಿ "ಮಾತೃವ್ಯವಹಾರ ವರ್ಣನ" ಎಂಬ ಹದಿನೆಂಟನೆಯ ಸರ್ಗವು

ಏಕೋನವಿಂಶಃ ಸರ್ಗಃ

ಭುಶುಂಡ ಉವಾಚ

ಇತ್ಯುತ್ಸವೇ ವರ್ತಮಾನೇ ತಾಸಾಂ ವಾಹಾಸ್ತ ಉತ್ತಮಾಃ |
ತಥೈವ ಮತ್ತಾ ಜಹಸುರ್ನನೃತುಃ ಪಪುರಪ್ಯಸೃಕ್ || ೧ ||

ತತ್ರೈಕತ್ರಾಸವೋನ್ಮತ್ತಾಃ ಕಾಶ್ಚಿನ್ನನೃತುರಂಬರೇ |
ರಥಹಂಸ್ಯಃ ಸ್ಥಿತಾ ಬ್ರಾಹ್ಮ್ಯಾಃ ಕಾಕಶ್ಚಾಲಂಬುಸಾರಥಃ || ೨ ||

ನೃತ್ಯಂತೀನಾಂ ಚ ಹಂಸೀನಾಂ ಪಿಬಂತೀನಾಮಥಾಸವಂ |
ತಲೇ ಚಾಬ್ಧಿತಟಾನಾಂ ತು ರತಿಃ ಸವ್ಯಾಗಜಾಯತ || ೩ ||

ಸಂಜಾತರತಯೋ ಮತ್ತಾಃ ಸರ್ವಾ ಹಂಸ್ಯಃ ಕ್ರಮೇಣ ತಾಃ |
ರೇಮಿರೇ ಸಹ ಕಾಕೇನಾಪ್ಯಥ ಮತ್ತಾಸ್ತದಾ ಕಿಲ || ೪ ||

ಹತ್ತೊಂಬತ್ತನೆಯ ಸರ್ಗ

೧. ಭುಶುಂಡನು ಹೇಳಿದನು:—ಹೀಗೆ ದೇವಿಯರ ಉತ್ಸವವು ನಡೆಯುತ್ತಿರಲು, ಅವರ ವಾಹನಗಳೂ ಕೂಡ, ಅವರಂತೆಯೇ ಪಾನೋನ್ಮತ್ತರಾಗಿ ನಕ್ಕರು; ನರ್ತಿಸಿದರು: ರಕ್ತವನ್ನು ಕುಡಿದರು.

೨. ಅಲ್ಲಿಯೇ ಒಂದು ಕಡೆ, ಬ್ರಾಹ್ಮೀ ದೇವಿಯ ರಥದ ಹೆಣ್ಣು ಹಂಸೆಗಳೂ, ಅಲಂಬುಸಾ ದೇವಿಯ ರಥದ ಕಾಗೆಯೂ ಕುಣಿದರು.

೩. ಸಮುದ್ರ ತಟದಲ್ಲಿ ಕುಣಿಯುತ್ತಾ, ಆಸವವನ್ನು ಕುಡಿಯುತ್ತಾ ಇದ್ದ ಹಂಸಿಯರಿಗೆ, ಭೋಗಾಪೇಕ್ಷೆಯು ಹುಟ್ಟಿತು.

೪. ಭೋಗಾಪೇಕ್ಷೆಯಿಂದ ಕೂಡಿ ಉನ್ಮತ್ತರಾದ ಆ ಹಂಸಿಯರು ಚಂಡನೆಂಬ ಆ ಕಾಗೆಯೊಡನೆ ವಿಹಾರ ಮಾಡಿದರು.

ಸಪ್ತಾನಾಂ ಕುಲಹಂಸೀನಾಂ ದಯಿತೋ ವಾಯಸಸ್ತ್ವಸೌ |
ಕ್ರಮೇಣಾರಮತ್ಯೈಕತ್ರ ಯಾವದನ್ಯೋನ್ಯಮೀಪ್ಸಿತಂ || ೫ ||

ಅಥ ತಾ ಗರ್ಭಧಾರಿಣ್ಯೋ ಬಭೂವುರತಿತೋಷಿತಾಃ |
ದೇವ್ಯಶ್ಚ ಕೃತನೃತ್ಯಾಸ್ತಾಃ ಸುಪ್ರಶಾಂತಮಥಾಯಯುಃ || ೬ ||

ದದುರ್ಭೋದನತಾಂ ಯಾತಾಮೀಶ್ವರಾಯ ಪ್ರಿಯಾಮುಮಾಂ |
ಭೋಜನಾಯ ಮಹಾಮಾಯಾ ದೇವ್ಯಸ್ತಾಃ ಶೂಲಪಾಣಯೇ || ೭ ||

ಪ್ರಿಯಾ ಮೇ ಭೋಜನೇ ದತ್ತೇತ್ಯೇವಂ ಚ ಶಶಿಶೇಖರಃ |
ಬುದ್ಧ್ವಾ ಬಭೂವ ರುಷಿತೋ ಯದಾ ಮಾತೃಗಣಂ ಪ್ರತಿ || ೮ ||

ತದಾ ತಾಸ್ತಾಂ ಸಮುತ್ಪಾದ್ಯ ಸ್ವಾಂಗದಾನೇನ ವೈ ಪುನಃ |
ದದುರ್ಭೂಯೋವಿವಾಹೇನ ಪಾರ್ವತೀಮಿಂದುಮೌಲಯೇ || ೯ ||

---

೫. ಆ ಕಾಗೆಯು ಏಳು ಕುಲ ಹಂಸಿಯರಿಗೂ ಪ್ರಿಯನಾಗಿ ಕ್ರಮವಾಗಿ ಸ್ವೇಚ್ಛೆಯಾಗಿ ವಿಹಾರ ಮಾಡಿತು.

೬. ಆ ಏಳು ಹಂಸಿಯರೂ ಗರ್ಭಧಾರಿಣಿಯರಾದರು. ಅತಿ ಸಂತೋಷ ಪಟ್ಟರು. ದೇವಿಯರೂ ನೃತ್ಯಗಳನ್ನು ಪೂರೈಸಿಕೊಂಡು ಶಾಂತವಾಗಿ ಬಂದರು.

೭. ಮಹಾಮಾಯಾವಿನಿಯರಾದ ಆ ದೇವಿಯರು ತಮಗೆ ಪಶುವಾಗಿದ್ದ ಉಮಾದೇವಿಯನ್ನು ಶೂಲಪಾಣಿಯಾದ ಮಹಾದೇವನಿಗೂ ಭೋಜನಾರ್ಥವಾಗಿ ಕೊಟ್ಟರು.

೮. ತನ್ನ ಹೆಂಡತಿಯನ್ನೇ ತನಗೆ ಭೋಜನವಾಗಿ ಕೊಟ್ಟರೆಂದು ತಿಳಿದು ಆ ಮಹಾದೇವನು ಆ ಮಾತೃಗಣಗಳ ಮೇಲೆ ಸಿಟ್ಟಾದನು.

೯. ಆಗ ಅವರು ತಮ್ಮತಮ್ಮ ಅಂಗಗಳಲ್ಲಿ ಒಂದೊಂದನ್ನು ಕೊಟ್ಟು ಪುನಃ ಪಾರ್ವತೀ ದೇವಿಯನ್ನು ಸೃಷ್ಟಿಸಿ ವಿವಾಹಪೂರ್ವಕವಾಗಿ ಮಹಾದೇವನಿಗೆ ಕೊಟ್ಟರು.

ತತೋ ದೇವ್ಯೋ ಹರಶ್ಚೈವ ಪರಿವಾರಸ್ತಥೈತಯೋಃ |
ಸರ್ವೇ ಸಂತುಷ್ಟ ಮನಸಃ ಸ್ವಾಂ ಸ್ವಾಮುಪಯಯುರ್ದಿಶಂ || ೧೦ ||

ಅಂತರ್ವತ್ನ್ಯೋ ಬಭೂವುಸ್ತಾ ಬ್ರಾಹ್ಮ್ಯೋ ಹಂಸ್ಯೋ ಮುನೀಶ್ವರ |
ವೃತ್ತಾಂತಂ ಕಥಯಾಮಾಸು ಬ್ರಾಹ್ಮ್ಯ ದೇವ್ಯಾ ಯಥಾಸ್ಥಿತಂ || ೧೧ ||

ಹೇ ವತ್ಸ್ಯಃ ಸಾಂಪ್ರತಂ ಪತ್ನವತ್ಯೋ ಮೇ ರಥಕರ್ಮಣಿ |
ನ ಸಮರ್ಥಾ ಭವಾತ್ಯೋ ಹಿ ಸ್ವೈರಂ ಚರತ ಸಾಂಪ್ರತಂ || ೧೨ ||

ಇತಿ ಗರ್ಭಾಲಸಾ ಹಂಸೀರುಕ್ತ್ವಾ ದೇವಿ ದಯಾಪರಾ |
ನಿರ್ವಿಕಲ್ಪ ಸಮಾಧಾನೇ ಬ್ರಾಹ್ಮೀ ತಸ್ಥೌ ಯಥಾ ಸುಖಂ || ೧೩ ||

ಅಜನಾಭಿ ಸರೋಜಾಂತ ವೈರಿಂಚ ಕಮಲಾಕರೇ |
ಗರ್ಭಾಲಸಾ ವಿಚೇರುಸ್ತಾ ರಾಜಹಂಸ್ಯೋ ಮುನೀಶ್ವರ || ೧೪ ||

---

೧೦. ಆಗ ದೇವಿಯರೂ ಹರನೂ ಸಂತೋಷಪಟ್ಟುಕೊಂಡು ತಮ್ಮ ತಮ್ಮ ಪರಿವಾರಗಳೊಡನೆ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು.

೧೧. ಬ್ರಾಹ್ಮೀದೇವಿಯ ಗರ್ಭವತಿಯರಾಗಿದ್ದ ಆ ಹಂಸಿಯು ತಮ್ಮ ಒಡತಿಯೊಡನೆ ಎಲ್ಲಾ ವೃತ್ತಾಂತವನ್ನೂ ಯಥಾವತ್ತಾಗಿ ಹೇಳಿದರು.

೧೨. ಬ್ರಾಹ್ಮೀ ದೇವಿಯು ಹೇಳಿದಳು: "ಎಲೌ ಮಕ್ಕಳಿರಾ, ಈಗ ನೀವು ಗರ್ಭವತಿಯರಾಗಿರುವುದರಿಂದ ರಥವನ್ನು ಎಳೆಯಲಾರಿರಿ. ಆದುದರಿಂದ ನಿಮ್ಮ ಮನಸ್ಸು ಬಂದಂತೆ ಇರಿ."

೧೩. ಗರ್ಭಿಣಿಯರಾದ ಆ ಹಂಸಿಯರಿಗೆ ಹೀಗೆಂದು ಹೇಳಿ, ದಯಾಪರಳಾದ ಆ ದೇವಿಯು ನಿರ್ವಿಕಲ್ಪ ಸಮಾಧಿಯಲ್ಲಿ ಸುಖವಾಗಿ ನಿಂತಳು.

೧೪. ಎಲೆ ಮುನೀಂದ್ರನೆ, ವಿಷ್ಣುವಿನ ನಾಭಿ ಕಮಲದ ಮೂಲದಲ್ಲಿರುವ ಬ್ರಹ್ಮ ಸರೋವರದಲ್ಲಿ ಗರ್ಭಭಾರದಿಂದ ಬಳಲಿದ ಆ ರಾಜಹಂಸಿಯರು ಸುಖವಾಗಿ ಸಂಚರಿಸಿಕೊಂಡಿದ್ದರು.

ಏವಂ ವಿಪಕ್ವಗರ್ಭಾಸ್ತಾ ನಾಭೀಕಮಲಪಲ್ಲವೇ |
ಸುವತೇಸ್ಮ ಮೃದೂನ್ಯಂಡಾನ್ಯಥ ವಲ್ಲ್ಯ ಇವಾಂಕುರಾತ್ ॥ ೧೫ ॥

ತಾನಿ ಕಾಲಂ ಸಮಾಸಾದ್ಯ ತತೋಂಡಾನ್ಯೇಕವಿಂಶತಿಃ |
ಗರ್ಭಾಕ್ರಾಂತ್ಯಾ ದ್ವಿಧಾ ಜಗ್ಮುರ್ಬ್ರಹ್ಮಾಂಡಾನೀವ ಸಾರವತ್ ॥ ೧೬ ॥

ಅಂಡೇಭ್ಯಸ್ತೇಭ್ಯ ಏವಂ ಹಿ ಜಾತಾ ವಯಮಿಮೇ ಮುನೇ |
ಭ್ರಾತರಶ್ಚಂಡತನಯಾ ವಾಯಸಾ ಏಕವಿಂಶತಿಃ ॥ ೧೭ ॥

ತೇ ಸಂಜಾತಾ ಗತಾ ವೃದ್ಧಿಂ ತಸ್ಮಿನ್ಕಮಲಪಲ್ಲವೇ |
ಸಂಜಾತಪಕ್ಷಾಃ ಸಂಪನ್ನಾ ಗಗನೋಡ್ಡಯನೇ ಕ್ಷಮಾಃ ॥ ೧೮ ॥

ಮಾತೃಭಿಃ ಸಹ ಹಂಸೀಭಿರ್ಬ್ರಾಹ್ಮೀ ಭಗವತೀ ತತಃ |
ಚಿರಮಾರಾಧಿತಾ ಸಮ್ಯಕ್ಸಮಾಧಿವಿರತಾ ಸತೀ ॥ ೧೯ ॥

---

೧೫. ಬಳ್ಳಿಗಳು ಅಂಕುರಗಳನ್ನು ಬಿಡುವಂತೆ, ಆ ರಾಜಹಂಸಿಯರು ಗರ್ಭ ಕಾಲವು ಕಳೆದ ಮೇಲೆ, ನಾಭಿ ಕಮಲ ಸರೋವರದಲ್ಲಿ ಮೃದುವಾದ ಅಂಡಗಳನ್ನು ಪ್ರಸವಿಸಿದರು.

೧೬. ಆ ಇಪ್ಪತ್ತೊಂದು ಮೊಟ್ಟೆಗಳು ಸಕಾಲದಲ್ಲಿ ಗರ್ಭವು ಪೂರ್ಣವಾದಾಗ ಬಲವಾಗಿರುವ ಬ್ರಹ್ಮಾಂಡಗಳು ಒಡೆಯುವಂತೆ ಎರಡಾಗಿ ಒಡೆದುವು.

೧೭. ಆ ಅಂಡಗಳಿಂದ ನಾವೆಲ್ಲರೂ ಹುಟ್ಟಿದೆವು. ಅಂಡಜನಯರಾದ ನಾವು ಇಪ್ಪತ್ತೊಂದು ಕಾಗೆಗಳು ಹೀಗೆ ಒಡಹುಟ್ಟುಗಳು.

೧೮. ಆ ಕಮಲ ಸರೋವರದಲ್ಲಿ ಹುಟ್ಟಿದ ನಾವು ಬೆಳೆದೆವು: ರೆಕ್ಕೆಗಳು ಹುಟ್ಟಿ ಬಲಗೊಂಡು ಆಕಾಶದಲ್ಲಿ ಹಾರಬಲ್ಲವರಾದೆವು.

೧೯. ಆ ಬ್ರಾಹ್ಮೀದೇವಿಯು ಸಮಾಧಿಯಿಂದ ವಿಮುಖಳಾದ ಮೇಲೆ ನಮ್ಮ ತಾಯಿಯರಾದ ಹಂಸಿಯರು ಆ ಬ್ರಾಹ್ಮೀ ಭಗವತಿಯನ್ನು ಬಹುಕಾಲ ಆರಾಧಿಸಿದರು.

ಪ್ರಸಾದಪರಯಾ ಕಾಲೇ ಭಗವತ್ಯಾ ತತಃ ಸ್ವಯಂ |
ತಥಾಂಗಾನುಗೃಹೀತಾ ಸ್ಮೋ ಯೇನ ಮುಕ್ತಾ ವಯಂ ಸ್ಥಿತಾಃ ॥ ೨೦ ॥

ಸಂಶಾಂತಮನಸಃ ಶಾಂತಾ ಏಕಾಂತೇ ಧ್ಯಾನಸಂಸ್ಥಿತಾ |
ತಿಷ್ಠಾಮ ಇತಿ ನಿಶ್ಚಿತ್ಯ ಪಿತುಃ ಪಾರ್ಶ್ವೇ ವಯಂ ಗತಾಃ ॥ ೨೧ ॥

ಆಲಿಂಗಿತಾಸ್ತತಃ ಪಿತ್ರಾ ಪೂಜಿತಾಲಂಬುಸಾ ವಯಂ |
ತಯಾ ದೃಷ್ಟಾಃ ಪ್ರಸಾದೇನ ಸಂಸ್ಥಿತಾಸ್ತತ್ರ ಸಂಯತಾಃ ॥ ೨೨ ॥

ಚಂಡ ಉವಾಚ—

ಪುತ್ರಾಃ ಕಚ್ಚಿದಪರ್ಯಂತವಾಸನಾತಂತುಗುಂಠಿರಾತ್ |
ಭವಂತೋ ನಿರ್ಗತಾ ನೂನಮಸ್ಮಾತ್ಸಂಸಾರಜಾಲಕಾತ್ ॥ ೨೩ ॥

ನೋ ಚೇದ್ವಯಂ ಭಗವತೀಂ ತದಿಮಾಂ ಭೃತ್ಯವತ್ಸಲಾಂ |
ಪ್ರಾರ್ಥಯಾಮೋ ಯಥಾ ಯೂಯಂ ಭವಥ ಜ್ಞಾನಪಾರಗಾಃ ॥ ೨೪ ॥

---

೨೦. ಆ ಭಗವತಿಯು ಸಕಾಲದಲ್ಲಿ ಪ್ರಸನ್ನಳಾಗಿ, ತಾನೇ ನಮ್ಮನ್ನೆಲ್ಲರನ್ನೂ ಅನುಗ್ರಹಿಸಿದಳು. ಅದರಿಂದ, ನಾವೆಲ್ಲರೂ ಜೀವನ್ಮುಕ್ತರಾಗಿರುವೆವು.

೨೧. ಶಾಂತಚಿತ್ತರಾಗಿ, ಶಾಂತರಾಗಿ, ಏಕಾಂತವಾಗಿ, ಸಮಾಧಿಯಲ್ಲಿ ಕುಳಿತಿರೋಣ ಎಂದು ನಿಶ್ಚಯಿಸಿಕೊಂಡು ನಾವು ತಂದೆಯ ಬಳಿಗೆ ಹೋದೆವು.

೨೨. ಅಲ್ಲಿ ತಂದೆಯು ನಮ್ಮನ್ನು ಆಲಿಂಗಿಸಿಕೊಂಡು, ಅಲಂಬುಸಾದೇವಿಯನ್ನು ನಮ್ಮಿಂದ ಪೂಜೆ ಮಾಡಿಸಿದನು. ಆಕೆಯೂ ನಮಗೆ ವರಪ್ರಧಾನ ಮಾಡಿದಳು.

೨೩. ಚಂಡನು ಹೇಳಿದನು :— ಎಲೆ, ಮಕ್ಕಳಿರಾ, ಕೊನೆಮೊದಲಿಲ್ಲದ ವಾಸನಾರಜ್ಜುವು ಬಿಗಿದು ಹಿಡಿದಿರುವ ಈ ಸಂಸಾರವೆಂಬ ಬಲೆಯಿಂದ ನೀವು ಪಾರಾದಿರಿ ಅಲ್ಲವೆ?

೨೪. ಹಾಗಿಲ್ಲದಿದ್ದರೆ, ಮತ್ತೆ ಭೃತ್ಯವತ್ಸಲೆಯಾದ ಈ (ಅಲಂಬುಸಾ) ಭಗವತಿಯನ್ನು ನೀವು ಜ್ಞಾನಸಂಪನ್ನರಾಗುವಂತೆ ಪ್ರಾರ್ಥಿಸಿಕೊಳ್ಳೋಣ.

ಕಾಕಾ ಊಚುಃ —

ತಾತ ಜ್ಞಾತಮಲಂ ಜ್ಞೇಯಂ ಬ್ರಾಹ್ಮ್ಯಾ ದೇವ್ಯಾಃ ಪ್ರಸಾದತಃ ।
ಕಿಂತ್ವೇಕಾಂತಸ್ಥಿತೇಃ ಸ್ಥಾನಮಭಿವಾಂಛಾಮ ಉತ್ತಮಂ ॥ ೨೫ ॥

ಚಂಡ ಉವಾಚ—

ಸರ್ವರತ್ನಗಣಾಧಾರಃ ಸಮಸ್ತಸುರಸಂಶ್ರಯಃ ।
ಅಸ್ತಿ ಹ್ಯೇವ ಮಹೋತ್ಸೇಧೋ ಮೇರೋರ್ನಾಮ ಮಹೀಧರಃ ॥ ೨೬ ॥

ಲಸಚ್ಚಂದ್ರಾರ್ಕದೀಪಸ್ಯ ಭೂತವೃಂದಕಲತ್ರಿಣಃ ।
ಬ್ರಹ್ಮಾಂಡಮಂಡಪಸ್ಯಾಂತಸ್ತಂಭಃ ಕನಕನಿರ್ಮಿತಃ ॥ ೨೭ ॥

ಸೌವರ್ಣಚಂದ್ರಪೀಠಾಢ್ಯೋ ರತ್ನಾಢ್ಯಶಿಖರಾಂಗುಲಿಃ ।
ಧ್ವನದ್ದ್ವೀಪಾಬ್ಧಿವಲಯೋ ಭುವೋಽನ್ನಮಿತೋ ಭುಜಃ ॥ ೨೮ ॥

---

೨೫. ಕಾಗೆಗಳು ಹೇಳಿದರು :—ತಂದೆಯೇ, ಬ್ರಾಹ್ಮೀ ದೇವಿಯ ಪ್ರಸಾದದಿಂದ, ಜ್ಞೇಯ (ವಾದ ಬ್ರಹ್ಮವಸ್ತು) ವನ್ನು ಚೆನ್ನಾಗಿ ತಿಳಿದೆವು. ಆದರೆ, ನಮಗೆ ಈಗ ಏಕಾಂತವಾಸಕ್ಕೆ ಅನುಕೂಲವಾದ ಉತ್ತಮ ಸ್ಥಾನವೊಂದು ಬೇಕಾಗಿರುವುದು.

೨೬. ಚಂಡನು ಹೇಳಿದನು :—ಸರ್ವರತ್ನ ಗಣಗಳಿಗೂ ಆಧಾರನೂ, ಸಮಸ್ತ ಸುರರಿಗೂ ಆಶ್ರಯನೂ ಆಗಿ ಬಹಳ ಎತ್ತರವಾಗಿರುವ ಮೇರುವೆಂಬ ಪರ್ವತವುಂಟು.

೨೭. ಸೂರ್ಯಚಂದ್ರರೆಂಬ ದೀಪಗಳಿಂದ ಬೆಳಗುತ್ತ, ಪ್ರಾಣಿಗಳ ಗುಂಪುಗಳೇ ಕುಟುಂಬವಾಗುಳ್ಳ, ಬ್ರಹ್ಮಾಂಡ ಮಂಟಪದ ಕನಕ ನಿರ್ಮಿತವಾದ ಮಧ್ಯ ಸ್ತಂಭವದು.

೨೮. ಚಿನ್ನದಿಂದ ಮಾಡಿದ ಚಂದ್ರಾಕಾರವಾದ ಪೀಠವು ಅಲ್ಲಿ ಇರುವುದು. ರತ್ನಮಯವಾದ ಶಿಖರಗಳೂ ಅಂಗುಲಿಗಳನ್ನುಳ್ಳುದಾಗಿ, ಶಬ್ದಮಾಡುತ್ತಿರುವ ದ್ವೀಪಗಳೂ ಸಮುದ್ರಗಳೂ ಎಂಬ ವಲಯಗಳನ್ನು ಧರಿಸಿ ಭೂಮಿಯು ಎತ್ತಿರುವ ಭುಜವೋ ಎಂಬಂತಿರುವುದು.

ವೃತಃ ಕುಲಾದ್ರಿ ಸಾಮಂತೈರ್ಜಂಬೂದ್ವೀಪಾಸನೇ ಸ್ಥಿತಃ |
ರಾಜಾ ಚಂದ್ರಾರ್ಕನಯನೇ ಭ್ರಮಯನ್ ಶೈಲಸಂಸದಿ || ೨೯ ||

ತಾರೌಘ ಮಾಲತೀಮಾಲ್ಯೋ ದಿಗ್ದಶೈಕಾಂಬರಾಂಬರಃ|
ನಾಗಜಾತಿದ್ವಯಸ್ಥಾತ್ಮಾ ನಾಕನಾಯಕ ಭೂಷಣಃ || ೩೦ ||

ದಿಗಂಗನಾಭಿರಭಿತೋ ರಮ್ಯಾಭಿಃ ಪುರಭೂಷಣೈಃ |
ಏಷ ನಿಸ್ಯಂದಿಭಿ ಃ ಶೀತೈರ್ವೀಜಿತೋ ಘನಚಾಮರೈಃ || ೩೧ ||

ಷೋಡಶಾಸ್ಯ ಸಹಸ್ರಾಣಿ ಯೋಜನಾನಾಮಧಃ ಕ್ಷಿತೌ |
ಸ್ಥಿತಾಃ ಪಾದಾಃ ಪ್ರಪೂಜ್ಯಂತೇ ನಾಗಾಸುರಮಹೋರಗೈಃ || ೩೨ ||

ಅಶೀತಿಶ್ಚ ಸಹಸ್ರಾಣಿ ದೇಹೋಸ್ಯಾರ್ಕೇಂದುಲೋಚನಃ |
ಪೂಜ್ಯತೇ ನಾಕಸದನೇ ಸುರಗಂಧರ್ವಕಿಂನರೈಃ || ೩೩ ||

---

೨೯. ಜಂಬೂದ್ವೀಪವೆಂಬ ಆಸನದಲ್ಲಿ ಕುಲಪರ್ವತಗಳೆಂಬ ಸಾಮಂತರಿಂದ ಪರಿವೃತವಾಗಿ, ಸೂರ್ಯಚಂದ್ರರೆಂಬ ಕಣ್ಣುಗಳುಳ್ಳ ಪರ್ವತಸಭೆಯಲ್ಲಿ ರಾಜನಾಗಿ ಕುಳಿತಿರುವನು.

೩೦. ತಾರಾ ಸಮೂಹಗಳೆಂಬ ಮಾಲತೀ ಪುಷ್ಪಹಾರಗಳನ್ನು ಧರಿಸಿರುವನು. ಹತ್ತು ದಿಕ್ಕುಗಳೆಂಬ ಆಕಾಶವನ್ನೇ ವಸ್ತ್ರವನ್ನಾಗಿ ಉಟ್ಟಿರುವನು. ನಾಗ (ಹಾವು, ಆನೆ) ಗಳಿಗೆಲ್ಲ ಆಧಾರನಾಗಿ, ದೇವತೆಗಳಿಗೆಲ್ಲ ಭೂಷಣನಾಗಿರುವನು.

೩೧. ಆತನ ಸುತ್ತಲೂ ಬಹು ಭೂಷಣೆಯರಾದ ದಿಗಂಗನೆಯರು ಮೋಡ ಗಳೆಂಬ ಚಾಮರಗಳನ್ನು ಹಿಡಿದು ತಣ್ಣಗೆ ಗಾಳಿಯು ಬರುವಂತೆ ಬೀಸ ತ್ತಿರುವರು.

೩೨. ಆತನ ಪಾದಗಳನ್ನು ಭೂಮಿಯು ಕೆಳಗೆ ಹದಿನಾರು ಸಾವಿರ ಯೋಜನ ಗಳಷ್ಟು ದೂರದಲ್ಲಿರುವ ಪಾತಾಳದಲ್ಲಿ ನಾಗರು, ಅಸುರರು, ಮಹೋರಗರು, ಇವರು ಭಕ್ತಿಯಿಂದ ಪೂಜಿಸುತ್ತಿರುವರು.

೩೩. ಭೂಮಿಯಿಂದ ಎಂಭತ್ತು ಸಾವಿರ ಯೋಜನಗಳ ಮೇಲೆ ಇರುವ

ಚತುರ್ದಶವಿಧಾನ್ಯೇನಂ ಗೃಹಸ್ಥಮಿವ ಬಾಂಧವಾಃ |
ಉಪಜೀವಂತಿ ಭೂತಾನಿ ಮಿಥೋ ದೃಷ್ಟಪುರಾಸ್ಪದಂ || ೩೪ ||

ಅಸ್ಯ ತ್ವೀಶಾನದಿಗ್ಭಾಗೇ ಪದ್ಮರಾಗಮಯಂ ಬೃಹತ್ |
ವಿದ್ಯತೇ ಶೃಂಗಮುಪರೋ ದಿವಾಕರ ಇವೋದಿತಃ || ೩೫ ||

ಅಸ್ಯಾಸ್ತಿ ಪೃಷ್ಠೇ ಭೂತೌಘವೃತಃ ಕಲ್ಪತರುರ್ಮಹಾನ್ |
ಜಗತಃ ಶಿಖರಾದರ್ಶೇ ಪ್ರತಿಬಿಂಬಮಿವ ಸ್ಥಿತಃ || ೩೬ ||

ತಸ್ಯಾಸ್ತಿ ದಕ್ಷಿಣಸ್ಕಂಧೇ ಶಾಖಾ ಕನಕಪಲ್ಲವಾ |
ರತ್ನಸ್ತಬಕನೀರಂಧ್ರಾ ಚಂದ್ರಬಿಂಬೋಲ್ಲಸತ್ಫಲಾ || ೩೭ ||

ಸ್ವರ್ಗದಲ್ಲಿ ಸೂರ್ಯಚಂದ್ರರೇ ಲೋಚನಗಳಾಗುಳ್ಳ ಈತನ ದೇಹವು ಸುರರು ಗಂಧರ್ವರು, ಕಿನ್ನರರು, ಪೂಜಿಸುತ್ತಿರುವರು.

೩೪. ಬಾಂಧವರು ಗೃಹಸ್ಥನನ್ನು ಆಶ್ರಯಿಸಿಕೊಂಡಿರುವಂತೆ, ಹದಿನಾಲ್ಕು ವಿಧವಾದ ಪ್ರಾಣಿಜಾತಿಗಳು, ಒಬ್ಬರು ಇರುವುದು ಇನ್ನೊಬ್ಬರು ಕಾಣದಷ್ಟು ದೂರಗಳಲ್ಲಿ ಪುರಗಳನ್ನು ಕಟ್ಟಿಕೊಂಡು ಈ ಪರ್ವತದಲ್ಲಿ ಬಾಳುತ್ತಿರುವರು.

(ಬ್ರಹ್ಮರ್ಷಿಗಳು, ದೇವರ್ಷಿಗಳು, ರಾಜರ್ಷಿಗಳು, ದೇವತೆಗಳು, ಪಿತೃಗಳು, ಗಂಧರ್ವರು, ಕಿನ್ನರರು, ಅಪ್ಸರರು, ವಿದ್ಯಾಧರರು, ಯಕ್ಷರು, ರಾಕ್ಷಸರು, ಪ್ರಮಥರು, ಗುಹ್ಯಕರು, ನಾಗರು ಇವರು ಚತುರ್ದಶ ಭೂತಗಳು. ತಾ. ಪ್ರ.)

೩೫. ಈ ಪರ್ವತದ ಈಶಾನ್ಯ ದಿಗ್ಭಾಗದಲ್ಲಿ, ಉದಯಿಸಿದ ಇನ್ನೊಬ್ಬ ಸೂರ್ಯನೆಂಬಂತೆ ಪದ್ಮರಾಗಮಯವಾಗಿ ದೊಡ್ಡದಾಗಿ ಇರುವ ಒಂದು ಶಿಖರವಿರುವುದು.

೩೬. ಆ ಶಿಖರದ ಕಿಬ್ಬದಿಯಲ್ಲಿ ಒಂದು ದೊಡ್ಡ ಕಲ್ಪತರುವಿರುವುದು. ಅದನ್ನು ಎಷ್ಟೋ ಪ್ರಾಣಿಗಳು ಆಶ್ರಯಿಸಿರುವರು. ಮೇರು ಶಿಖರವೆಂಬ ಕನ್ನಡಿಯಲ್ಲಿ ಕಾಣಿಸುತ್ತಿರುವ ಜಗತ್ತಿನ ಪ್ರತಿಬಿಂಬವೋ ಎಂಬಂತೆ ಈ ಮಹಾವೃಕ್ಷವಿರುವುದು.

೩೭. ಆ ಮಹಾವೃಕ್ಷದ ದಕ್ಷಿಣ ಭಾಗದಲ್ಲಿ, ಚಿನ್ನದ ಚಿಗುರುಗಳನ್ನು ಬಿಡುವ ಶಾಖೆಯೊಂದಿರುವುದು. ಅದರಲ್ಲಿ ರತ್ನದ ಹೂಗಳು ನಿಬಿಡವಾಗಿ ತುಂಬಿರುವುವು. ಚಂದ್ರಬಿಂಬಗಳೇ ಫಲಗಳಾಗಿರುವುವು.

ತತ್ರ ಪೂರ್ವಂ ಮಯಾ ನೀಡಂ ಕೃತಮಾಸೀತ್ಸ್ಫುರನ್ಮಣಿ |
ದೇವ್ಯಾಂ ಧ್ಯಾನನಿಷಣ್ಣಾಯಾಂ ಯಸ್ಮಿಂಕಿಲ ರಮೇ ಸುತಾಃ || ೩೮ ||

ರತ್ನಪುಷ್ಪದಲಚ್ಛನ್ನಂ ರಸಾಯನಫಲಾನ್ವಿತಂ |
ಚಿಂತಾಮಣಿಶಲಾಕಾಭಿರ್ವಿಹಿತಾಲಿಂದಸಂಸ್ಥಿತಿ || ೩೯ ||

ಬುದ್ಧಿಪೂರ್ವಸಮಾಚಾರೈಃ ಸಂಪೂರ್ಣಾಂ ಕಾಕಪುತ್ರಕೈಃ |
ಶೀತಲಾಭ್ಯಂತರಾಂ ಹೃದ್ಯಂ ಪೂರಿತಂ ಕುಸುಮೋತ್ಕರೈಃ || ೪೦ ||

ತದ್ಗಚ್ಛತ ಸುತಾಂ ನೀಡಾಂ ದುರ್ಗಂ ನಾಕನತಾಮಪಿ |
ಭೋಗಂ ಮೋಕ್ಷಂ ಚ ತತ್ರಸ್ಥಾ ನಿರ್ವಿಘ್ನಮಲಮಾಪ್ಸ್ಯಥ || ೪೧ ||

ಇತ್ಯುಕ್ತ್ವಾಸ್ಮಾನ್ಪಿತಾ ತತ್ರ ಚುಚುಂಬಾಭ್ಯಾಲಿಲಿಂಗ ಚ |
ದದೌ ದೇವ್ಯಾ ಯದಾ ನೀತಮಸ್ಮಭ್ಯಂ ಚ ತದಾಮಿಷಂ || ೪೨ ||

---

೩೮. ಹಿಂದೆ ದೇವಿಯು ಧ್ಯಾನಾರೂಢಳಾಗಿದ್ದಾಗ ರತ್ನಕಾಂತಿಯಿಂದ ಕೂಡಿರುವ ಆ ಸ್ಥಳದಲ್ಲಿ ನಾನು ವಾಸವಾಗಿದ್ದೆನು. ಈಗಲೂ ನನಗೆ ಅಲ್ಲಿರಲು ಸಂತೋಷವಾಗುವುದು.

೩೯. ರತ್ನಪುಷ್ಪಗಳ ದಳಗಳಿಂದ ಆಚ್ಛಾದಿತವಾಗಿ, ಅಮೃತರಸಾಯನವನ್ನು ನೀಡುವ ಫಲಗಳಿಂದ ತುಂಬಿ, ಚಿಂತಾಮಣಿಯ ತುಂಡುಗಳಿಂದ ಮಾಡಿರುವ ಹೊರಬಾಗಿಲುಳ್ಳ ಆ ದೇಶದಲ್ಲಿ,

೪೦. ವಿಚಾರಪೂರ್ವಕವಾಗಿ ವ್ಯವಹಾರಮಾಡುವ ಕಾಗೆಗಳ ಬಳಗವು ಬೇಕಾದಷ್ಟು ಹೂಗಳಿಂದ ತುಂಬಿರುವ ಆ ಪ್ರದೇಶವನ್ನು ಆಶ್ರಯಿಸಿರುವುದು.

೪೧. ಮಕ್ಕಳೆ, ನೀವು ಆ ಸ್ಥಳವನ್ನು ಹೋಗಿ ಸೇರಿ, ಅದು ದೇವತೆಗಳಿಗೂ ಸಾಧ್ಯವಲ್ಲದ ಮಾರ್ಗವು. ನೀವು ಅಲ್ಲಿಯೇ ಇದ್ದರೆ ಭೋಗ ಮೋಕ್ಷಗಳು ನಿಮಗೆ ಸುಲಭವಾಗುವುವು.

೪೨. ಹೀಗೆಂದು ಹೇಳಿ ನಮ್ಮ ತಂದೆಯು ನಮ್ಮನ್ನು ಆಲಿಂಗಿಸಿಕೊಂಡು ಮುತ್ತಿಟ್ಟು, ದೇವಿಯು ತಂದಿದ್ದ ಮಾಂಸವನ್ನು ನಮಗೆ ಕೊಟ್ಟು ಕಳುಹಿಸಿದನು.

ತದ್ಭುಕ್ತ್ವಾ ಚರಣೌ ದೇವ್ಯಾಃ ಪಿತುಶ್ಚೈವಾಭಿವಾದ್ಯ ಚ ।
ವಿಂಧ್ಯಕಚ್ಛಾದ್ವಯಂ ತಸ್ಮಾತ್ಸ್ಥಾನಾದಾಲಂಬುಸಾತ್ಪ್ಲುತಾಃ ॥ ೪೩ ॥

ಕ್ರಮೇಣಾಕಾಶಮುಲ್ಲಂಘ್ಯ ನಿರ್ಗತ್ಯಾಂಬುದಕೋಟರೈಃ ।
ಪವನಸ್ಕಂಧಮಾಸಾದ್ಯ ವಂದಿತವ್ಯೋಮಚಾರಿಣಃ ॥ ೪೪ ॥

ಪರಿಹೃತ್ಯ ದಿನಾಧೀಶಂ ಲೋಕಾಂತರಪುರಂ ಗತಾಃ ।
ಸ್ವರ್ಗಮುಲ್ಲಂಘ್ಯ ಯಾತಾ ಸ್ಮೋ ಬ್ರಹ್ಮಲೋಕಂ ಮುನೀಶ್ವರ ॥ ೪೫ ॥

ಪ್ರಣಾಮಪೂರ್ವಂ ತತ್ರೈತದ್ಯಥಾವತ್ತತ್ಪಿತುರ್ವಚಃ ।
ಮಾತ್ರೇ ಚ ಭಗವತ್ಯೈ ಚ ಬ್ರಾಹ್ಮ್ಯೈ ಚಾಶು ನಿವೇದಿತಂ ॥ ೪೬ ॥

ತಾಭ್ಯಾಂ ಸಸ್ನೇಹಮಾಲಿಂಗ್ಯ ಗಚ್ಛತೇತ್ಯಾಜ್ಞಯೈಧಿತಾಃ ।
ವಯಂ ಕೃತನಮಸ್ಕಾರಾಃ ಬ್ರಹ್ಮಲೋಕಾದ್ವಿನಿರ್ಗತಾಃ ॥ ೪೭ ॥

ಉಲ್ಲಂಘ್ಯ ಲೋಕಪಾಲಾನಾಂ ಪುರೀಸ್ತಪನಭಾಸ್ವರಾಃ ।
ಆಕಾಶಗಾಮಿನೋಽಲೋಲಾಃ ಪವನಸ್ಕಂಧಚಾರಿಣಃ ॥ ೪೮ ॥

---

೪೩. ಆ ಮಾಂಸ ಪ್ರಸಾದವನ್ನು ಗ್ರಹಿಸಿ ದೇವಿಯ ಚರಣಗಳನ್ನು ವಂದಿಸಿ, ತಂದೆಯ ಕಾಲಿಗೆ ನಮಸ್ಕಾರ ಮಾಡಿ ವಿಂಧ್ಯಪರ್ವತ ಪ್ರದೇಶದಲ್ಲಿರುವ ಆ ಅಲಂಬುಸಾಸ್ಥಾನದಿಂದ ನಾವು ಹೊರಟೆವು.

೪೪. ಕ್ರಮೇಣ ಆಕಾಶವನ್ನು ದಾಟಿ, ಮೇಘಕಕ್ಷ್ಯವನ್ನು ಹಾದು, ಪವನ ವೀಥಿಯನ್ನು ಹೊಂದಿ, ಆಕಾಶ ಸಂಚಾರಿಗಳೆಲ್ಲರಿಗೂ ನಮಸ್ಕಾರಮಾಡಿ,

೪೫. ಸೂರ್ಯನನ್ನು ಒಂದೆಡೆಗೆ ಬಿಟ್ಟುಕೊಂಡು, ಅಮರಾವತಿಗೆ ಬಂದೆವು. ಅಲ್ಲಿಂದ ಹೊರಟು ಮುನೀಂದ್ರನೇ, ಬ್ರಹ್ಮಲೋಕವನ್ನು ಸೇರಿದೆವು.

೪೬-೭. ಅಲ್ಲಿ ಪ್ರಣಾಮಪುರಸ್ಸರವಾಗಿ ತಂದೆಯು ಹೇಳಿದ ಮಾತನ್ನು ತಿಳಿಸಿ, ಬ್ರಾಹ್ಮೀಭಗವತಿಗೆ ತಾಯಿಯರಿಗೂ ತಿಳಿಸಿ, ಅವರು ಸ್ನೇಹಪೂರ್ವಕವಾಗಿ ನಮ್ಮನ್ನು ಆಲಿಂಗಿಸಿ, ಹೋಗಿ ಬನ್ನಿರೆಂದು ಆಜ್ಞೆಯನ್ನು ಕೊಡಲು, ಅವರಿಗೆ ಮತ್ತೆ ನಮಸ್ಕಾರ ಮಾಡಿ, ಬ್ರಹ್ಮಲೋಕದಿಂದ ಹೊರಟೆವು.

೪೮. ಸೂರ್ಯನಂತೆ ಬೆಳಗುತ್ತಿರುವ ಲೋಕಪಾಲಕ ನಗರಗಳನ್ನೆಲ್ಲ ಕಳೆದು, ಆಕಾಶಮಾರ್ಗದಲ್ಲಿ ಪವನವೀಧಿಯಲ್ಲಿ ಹಾರುತ್ತಾ ಬಂದೆವು.

ಇಮಂ ಕಲ್ಪತರುಂ ಪ್ರಾಪ್ಯ ನಿಜಂ ನೀಡಂ ಪ್ರವಿಶ್ಯ ಚ |
ದೂರಸ್ಥಬಾಧಾಸ್ತಿಷ್ಠಾಮೋ ಮುನೇ ಮೌನಮುಪಸ್ಥಿತಾಃ || ೪೯ ||

ಜಾತಾ ಯಥಾ ವಯಮಿಮೇ ಸ್ಥಿತಿಮಾಗತಾಶ್ಚ |
ಸಂಪ್ರಾಪ್ಯ ಬೋಧಮುಪಶಾಂತಧಿಯೋ ಯಥಾವತ್ ||
ಏತತ್ತದುಕ್ತಮಖಿಲಂ ಮಯಾ ತೇ |
ಶೇಷೇಣ ಮಾಂ ಸಮನುಶಾಧಿ ಮಹಾನುಭಾವ || ೫೦ ||

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕಿಯೇ ದೇವದೂತೋಕ್ತೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ ಭುಶುಂಡೋಪಾಖ್ಯಾನೇ "ಆಲಯಲಾಭೋ" ನಾಮ ಏಕೋನವಿಂಶತಿಃ ಸರ್ಗಃ

---

೪೯. ಈ ಕಲ್ಪತರುವನ್ನು ಸೇರಿ, (ತಂದೆಯು ಹೇಳಿದ್ದಂತೆ) ನಮ್ಮ ಮನೆಗೆ ಬಂದು, ಯಾವ ಬಾಧೆಗಳೂ ಇಲ್ಲದೆ ಮುನೀಂದ್ರನೆ, ಮೌನವನ್ನು ಆಶ್ರಯಿಸಿ ಸುಖವಾಗಿರುವೆವು.

೫೦. ಮಹಾನುಭಾವನಾದ ವಸಿಷ್ಠನೆ ಈಗ ನಾವು ಹೇಗೆ ಹುಟ್ಟಿದೆವು? ಈ ಸ್ಥಿತಿಗೆ ಹೇಗೆ ಬಂದೆವು? ಬ್ರಹ್ಮಜ್ಞಾನವನ್ನು ಪಡೆದು ಉಪಶಾಂತಚಿತ್ತರಾದುದು ಹೇಗೆ? ಎಂಬ ಈ ಎಲ್ಲವನ್ನೂ ಯಥಾವತ್ತಾಗಿ ನಿನಗೆ ಹೇಳಿಯಾಯಿತು. ಇನ್ನೂ ಏನು ಕೇಳಬೇಕೆಂದಿರುವೆಯೋ ಹೇಳು, ಅಪ್ಪಣೆಮಾಡು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ ನಿರ್ವಾಣಪ್ರಕರಣದ ಭುಶುಂಡೋಪಾಖ್ಯಾನದಲ್ಲಿ "ಆಲಯಾಲಾಭ" ಎಂಬ ಹತ್ತೊಂಬತ್ತನೆಯ ಸರ್ಗವು

ವಿಂಶಃ ಸರ್ಗಃ

ಭುಶುಂಡ ಉವಾಚ —

ಆಸೀತ್ಕಿಂಚಿತ್ಪುರಾ ಕಲ್ಪೇ ಜಗದ್ಯಚ್ಚಿರಮಾಸ್ಥಿತಂ |
ಸಂನಿವೇಶೇನ ಚೈತದ್ವದದ್ಯಾಪಿ ಚ ನ ದೂರಗಂ ॥ ೧ ॥

ತದೇತದ್ವೃತ್ತಮಭ್ಯಾಸಾದ್ವರ್ತಮಾನೇನ ವರ್ಣಿತಂ |
ಮಯಾ ಮುನೀಂದ್ರ ಬೋಧಾಯ ಪ್ರಾಗ್ಜನ್ಮಸಾಮ್ಯದರ್ಶಿನಾ ॥ ೨ ॥

ಅದ್ಯ ಮೇ ಫಲಿತಂ ಪುಣ್ಯೈಃ ಚಿರಕಾಲೋಪಸಂಭೃತೈಃ |
ನಿರ್ವಿಘ್ನಮೇವ ಪಶ್ಯಾಮಿ ಯದ್ಭವಂತಂ ಮುನೇ ತತಃ ॥ ೩ ॥

ಇಪ್ಪತ್ತನೆಯ ಸರ್ಗ

೧. ಭುಶುಂಡನು ಹೇಳಿದನು:—ಹಿಂದಿನ ಕಲ್ಪದಲ್ಲಿ ಬಹುಕಾಲದಿಂದ ಜಗತ್ತು ಒಂದಿತ್ತು. ಅದೂ ಎಲ್ಲ ವಿಧದಲ್ಲಿಯೂ ಈ ಜಗತ್ತಿನಂತೆಯೇ ಇತ್ತು. ಅಷ್ಟೇ ಅಲ್ಲ: ಅದು ಬಹಳ ದೂರದಲ್ಲಿಯೂ ಇರಲಿಲ್ಲ.

೨. ಅದು ಬಹಳ ಹಿಂದಿನ ಕಾಲದ ಮಾತು. ಆದರೂ ಅದನ್ನು ಈಗಿರುವ ಜಗತ್ತಿನಂತೆಯೇ ಎಂದು ಅಭ್ಯಾಸದಿಂದ ವರ್ಣಿಸಿದೆನು. ಹಿಂದಿನ ಜನ್ಮದಂತೆಯೇ ಈ ಜನ್ಮವೂ ಇರುವುದರಿಂದ, ಎಲೈ ಮುನೀಂದ್ರನೆ, ಹಾಗೆ ಮಾಡಿದೆನು.

೩. ನಾನು ಬಹುಕಾಲದಿಂದ ಮಾಡಿದ ಪುಣ್ಯವೆಲ್ಲವೂ ಈಗ ನನಗೆ ಫಲಿಸಿತು. ಆ ಪುಣ್ಯದ ಬಲದಿಂದಲೇ ನಾನು ನಿನ್ನನ್ನು ಈಗ ನಿರ್ವಿಘ್ನವಾಗಿ ನೋಡಿದೆನು.

ಇದಂ ನೀಡಮಿನಾಂ ಶಾಖಾಮಹಂ ಚಾಯಮಯಂ ದ್ರುಮಃ |
ಅದ್ಯ ಪಾವನತಾಂ ಪ್ರಾಪ್ತಾನ್ಯೇತಾನಿ ತವ ದರ್ಶನಾತ್ || ೪ ||

ಇದಮರ್ಘ್ಯಮಿದಂ ಪಾದ್ಯಂ ಗೃಹಿತ್ವಾ ವಿಹಗಾರ್ಪಿತಂ |
ನೂನಂ ಪಾವನತಾಂ ನೀತ್ವಾ ಶೇಷೇಣಾದಿಶ ಚಾಶು ಭೋಃ || ೫ ||

ಶ್ರೀ ವಸಿಷ್ಠ ಉವಾಚ—

ಇದಮರ್ಘ್ಯಂ ಚ ಪಾದ್ಯಂಚ ಭೂಯೋ ದತ್ತವತಿ ಸ್ವಯಂ |
ಭುಶುಂಡ ವಿಹಗೇ ತಸ್ಮಿನ್ನಿದಂ ರಾಮಾಹಮುಕ್ತವಾನ್ || ೬ ||

ಭ್ರಾತರಸ್ತೇ ವಿಹಂಗೇಶ ತಾದೃಕ್ಸತ್ವಾ ಮಹಾಧಿಯಃ |
ಇಹ ಕಸ್ಮಾನ್ನ ದೃಶ್ಯಂತೇ ತ್ವಮೇವೈಕೋ ಹಿ ದೃಶ್ಯಸೇ || ೭ ||

ಭುಶುಂಡ ಉವಾಚ —

ತಿಷ್ಠತಾಮಿಹ ನಃ ಕಾಲೋ ಮಹಾನತಿಗತೋ ಮುನೇ |
ಯುಗಾನಾಂ ಪಂಕ್ತಯಃ ಕ್ಷೀಣಾ ದಿವಸಾನಾಮಿವಾನಘ || ೮ ||

---

೪. ಈ ನಮ್ಮ ಮನೆ, ಈ ಶಾಖೆ, ಈ ನಾನು, ಈ ಕಲ್ಪತರು, ಇವೆಲ್ಲವೂ ನಿನ್ನ ದರ್ಶನದಿಂದ ಪಾವನವಾದುವು.

೫. ಎಲೈ ಮಹಾನುಭಾವನೆ, ಹಕ್ಕಿಗಳಾದ ನಾವು ಇದೋ ಈ ಅರ್ಘ್ಯವನ್ನು ಒಪ್ಪಿಸುವೆವು: ಇದೋ ಈ ಪಾದ್ಯವನ್ನು ಅರ್ಪಿಸುವೆವು: ಇವೆಲ್ಲವನ್ನೂ ಸ್ವೀಕರಿಸಿ, ನಮ್ಮೆಲ್ಲರನ್ನೂ ಪಾವನರನ್ನಾಗಿ ಮಾಡಿ, ಇನ್ನು ಮುಂದೆ ನಾವೇನು ಮಾಡಬೇಕೋ ಅಪ್ಪಣೆ ಕೊಡಿಸು.

೬. ಶ್ರೀ ವಸಿಷ್ಠನು ಹೇಳಿದನು:—ಹೀಗೆ, ಇದೋ ಅರ್ಘ್ಯ, ಇದೋ ಪಾದ್ಯ ಎಂದು ಆ ಭುಶುಂಡ ವಿಹಗನು ಒಪ್ಪಿಸಲು, ಆಗ ನಾನು, ರಾಮ ಹೀಗೆ ಹೇಳಿದೆನು.

೭. ಎಲೈ ವಿಹಗೇಂದ್ರನೆ, ಮಹಾಬಲರೂ ಮಹಾಮತಿಗಳೂ ಆದ ಆ ನಿನ್ನ ಒಡಹುಟ್ಟುಗಳು ಇಲ್ಲಿ ಏಕೆ ಕಾಣುವುದಿಲ್ಲ? ನೀನೊಬ್ಬನೇ ಕಾಣುತ್ತಿರುವೆಯಲ್ಲ?

೮. ಭುಶುಂಡನು ಹೇಳಿದನು:—ಇಲ್ಲಿಯೇ ಇರುವ ನಮಗೆ ಎಷ್ಟೋ

ಏತಾವತಾಥ ಕಾಲೇನ ಸರ್ವ ಏವ ಮಮಾನುಜಾಃ |
ತನೂಸ್ತೃಣಮಿವ ತ್ಯಕ್ತ್ವಾ ಶಿವೇ ಪರಿಣತಾಃ ಪದೇ || ೯ ||

ದೀರ್ಘಾಯುಷೋ ಮಹಾಂತೋಪಿ ಸಂತೋಪಿ ಬಲಿನೋಪಿ ಚ |
ಸರ್ವ ಏವ ನಿಗೀರ್ಯಂತೇ ಕಾಲೇನಾಕಲಿತಾತ್ಮನಾ || ೧೦ ||

ಶ್ರೀ ವಸಿಷ್ಠ ಉವಾಚ—

ಸ್ಕಂಧವ್ಯೂಢಾರ್ಕಶಶಿಷು ವಹತ್ಸ್ವವಿರತಂ ಜವಾತ್ |
ವಾತಸ್ಕಂಧಾತಿವಾತೇಷು ಕಚ್ಚಿತ್ತಾತ ನ ಖಿದ್ಯಸೇ || ೧೧ ||

ದಗ್ಧೋದಯಾಸ್ತಶೈಲೇಂದ್ರವನವ್ಯೂಹೈ ರವೇಃ ಕರೈಃ |
ಚಿರಮತ್ಯಂತಮಾಸನ್ನೈಃ ಕಚ್ಚಿತ್ತಾತ ನ ಖಿದ್ಯಸೇ || ೧೨ ||

ಕಾಲವು ಕಳೆದು ಹೋಯಿತು. ಯುಗಯುಗಗಳು ಸಾಲುಸಾಲಾಗಿ ದಿನಗಳಂತೆ ಕ್ಷಯವಾಗಿ ಹೋದುವು.

೯. ಈ ಮಹಾಕಾಲದಲ್ಲಿ ನನ್ನ ಒಡಹುಟ್ಟುಗಳೆಲ್ಲರೂ ದೇಹಗಳನ್ನು ತೃಣ ದಂತೆ ತ್ಯಜಿಸಿ ಶಿವಪದವನ್ನು ಸೇರಿದರು.

೧೦. ದೀರ್ಘಾಯುಷ್ಯವಂತರಾಗಿ, ಸಾಧುಗಳಾಗಿ, ಮಹಾಬಲಿಷ್ಠರಾಗಿದ್ದರೂ ಕೂಡ, ಸರ್ವರನ್ನೂ ಅದೃಶ್ಯನಾಗಿಯೇ ಇರುವ ಕಾಲನು ನುಂಗಿ ಬಿಡುವನಲ್ಲವೆ ?

೧೧. ಶ್ರೀ ವಸಿಷ್ಠನು ಹೇಳಿದನು :—ಈ ಮರದ ಕೊಂಬೆಗಳಲ್ಲಿ ದ್ವಾದಶಾ ದಿತ್ಯರೂ ಚಂದ್ರರೂ ಮಾಲೆಗಳಂತೆ ಸೇರಿ ಹೋಗುವಾಗ,ಪ್ರಲಯ ಕಾಲದ ಮಾರುತ ಗಳು ತಾವೇತಾವಾಗಿ ಬೀಸುವಾಗ, ನೀನೆಂತು ಖೇದಪಡದಿರುವೆ ?

೧೨. ನಿನ್ನ ಪಕ್ಕದಲ್ಲಿರುವ ವನವ್ಯೂಹಗಳು ಪ್ರಲಯ ಕಾಲದ ಸೂರ್ಯನ ಕಿರಣ ಗಳಿಂದ ದಗ್ಧಗಳಾಗಿ ದಗ್ಧಗಳಾಗಿ ಹುಟ್ಟಿ ಹುಟ್ಟಿ ಸಾಯುತ್ತಿರಲು ನೀನೆಂತು ಖೇದ ಪಡದಿರುವೆ ?

ಇಂದೋರಥ ಕರೈಃ ಶೀತೈಃ ಪಾಷಾಣೀಕೃತವಾರಿಭಿಃ |
ಆಸನ್ನಕರಕಾಪಾತೈಃ ಕಚ್ಚಿತಾತ ನ ಖಿದ್ಯಸೇ ॥ ೧೩ ॥

ಅಜಸ್ರಮಿಹ ವಿಶ್ರಾಂತೈಃ ಕಲ್ಪಜೀಮೂತಮಂಡಲೈಃ |
ಪರಶುಚ್ಛೇದನೀಹಾರೈಃ ಕಚ್ಚಿತ್ತಾತ ನ ಖಿದ್ಯಸೇ ॥ ೧೪ ॥

ವಿಷಮೈರ್ಜಾಗತೈಃ ಕ್ಷೋಭೈರುಚ್ಚೈಸ್ತರಪದಸ್ಥಿತಃ |
ಕಥಂ ನ ಕ್ಷೋಭಮಾಯಾತಿ ಕಲ್ಪವೃಕ್ಷೋಯಮುನ್ನತಃ ॥ ೧೫ ॥

ಭುಶುಂಡ ಉವಾಚ—

ನಿರಾಲಂಬಾಸ್ಪದಾ ಬ್ರಹ್ಮನ್ಸರ್ವಲೋಕಾವಹೇಲಿತಾ |
ತುಚ್ಛೇಯಂ ಸರ್ವಭೂತಾನಾಂ ಮಧ್ಯೇ ವಿಹಗಜೀವಿಕಾ ॥ ೧೬ ॥

ಈದೃಶೇಷು ಚ ಭೂತೇಷು ನಿರ್ಜರೇಷು ವನೇಷುಚ |
ಕಲ್ಪಿತಾಸ್ಥಾಸ್ಥಿತಿರ್ಧಾತ್ರಾ ಶೂನ್ಯೇ ವಾ ವ್ಯೋಮವರ್ತ್ಮನಿ ॥ ೧೭ ॥

---

೧೩. ಚಂದ್ರನ ಶೀತ ಕಿರಣಗಳಿಂದ ಕಲ್ಲಾದ ನೀರು ಆಲಿಗಲ್ಲುಗಳಾಗಿ ಪಕ್ಕ ಪಕ್ಕದಲ್ಲಿ ಮಳೆಯಂತೆ ಕರೆಯುವಾಗ ನೀನೆಂತು ಖೇದಪಡದಿರುವೆ ?

೧೪. ಪ್ರಲಯ ಕಾಲದ ಕಲ್ಪಮೇಘಗಳು ಒಂದೇ ಸಮನಾಗಿ ಕೊಡಲಿಯು ಹೊಡೆತದಂತೆ ಕ್ರೂರವಾದ ಹಿಮಗಳಿಂದ ಹೊಡೆಯುವಾಗ ನೀನೆಂತು ಖೇದ ಪಡದಿರುವೆ ?

೧೫. ಬಲು ಎತ್ತರವಾದ ಸ್ಥಳದಲ್ಲಿ ಬೆಳೆದಿರುವ ಈ ಉನ್ನತವಾದ ಕಲ್ಪ ವೃಕ್ಷವು ತಾನೇ ಹೇಗೆ ಸಹಿಸಲಸಾಧ್ಯವಾದ ಪ್ರಲಯ ಕಾಲದ ಕ್ಷೋಭಗಳನ್ನು ಸಹಿಸಿ ಬದುಕಿರುವುದು ತಾನೇ ಎಂತು ?

೧೬. ಭುಶುಂಡನು ಹೇಳಿದನು :—ಆಕಾಶವನ್ನು ಅವಲಂಬಿಸಿ ಜೀವಿಸುತ್ತ, ಎಲ್ಲಾ ಜೀವಿಗಳಿಗಿಂತ ನಿಕೃಷ್ಟವೆನ್ನಿಸಿಕೊಂಡು ಇರುವ ಈ ವಿಹಗಜಾತಿಯು, ಎಲೈ ಬ್ರಹ್ಮನ್ನೆ, ಜಾತಿಗಳಲ್ಲೆಲ್ಲಾ ತುಚ್ಛವಾದುದು.

೧೭. ಹೀಗೆ ತುಚ್ಛವಾದ ಈ ಪ್ರಾಣಿಗಳಲ್ಲಿಯೂ ಆಸ್ಥೆಯಿಂದ ವಿಧಾತನು ಜನಶೂನ್ಯವಾದ ವ್ಯೋಮವೀಥಿಗಳಲ್ಲಿಯೂ ಜೀವನವನ್ನು ಕಲ್ಪಿಸಿರುವನು.

ಕಥಮಸ್ಯಾಂ ಪ್ರಭೋ ಜಾತೌ ಜಾತಸ್ಯ ಚಿರಜೀವಿನಃ |
ಆಶಾಪಾಶನಿಬದ್ಧಸ್ಯ ವಿಹಗಸ್ಯ ವಿಶೋಕಿತಾ || ೧೮ ||

ವಯಂ ತು ಭಗವನ್ನಿತ್ಯಮಾತ್ಮಸಂತೋಷಮಾಸ್ಥಿತಾಃ |
ನ ಕದಾಚನ ನೀರೂಪೇ ಮುಹ್ಯಾಮೋ ಜಾತವಿಭ್ರಮೈಃ || ೧೯ ||

ಸ್ವಭಾವಮಾತ್ರಸಂತುಷ್ಟಾಃ ಕಷ್ಟೈರ್ಮುಕ್ತಾ ವಿಚೇಷ್ಟಿತೈಃ |
ಕ್ಷಿಪಾಮಃ ಕೇವಲಂ ಕಾಲಮಸ್ಮಿನ್ಬ್ರಹ್ಮನ್ನಿಜಾಲಯೇ || ೨೦ ||

ನ ಜೀವಿತಾನ್ನ ಮರಣಾತ್ಕರ್ಮದೇಹಸ್ಯ ರೋಧನಂ |
ಯಥಾಸ್ಥಿತೇನ ತಿಷ್ಠಾಮಸ್ತಥೈವಾಸ್ತಂಗತೇಹಿತಾಃ || ೨೧ ||

---

೧೮. ಈ ವಿಹಗಜಾತಿಯಲ್ಲಿ ಹುಟ್ಟಿ ಚಿರಜೀವಿಕೆಯನ್ನು ಪಡೆದವನಿಗೆ, ಎಲೈ ಪ್ರಭುವೆ, ಆಶಾಪಾಶಗಳಿಂದ ಬಿಗಿವಡೆದಿರುವವನಿಗೆ, ಕೇವಲ ಒಂದು ಪಕ್ಷಿ ಮಾತ್ರವಾಗಿರುವವನಿಗೆ ಅದೆಂತು ವಿಶೋಕತೆಯು ಬರುವುದು ?

೧೯. ಆದರೂ, ಎಲೈ ಭಗವಂತನೆ, ನಾವು ಮಾತ್ರ, ಆತ್ಮತೃಪ್ತಿಯನ್ನು ಪಡೆದಿರುವೆವು. ನಮಗೆ ಯಾವಾಗಲೂ ಭ್ರಾಂತಿಯು ಬರುವುದಿಲ್ಲ: ಅಸತ್ಯವಾದ ಜಗತ್ತಿನಲ್ಲಿ ಮೋಹ ಹುಟ್ಟುವುದಿಲ್ಲ.

೨೦. ಸಹಜವಾಗಿ ಸಂತುಷ್ಟರಾದ ನಮಗೆ, ಇತರರ ವ್ಯಾಪಾರಗಳಿಂದ ಏನೂ ಕ್ಲೇಶವಾಗುವುದಿಲ್ಲ. ಆದರಿಂದ ಎಲೈ ಬ್ರಹ್ಮನೆ, ನಾವು ಈ ನಿಜಾಲಯದಲ್ಲಿ ಕುಳಿತು ಕಾಲವನ್ನು ಕೇವಲವಾಗಿ ಕಳೆಯುತ್ತಿರುವೆವು.

(ನಿಜಾಲಯಃ – ತಮ್ಮ ಮನೆ, ಸ್ವಪದ)

೨೧. ಕರ್ಮ ಪ್ರಾಪ್ತವಾಗಿರುವ ಈ ದೇಹವನ್ನು ಜೀವಿಸಿರಲಿ ಎನ್ನದೆ, ಹೋಗಲಿ ಎನ್ನದೆ, ನಮ್ಮ ಪಾಡಿಗೆ ನಾವು, ಇದ್ದುದು ಇದ್ದಂತೆ, ಇದ್ದು ಬಿಡುವೆವು. ನಮಗೆ ಯಾವ ಕಾಮನೆಯೂ ಇಲ್ಲವಾದುದರಿಂದ ಅದು ಸಾಧ್ಯವು.

(ಜೀವಿತಾತ್ ಜೀವನಾತ್, ದೇಹಸ್ಯ ಕರ್ಮ ಐಹಿಕಾಮುಷ್ಮಿಕ ಫಲಾರ್ಥಾಂ ಕ್ರಿಯಾಂ, ನಾಪಿ ಮರಣಾದ್ದೇಹಸ್ಯ ರೋಧನಂ ನಾಶಂ ವಾಂಛಾಮ ಇತ್ಯುಭಯತ್ರ ಶೇಷಃ | ಯಥಾ ಇದಾನೀಂ ಸ್ಥಿತೇನ ನಿತ್ಯಸಿದ್ಧನಿರತಿಶಯಾನಂದಾತ್ಮ

ಆಲೋಕಿತಾ ಲೋಕದಶಾ ದೃಷ್ಟಾ ದೃಷ್ಟಾಂತದೃಷ್ಟಯಃ |
ನೂನಂ ಸಂತ್ಯಕ್ತಮಸ್ಮಾಕಂ ಮನಸಾ ಚಂಚಲಂ ವಪುಃ ‖ ೨೨ ‖

ಅನಾರತನಿಜಾಲೋಕೇ ನಿತ್ಯಂ ಚಾಪರಿತಾಪಿನಿ |
ಕಲ್ಪಾಗಸ್ಯೋಪರಿ ಸದಾ ವೇದ್ಮಿ ಕಾಲಕಲಾಗತಿಂ ‖ ೨೩ ‖

ರತ್ನಗುಚ್ಛಪ್ರಕಾಶಾಢ್ಯೇ ಬ್ರಹ್ಮನ್ಕಲ್ಪಲತಾಗೃಹೇ |
ಪ್ರಾಣಾಪಾನಪ್ರವಾಹೇಣ ವೇದ್ಮಿ ಕಲ್ಪಮಖಂಡಿತಂ ‖ ೨೪ ‖

ಸ್ವಭಾವೇನ ತಿಷ್ಠಾಮಃ ತಥೈವ ಅಗ್ರೇಽಪಿ ತೇನೈವ ಅಸ್ತಂಗತೇಹಿತಾಃ ಪೂರ್ಣಕಾಮಾಃ ಸ್ಥಾಸ್ಯಾಮ ಇತ್ಯರ್ಥಃ ‖ —ತಾ. ಪ್ರ.)

೨೨. ಉತ್ಪತ್ತಿ ಸ್ಥಿತಿ ಮರಣಾದಿಗಳೆಂಬ ಲೋಕದಶೆಗಳನ್ನು ನೋಡಿ ತಿಳಿದಿರುವೆವು. ಈ ಜಗತ್ತೆಲ್ಲವೂ ಸ್ವಪ್ನದಂತೆ ಎಂದು ಅನುಭವದಿಂದ ಕಂಡುಕೊಂಡಿರುವೆವು. ಅದರಿಂದ, ನಿಜವಾಗಿಯೂ ನಮಗೆ ಅಸ್ಥಿರವಾದ ದೇಹದ ಮೇಲಿನ ಅಭಿಮಾನವು ತಪ್ಪಿರುವುದು.

೨೩. ಒಂದೇ ಸಮನಾಗಿರುವ ಬ್ರಹ್ಮದರ್ಶನದಿಂದಲೂ, ಜೊತೆಗೆ ಯಾವುದೊಂದು ಖೇದಕ್ಕೂ ಅವಕಾಶವಿಲ್ಲದಿರುವ ಈ ಕಲ್ಪವೃಕ್ಷದ ಮೇಲೆ ಇರುವುದರಿಂದಲೂ, ಕಾಲದ ಸೂಕ್ಷ್ಮಗತಿಯನ್ನೂ ತಿಳಿಯುತ್ತಿರುವೆನು.

೨೪. ರತ್ನಗುಚ್ಛಗಳ ಪ್ರಕಾಶದಿಂದ ತುಂಬಿರುವ ಈ ಕಲ್ಪಲತಾಗೃಹದಲ್ಲಿ, ಎಲೈ ಬ್ರಹ್ಮನೆ, ಪ್ರಾಣ-ಅಪಾನ ಗತಿಗಳಿಂದ ಕಲ್ಪವನ್ನು (ಪೂರ್ಣವಾಗಿ ಕಾಲದ ಬೃಹತ್ಸ್ವರೂಪವನ್ನು) ಅರಿಯುವೆನು.

(ಪ್ರಕಾಶ ಬಹುಲತ್ವಾತ್ ಅವಿಜ್ಞೇಯ ದಿನರಾತ್ರಿ ವಿಭಾಗೇऽತ್ರ ಕಥಂ ಕಾಲಕಲಾಗತಿಂ ವೇತ್ಸಿ–ತತ್ರಾಹ–ಪ್ರಾಣಾಪಾನ ಪ್ರವಾಹೇಣ ಸ್ವರೋದಯ ಶಾಸ್ತ್ರ ಪ್ರಸಿದ್ಧೋಪಾಯೇನ ಇತ್ಯರ್ಥಃ ‖ —ತಾ. ಪ್ರ.)

(ಸ್ವರಶಾಸ್ತ್ರವು ಮೂಗಿನಲ್ಲಿ ಆಡುತ್ತಿರುವ ಉಸಿರನ್ನು ಹಿಡಿದು ಕಾಲಸ್ವರೂಪವನ್ನೂ ಅದರಿಂದಾಗುವ ಶುಭಾಶುಭ ಫಲಗಳನ್ನೂ ತಿಳಿಯುವ ಸಾಧನವು.

ಸ್ವರವು-ಶ್ವಾಸವು-ಬಲಮೂಗಿನಲ್ಲಿದ್ದರೆ ಸೂರ್ಯನೆಂತಲೂ, ಎಡಮೂಗಿನಲ್ಲಿದ್ದರೆ

ಅವಿಜ್ಞಾತದಿವಾರಾತ್ರೌ ಹ್ಯಸ್ಮಿನ್ನುಚ್ಚೈಃ ಶಿಲೋಚ್ಚಯೇ |
ಜಾನಾಮಿ ನಿಜಯಾ ಬುದ್ಧ್ಯಾ ಲೋಕಕಾಲಕ್ರಮಸ್ಥಿತಿಂ || ೨೫ ||

ಸಾರಾಸಾರಪರಿಚ್ಛೇದಿ ಬೋಧಾದ್ವಿಶ್ರಾಂತಿಮಾಗತಂ |
ನಿರಸ್ತಚಾಪಲಂ ಶಾಂತಂ ಸುಸ್ಥಿರಂ ಮೇ ಮುನೇ ಮನಃ || ೨೬ ||

ಸಂಸಾರವ್ಯವಹಾರೋತ್ಥೈರಾಶಾಪಾಶೈರಸನ್ಮಯೈಃ |
ಉದ್ಗಾರೈರಿವ ಭೂಕಾಕೋ ನ ವೈವಶ್ಯಂ ವ್ರಜಾಮ್ಯಹಂ || ೨೭ ||

ಚಂದ್ರನೆಂತಲೂ ಎರಡೂ ಕಡೆ ಆಡುತ್ತಿದ್ದರೆ ಜೀವಸ್ವರವೆಂತಲೂ ಹೇಳುವರು. ಈ ಸ್ವರವು ಸಂವತ್ಸರ, ಮಾಸ, ಪಕ್ಷ, ವಾರ ಭೇದಗಳಿಂದ ಭಿನ್ನೈಸುವುದು.

ಸ್ವರಶಾಸ್ತ್ರವೆಂದೇ ಕೆಲವು ಪುಸ್ತಕಗಳು ಅಚ್ಚಾಗಿವೆ. ಅವುಗಳಲ್ಲಿ ಈ ಶಾಸ್ತ್ರವು ದಿಶಾಮಾತ್ರವಾಗಿ ಸೂಚಿತವಾಗಿದೆ. ಬೇಕಾದವರು ಅಲ್ಲಿ ನೋಡುವುದು)

೨೫. ಹೊರಗೆ ಸೂರ್ಯನಿಂದ ಆಗುವ ದಿವಾ, ರಾತ್ರಿಗಳನ್ನು ಈ ಮಹಾ ಪರ್ವತದಲ್ಲಿ ತಿಳಿಯುವುದು ಸಾಧ್ಯವಿಲ್ಲವಾದರೂ ನನ್ನ ಬುದ್ಧಿಯಿಂದ (ಸ್ವರಶಾಸ್ತ್ರ ವನ್ನು ಹಿಡಿದು) ಲೋಕದಲ್ಲಿ ಕಾಲಕ್ರಮವು ಹೇಗಿದೆಯೆಂಬುದನ್ನು ಅರಿಯುವೆನು.

೨೬. ಎಲೈ ಮುನೀಂದ್ರನೆ, ಸಾರವು ಯಾವುದು? ಯಾವುದು ಅಸಾರ ಎಂಬುದನ್ನು ಬೇರೆ ಬೇರೆ ಮಾಡಿ ತೋರಿಸುವ ಬೋಧ (ಜ್ಞಾನ) ದಿಂದ ವಿಶ್ರಾಂತಿ ಯನ್ನು ಪಡೆದು, ನನ್ನ ಮನವು ಚಾಪಲ್ಯವನ್ನು ನೀಗಿಕೊಂಡು ಶಾಂತವಾಗಿಯೂ ಸ್ಥಿರವಾಗಿಯೂ ಇರುವುದು.

೨೭. ಸಂಸಾರ ಸ್ಥಿತಿಯಲ್ಲಿ ನಡೆಯಬೇಕಾಗಿರುವ ಅನೇಕ ವ್ಯವಹಾರಗಳಿಂದ ಸಂಜನಿಸುವ ಅಸತ್ತೇ ಆದ ಆಶಾಪಾಶಗಳಿಂದ, ವಾಂತಿಯಾದ ಪದಾರ್ಥಗಳಿಂದಲೂ ವೈಮರೆಯುವ ಭೂಲೋಕದ ಕಾಗೆಗಳಂತೆ ನಾನು ಪರವಶನಾಗುವುದಿಲ್ಲ.

ಪರೋಪಶಮಧರ್ಮಿಣ್ಯಾ ವಯಮಾಲೋಕಶೀತಯಾ |
ಪಶ್ಯಂತೋ ಜಾಗತೀಂ ಮಾಯಾಂ ಧಿಯಾ ಧೈರ್ಯಮುಪಾಗತಾಃ || ೨೮ ||

ಭೀಮಾಸ್ವಪಿ ಮಹಾಬುದ್ಧೇ ದಶಾಸ್ವಚಲಬುದ್ಧಯಃ |
ವಿನಿರ್ಮಲೋಪಲಾಕಾರಾಃ ಸಂಪ್ರಾಪ್ತಾಸು ಯಥಾಕ್ರಮಂ || ೨೯ ||

ಇಯಮಾರಂಭಸುಭಗಾ ತರಲಾ ಜಾಗತೀ ಸ್ಥಿತಿಃ |
ಭೂಯೋ ಭೂಯಃ ಪರಾಮೃಷ್ಟಾ ನ ಚ ಕಿಂಚನ ಬಾಧತೇ || ೩೦ ||

ಸರ್ವಾಣ್ಯೇವ ಪ್ರಯಾಂತ್ಯೇವ ಸಮಾಯಾಂತಿ ಚ ವಾ ನವಾ |
ಭಗವನ್ಭೂತಜಾಲಾನಿ ಭಯಮಸ್ಮಾಕಮತ್ರ ಕಿಂ || ೩೧ ||

ಭೂತಜಾಲತರಂಗಿಣ್ಯಾ ವಿಶಂತ್ಯಾಃ ಕಾಲಸಾಗರೇ |
ವಯಂ ಸಂಸಾರಸರಿತಸ್ತಟಸ್ಥಾ ಅಸ್ಯನಾದೃತಾಃ || ೩೨ ||

೨೮–೯. ಶಾಂತವಾಗಿ ಬ್ರಹ್ಮದಲ್ಲಿ ನಿಲ್ಲುವುದೇ ಧರ್ಮವಾಗಿ, ಸರ್ವಥಾ ಶಾಂತವಾಗಿರುವ ಬುದ್ಧಿಯನ್ನು ಉಳ್ಳವರಾಗಿ, ಜಗತ್ತೆಂಬ ಈ ಮಾಯಾ ದೃಶ್ಯವನ್ನು ನೋಡುತ್ತಿರುವ ನಾವು ಭಯಂಕರವಾದ ದುರ್ದಶೆಗಳು ಯಥಾಕ್ರಮವಾಗಿ, ಸಂಪ್ರಾಪ್ತವಾಗುತ್ತಿದ್ದರೂ, ಎಲೈ ಮಹಾಮತಿಯೇ, ಸ್ಫಟಿಕಾದಿ ಮಣಿಗಳಂತೆ ನಿರ್ಮಲವಾಗಿಯೂ ಸ್ಥಿರಬುದ್ಧಿಗಳಾಗಿಯೂ ಇದ್ದುಬಿಡುವೆವು.

೩೦. ಈ ಸಂಸಾರ ಸ್ಥಿತಿಯು ಆರಂಭದಶೆಯಲ್ಲಿ ಮಾತ್ರ ರಮಣೀಯವಾಗಿರುವುದು: ಇದ್ದಂತೆ ಇರದೆ ಬದಲಾಯಿಸುತ್ತಲೇ ಇರುವುದು: ಎಂಬುದನ್ನು ಪದೇ ಪದೇ ವಿಮರ್ಶೆಮಾಡಿ ನೋಡಿರುವೆವು. ಅದರಿಂದ ಇದೂ ನಮ್ಮನ್ನು ಕಿಂಚಿತ್ತಾದರೂ ಬಾಧಿಸುವುದಿಲ್ಲ.

೩೧. ಇದ್ದ ಪ್ರಾಣಿಗಳೆಲ್ಲವೂ ಹೋಗಿಯೇ ಹೋಗುವುವು: ಹೊಸವು ಬರುತ್ತಲೇ ಇರುವುವು: ಹೀಗಿರಲು, ಭಗವಂತನೇ, ನಮಗೆ ಏನು ಭಯ ?

೩೨. ಹೀಗೆ ಕಾಲಸಾಗರವನ್ನು ಪ್ರವೇಶಿಸುತ್ತಿರುವ ಭೂತ ಜಾಲ ಮಹಾನದಿಯ, ಸಂಸಾರವೆಂಬ ನದಿಯ ತಟದಲ್ಲಿಯೇ ಕುಳಿತಿದ್ದರೂ, ನಾವು ತಟಸ್ಥರೆಂದು ನಮ್ಮಲ್ಲಿ ಅನಾದರವನ್ನು ಮಾಡಿರುವುದು.

ನೋ ಜ್ಝಾಮೋ ನ ಚ ಗೃಹ್ಣೀಮಸ್ತಿಷ್ಠಾಮೋ ನೇಹ ಚ ಸ್ಥಿತಾಃ |
ಮೃದುಪಾದಾ ದೃಶಾ ಕ್ರೂರಾ ವಯಮಸ್ಮಿನ್ದ್ರುಮೇ ಸ್ಥಿತಾಃ || ೩೩ ||

ವೀತಶೋಕಭಯಾಯಾಸೈಸ್ತ್ವಾದೃಶೈಃ ಪುರುಷೋತ್ತಮೈಃ |
ತುಷ್ಟೈರನುಗೃಹೀತಾಃ ಸ್ಮಃ ಸಂಸ್ಥಿತಾ ವಿಗತಾಮಯಾಃ || ೩೪ ||

ತತಸ್ತತಶ್ಚ ಪರ್ಯಸ್ತಂ ಲುಠಿತಂ ನ ಚ ವೃತ್ತಿಷು |
ನಾಪರಾಮೃಷ್ಟತತ್ತ್ವಾರ್ಥಮಸ್ಮಾಕಂ ಭಗವನ್ಮನಃ || ೩೫ ||

ನಿರ್ವಿಕಾರೇ ಗತಕ್ಷೋಭೇ ಚಾತ್ಮನ್ಯುಪಶಮಂ ಗತೇ |
ಚಿತ್ತರಂಗಾಃ ಪ್ರಬುದ್ಧಾಃ ಸ್ಮಃ ಪರ್ವಣೀವ ಮಹಾಬ್ಧಯಃ || ೩೬ ||

---

೩೩. ನಾವು ಯಾವುದನ್ನೂ ಬಿಡುವುದಿಲ್ಲ: ನಾವು ಯಾವುದನ್ನೂ ಹಿಡಿಯು ವುದಿಲ್ಲ. ನಾವು ಇರುವೆವಾದರೂ ಇಲ್ಲದಂತಿರುವೆವು. (ಮುಳ್ಳು ಹಿಡಿದಿರುವ ಭೂಮಿಯಲ್ಲಿ ನಡೆಯುವವರಂತೆ) ಮೆತ್ತಮೆತ್ತಗೆ ನಡೆಯುತ್ತಿದ್ದರೂ (ಸಂಸಾರ ಪಾಶವನ್ನು ನಿರ್ದಾಕ್ಷಿಣ್ಯವಾಗಿ ಕಡಿದು ಹಾಕುವ) ಕ್ರೂರ ಸಿದ್ಧಾಂತಿಗಳಾಗಿ, ನಾವು ಈ ಕಲ್ಪದ್ರುಮದಲ್ಲಿ ಇದ್ದುಕೊಂಡಿರುವೆವು.

೩೪. ಶೋಕ, ಭಯ, ಆಯಾಸ, ಇವುಗಳನ್ನು ಗೆದ್ದು ಸಂತೃಪ್ತರಾಗಿರುವ ನಿಮ್ಮಂತಹ ಪುರುಷೋತ್ತಮರಿಂದ ಅನುಗ್ರಹವನ್ನು ಪಡೆದು ಯಾವುದೊಂದು ದುಃಖವೂ ಇಲ್ಲದೆ ಇರುವೆವು.

೩೫. ಎಲೈ ಭಗವಂತನೆ, ತತ್ತ್ವಾರ್ಥವನ್ನು ವಿಮರ್ಶೆ ಮಾಡಿ ತಿಳಿದಿರುವ ನಮ್ಮ ಮನಸ್ಸು ಅಲ್ಲಿ ಇಲ್ಲಿ ಅಲೆಯುವುದು ಉಂಟು. ಆದರೂ ವೃತ್ತಿಗಳಲ್ಲಿ ಸಿಕ್ಕಿ ಕೊಂಡು ಬಳಲುವುದಿಲ್ಲ.

೩೬. ನಮ್ಮ ಮನಸ್ಸು ನಿರ್ವಿಕಾರವೂ ನಿಶ್ಚಂಚಲವೂ ಆದ ಆತ್ಮದಲ್ಲಿ ಉಪ ಶಮವನ್ನು ಪಡೆದಿದ್ದಗೂ, ಪರ್ವಕಾಲದಲ್ಲಿ ಮಹಾ ಸಾಗರಗಳಲ್ಲಿ ಹೇಗೋ ಹಾಗೇ ಚಿತ್ತಿನ ತರಂಗಗಳು ಮಾತ್ರ ಏಳುತ್ತಲೇ ಇರುವುವು.

ಭವದಾಗಮನಾದ್ಬ್ರಹ್ಮನ್ನಿದಾನೀಂ ಮುದಿತಾಶಯಾಃ |
ಮಂದರೋದ್ಧೂತಸರ್ವಾಂಗಃ ಕ್ಷೀರೋದೋ ಯೇನ ತನ್ಯತೇ || ೩೭ ||

ನಾತಃ ಪರತರಂ ಕಿಂಚಿನ್ಮನ್ಯೇ ಕುಶಲಮಾತ್ಮನಃ|
ಸಂತೋ ಯದನುಗಮ್ಯಂತೇ ಸಂತ್ಯಕ್ತಸಕಲೈಷಣಾಃ || ೩೮ ||

ಆಪಾತಮಾತ್ರರಮ್ಯೇಭ್ಯೋ ಭೋಗೇಭ್ಯಃ ಕಿಮವಾಪ್ಯತೇ |
ಸತ್ಸಂಗಚಿಂತಾಮಣಿತಃ ಸರ್ವಸಾರಮವಾಪ್ಯತೇ || ೩೯ ||

ಸ್ನಿಗ್ಧಗಂಭೀರಮಸೃಣಮಧುರೋದಾರಧೀರವಾಕ್ |
ತ್ರೈಲೋಕ್ಯಪದ್ಮಕೋಶೇಸ್ಮಿಂಸ್ತ್ವಮೇಕಃ ಷಟ್ಪದಾಯಸೇ || ೪೦ ||

---

೩೭. ಎಲೈ ಬ್ರಹ್ಮನೆ, ಕ್ಷೀರಸಮುದ್ರದಲ್ಲಿ ಮಂದರಪರ್ವತವನ್ನಿಟ್ಟು ಆ ಸಮುದ್ರವೆಲ್ಲ ಅಲ್ಲೋಲಕಲ್ಲೋಲವಾಗುವಂತೆ ಕಡೆದು ಮಹಾಕಷ್ಟದಿಂದ ತೆಗೆದ ಅಮೃತವು, ನಿನ್ನ ಆಗಮನದಿಂದ ಇಂದು ನಮಗೆ (ಬಹು ಸುಲಭವಾಗಿ) ದೊರೆತು ನಾವೆಲ್ಲರೂ ಸಂತುಷ್ಟಚಿತ್ತರಾದೆವು.

೩೮. ಸಕಲ ಕಾಮನೆಗಳನ್ನೂ ಸಂಪೂರ್ಣವಾಗಿ ತ್ಯಜಿಸಿರುವ ಸಾಧುಗಳು ದಯಪಾಲಿಸುವ ದರ್ಶನಕ್ಕಿಂತಲೂ ಹೆಚ್ಚಿನ ಕುಶಲವು ಇನ್ನೊಂದುಂಟು ಎಂದು ನಾನು ಒಪ್ಪುವುದಿಲ್ಲ.

೩೯. ಆಪಾತ ಮಾತ್ರ ರಮ್ಯಗಳಾಗಿರುವ ಭೋಗಗಳಿಂದ ಆಗುವ ಲಾಭ ವಾದರೂ ಏನು ? ಸತ್ಸಂಗವೆಂಬ ಚಿಂತಾಮಣಿಯು ಎಲ್ಲಕ್ಕಿಂತಲೂ ಸಾರವಾದ ಬ್ರಹ್ಮಾನಂದವನ್ನು ಕೊಡುವುದು.

(ಸರ್ವಸಾರಂ–ಜ್ಞಾನಂ —ತಾ. ಪ್ರ.)

೪೦. ಸ್ನೇಹಪೂರ್ಣವಾಗಿ, ಗಂಭೀರವಾಗಿ, ಮೃದುವಾಗಿ, ಮಧುರವಾಗಿ, ಉದಾರವಾಗಿ, ಧೀರವಾಗಿರುವ ವಾಕ್ಕುಗಳ ವಸಿಷ್ಠ ಮಹರ್ಷಿಯೇ, ತ್ರೈಲೋಕ್ಯ ವೆಂಬ ಈ ಪದ್ಮದ ಕೋಶದಲ್ಲಿ, ನೀನೊಬ್ಬನೇ ದುಂಬಿಯಂತೆ (ಆನಂದವಾಗಿ) ಹಾಡುತ್ತಿರುವವನು.

ಅಧಿಗತಪರಮಾತ್ಮನೋಽಪಿ ಮನ್ಯೇ
ಭವದವಲೋಕನಶಾಂತದುಷ್ಕೃತಸ್ಯ |
ಮಮ ಸಫಲಮಿಹಾದ್ಯ ಜನ್ಮ ಸಾಧೋ
ಸಕಲಭಯಾಪಹರೋ ಹಿ ಸಾಧುಸಂಗಃ ॥ ೪೧ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕಿಯೇ ದೇವದೂತೋಕ್ತೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ ಭುಶುಂಡೋಪಾಖ್ಯಾನೇ "ಭುಶುಂಡಸ್ವರೂಪನಿರೂಪಣಂ" ನಾಮ ವಿಂಶಃ ಸರ್ಗಃ

---

೪೧. ನಾನು ಪರಮಾತ್ಮವನ್ನು ಪಡೆದವನೇ ಆದರೂ, ಎಲೈ ಸಾಧುವರ್ಯನೆ, ನಿನ್ನ ದೃಷ್ಟಿಯು ನನ್ನ ಮೇಲೆ ಬಿದ್ದು ನನ್ನ ದುಷ್ಕೃತಗಳೆಲ್ಲವೂ ಶಾಂತವಾಯಿತು. ನನ್ನ ಜನ್ಮವು ಇಂದಿಗೆ ಸಾರ್ಥಕವಾಯಿತು ಎಂದು ತಿಳಿಯುವೆನು. ಸಕಲ ಭಯಗಳನ್ನೂ ಸಾಧುಸಾಗವು ಅಪಹಾರ ಮಾಡುವುದಲ್ಲವೆ?

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ ನಿರ್ವಾಣಪ್ರಕರಣದ ಭುಶುಂಡೋಪಾಖ್ಯಾನದಲ್ಲಿ "ಭುಶುಂಡಸ್ವರೂಪನಿರೂಪಣ" ಎಂಬ ಇಪ್ಪತ್ತನೆಯ ಸರ್ಗವು

ಏಕವಿಂಶಃ ಸರ್ಗಃ

ಭುಶುಂಡ ಉವಾಚ—

ಯುಗಕ್ಷೋಭೇಷು ಘೋರೇಷು ವಾಕ್ಯಾಸು ವಿಷಮಾಸು ಚ |
ಸುಸ್ಥಿರಃ ಕಲ್ಪವೃಕ್ಷೋಽಯಂ ನ ಕದಾಚನ ಕಂಪತೇ || ೧ ||

ಅಗಮ್ಯೋಽಯಂ ಸಮುಗ್ರಾಣಾಂ ಲೋಕಾಂತರವಿಹಾರಿಣಾಂ |
ಭೂತಾನಾಂ ತೇನ ತಿಷ್ಠಾಮ ಇಹ ಸಾಧೋ ಸುಖೇನ ವೈ || ೨ ||

ಹಿರಣ್ಯಾಕ್ಷೋ ಧರಾಪೀಠಂ ದ್ವೀಪಸಪ್ತಕವೇಷ್ಟಿತಂ |
ಯದಾ ಜಹಾರ ತರಸಾ ನಾಕಂಪತ ತದಾ ತರುಃ || ೩ ||

ಯದಾ ಲೋಲಾಯಿತವಪುರ್ಬಭೂವಾಮರಪರ್ವತಃ |
ಸರ್ವತೋ ದತ್ತಸಾಮ್ಯಾದ್ರಿಸ್ತದಾ ನಾಕಂಪತ ದ್ರುಮಃ || ೪ ||

ಇಪ್ಪತ್ತೊಂದನೆಯ ಸರ್ಗ

೧. ಭುಶುಂಡನು ಹೇಳಿದನು :—ಘೋರವಾದ ಯುಗ ಪ್ರಳಯಗಳಲ್ಲಿಯೂ ವಿಷಮವಾದ ವಾಕ್ಯಗಳಲ್ಲಿಯೂ, ಸ್ಥಿರವಾಗಿರುವ ಈ ಕಲ್ಪವೃಕ್ಷವು ಕೊಂಚವೂ ಕಂಪಿಸುವುದಿಲ್ಲ.

೨. ಲೋಕಾಂತರ ಸಂಚಾರ ಮಾಡಬಲ್ಲ ಪ್ರಾಣಿಗಳಲ್ಲಿಯೂ ಕೂಡ ಅನೇಕರು ಇದರ ಸಮೀಪಕ್ಕೂ ಬರಲಾರರು. ಅದರಿಂದ ಇಲ್ಲಿ ನಾವು, ಎಲೈ ಸಾಧುವೆ, ಸುಖವಾಗಿರುವೆವು.

೩. ಸಪ್ತದ್ವೀಪ ಸಹಿತವಾದ ಭೂಮಂಡಲವನ್ನು ಹಿರಣ್ಯಾಕ್ಷನು ಹೊತ್ತು ಕೊಂಡು ಓಡಿದಾಗಲೂ ಈ ಮಹಾವೃಕ್ಷವು ಅಲ್ಲಾಡಲಿಲ್ಲ.

೪. ಹಾಗೆಯೇ (ವರಾಹಾವತಾರಿಯಾದ ಮಹಾವಿಷ್ಣುವು ಮತ್ತೆ ಭೂಮಿ

ಭುಜಾವಷ್ಟಂಭವಿನಮನ್ಮೇರುರ್ನಾರಾಯಣೋ ಯದಾ |
ಮಂದರಂ ಪ್ರೋದ್ಧಧಾರಾದ್ರಿಂ ತದಾ ನಾಕಂಪತ ದ್ರುಮಃ ॥ ೫ ॥

ಯದಾ ಸುರಾಸುರಕ್ಷೋಭಪತಚ್ಚಂದ್ರಾರ್ಕಮಂಡಲಂ |
ಆಸೀಜ್ಜಗದತಿಕ್ಷುಬ್ಧಂ ತದಾ ನಾಕಂಪತ ದ್ರುಮಃ ॥ ೬ ॥

ಉನ್ಮೂಲಿತಾದ್ರೀಂದ್ರಶಿಲಾ ಯದೋತ್ಪಾತಾನಿಲಾ ವವುಃ |
ಆಧೂತಮೇರುತರವಸ್ತದಾ ನಾಕಂಪತ ದ್ರುಮಃ ॥ ೭ ॥

ಯದಾ ಕ್ಷೀರೋದಲೋಲಾದ್ರಿಕಂದರಾನಿಲಕಂಪಿತಾಃ |
ಕಲ್ಪಾಭ್ರಪಂಕ್ತಯಶ್ಚೇರುಸ್ತದಾ ನಾಕಂಪತ ದ್ರುಮಃ ॥ ೮ ॥

ಯನ್ನು ಸ್ಥಾಪಿಸುವಾಗ) ಮೇರುಪರ್ವತಕ್ಕೆ ಸುತ್ತಲೂ ಅದರಷ್ಟೇ ಭಾರಿಯ ಪರ್ವತಗಳನ್ನು ಒತ್ತಿ ಕೊಟ್ಟು ನಿಲ್ಲಿಸಿದಾಗಲೂ ಈ ಮಹಾವೃಕ್ಷವು ಅಳ್ಳಾಡಲಿಲ್ಲ.

೫. ಆ ಮಹಾವಿಷ್ಣುವು ಹಿಂದೆ ಎರಡು ತೋಳುಗಳಿಂದ ಮೇರುಪರ್ವತವನ್ನು ಅದುಮಿ ಹಿಡಿದು ಇನ್ನೆರಡು ತೋಳುಗಳಿಂದ ಮಂದರಾದ್ರಿಯನ್ನು ಕಿತ್ತಾಗಲೂ ಈ ಮಹಾವೃಕ್ಷವು ಅಳ್ಳಾಡಲಿಲ್ಲ.

೬. ದೇವಾಸುರ ಯುದ್ಧದಲ್ಲಿ ಸೂರ್ಯಚಂದ್ರ ಮಂಡಲಗಳು ಸ್ವಸ್ಥಾನದಿಂದ ಉರುಳಿ ಹೋಗಿ ಜಗತ್ತಿಗೇ ಜಗತ್ತೇ ಒದ್ದಾಡಿ ಹೋದಾಗಲೂ ಈ ಮಹಾವೃಕ್ಷವು ಅಳ್ಳಾಡಲಿಲ್ಲ.

೭. ಪರ್ವತೇಂದ್ರಗಳಲ್ಲಿರುವ ಮಹಾಶಿಲೆಗಳನ್ನೆಲ್ಲ ಬುಡಮೇಲು ಮಾಡಿ, ಉತ್ಪಾತ ಝುಂಝೂ ಮಾರುತಗಳು ಬೀಸಿದಾಗ ಮೇರುಪರ್ವತದಲ್ಲಿರುವ ಮರಗಳೆಲ್ಲವೂ ಅಳ್ಳಾಡಿ ಹೋದರೂ, ಈ ಮಹಾವೃಕ್ಷವು ಅಳ್ಳಾಡಲಿಲ್ಲ.

೮. ಕ್ಷೀರಸಮುದ್ರವನ್ನು ಕಡೆಯುವಾಗ, ಕಡೆಗೋಲಾಗಿ ಮಾಡಿದ್ದ ಮಂದರಾದ್ರಿಯಿಂದ ಹುಟ್ಟಿದ ಮಹಾವಾತದಿಂದ ಪ್ರಲಯಕಾಲದ ಮೇಘಗಳೆಲ್ಲವೂ ಚದುರಿ ಹೋದಾಗಲೂ ಈ ಮಹಾವೃಕ್ಷವು ಅಳ್ಳಾಡಲಿಲ್ಲ.

ಯದಾ ಸಮುಂತತೋ ಮೇರುಃ ಕಾಲನೇಮಿಭುಜಾಂತರೇ |
ಕಿಂಚಿದುನ್ಮೂಲಿತೋತಿಷ್ಮತ್ತದಾ ನಾಕಂಪತ ದ್ರುಮಃ || ೯ ||

ಪಕ್ಷೀಶಪಕ್ಷಪವನಾ ಅಮೃತಕ್ರಾಂತಿಸಂಗರೇ |
ಯದಾ ವವುಃ ಪತತ್ಸಿದ್ಧಾಸ್ತದಾಯಂ ನಾಪತದ್ದ್ರುಮಃ || ೧೦ ||

ಯದಾ ಶೇಷಾಕೃತಿಂ ರುದ್ರೋ ನ ಸಮಾಪ್ತೈಕಚೇಷ್ಟಿತಾಂ |
ಯಯೌ ಗರುತ್ಮಾನ್ಬ್ರಹ್ಮಾಂಡಂ ತದಾ ನಾಕಂಪತ ದ್ರುಮಃ || ೧೧ ||

ಯದಾ ಕಲ್ಪಾನಲಶಿಖಾಃ ಶೈಲಾಬ್ಧಿಸಕಲೋಲ್ಬಣಃ |
ಶೇಷಃ ಫಣಾಭಿಸ್ತತ್ಯಾಜ ತದಾ ನಾಕಂಪತ ದ್ರುಮಃ || ೧೨ ||

---

೯ ಕಾಲನೇಮಿಯ ಹಿಡಿತದಲ್ಲಿ ಸಿಕ್ಕಿ ಮೇರುಪರ್ವತವೆಲ್ಲವೂ ಸಮಗ್ರವಾಗಿ ಕೊಂಚ ಮೇಲಕ್ಕೆದ್ದಾಗಲೂ ಈ ಮಹಾವೃಕ್ಷವು ಅಳ್ಳಾಡಲಿಲ್ಲ.

೧೦. ಅಮೃತಕ್ಕಾಗಿ ಇಂದ್ರನೊಡನೆ ಗರುಡನು ಹೋರಾಡಿದಾಗ, ಆತನ ರೆಕ್ಕೆಗಳ ಬೀಸುವಿಕೆಯಿಂದ ಹುಟ್ಟಿದ ಬಿರುಗಾಳಿಯಲ್ಲಿ (ಆಕಾಶಚಾರಿಗಳಾದ) ಸಿದ್ಧರೆಷ್ಟೋ ಮಂದಿ ಉರುಳಿ ಹೋದರು. ಆಗಲೂ ಈ ಮಹಾವೃಕ್ಷವು ಅಳ್ಳಾಡಲಿಲ್ಲ.

೧೧. ಈ ಭೂಮಂಡಲವನ್ನು ವಹಿಸುವ, ಅದ್ಯಾಪಿ ಸಮಾಪ್ತವಾಗದಿರುವ, ಒಂದೇ ಕಾರ್ಯಕ್ಕಾಗಿ ರುದ್ರನು ಶೇಷಾಕೃತಿಯನ್ನು ವಹಿಸಿದಾಗಲೂ, ಗರುಡನು ಬ್ರಹ್ಮಾಂಡವನ್ನೇ ಕಿತ್ತುಕೊಂಡು ಹೊರಟಾಗಲೂ, ಈ ಮಹಾವೃಕ್ಷವು ಅಳ್ಳಾಡಲಿಲ್ಲ.

(ಗರುಡಸ್ಯ ಜಾತಮಾತ್ರಸ್ಯ ಸರ್ವೇ ಲೋಕಾಃ ಪ್ರಕಂಪಿತಾಃ | ಪ್ರಕಂಪಿತಾ ಮಹೀ ಸರ್ವಾ ಸಪ್ತದ್ವೀಪಾಶ್ಚಕಂಪಿತಾಃ || ತದುತ್ಪಾತಾನ್ನಿಮಜ್ಜಂತೀಂ ಭುವಂ ನಾವಮಿವಾಂಭಸಿ || ದಧೌ ಸಹಸ್ರೈಃ ಶಿರಸಾಂ ಸಂಕರ್ಷಣವಪುರ್ಹರಃ || ಇತಿ ಕಥಾಮನುಸೃತ್ಯಾಹ —ತಾ. ಪ್ರ.)

೧೨. ಶೇಷನು ಕಲ್ಪಾಂತದಲ್ಲಿ ತನ್ನ ಸಹಸ್ರ ಮುಖಗಳಿಂದ ಪ್ರಲಯಾಗ್ನಿ ಜ್ವಾಲೆಗಳನ್ನು ಕಾರಿ ಶೈಲ, ಸಾಗರಾದಿಗಳನ್ನೂ ಸಕಲ ಭೂತಜಾತಗಳನ್ನೂ ಕ್ಷೋಭಿಸಿದಾಗಲೂ ಈ ಮಹಾವೃಕ್ಷವು ಅಳ್ಳಾಡಲಿಲ್ಲ.

ಏವಂರೂಪೇ ದ್ರುಮವರೇ ತಿಷ್ಠತಾಮಾಪದಃ ಕುತಃ |
ಅಸ್ಮಾಕಂ ಮುನಿಶಾರ್ದೂಲ ದೌಃಸ್ಥಿತ್ಯೇನ ಕಿಲಾಪದಃ || ೧೩ ||

ಶ್ರೀ ವಸಿಷ್ಠ ಉವಾಚ—

ಕಲ್ಪಾಂತೇಷು ಮಹಾಬುದ್ಧೇ ವಹತ್ಸೂತ್ಪಾತವಾಯುಷು |
ಪ್ರಪತತ್ಸ್ವಿಂದುಭಾರ್ಕೇಷು ಕಥಂ ತಿಷ್ಠಸಿ ವಿಜ್ವರಃ || ೧೪ ||

ಭುಶುಂಡ ಉವಾಚ—

ಯದಾ ಪಪಾತ ಕಲ್ಪಾಂತೇ ವ್ಯವಹಾರೋ ಜಗತ್ಸ್ಥಿತೌ |
ಕೃತಘ್ನ ಇವ ಸನ್ಮಿತ್ರಂ ತದಾ ನೀಡಂ ತ್ಯಜಾಮ್ಯಹಂ || ೧೫ ||

ಆಕಾಶ ಏವ ತಿಷ್ಠಾಮಿ ವಿಗತಾಖಿಲಕಲ್ಪನಃ |
ಸ್ತಬ್ಧಪ್ರಕೃತಿಸರ್ವಾಂಗೋ ಮನೋ ನಿರ್ವಾಸನಂ ಯಥಾ || ೧೬ ||

(ಸಂಕರ್ಷಣಮುಖಾಗ್ನಿನೈವ ಅಂತೇ ಪ್ರಲಯಸ್ಯ ಪುರಾಣೇಷು ಪ್ರಸಿದ್ಧೇಃ —ತಾ. ಪ್ರ.)

೧೩. ಇಂತಹ ಮಹಾವೃಕ್ಷವನ್ನು ಆಶ್ರಯಿಸಿರುವ ನಮಗೆ ಆಪತ್ತುಗಳು ಎಲ್ಲಿಂದ ಬಂದಾವು? ಎಲೈ ಮುನಿಶಾರ್ದೂಲನೆ, ದುರಾಶ್ರಯದಲ್ಲಿರುವವರಿಗೆ ತಾನೇ ಆಪತ್ತುಗಳು ಬರುವುದು?

೧೪. ಶ್ರೀ ವಸಿಷ್ಠನು ಹೇಳಿದನು:—ಎಲೈ ಮಹಾಮತಿಯೇ, ಕಲ್ಪಾಂತ ಕಾಲಗಳಲ್ಲಿ, ಎಲ್ಲವನ್ನೂ ಮೂಲೋತ್ಪಾಟನ ಮಾಡುತ್ತ ಪ್ರಲಯ ವಾಯುವು ಸೂರ್ಯ ಚಂದ್ರ ನಕ್ಷತ್ರಗಳೂ ಉದುರಿಹೋಗುವಂತೆ ಬೀಸುವಾಗ, ನೀನು ಹೇಗೆ ಕ್ಲೇಶವಿಲ್ಲದೆ ಕುಳಿತಿರುವೆ?

೧೫. ಭುಶುಂಡನು ಹೇಳಿದನು:-ಕಲ್ಪಾಂತಕಾಲದಲ್ಲಿ ಜಗತ್ಸ್ಥಿತಿಯ ವ್ಯವಹಾರವೆಲ್ಲವೂ ನಿಂತುಹೋಗುವಾಗ, ಸನ್ಮಿತ್ರನನ್ನೂ ತ್ಯಜಿಸುವ ಕೃತಘ್ನನಂತೆ, ಈ ಮಹಾವೃಕ್ಷವನ್ನು ಬಿಡುವೆನು.

(ಕಲ್ಪಾಂತೇ–ಸಹಸ್ರಮಹಾಯುಗ ಪರ್ಯಂತೇ—ತಾ. ಪ್ರ.)

೧೬. ಮತ್ತು ಎಲ್ಲ ಕಲ್ಪನೆಗಳನ್ನೂ ತ್ಯಜಿಸಿ, ಸರ್ವಾಂಗಗಳ ವ್ಯಾಪಾರ

ಪ್ರಪತಂತಿ ಯದಾದಿತ್ಯಾಃ ಶಕಲೀಕೃತಭೂಧರಾಃ |
ವಾರುಣೀಂ ಧಾರಣಾಂ ಬದ್ಧ್ವಾ ತದಾ ತಿಷ್ಠಾಮಿ ಧೀರಧೀಃ || ೧೭ ||

ಯದಾ ಶಕಲಿತಾದ್ರೀಂದ್ರಾ ವಾಂತಿ ಪ್ರಲಯವಾಯವಃ |
ಪಾರ್ವತೀಂ ಧಾರಣಾಂ ಬದ್ಧ್ವಾ ಖೇ ತಿಷ್ಠಾಮ್ಯಚಲಂ ತದಾ || ೧೮ ||

ಜಗದ್ಗಲಿತಮೇರ್ವಾದಿ ಯಾತ್ಯೇಕಾರ್ಣವತಾಂ ಯದಾ |
ವಾಯವೀಂ ಧಾರಣಾಂ ಬದ್ಧ್ವಾ ಸಂಪ್ಲವೇಽಚಲಧೀಸ್ತದಾ || ೧೯ ||

ಬ್ರಹ್ಮಾಂಡಪಾರಮಾಸಾದ್ಯ ತತ್ತ್ವಾಂತೇ ವಿಮಲೇ ಪದೇ |
ಸುಷುಪ್ತಾವಸ್ಥಯಾ ತಾವತ್ತಿಷ್ಠಾಮ್ಯಚಲರೂಪಯಾ || ೨೦ ||

ಗಳನ್ನೂ ತ್ಯಜಿಸಿ, ಮನಸ್ಸು ನಿರ್ವಾಸನೆಯಾಗಿರುವಂತೆ ಮಾಡಿಕೊಂಡು ಆಕಾಶದಲ್ಲಿಯೇ ಇರುವೆನು.

೧೭. ಪರ್ವತಗಳನ್ನೆಲ್ಲ ಚೂರುಚೂರು ಮಾಡುತ್ತ, ಆದಿತ್ಯರುಗಳೆಲ್ಲರೂ ಬಿದ್ದುಹೋಗುವಾಗ, ವಾರುಣೀಧಾರಣವನ್ನು ಬಂಧಿಸಿಕೊಂಡು ಧೈರ್ಯವಾಗಿರುವೆನು.

(ಅತ್ಯಂತ ಶೀತಲ ಸರ್ವದಿಗ್ಮಂಡಲ ವ್ಯಾಪ್ಯ ಪರಿಚ್ಛೇದ್ಯ ಜಲಾತ್ಮಾ ವರುಣ ಏವಾಹ ಮಸ್ಮೀತಿ ಚಿತ್ತೇ ನಿರಂತರಂ ಧಾರಣಂ ವಾರುಣೀ ಧಾರಣೇತ್ಯುಚ್ಯತೇ— ಪಾರ್ವತ್ಯಾದಿ ಧಾರಣಾ ಅಪ್ಯೇವಮೇವೋಹ್ಯಃ ಪೃಥಿವ್ಯಾದಿ ಪಂಚಭೂತ ಧಾರಣಾ ಪ್ರಕಾರಂ ವಸಿಷ್ಠಃ ಸ್ವಯಮೇವ ಉತ್ತರಾರ್ಧೇ ವಿಸ್ತರೇಣ ವಕ್ಷ್ಯತಿ–ತಾ. ಪ್ರ.)

೧೮. ಪ್ರಲಯವಾಯುಗಳು ಕುಲಶೈಲಗಳೂ ಚೂರುಚೂರಾಗುವಷ್ಟು ಬಿರುಬಿರುಸಾಗಿ ಬೀಸುವಾಗ ಪಾರ್ವತೀ ಧಾರಣವನ್ನು ಬಂಧಿಸಿಕೊಂಡು ನಿಶ್ಚಲ ಮನಸ್ಕನಾಗಿರುವೆನು.

೧೯. ಮೇರು ಮುಂತಾದವುಗಳೆಲ್ಲವನ್ನೂ ಉಳ್ಳ ಜಗತ್ತಿಗೆ ಜಗತ್ತೇ ಏಕಾರ್ಣವವಾಗಿ ಹೋದಾಗ, ವಾಯವೀ ಧಾರಣವನ್ನು ಬಂಧಿಸಿಕೊಂಡು ಆ ಜಲ ಪ್ರಲಯದಲ್ಲಿ ನಿಶ್ಚಲನಾಗಿರುವೆನು.

೨೦. ಹಾಗೆಯೇ ಬ್ರಹ್ಮಾಂಡದ ಕೊನೆಯನ್ನು ಸೇರಿ, ತತ್ತ್ವಗಳೆಲ್ಲದರ ಕೊನೆಯಾದ ಬ್ರಹ್ಮಪದದಲ್ಲಿ ಸುಷುಪ್ತಿಯಂತಹ (ನಿರ್ವ್ಯಾಪಾರ) ಅವಸ್ಥೆಯಲ್ಲಿ ಇರುವೆನು.

ಯಾವತ್ಪುನಃ ಕಮಲಜಃ ಸೃಷ್ಟಿಕರ್ಮಣಿ ತಿಷ್ಠತಿ |
ತತ್ರ ಪ್ರವಿಶ್ಯ ಬ್ರಹ್ಮಾಂಡಂ ತಿಷ್ಠಾಮಿ ವಿಹಗಾಲಯೇ || ೨೧ ||

ಶ್ರೀ ವಸಿಷ್ಠ ಉವಾಚ—

ಯಥಾ ತಿಷ್ಠಸಿ ಪಕ್ಷೀಂದ್ರ ಧಾರಣಾಭಿರಖಂಡಿತಃ |
ಕಲ್ಪಾಂತೇಷು ತಥಾ ಕಸ್ಮಾನ್ನಾನ್ಯೇ ತಿಷ್ಠಂತಿ ಯೋಗಿನಃ || ೨೨ ||

ಭುಶುಂಡ ಉವಾಚ—

ಬ್ರಹ್ಮನ್ನಿಯತಿರೇಷಾ ಹಿ ದುರ್ಲಂಘ್ಯಾ ಪಾರಮೇಶ್ವರೀ |
ಮಯೇದೃಶೇನ ವೈ ಭಾವ್ಯಂ ಭಾವ್ಯಮನ್ಯೈಸ್ತು ತಾದೃಶೈಃ || ೨೩ ||

(ಬ್ರಹ್ಮಾಂಡಸ್ಯ ಸ್ಥೂಲಸೂಕ್ಷ್ಮ ಸಮಷ್ಟೇಃ ಪಾರಂ ಪರಮಾವಧಿ ಭೂತಂ, ಅವ್ಯಾಕೃತಂ ಆಸಾದ್ಯ ತತ್ತ್ವಾನಾಂ ಚತುರ್ವಿಂಶತೀನಾಂ ಷಡ್ವಿಂಶತೀನಾಂ ಷಟ್‌ತ್ರಿಂಶತಾಂ ವಾ ನಾಮಾದಿ ಪ್ರಾಣಾಂತಾನಾಂ ವಾ ಅಂತೇ ಭೂಮಾಖ್ಯೇ ಪದೇ ಸುಷುಪ್ತವದೇಕರಸ ನಿರ್ವಿಕಲ್ಪ ಸಮಾಧ್ಯಾವಸ್ಥಯಾ—ತಾ. ಪ್ರ.)

೨೧. (ಹಾಗೆ ಎಲ್ಲಿಯವರೆಗೆ ಇರುವೆಯೆಂದರೆ) ಮತ್ತೆ ಕಮಲಜನಾದ ಬ್ರಹ್ಮನು ಸೃಷ್ಟಿಕರ್ಮವನ್ನು ಆರಂಭಿಸುವವರೆಗೂ ಹಾಗೆ ಇದ್ದು ಮತ್ತೆ ಈ ವಿಹಗಾಲಯಕ್ಕೆ ಬಂದು ಸೇರುವೆನು.

೨೨. ಶ್ರೀ ವಸಿಷ್ಠನು ಹೇಳಿದನು :—ಎಲೈ ಪಕ್ಷೀಂದ್ರನೇ, ನೀನು ಯಾವ ಯಾವ ಧಾರಣಗಳನ್ನು ಹಿಡಿದು ಕಲ್ಪಾಂತಗಳಲ್ಲಿಯೂ ನಷ್ಟನಾಗದೆ ಅಖಂಡಿತನಾಗಿರುವೆಯೋ ಹಾಗೆಯೇ ಇತರ ಯೋಗಿಗಳೂ ಕೂಡ ಏಕೆ ಮಾಡುವುದಿಲ್ಲ ?

(ಅನ್ಯೇಽಪಿ ಯೋಗಿನಃ ತಥಾ ಕಸ್ಮಾನ್ನ ತಿಷ್ಠಂತಿ ಕಿಮರ್ಥಮಾಧಿಕಾರಿಕ ಶರೀರಾಂತರಂ ಮುಕ್ತಿಂ ವಾ ಗಚ್ಛಂತಿ, ತೇನೈವ ಶರೀರೇಣ ತ್ವಮಿವ ಕುತೋ ನ ತಿಷ್ಠಂತಿ—ತಾ. ಪ್ರ.)

೨೩. ಭುಶುಂಡನು ಹೇಳಿದನು :—ಎಲೈ ಬ್ರಹ್ಮನೇ, ಪರಮೇಶ್ವರನ ನಿಯತಿಯಿದು. ಇದನ್ನು ಯಾರೂ ಮೀರಲಾರರು. ನಾನು ಹೀಗೆಯೇ ಇರಬೇಕು. ಇತರರು ಹಾಗೆಯೇ ಇರಬೇಕು.

ನ ಶಕ್ಯತೇ ತೋಲಯಿತುಮವಶ್ಯಂ ಭವಿತವ್ಯತಾ |
ಯದ್ಯಥಾ ತತ್ತಥೈತದ್ಧಿ ಸ್ವಾಭಾವಸ್ಯೈಷ ನಿಶ್ಚಯಃ || ೨೪ ||

ಮತ್ಸಂಕಲ್ಪವಶೇನೈವ ಕಲ್ಪೇ ಕಲ್ಪೇ ಪುನಃ ಪುನಃ |
ಅಸ್ಮಿನ್ನೇವ ಗಿರೇಃ ಶೃಂಗೇ ತರುರಿತ್ಥಂ ಭವತ್ಯಯಂ || ೨೫ ||

ಶ್ರೀ ವಸಿಷ್ಠ ಉವಾಚ—

ಅತ್ಯಂತಮೋಕ್ಷದೀರ್ಘಾಯುರ್ಭವಾನ್ನಿರ್ದೇಶನಾಯಕಃ |
ಜ್ಞಾನ ವಿಜ್ಞಾನವಾನ್ಧೀರೋ ಯೋಗಯೋಗ್ಯಮನೋಗತಿಃ || ೨೬ ||

(ಅತ್ರ ತತ್ತತ್ಪ್ರಬಲ ಪ್ರಾರಬ್ಧಾನುಸಾರಿಣೀ ಸತ್ಯಸಂಕಲ್ಪರೂಪಾ ಈಶ್ವರ ನಿಯತಿರೇವ ವ್ಯವಸ್ಥಾ ಹೇತುಃ ನಾನ್ಯಾ ಇತ್ಯಾಹ—ತಾ. ಪ್ರ.)

(ಹಿಂದೆ ಮುಮುಕ್ಷು ವ್ಯವಹಾರ ಪ್ರಕರಣದಲ್ಲಿ ಹೇಳಿರುವ ಪೌರುಷೇಯ ವ್ಯವಸ್ಥೆಗಿದು ಪ್ರತಿಯಲ್ಲವೆ ಎಂದರೆ ಕರ್ತೃತ್ವವು ತಮ್ಮದು ಎಂದುಕೊಂಡಿರುವವರೆಗೂ ಆ ಮಾತು. ಕರ್ತೃತ್ವವು ತಮ್ಮದಲ್ಲ ಎನ್ನುವವರಿಗೆ ಈ ಮಾತು. ಅಲ್ಲದೆ, ರಜೋಗುಣದವರ ಮಾತು ಪೌರುಷೇಯ ವ್ಯವಸ್ಥಾ. ಸತ್ವಗುಣದವರಿಗೆ ಈಶ್ವರೀ ವ್ಯವಸ್ಥಾ.

ಸದೃಶಂ ಚೇಷ್ಟತೇ ಸ್ವಸ್ಯಾಃ ಪ್ರಕೃತೇರ್ಜ್ಞಾನವಾನಪಿ || ಯದ್ಯಹಂಕಾರಮಾಶ್ರಿತ್ಯ ನಯೋತ್ಸ್ಯೇ ಇತಿ ಮನ್ಯಸೇ | ಮಿಥ್ಯೈಷ ವ್ಯವಸಾಯಸ್ತೇ ಪ್ರಕೃತಿಸ್ತ್ವಾಂ ನಿಯೋಕ್ಷ್ಯತಿ ||—ಗೀತಾ.)

೨೪. ಅವಶ್ಯವಾಗಿ ಆಗಿಯೇ ತೀರಬೇಕಾಗಿರುವುದನ್ನು ಕುರಿತು ಅವರಿಗೆ ಹೀಗೆ, ಇನ್ನೊಬ್ಬರಿಗೆ ಹಾಗೆ ಏಕೆ ಎಂದು ಹೋಲಿಸಿ ಕೇಳುವಂತಿಲ್ಲ. ಯಾವುದು ಹೇಗಿರುವುದೋ ಅದು ಹಾಗೆಯೇ ಇರಬೇಕು ಎಂಬುದೇ ಪ್ರಕೃತಿಯ (ಸ್ವಭಾವದ) ನಿಶ್ಚಯವು.

೨೫. ನನ್ನ ಸಂಕಲ್ಪಕ್ಕೆ ಅನುಸಾರವಾಗಿ ಕಲ್ಪಕಲ್ಪದಲ್ಲಿಯೂ ಮತ್ತೆ ಮತ್ತೆ ಇದೇ ಪರ್ವತದ ಶೃಂಗದಲ್ಲಿಯೇ ಹೀಗೇ ಇದೇ ಮಹಾವೃಕ್ಷವು ಹುಟ್ಟುವುದು.

೨೬. ಶ್ರೀ ವಸಿಷ್ಠನು ಹೇಳಿದನು:—ಮೋಕ್ಷವು ಹೇಗೆ ಆದ್ಯಂತಗಳಿಲ್ಲದುದೋ

ದೃಷ್ಟಾನೇಕವಿಧಾನಲ್ಪಸರ್ಗಸಂಗಗಮಾಗಮಃ |
ಕಿಂ ಕಿಂ ಸ್ಮರಸಿ ಕಲ್ಯಾಣ ಚಿತ್ರಮಸ್ಮಿನ್ ಜಗತ್ಕ್ರಮೇ || ೨೭ ||

ಭುಶುಂಡ ಉವಾಚ—

ಬೃಹತ್ತರಶಿಲಾವೃಕ್ಷಾಮಜಾತತೃಣವೀರುಧಂ |
ಅಶೈಲವನವೃಕ್ಷೌಘಾಂ ಸ್ಮರಾಮೀಮಾಂ ಧರಾಮಧಃ || ೨೮ ||

ದಶವರ್ಷಸಹಸ್ರಾಣಿ ದಶವರ್ಷಶತಾನಿ ಚ |
ಭಸ್ಮಸಾರಭರಾಪೂರ್ಣಾಂ ಸಂಸ್ಮರಾಮಿ ಧರಾಮಧಃ || ೨೯ ||

ಅನುತ್ಪನ್ನದಿವಾಧೀಶಾಮಜ್ಞಾತಶಶಿಮಂಡಲಂ |
ಅವಿಭಕ್ತದಿವಾಲೋಕಾಂ ಸಂಸ್ಮರಾಮಿ ಧರಾಮಧಃ || ೩೦ ||

ಹಾಗೆಯೇ ದೀರ್ಘವಾಗಿರುವ ಆಯುಸ್ಸುಳ್ಳ ನೀನಲ್ಲವೆ ಹಿಂದಿನ ಸಂಗತಿಗಳನ್ನು ಹೇಳುವವರಲ್ಲಿ ಅಗ್ರಣಿಯು. ನೀನು ಜ್ಞಾನವನ್ನೂ ವಿಜ್ಞಾನವನ್ನೂ ಬಲ್ಲವನು. ಧೀರನು. ಯೋಗಮಾಡಲು ಸಮರ್ಥವಾದ ಮನೋವ್ಯಾಪಾರವುಳ್ಳವನು.

೨೭. ಅನೇಕ ವಿಧವಾದ ನಾನಾ ಸೃಷ್ಟಿಗಳ ಸಂಗ (ಸ್ಥಿತಿ) ಗಮ (ಪ್ರಲಯ) ಆಗಮ (ಉತ್ಪತ್ತಿ) ಗಳನ್ನು ಬಲ್ಲವನು. ಎಲೈ ಕಲ್ಯಾಣ ಮತಿಯೆ, ಆ ಜಗತ್ಕ್ರಮ ಗಳಲ್ಲಿ ಏನೇನು ವಿಚಿತ್ರಗಳು ನಿನ್ನ ನೆನಪಿನಲ್ಲಿರುವುವು ?

೨೮. ಭುಶುಂಡನು ಹೇಳಿದನು :—ಎಲೈ ಮಹಾತ್ಮನೆ, ಕಲ್ಲುಗಳೂ, ಮರ ಗಳೂ ಇಲ್ಲದೆ, ಹುಲ್ಲೂ ಬಳ್ಳಿಯೂ ಇಲ್ಲದೆ, ಶೈಲಗಳೂ ವನಗಳೂ ಇಲ್ಲದೆ ಇದ್ದ ಭೂಮಿಯು ಈ ಮೇರುವಿನ ಕೆಳಗೆ ಇದ್ದುದನ್ನು ಬಲ್ಲೆನು.

೨೯. ಈ ಮೇರುವಿನ ಕೆಳಗೆ ಭೂಮಿಯು ಹತ್ತು ಸಾವಿರದ ಹತ್ತು ನೂರು ವರ್ಷಗಳು ಬೂದಿಯಿಂದ ಮುಚ್ಚಿಹೋಗಿದ್ದುದು ನೆನಪಿನಲ್ಲಿರುವುದು.

೩೦. ಸೂರ್ಯನೇ ಇನ್ನು ಹುಟ್ಟಿರಲಿಲ್ಲ. ಆಗ ಚಂದ್ರನೆಂದರೇನೋ ಅದೇ ಗೊತ್ತಿರಲಿಲ್ಲ. ಆಗ ದಿಕ್ಕು ವಿದಿಕ್ಕುಗಳು ಯಾವುದು ಎನ್ನುವುದೇ ತಿಳಿದಿರಲಿಲ್ಲ. ಅಂತಹ ಸ್ಥಿತಿಯೂ ನೆನಪಿರುವುದು.

ಮೇರುರತ್ನತಲೋದ್ಯೋತೈರರ್ಧಪ್ರಕಟಕೋಟರಂ |
ಲೋಕಾಲೋಕಮಿವಾಢ್ಯಾದ್ರಿಭುವನಂ ಸಂಸ್ಮರಾಮ್ಯಹಂ || ೩೧ ||

ಪ್ರವೃದ್ಧಾಸುರಸಂಗ್ರಾಮೇ ಕ್ಷೀಯಮಾಣಾಂತರಾಮಿಹ |
ಪಲಾಯಮಾನಾಮಭಿತಃ ಸಂಸ್ಮರಾಮಿ ಧರಾಮಿಮಾಂ || ೩೨ ||

ಚತುರ್ಯುಗಾನಿ ಚಾಕ್ರಾಂತಾಮಸುರೈರ್ಮತ್ತಕಾಶಿಭಿಃ |
ದೈತ್ಯಾಂತಃಪುರತಾಂ ಪ್ರಾಪ್ತಾಂ ಸಂಸ್ಮರಾಮಿ ಧರಾಮಿಮಾಂ || ೩೩ ||

ಅತ್ಯಂತಾಂತರಿತಾಂತಾಂತಸಮಸ್ತಾಪರಮಂಡಲಾಂ |
ಅಜದೇವತ್ರಯೀಶೇಷಾಂ ಸಂಸ್ಮರಾಮಿ ಜಗತ್ಸ್ಥಿತಿಂ || ೩೪ ||

ಚತುರ್ಯುಗಾರ್ಧಮಪರಂ ನೀರಂಧ್ರಾಂ ವನಪಾದಪೈಃ |
ಅದೃಷ್ಟೇತರನಿರ್ಮಾಣಾಂ ಸಂಸ್ಮರಾಮಿ ಧರಾಮಿಮಾಂ || ೩೫ ||

---

೩೧. ಮೇರು ಪರ್ವತಗಳಲ್ಲಿರುವ ರತ್ನಗಳ ಬೆಳಕಿನಿಂದ ಅರ್ಧಾರ್ಧವಾಗಿ ಪ್ರಕಟವಾಗಿರುವ ಕೋಟರಗಳನ್ನುಳ್ಳದ್ದಾಗಿ, ಲೋಕಾಲೋಕ ಪರ್ವತದಂತೆ ಅರೆ ಗತ್ತಲು ಅರೆಬೆಳಕಿನಲ್ಲಿ ಬೆಟ್ಟಗಳು ಕಾಣುತ್ತಿದ್ದುದು ನೆನಪಿನಲ್ಲಿರುವುದು.

೩೨. ದೇವಾಸುರ ಸಂಗ್ರಾಮವು ಬಲವಾದಾಗ, ಕುಗ್ಗಿ ಹೋಗಿ, ಎತ್ತಲೆತ್ತಲೋ ಭೂಮಿಯು ಓಡಿಹೋಗುತ್ತಿದ್ದುದೂ ನೆನಪಿನಲ್ಲಿರುವುದು.

೩೩. ಮದೋನ್ಮತ್ತರಾದ ಮಹಾವೀರ ದೈತ್ಯರ ಸೆರೆಗೆ ಸಿಕ್ಕಿ, ಅವರ ಅಂತಃಪುರದಲ್ಲಿ ಈ ಭೂಮಿಯು ನಾಲ್ಕು ಯುಗಗಳು ಸೆರೆಯಿದ್ದುದು ನೆನಪಿನಲ್ಲಿರುವುದು.

೩೪. ಈ ಬ್ರಹ್ಮಾಂಡವೆಂಬ ಗುಡಿಸಲು ನೀರಿನಲ್ಲಿ ಮುಳುಗಿಹೋಗಿ ಮೇರುವೊಂದಲ್ಲದೆ ಉಳಿದೆಲ್ಲವೂ ಕಾಣದಾಗಿ, ಬ್ರಹ್ಮ ವಿಷ್ಣು ರುದ್ರರು ಮೂವರೇ ಶೇಷವಾಗಿ ಉಳಿದಿದ್ದುದು ನೆನಪಿನಲ್ಲಿರುವುದು.

೩೫. ಈ ಭೂಮಿಯಲ್ಲಿ ವನ್ಯವೃಕ್ಷಗಳು ಮಾತ್ರ ಎಡೆಬಿಡದಂತೆ ಬೆಳೆದು, ಇನ್ನೊಂದೂ ಇಲ್ಲದೆ ಎರಡು ಯುಗಗಳು ಇದ್ದುದು ನೆನಪಿನಲ್ಲಿರುವುದು.

ಏವಂ ಚತುರ್ಯುಗಂ ಸಾಗ್ರಂ ನೀರಂಧ್ರೈರಚಲೈರ್ವೃತಾಂ |
ಅಪ್ರವೃತ್ತಜನಾಚಾರಾಂ ಸಂಸ್ಮರಾಮಿ ಧರಾಮಿಮಾಂ || ೩೬ ||

ದಶವರ್ಷಸಹಸ್ರಾಣಿ ಮೃತದೈತ್ಯಾಸ್ಥಿಪರ್ವತೈಃ |
ಆಕೀರ್ಣಾಂ ಪರಿತಃ ಪೂರ್ಣಾಂ ಸಂಸ್ಮರಾಮಿ ಧರಾಮಿಮಾಂ || ೩೭ ||

ಭಯಾದಂತರ್ಹಿತಾಶೇಷವೈಮಾನಿಕನಭಶ್ಚರಾಂ |
ದ್ಯಾಂ ಚ ನಿರ್ಋಕ್ಷನಿಃಶೇಷಾಂ ಸಂಸ್ಮರಾಮಿ ತಮೋಮಯೀಂ || ೩೮ ||

ಅನಗಸ್ತ್ಯಾಮಗಸ್ತ್ಯಾಶಾಮೇಕಪರ್ವತತಾಂ ಗತಾಂ |
ಮತ್ತೇ ವಿಂಧ್ಯಮಹಾಶೈಲೇ ಸಂಸ್ಮರಾಮಿ ಜಗತ್ಪುಟೀಂ || ೩೯ ||

ಏತಾಂಶ್ಚಾನ್ಯಾಂಶ್ಚ ವೃತ್ತಾಂತಾನ್ಸಂಸ್ಮರಾಮಿ ಬಹೂನಪಿ |
ಕಿಂ ತೇನ ಬಹುನೋಕ್ತೇನ ಸಾರಂ ಸಂಕ್ಷೇಪತಃ ಶೃಣು || ೪೦ ||

---

೩೬. ಹಾಗೆಯೇ ಈ ಭೂಮಿಯು ನಾಲ್ಕು ಯುಗಗಳ ಪರ್ಯಂತ ಕೇವಲ ಪರ್ವತಮಾತ್ರ ಮಯವಾಗಿದ್ದು ಜನಸಂಚಾರವೇ ಇಲ್ಲದೆ ಇದ್ದುದು ನೆನಪಿನಲ್ಲಿ ರುವುದು.

೩೭. ಮೃತರಾದ ದೈತ್ಯರ ಅಸ್ಥಿಗಳು ಪರ್ವತಗಳಾಗಿ ಭೂಮಿಯೆಲ್ಲವನ್ನೂ ಎತ್ತೆತ್ತಲೂ ತುಂಬಿದ್ದುದು ನೆನಪಿನಲ್ಲಿರುವುದು.

೩೮. ಕತ್ತಲೇ ಕತ್ತಲಾಗಿ, ಭಯದಿಂದ ನಭಶ್ಚರರಾದ ವೈಮಾನಿಕರೆಲ್ಲರೂ ಅವಿತುಕೊಂಡಿದ್ದುದೂ, ನಕ್ಷತ್ರಗಳೂ ಒಂದೂ ಇಲ್ಲದಿದ್ದುದೂ ನೆನಪಿನಲ್ಲಿರುವುದು.

೩೯. ದಕ್ಷಿಣ ದಿಕ್ಕಿನಲ್ಲಿ ಅಗಸ್ತ್ಯ ನಕ್ಷತ್ರವು ಇಲ್ಲದೆ ಇದ್ದುದೂ, ವಿಂಧ್ಯಶೈಲವು ಮದಿಸಿ ಬೆಳೆದಾಗ ಜಗತ್ತೆಲ್ಲವೂ ಒಂದೇ ಪರ್ವತವಾಗಿದ್ದುದೂ, ನೆನಪಿನಲ್ಲಿರುವುದು.

೪೦. ಹೀಗೆಯೇ ಇನ್ನೂ ಎಷ್ಟೋ ವೃತ್ತಾಂತಗಳು ನೆನಪಿನಲ್ಲಿರುವುವು. ಅವು ಗಳೆಲ್ಲವನ್ನೂ ವಿಸ್ತಾರವಾಗಿ ಹೇಳಿ ಏನು ಫಲ? ಸಾರವಾದುದನ್ನು ಸಂಕ್ಷೇಪವಾಗಿ ಹೇಳುವೆನು, ಕೇಳು.

ಅಸಂಖ್ಯಾತಾನ್ಮನೂನ್ಬ್ರಹ್ಮನ್ಸ್ಮರಾಮಿ ಶತಶೋ ಗತಾನ್ |
ಸರ್ವಾನ್ಸಂರಂಭಬಹುಲಾಂಶ್ಚ ಚತುರ್ಯುಗಶತಾನಿ ॥ ೪೧ ॥

ಏಕಮೇವ ಸ್ವಯಂ ಶುದ್ಧಂ ಪುರುಷಾಸುರವರ್ಜಿತಂ |
ಆಲೋಕನಿಚಯಂ ಚೈಕಂ ಕಂಚಿತ್ಸರ್ಗಂ ಸ್ಮರಾಮ್ಯಹಂ ॥ ೪೨ ॥

ಸುರಾಪಂ ಬ್ರಾಹ್ಮಣಂ ಮತ್ತಂ ನಿಷಿದ್ಧಸುರಶೂದ್ರಕಂ |
ಬಹುನಾಥಸತೀಕಂ ಚ ಕಂಚಿತ್ಸರ್ಗಂ ಸ್ಮರಾಮ್ಯಹಂ ॥ ೪೩ ॥

ವೃಕ್ಷನೀರಂಧ್ರಭೂಪೀಠಮಕಲ್ಪಿತಮಹಾರ್ಣವಂ |
ಸ್ವಯಂಸಂಜಾತಪುರುಷಂ ಕಂಚಿತ್ಸರ್ಗಂ ಸ್ಮರಾಮ್ಯಹಂ ॥ ೪೪ ॥

---

೪೧. ಅಸಂಖ್ಯಾತರಾಗಿ, ನೂರಾರು ಜನ, ಮನುಗಳೂ ಬ್ರಹ್ಮರೂ ಆಗಿ ಹೋಗಿರುವುದೂ ಅವರೆಲ್ಲರೂ ಎಷ್ಟೆಷ್ಟೋ ವಿಧವಾಗಿ ವ್ಯಾಪಾರ ಮಾಡಿರುವುದೂ ನೂರಾರು ಚತುರ್ಯುಗಗಳು ಕಳೆದು ಹೋಗಿರುವುದೂ ನೆನಪಿನಲ್ಲಿರುವುದು.

೪೨.. ಒಂದು ಸೃಷ್ಟಿಯಲ್ಲಿ ಸುರಾಸುರಾದಿಗಳು ಯಾರೂ ಇಲ್ಲದೆ, ವಿರಾಟ್ಪುರುಷನು ತಾನೊಬ್ಬನೇ ಶುದ್ಧನಾಗಿ ಕೇವಲ ಪ್ರಕಾಶಮಯನಾಗಿ ಇದ್ದುದೂ ನೆನಪಿನಲ್ಲಿರುವುದು.

(ಯದಾ ವಿರಾಟ್ .ಬ್ರಹ್ಮಾಂಡ ಶರೀರ ಉತ್ಪನ್ನ ಮಾತ್ರಃ ಸ್ವಾತ್ಮಕತ್ವಂ ಪರ್ಯಾಲೋಚಯಿತುಂ ಕಂಚಿತ್ಕಾಲಂ ಸಮಾಹಿತ ಚಿತ್ತೋऽಭೂತ್ ! ಸಾ ಅವಸ್ಥಾ ಅತ್ರೋಚ್ಯತೇ --ತಾ. ಪ್ರ.)

೪೩. ಇನ್ನೊಂದು ಸೃಷ್ಟಿಯಲ್ಲಿ ಸುರಾಪಾನ ಮಾಡುವ ಬ್ರಾಹ್ಮಣನೂ ಮದೋನ್ಮತ್ತರಾಗಿ ದೇವತೆಗಳನ್ನೂ ನಿಂದಿಸುವ ಶೂದ್ರರೂ, ಅನೇಕ ಪತಿಯನ್ನುಳ್ಳ ಸ್ತ್ರೀಯರೂ, ಇದ್ದುದೂ ನೆನಪಿನಲ್ಲಿರುವುದು.

೪೪. ಇನ್ನೊಂದು ಸೃಷ್ಟಿಯಲ್ಲಿ ಭೂಮಂಡಲವೆಲ್ಲವೂ ಕೇವಲ ವೃಕ್ಷಮಾತ್ರ ಮಯವಾಗಿದ್ದುದೂ, ಸಾಗರಗಳೊಂದೂ ಇಲ್ಲದೆ ಇದ್ದುದೂ, ಸ್ತ್ರೀಪುಂ ಸಂಯೋಗ ವಿಲ್ಲದೆ ಸ್ವಯಂಜಾತರಾದ ಪುರುಷರು ಇದ್ದುದೂ, ನೆನಪಿನಲ್ಲಿರುವುದು.

ಅಪರ್ವತಮಭೂಮಿಂ ಚ ವ್ಯೋಮಸ್ಥಾಮರಮಾನವಂ|
ಅಚಂದ್ರಾರ್ಕಪ್ರಕಾಶಾಢ್ಯಂ ಕಂಚಿತ್ಸರ್ಗಂ ಸ್ಮರಾಮ್ಯಹಂ || ೪೫ ||

ಅನಿಂದ್ರಮಮಹೀಪಾಲಮಮಧ್ಯಸ್ಥಾಧಮೋತ್ತಮಂ |
ಸಮಮಂಧಕಕುಪ್ ಚಕ್ರಂ ಕಂಚಿತ್ಸರ್ಗಂ ಸ್ಮರಾಮ್ಯಹಂ || ೪೬ ||

ಸರ್ಗಪ್ರಾರಂಭಕಲನಾವಿಭಾಗೋ ಭುವನತ್ರಯೇ |
ಕುಲಪರ್ವತಸಂಸ್ಥಾನಂ ಜಂಬೂದ್ವೀಪಂ ಪೃಥಕ್ ಸ್ಥಿತಂ || ೪೭ ||

(ಸಮುದ್ರ ನಿರ್ಮಾತುಃ ಪ್ರಿಯವ್ರತಸ್ಯ ಉತ್ಪತ್ತೇಃ ಪ್ರಾಗವಸ್ಥಾಯಾಂ ಇದಂ ಪ್ರಸಿದ್ಧಂ | ಸ್ತ್ರೀಪುಂಸಸಂಗಂ ವಿನಾ ಮಾನಸ್ಯಾ ಸೃಷ್ಟ್ಯಾ ಸ್ವಯಮೇವ ಸಂಜಾತಾ ಭೃಗ್ವಾದಿ ಪುರುಷಾ ಯಸ್ಮಿನ್—ತಾ. ಪ್ರ.)

೪೫. ಇನ್ನೊಂದು ಸೃಷ್ಟಿಯಲ್ಲಿ ಪರ್ವತಗಳೂ ಭೂಮಿಯೂ ಕೂಡ ಇಲ್ಲದೆ, ಅಮರರೂ ಮಾನವರೂ ಆಕಾಶದಲ್ಲಿಯೇ ಇದ್ದುದೂ, ಚಂದ್ರಸೂರ್ಯರ ಪ್ರಕಾಶವೇ ಇಲ್ಲದೆ ಇದ್ದುದೂ ಸಹ ನೆನಪಿನಲ್ಲಿರುವುದು.

(ಭುವಿ ಜಲೇ ಮಗ್ನಾಯಾಂ ಜನಲೋಕಾದಿ ಪ್ರಕಾಶ ಬಹುಲ ಲೋಕ ವ್ಯವಹಾರಮಾತ್ರೋಪಲಕ್ಷಿತೇ ಕಾಲೇ ಯಾ ಸ್ಥಿತಿಃ ತಾಂ ಸ್ಮರನ್ನಾಹ—ವ್ಯೋಮಸ್ಥಾ ಅಮರಾ ದೇವಾ ಮಾನವಾ ಯೋಗ ಸಿದ್ಧಾಶ್ಚ ಯಸ್ಮಿನ್—ತಾ. ಪ್ರ.)

೪೬. ಇನ್ನೊಂದು ಸೃಷ್ಟಿಯಲ್ಲಿ ಇಂದ್ರನೇ ಇಲ್ಲದೆ, ಮಹೀಪಾಲರೂ ಇಲ್ಲದೆ, ಉತ್ತಮ, ಮಧ್ಯಮ, ಅಧಮ, ವ್ಯವಸ್ಥೆಯಿಲ್ಲದೆ, ದಿಕ್ಕುಗಳೆಲ್ಲವೂ ಪ್ರಕಾಶಶೂನ್ಯವಾಗಿ ಇದ್ದುದೂ ನೆನಪಿನಲ್ಲಿರುವುದು.

೪೭. ಸೃಷ್ಟಿಯು ಆರಂಭವಾದಾಗ ಭುವನತ್ರಯದಲ್ಲಿಯೂ ಆರಂಭವಾದ ವ್ಯಾಪಾರಗಳೂ, ಕುಲಪರ್ವತಗಳು ಏರ್ಪಟ್ಟುದೂ, ಜಂಬೂದ್ವೀಪವು ಬೇರೆಯಾದುದೂ,

ವರ್ಣಧರ್ಮಧಿಯಾಂ ಸೃಷ್ಟಿವಿಭಾಗೋ ಮಂಡಲಾವನೇಃ ।
ಋಕ್ಷಚಕ್ರಕಸಂಸ್ಥಾನಂ ಧ್ರುವನಿರ್ಮಾಣಮೇವ ಚ ॥ ೪೮ ॥

ಜನ್ಮೇಂದುಭಾಸ್ಕರಾದೀನಾಮಿಂದ್ರೋಪೇಂದ್ರವ್ಯವಸ್ಥಿತಿಂ ।
ಹಿರಣ್ಯಾಕ್ಷಾಪಹರಣಂ ವರಾಹೋದ್ಧರಣಂ ಕ್ಷಿತೇಃ ॥ ೪೯ ॥

ಕಲ್ಪನಂ ಪಾರ್ಥಿವಾನಾಂ ಚ ವೇದಾನಯನಮೇವ ಚ ।
ಮಂದರೋನ್ಮೂಲನಂ ಚಾಬ್ಧೇರಮೃತಾರ್ಥಂ ಚ ಮಂಥನಂ ॥ ೫೦ ॥

ಅಜಾತಪಕ್ಷೋ ಗರುಡಃ ಸಾಗರಾಣಾಂಚ ಸಂಭವಃ ।
ಇತ್ಯಾದಿಕಾ ಯಾಃ ಸ್ಮೃತಯಃ ಸ್ವಲ್ಪಾತೀತಜಗತ್ಕ್ರಮಾಃ ।
ಬಾಲೈರಪಿ ಹಿ ತಾಸ್ತಾತ ಸ್ಮರ್ಯಂತೇ ತಾಸು ಕೋ ಗ್ರಹಃ ॥ ೫೧ ॥

---

೪೮. ಭೂಮಂಡಲದಲ್ಲಿ ವರ್ಣಾಶ್ರಮ ಧರ್ಮಗಳನ್ನು ಹಿಡಿದು ಸೃಷ್ಟಿಯನ್ನು ಬೇರೆಬೇರೆಯಾಗಿ ವಿಭಾಗಿಸಿದುದೂ, ನಕ್ಷತ್ರ ಮಂಡಲವನ್ನೂ, ಧ್ರುವನನ್ನೂ ನಿರ್ಮಿಸಿದುದೂ,

೪೯. ಚಂದ್ರಸೂರ್ಯರು ಹುಟ್ಟಿದುದೂ, ಇವನು ಚಂದ್ರ, ಇವನು ಉಪೇಂದ್ರ, ಎಂದು ವ್ಯವಸ್ಥೆ ಮಾಡಿದುದೂ, ಭೂಮಿಯನ್ನು ಹಿರಣ್ಯಾಕ್ಷನು ಹೊತ್ತುಕೊಂಡು ಹೋದುದೂ, ವರಾಹ (ರೂಪವಾದ ವಿಷ್ಣುವು) ವು ಅದನ್ನು ಮತ್ತೆ ತಂದುದೂ,

೫೦. (ದೇವದಾನವ ಮಾನವರಲ್ಲಿ) ಕ್ಷತ್ರಿಯಜಾತಿಯನ್ನು ಏರ್ಪಡಿಸಿದುದೂ (ಮತ್ಸ್ಯಾವತಾರದಲ್ಲಿ) ಅಪಹೃತವಾಗಿದ್ದ ವೇದಗಳನ್ನು ಮತ್ತೆ ತಂದುದೂ, ಮಂದರವನ್ನು ಕಿತ್ತುದೂ, ಸಾಗರವನ್ನು ಅಮೃತಾರ್ಥವಾಗಿ ಮಂಥನ ಮಾಡಿದುದೂ,

೫೧. ಗರುಡನಿಗೆ ಇನ್ನೂ ಗರಿಗಳು ಹುಟ್ಟದೆ ಇದ್ದುದೂ, ಸಾಗರಗಳು ಹುಟ್ಟಿದುದೂ ಮೊದಲಾದುವೆಲ್ಲ, ಕೆಲವು ಸೃಷ್ಟಿಗಳನ್ನು ಬಲ್ಲ ಹುಡುಗರಿಗೂ ಗೊತ್ತಿರುವುದು. ಹೀಗಿರಲು ಅದರಲ್ಲಿ ಏನು ವಿಶೇಷ ? ಏನೆಂದು ಅಭಿಮಾನ ಪಡುವುದು ?

ಗರುಡವಾಹನಂ ವಿಹಗವಾಹನಂ
ವಿಹಗವಾಹನಂ ವೃಷಭವಾಹನಂ |
ವೃಷಭವಾಹನಂ ಗರುಡವಾಹನಂ
ಕಲಿತವಾಹನಂ ಕಲಿತಜೀವಿತಃ || ೫೨ ||

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕಿಯೇ ದೇವದೂತೋಕ್ತೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ ಭುಶುಂಡೋಪಾಖ್ಯಾನೇ "ಚಿರಜೀವಿತವೃತ್ತಾಂತಕಥನಂ" ನಾಮ ಏಕವಿಂಶಃ ಸರ್ಗಃ

---

೫೨. (ಗರುಡವಾಹನನಾದ) ವಿಷ್ಣುವು (ಹಂಸವಾಹನನಾದ) ಬ್ರಹ್ಮನಂತೆ ಸೃಷ್ಟಿಕರ್ತನಾಗಿದ್ದುದನ್ನೂ, (ಹಂಸವಾಹನನಾದ)ಬ್ರಹ್ಮನು (ವೃಷಭವಾಹನನಾದ) ಶಿವನಂತೆ ಸಂಹಾರ ಕರ್ತನಾಗಿದ್ದುದನ್ನೂ (ವೃಷಭವಾಹನನಾದ) ಶಿವನು ಸೃಷ್ಟಿ ಕರ್ತನಾಗಿದ್ದುದನ್ನೂ ದೀರ್ಘಜೀವಿಯಾದ ನಾನು ನೋಡಿರುವೆನು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ ನಿರ್ವಾಣಪ್ರಕರಣದ ಭುಶುಂಡೋಪಾಖ್ಯಾನದಲ್ಲಿ "ಚಿರಜೀವಿತವೃತ್ತಾಂತಕಥನ" ಎಂಬ ಇಪ್ಪತ್ತೊಂದನೆಯ ಸರ್ಗವು

ದ್ವಾವಿಂಶಃ ಸರ್ಗಃ

ಭುಶುಂಡ ಉವಾಚ —

ತತೋ ಜಗತಿ ಜಾತೇಷು ಭಗವನ್ಯುಷ್ಮದಾದಿಷು |
ಭರದ್ವಾಜಪುಲಸ್ತ್ಯಾತ್ರಿನಾರದೇಂದ್ರಮರೀಚಿಷು || ೧ ||

ಪುಲಹೋದ್ದಾಲಕಾದ್ಯೇಷು ಋಭುಭೃಗ್ವಂಗಿರಸ್ಸು ಚ |
ಸನತ್ಕುಮಾರಭೃಂಗೀಶಸ್ಕಂದೇಭವದನಾದಿಷು || ೨ ||

ಗೌರೀಸರಸ್ವತೀಲಕ್ಷ್ಮೀಗಾಯತ್ರ್ಯಾದ್ಯಾಸು ಭೂರಿಷು |
ಮೇರುಮಂದರಕೈಲಾಸಹಿಮವದ್ದರ್ದುರಾದಿಷು || ೩ ||

ಹಯಗ್ರೀವಹಿರಣ್ಯಾಕ್ಷಕಾಲನೇಮಿಬಲಾದಿಷು |
ಹಿರಣ್ಯಕಶಿಪುಕ್ರಾಥಬಲಿಪ್ರಹ್ಲಾದಕಾದಿಷು || ೪ ||

ಶಿಬಿನ್ಯಂಕುಪೃಥೂಲಾಖ್ಯವೈನ್ಯನಾಭಾಗಕೇಲಿಷು |
ನಲಮಾಂಧಾತೃಸಗರದಿಲೀಪನಹುಷಾದಿಷು || ೫ ||

ಇಪ್ಪತ್ತೆರಡನೆಯ ಸರ್ಗ

೧–೭. ಭುಶುಂಡನು ಹೇಳಿದನು:—ಅನಂತರ ಈ ಜಗತ್ತಿನಲ್ಲಿ ಎಲೈ ಭಗವಂತನೆ, ನೀವುಗಳೆಲ್ಲರೂ ಹುಟ್ಟಿದಿರಿ. ಭರದ್ವಾಜ, ಪುಲಸ್ತ್ಯ, ಅತ್ರಿ, ನಾರದ, ಇಂದ್ರ, ಮರೀಚಿ, ಪುಲಹ, ಉದ್ದಾಲಕಾದಿ ಋಷಿಗಳು, ಕ್ರತು, ಭೃಗು, ಅಂಗೀರಸ್ಸು, ಸನತ್ಕುಮಾರ, ಬ್ರಹ್ಮರ್ಷಿಗಳು, ಭೃಂಗೀಶ, ಸ್ಕಂದ, ಗಣೇಶ, ಮೊದಲಾದ ಶಿವಗಣನಾಥರು, ಗೌರೀ, ಸರಸ್ವತೀ, ಲಕ್ಷ್ಮೀ, ಗಾಯತ್ರೀ ಮೊದಲಾದ ಅನಂತ ಶಕ್ತಿಗಳು, ಮೇರು, ಮಂದರ, ಕೈಲಾಸ, ಹಿಮವಂತ, ದರ್ದುರ, ಆದಿ ಪರ್ವತಗಳು, ಹಯಗ್ರೀವ, ಹಿರಣ್ಯಾಕ್ಷ, ಕಾಲನೇಮಿ, ವಲ, ಹಿರಣ್ಯ ಕಶಿಪು, ಕ್ರಾಥ, ಬಲ, ಪ್ರಹ್ಲಾದ, ಮೊದಲಾದ ದಾನವರು, ಶಿಬಿ, ನ್ಯಂಕು, ಪೃಥೂಲ, ವೈನ್ಯ, ನಾಭಾಗ, ಕೇಲಿ, ನಲ, ಮಾಂಧಾತೃ, ಸಗರ, ದಿಲೀಪ, ನಹುಷ, ಮೊದಲಾದ ಅರಸುಗಳು, ಆತ್ರೇಯ, ವ್ಯಾಸ, ವಾಲ್ಮೀಕಿ, ಶುಕ, ವಾತ್ಸ್ಯಾಯನ, ಉಪಮನ್ಯು, ಮಣೀ, ಮಂಕೀ,

ಆತ್ರೇಯವ್ಯಾಸವಾಲ್ಮೀಕಿಶುಕವಾತ್ಸ್ಯಾಯನಾದಿಷು |
ಉಪಮನ್ಯುಮಣೀಮಂಕೀಭಗೀರಥಶುಕಾದಿಷು ॥ ೬ ॥

ಅಲ್ಪಕಾತೀತಕಾಲೇಷು ಕಿಂಚಿದ್ದೂರೇಷು ಕೇಷುಚಿತ್ |
ತಥಾದ್ಯತನಸರ್ಗೇಷು ಸ್ಮರಣೇ ಗಣನೈವ ಕಾ ॥ ೭ ॥

ಮುನೇ ತೇ ಬ್ರಹ್ಮಪುತ್ರಸ್ಯ ಜನ್ಮಾಷ್ಟಕಮಿದಂ ಕಿಲ |
ಸಂಸ್ಮರಾಮ್ಯಷ್ಟಮೇ ಸರ್ಗೇ ತಸ್ಮಿಂಸ್ತ್ವಂ ಮಮ ಸಂಗತಂ ॥ ೮ ॥

ಕದಾಚಿಜ್ಜಾಯಸೇ ವ್ಯೋಮ್ನಃ ಕದಾಚಿಜ್ಜಾಯಸೇ ಜಲಾತ್ |
ಕದಾಚಿದ್ವಾಯುತಃ ಶೈಲಾತ್ಕದಾಚಿಜ್ಜಾಯಸೇಽನಲಾತ್ ॥ ೯ ॥

ಯಾದೃಶೋ ಯಾದೃಶಾಚಾರೋ ಯಾದೃಕ್ಸಂಸ್ಥಾನದಿಗ್ಗಣಃ |
ಸರ್ಗೋಽಯಂ ತಾದೃಶಾನೇವ ತ್ರೀನ್ಸರ್ಗಾನ್ಸಂಸ್ಮರಾಮ್ಯಹಂ ॥ ೧೦ ॥

ಭಗೀರಥ ಶುಕ ಮೊದಲಾದ ಮುನಿಗಳು, ಮೊದಲಾದವರೆಲ್ಲರೂ ಮೊನ್ನೆ ಮೊನ್ನೆಯ ಸೃಷ್ಟಿಗಳಲ್ಲಿ, ಅಥವಾ ಅದಕ್ಕಿಂತ ಕೊಂಚ ಹಿಂದೆ, ಅಥವಾ ಈಗ ನಡೆಯುತ್ತಿರುವ ಸೃಷ್ಟಿಗಳಲ್ಲಿ ಹುಟ್ಟಿದಿರಿ. ಅವರನ್ನೆಲ್ಲ ನೆನಪಿನಲ್ಲಿಟ್ಟುಕೊಳ್ಳುವುದೆಂತು ?

೮. ಅಲ್ಲದೆ, ಎಲೆ ಮುನೀಂದ್ರನೆ, ಕೇಳು. ಬ್ರಹ್ಮಪುತ್ರನಾದ ನಿನಗೆ ಇದು ಎಂಟನೆಯ ಜನ್ಮವು. ನೀನು ಹಿಂದಿನ ಎಂಟನೆಯ ಜನ್ಮದಲ್ಲಿಯೂ ನನ್ನನ್ನು ಬಂದು ನೋಡಿದ್ದುದು ನೆನಪಿನಲ್ಲಿರುವುದು.

೯. ನೀನು ಒಂದು ಸಲ ಆಕಾಶದಿಂದ ಹುಟ್ಟಿದೆ. ಇನ್ನೊಂದು ಸಲ ನೀರಿನಿಂದ ಹುಟ್ಟಿದೆ. ವಾಯುವಿನಿಂದ ಇನ್ನೊಂದು ಸಲ, ಶೈಲದಿಂದ, ಬೆಂಕಿಯಿಂದ, ಕೂಡ ಹುಟ್ಟಿರುವೆ.

೧೦. ಈಗ ನಡೆಯುತ್ತಿರುವ ಸರ್ಗವು ಹೇಗಿದೆಯೋ, ಇಲ್ಲಿ ಯಾವ ಯಾವ ದಿಕ್ಕುಗಳು ಎಂಬ ವ್ಯವಸ್ಥೆಯು ಇದೆಯೋ ಇದೇ ರೀತಿಯಾಗಿ ಎಲ್ಲವೂ ಇದ್ದ ಮೂರು ಸೃಷ್ಟಿಗಳು ನನ್ನ ನೆನಪಿನಲ್ಲಿರುವುವು.

ಏಕರೂಪಾಖಿಲಾಚಾರಸಂನಿವೇಶಧರಾಮರಾನ್ |
ಸಮಕಾಲಾನ್ಸ್ಥಿರಸ್ಥೈರ್ಯಾನ್ದಶಸರ್ಗಾನ್ಸ್ಮರಾಮ್ಯಹಂ || ೧೧ ||

ಅಂತರ್ಧಾನಂ ಗತಾ ಧಾತ್ರೀ ವಾರಪಂಚಕಮುದ್ಧೃತಾ |
ಮುನೇ ಪಂಚಸು ಸರ್ಗೇಷು ಕೂರ್ಮೇಣೈವ ಪಯೋನಿಧೇಃ || ೧೨ ||

ಮಂದರಾಕರ್ಷಣಾವೇಗಪರ್ಯಾಕುಲಸುರಾಸುರಂ |
ಸ್ಮರಾಮಿ ದ್ವಾದಶಂ ಚೇದಮಮೃತಾಂಭೋಧಿಮಂಥನಂ || ೧೩ ||

ಸರ್ವೌಷಧಿರಸೋಪೇತಾಂ ಬಲಿಗ್ರಾಹಸ್ತದಾ ದಿವಃ |
ವಾರತ್ರಯಂಹಿರಣ್ಯಾಕ್ಷೋ ನೀತವಾನ್ವಸುಧಾಮಧಃ || ೧೪ ||

(ಸರ್ಗೇಷು ಕಲ್ಪೇಷು ತತ್ತದಧಿಕಾರಿ ಪುರುಷಾಣಾಂ ಸಮಾನ ನಾಮ ರೂಪತ್ವೇಽಪಿ, ನ ಸರ್ವೇಷಾಂ ಪದಾರ್ಥಾನಾಂ ಸರ್ವಸಂನಿವೇಶಾಚಾರ ಸಾಮ್ಯ ನಿಯಮಃ ಕಿಂತು ಕಾಕತಾಲೀಯ ನ್ಯಾಯೇನ ಕದಾಚಿತ್ ಸಾಮ್ಯಮಿತ್ಯಾಶಯೇನಾಹ—ತಾ. ಪ್ರ.)

೧೧. ರೂಪದಲ್ಲಿಯೂ, ಎಲ್ಲಾ ಆಚಾರಗಳಲ್ಲಿಯೂ, ಸನ್ನಿವೇಶಗಳಲ್ಲಿಯೂ, ಸ್ಥಾನಗಳಲ್ಲಿಯೂ, ಆಯುಸ್ಸಿನಲ್ಲಿಯೂ. (ದಾನವರಿಂದ ಆಬಾಧಿತವಾದ) ಸ್ಥಿರ ಪದವಿಗಳಲ್ಲಿಯೂ ಒಂದೇ ಸಮನಾಗಿದ್ದ ದೇವತೆಗಳು ಇದ್ದ ಹತ್ತು ಸೃಷ್ಟಿಗಳು ನನ್ನ ನೆನಪಿನಲ್ಲಿವೆ.

೧೨. (ಈ ಸ್ಥಿರಳೆನ್ನಿಸಿಕೊಂಡಿರುವ) ಭೂಮಿಯು ಐದು ಸಲ ಅಂತರ್ಧಾನವಾಗಿ ಹೋಗಿದ್ದಳು. ಐದು ಸೃಷ್ಟಿಗಳಲ್ಲಿ ಸಮುದ್ರದಲ್ಲಿ ಮುಳುಗಿಹೋಗಿದ್ದ ಭೂದೇವಿಯನ್ನು ಕೂರ್ಮನು ಮೇಲಕ್ಕೆತ್ತಿದನು.

೧೩. (ಕ್ಷೀರಸಮುದ್ರವನ್ನು ಕಡೆಯುತ್ತಿದ್ದಾಗ) ಮಂದರ ಪರ್ವತದ ಸೆಳೆತದ ವೇಗಕ್ಕೆ ಸಿಕ್ಕಿ, ಸುರಾಸುರ ಗಣಗಳೆಲ್ಲವೂ ವ್ಯಾಕುಲಪಟ್ಟ, ಆ ಅಮೃತ ಮಂಥನವು ಹನ್ನೆರಡು ಸಲ ನಡೆದುದು ನೆನಪಿನಲ್ಲಿರುವುದು.

೧೪. ಸ್ವರ್ಗದಿಂದಲೂ ಕಾಣಿಕೆಯನ್ನು ತೆಗೆದುಕೊಳ್ಳುತ್ತಿದ್ದ ಹಿರಣ್ಯಾಕ್ಷನು ಸರ್ವ-ಔಷಧಿ ರಸಗಳಿಂದ ಕೂಡಿರುವ ಭೂಮಿಯನ್ನು ಮೂರು ಸಲ ಪಾತಾಳಕ್ಕೆ ಹೊತ್ತುಕೊಂಡು ಹೋಗಿದ್ದನು.

ರೇಣುಕಾತ್ಮಜತಾಂ ಗತ್ವಾ ಷಷ್ಠವಾರಮಿಮಂ ಹರಿಃ |
ಬಹುಸರ್ಗಾಂತರೇಣಾಪಿ ಚಕಾರ ಕ್ಷತ್ರಿಯಕ್ಷಯಂ ‖ ೧೫ ‖

ಶತಂ ಕಲಿಯುಗಾನಾಂ ಚ ಹರೇರ್ಬುದ್ಧದಶಾಶತಂ |
ಶಾಕ್ಯರಾಜತಯೈವಾಪ್ತಂ ಸ್ಮರಾಮಿ ಮುನಿನಾಯಕ ‖ ೧೬ ‖

ತ್ರಿಂಶತ್ತ್ರಿಪುರವಿಕ್ಷೋಭಾನ್ದ್ವೌ ದಕ್ಷಾಧ್ವರಸಂಕ್ಷಯೌ |
ದಶಶಕ್ರವಿಘಾತಾಂಶ್ಚ ಚಂದ್ರಮೌಲೇಃ ಸ್ಮರಾಮ್ಯಹಂ ‖ ೧೭ ‖

ಬಾಣಾರ್ಥಮಷ್ಟೌ ಸಂಗ್ರಾಮಾನ್ ಜ್ವರಪ್ರಮಥಮಂತ್ರಕಾನ್ |
ವಿಕ್ಷೋಭಿತಸುರಾನೀಕಾನ್ ಸ್ಮರಾಮಿ ಹರಿಶರ್ವಯೋಃ ‖ ೧೮ ‖

ಯುಗಂಪ್ರತಿ ಧಿಯಾಂ ಪುಂಸಾಂ ನ್ಯೂನಾಧಿಕತಯಾ ಮುನೇ |
ಕ್ರಿಯಾಂಗಪಾಠವೈಚಿತ್ರ್ಯಯುಕ್ತಾನ್ವೇದಾನ್ ಸ್ಮರಾಮ್ಯಹಂ ‖ ೧೯ ‖

---

೧೫. ಶ್ರೀಹರಿಯು ಎಷ್ಟೆಷ್ಟೋ ಸರ್ಗಗಳಿಗೊಂದು ಸಲದ ಹಾಗೆ ಆರು ಸಲ ಪರಶುರಾಮಾವತಾರ ಮಾಡಿ ಕ್ಷತ್ರಿಯ ಕ್ಷಯವನ್ನು ಮಾಡಿದನು.

೧೬. ನೂರು ಕಲಿಯುಗಗಳಲ್ಲಿ ಶ್ರೀಹರಿಯು ಒಂದು ನೂರು ಸಲ ಬೌದ್ಧಾವತಾರ ಮಾಡಿ ಶಾಕ್ಯರಾಜ ಪುತ್ರನಾದುದು, ಮುನೀಂದ್ರನೇ, ಸ್ಮರಣೆಯಲ್ಲಿ ಇರುವುದು.

೧೭. ಮೂವತ್ತು ಸಲ ತ್ರಿಪುರದಾಹವಾದುದು, ಎರಡು ದಕ್ಷಾಧ್ವರ ವಿನಾಶಗಳು, ಈಶ್ವರನು ಹತ್ತು ಜನ ಇಂದ್ರರನ್ನು ಶಿಕ್ಷಿಸಿದುದು, ಇವೆಲ್ಲವೂ ಸ್ಮರಣೆಯಲ್ಲಿ ಇರುವುದು.

೧೮. ಹರಿಹರರು ಬಾಣಾಸುರನಿಗೋಸ್ಕರ ದೇವತೆಗಳನ್ನೂ ಅಲ್ಲಾಡಿಸಿದ (ವೈಷ್ಣವ ಶೈವ) ಜ್ವರಗಳನ್ನು ಮಂತ್ರಗಳಿಂದ ಸೃಷ್ಟಿ ಮಾಡಿದ ಎಂಟು ಯುದ್ಧಗಳು ಸ್ಮರಣೆಯಲ್ಲಿರುವುವು.

೧೯. ಯುಗಯುಗದಲ್ಲಿಯೂ ಪುರುಷರ ಬುದ್ಧಿ ಶಕ್ತಿಗಳು ನ್ಯೂನವೂ ಅಧಿಕವೂ ಆಗಿರುವುದರಿಂದ, ಎಲೈ ಮುನಿಯೆ, ವೇದಗಳು ಕ್ರಿಯಾ, ಅಂಗ, ಪಾಠ, ವೈಚಿತ್ರ್ಯಗಳನ್ನು ಹೊಂದಿದುದೂ ನನ್ನ ಸ್ಮರಣದಲ್ಲಿರುವುದು.

ಏಕಾರ್ಥಾನಿ ಸಮಗ್ರಾಣಿ ಬಹುಪಾಠಾನಿ ಮೇಽನಘ |
ಪುರಾಣಾನಿ ಪ್ರವರ್ತಂತೇ ಪ್ರಸೃತಾನಿ ಯುಗಂಪ್ರತಿ || ೨೦ ||

ಪುನಸ್ತಾನೇವ ತಾನೇವಮನ್ಯಾನಪಿ ಯುಗೇಯುಗೇ |
ವೇದಾದಿವಿತ್ಪ್ರರಚಿತಾನಿತಿಹಾಸಾನ್ ಸ್ಮರಾಮ್ಯಹಂ || ೨೧ ||

ಇತಿಹಾಸಂ ಮಹಾಶ್ಚರ್ಯಮನ್ಯಂ ರಾಮಾಯಣಾಭಿಧಂ |
ಗ್ರಂಥಲಕ್ಷ ಪ್ರಮಾಣಂ ಚ ಜ್ಞಾನಶಾಸ್ತ್ರಂ ಸ್ಮರಾಮ್ಯಹಂ || ೨೨ ||

ರಾಮವದ್ವ್ಯವಹರ್ತವ್ಯಂ ನ ರಾವಣವಿಲಾಸವತ್ |
ಇತಿ ಯತ್ರ ಧಿಯಾಂ ಜ್ಞಾನಂ ಹಸ್ತೇ ಫಲಮಿವಾರ್ಪಿತಂ || ೨೩ ||

ಕೃತಂ ವಾಲ್ಮೀಕಿನಾ ಚೈತದಧುನಾ ಯತ್ಕರಿಷ್ಯತಿ |
ಅನ್ಯಚ್ಚ ಪ್ರಕಟಂ ಲೋಕೇ ಸ್ಥಿತಂ ಜ್ಞಾಸ್ಯಸಿ ಕಾಲತಃ || ೨೪ ||

(ಬ್ರಹ್ಮಚರ್ಯ. ಗುರುಶುಶ್ರೂಷಾ, ಭೂಮಿಶಯನಾದಿ ಕ್ರಿಯಾಣಾಂ, ಶಿಕ್ಷಾದ್ಯಂಗಾನಾಂ, ಸಾವಧಾನ ಸ್ವರ ವರ್ಣಾದ್ಯುಚ್ಚಾರಣ ಲಕ್ಷಣ ಪಾಠಾನಾಂ, ಚ ನ್ಯೂನಾಧಿಕತಾ ಕೃತ ಪ್ರಭಾವ ವೈಚಿತ್ರ್ಯೈಃ ಯುಕ್ತಾ್ ವೇದಾ—ತಾ. ಪ್ರ.)

೨೦. ಏಕಾರ್ಥಗಳೇ ಆಗಿ ಸಮಗ್ರಗಳಾಗಿದ್ದರೂ ಯುಗಯುಗಕ್ಕೆ ಅನುಸಾರವಾಗಿ ಬಹುಪಾಠ ಸಮೇತಗಳಾಗಿ ಪ್ರವರ್ತಿತಗಳಾದ ಪುರಾಣಗಳೂ ಸ್ಮರಣೆಯಲ್ಲಿ ಇರುವುವು.

೨೧. ಹಾಗೆ ಹಾಗೆಯೇ ಇತಿಹಾಸಗಳನ್ನೂ ಕೂಡ, ಯುಗಯುಗಗಳಲ್ಲಿಯೂ, ಮೊದಲಿನಂತೆಯೂ ಬೇರೆಯಾಗಿಯೂ, ವೇದಾದಿಗಳನ್ನು ಬಲ್ಲವರು ರಚಿಸುವುದೂ ಸ್ಮರಣೆಯಲ್ಲಿರುವುದು.

೨೨. ಅಲ್ಲದೆ ಮಹಾಶ್ಚರ್ಯಕರವಾದ, ಒಂದು ಲಕ್ಷ ಗ್ರಂಥವುಳ್ಳ, ಜ್ಞಾನಶಾಸ್ತ್ರವೆಂದು ಪ್ರಸಿದ್ಧವಾದ, ರಾಮಾಯಣವೆಂಬ ಇತಿಹಾಸವೂ ನೆನಪಿನಲ್ಲಿರುವುದು.

(ಮಹಾರಾಮಾಯಣಾಭಿದಂ ಬ್ರಹ್ಮಣಾ ವಸಿಷ್ಠ ವಿಶ್ವಾಮಿತ್ರಾದಿಭ್ಯಶ್ಚ ಉಪದಿಷ್ಟಂ ಜ್ಞಾನಶಾಸ್ತ್ರಂ—ತಾ. ಪ್ರ.)

೨೩–೨೪. ರಾಮನಂತೆ ವ್ಯವಹರಿಸಬೇಕು. ರಾವಣನ ವಿಲಾಸದಂತೆ ಮಾಡ

ವಾಲ್ಮೀಕಿನಾಮ್ನಾ ಜೀವೇನ ತೇನೈವಾನ್ಯೇನ ವಾ ಕೃತಂ |
ಏತಚ್ಚ ದ್ವಾದಶಂ ವಾರಂ ಕ್ರಿಯತೇ ವಿಸ್ಮೃತಿಂ ಗತಂ || ೨೫ ||

ದ್ವಿತೀಯಮೇತಸ್ಯ ಸಮಂ ಭಾರತಂ ನಾಮ ನಾಮತಃ |
ಸ್ಮರಾಮಿ ಪ್ರಾಕ್ತನವ್ಯಾಸಕೃತಂ ಜಗತಿ ವಿಸ್ಮೃತಂ || ೨೬ ||

ವ್ಯಾಸಾಭಿಧೇನ ಜೀವೇನ ತೇನೈವಾನ್ಯೇನ ವಾ ಕೃತಂ |
ಏತತ್ತು ಸಪ್ತಮಂ ವಾರಂ ಕ್ರಿಯತೇ ವಿಸ್ಮೃತಿಂ ಗತಂ || ೨೭ ||

ಆಖ್ಯಾನಿಕಾನಿ ಶಾಸ್ತ್ರಾಣಿ ನಿವೃತ್ತಾನಿ ಯುಗಂಪ್ರತಿ |
ವಿಚಿತ್ರಸಂನಿವೇಶಾನಿ ಸಂಸ್ಮರಾಮಿಮುನೀಶ್ವರ || ೨೮ ||

ಬಾರದು ಎಂಬುದನ್ನು ಬುದ್ಧಿವಂತರಿಗೆಲ್ಲ ಕೈಗೆಕೊಟ್ಟ ಹಣ್ಣಿನಂತೆ ತೋರಿಸಿಕೊಡುವ ವಾಲ್ಮೀಕಿಯು ಹಿಂದೆ ರಚಿಸಿದ, ಈಗ ರಚಿಸಿರುವ, ಮುಂದೆ ರಚಿಸುವ ರಾಮಾಯಣವನ್ನು ಬಲ್ಲೆನು.

(ಅನ್ಯಚ್ಚ-ವಸಿಷ್ಠರಾಮ ಸಂವಾದರೂಪಂ ಮಹಾರಾಮಾಯಣಂ ದ್ವಾತ್ರಿಂಶತ್ ಸಹಸ್ರಮಿತಂ ಕರಿಷ್ಯತಿ ತದಪಿ ದಿವ್ಯಜ್ಞಾನ ಬಲಾದನುಭೂತಂ ಸ್ಮರಾಮಿ, ತ್ವಮಪಿ ಕಾಲತೋ ಜ್ಞಾಸ್ಯಸಿ—ತಾ. ಪ್ರ.)

೨೫. ವಾಲ್ಮೀಕಿಯೆಂಬ ಹೆಸರಿನ ಜೀವನೊಬ್ಬನು, ಅಥವಾ ಇನ್ನೊಬ್ಬನು, (ಲೋಕವು) ಮರೆತುಹೋಗಿದ್ದ ರಾಮಾಯಣವನ್ನು ಹನ್ನೆರಡು ಬಾರಿ ಬರೆಯುವನು.

೨೬. ಈ ರಾಮಾಯಣಕ್ಕೆ ಸಮವಾಗಿ, ಇದಕ್ಕೆ ಎರಡನೆಯದಾಗಿರುವ, ಭಾರತವನ್ನು ಹಿಂದಿನ ವ್ಯಾಸನು ಬರೆದಿದ್ದುದು ಸ್ಮರಣೆಯಲ್ಲಿರುವುದು.

೨೭. ಆ ಭಾರತವೂ (ಲೋಕದಲ್ಲಿ) ಮರೆತುಹೋಗಿದ್ದುದೂ, ವ್ಯಾಸನೆಂಬ ಜೀವನೋ ಅಥವಾ ಇನ್ನು ಯಾರೋ ಅದನ್ನು ಏಳನೆಯ ಬಾರಿ ಬರೆದುದೂ ಸ್ಮರಣೆಯಲ್ಲಿರುವುದು.

೨೮. ಎಲೆ ಮುನೀಶ್ವರನೆ, ಆಖ್ಯಾನಕಗಳು, ಶಾಸ್ತ್ರಗಳು, ಇವುಗಳು

ಭೂಯಸ್ತಾನ್ಯೇವ ತಾನ್ಯೇವ ತಥಾನ್ಯಾನಿ ಯುಗೇಯುಗೇ |
ಸಾಧೋ ಪದಾರ್ಥಜಾಲಾನಿ ಪ್ರಪಶ್ಯಾಮಿ ಸ್ಮರಾಮಿ ವೈ || ೨೯ ||

ರಾಕ್ಷಸಕ್ಷತಯೇ ವಿಷ್ಣೋರ್ಮಹೀಮವತರಿಷ್ಯತಃ |
ಅಧುನೈಕಾದಶಂ ಜನ್ಮ ರಾಮನಾಮ್ನೋ ಭವಿಷ್ಯತಿ || ೩೦ ||

ನಾರಸಿಂಹೇನ ವಪುಷಾ ಹಿರಣ್ಯಕಶಿಪುಂ ಹರಿಃ |
ಜಘಾನ ವಾರತ್ರಿತಯಂ ಮೃಗೇಂದ್ರ ಇವ ವಾರಣಂ || ೩೧ ||

ವಸುದೇವಗೃಹೇ ವಿಷ್ಣೋರ್ಭವೋ ಭಾರನಿವೃತ್ತಯೇ |
ಅಧುನಾ ಷೋಡಶಂ ಜನ್ಮ ಭವಿಷ್ಯತಿ ಮುನೀಶ್ವರ || ೩೨ ||

ಜಗನ್ಮಯೀ ಭ್ರಾಂತಿರಿಯಂ ನ ಕದಾಚನ ವಿದ್ಯತೇ |
ವಿದ್ಯತೇ ತು ಕದಾಚಿಚ್ಚ ಜಲಬುದ್ಬುದವತ್ಸ್ಥಿತಾ || ೩೩ ||

ಯುಗಯುಗದಲ್ಲಿಯೂ ಕಳೆದುಹೋಗುವುದೂ, ವಿಚಿತ್ರ ಸನ್ನಿವೇಶಗಳು ಸಂಭವಿಸುವುದೂ ಸ್ಮರಣೆಯಲ್ಲಿರುವುದು.

೨೯. ಪದಾರ್ಥಪದಾರ್ಥಗಳೂ, ಅವೇಅವೇ ಮತ್ತೆಮತ್ತೆ ಯುಗಯುಗದಲ್ಲಿಯೂ ಬರುವುದೂ ಉಂಟು: ಬೇರೆಬೇರೆಯಾಗುವುದೂ ಉಂಟು ಎಂಬುದನ್ನು ನೋಡಿರುವೆನು. ನೆನಪಿನಲ್ಲಿಯೂ ಇರುವುದು.

೩೦. ರಾಕ್ಷಸಸಂಹಾರಕ್ಕಾಗಿ ಭೂಮಿಯಲ್ಲಿ ಅವತರಿಸುವ ಮಹಾವಿಷ್ಣುವು ಈಗ ಹನ್ನೊಂದನೆಯ ಸಲ ರಾಮಾವತಾರ ಮಾಡಿರುವನು.

೩೧. ಸಿಂಹವು ಆನೆಯನ್ನು ಸೀಳುವಂತೆ, ನರಸಿಂಹನಾಗಿ ಅವತರಿಸಿ ಮಹಾವಿಷ್ಣುವು ಹಿರಣ್ಯಕಶಿಪುವನ್ನು ಮೂರು ಸಲ ಸಂಹರಿಸಿದನು.

೩೨. ಭೂಭಾರ ನಿವಾರಣಕ್ಕಾಗಿ ಶ್ರೀಹರಿಯು ವಸುದೇವನ ಮನೆಯಲ್ಲಿ ಹದಿನಾರು ಸಲ ಜನ್ಮವೆತ್ತಿರುವನು.

೩೩. ಈ ಜಗತ್ಸ್ವರೂಪವಾಗಿರುವ ಭ್ರಾಂತಿಯು ಯಾವಾಗಲೂ ಹೀಗೆಯೇ ಇರುವುದಿಲ್ಲ. ಕೆಲವು ಸಲ ಹೀಗೆಯೇ ಇದ್ದೂ ಇರುವುದು. ಯಾವಾಗ ಇದ್ದರೂ ಅದು ನೀರಿನಲ್ಲಿನ ಗುಳ್ಳೆಯಂತೆಯೇ ಇರುವುದು.

ದೃಶ್ಯಭ್ರಾಂತಿರನಿತ್ಯೇಯಮಂತಸ್ಥಾ ಸಂವಿದಾತ್ಮನಿ |
ಜಾಯತೇ ಲೀಯತೇ ಚಾಶು ಲೋಲಾ ವೀಚಿರಿವಾಂಭಸಿ || ೩೪ ||

ಸಮೈಕಸಂನಿವೇಶಾನಿ ಬಹೂನಿ ವಿಷಮಾಣಿ ಚ |
ತಥಾರ್ಧಸಮರೂಪಾಣಿ ತ್ರಿಜಗಂತಿ ಸ್ಮರಾಮ್ಯಹಂ || ೩೫ ||

ತಾನ್ಯೇವ ತಾದೃಕ್ಕರ್ಮಾಣಿ ತಥಾನ್ಯಾಚರಣಾನಿಚ |
ತತ್ಕರ್ಮಾಣಿ ತಥಾನ್ಯಾನಿ ಭೂತಾನೀಹ ಸ್ಮರಾಮ್ಯಹಂ || ೩೬ ||

ಪ್ರತಿಮನ್ವಂತರಂ ಬ್ರಹನ್ವಿಪರ್ಯಸ್ತೇ ಜಗತ್ಕ್ರಮೇ |
ಸಂನಿವೇಶೇಽನ್ಯಥಾಜಾತೇ ಪ್ರಯಾತೇ ಸಂಶ್ರುತೇ ಜನೇ || ೩೭ ||

ಮಮಾನ್ಯಾನ್ಯೇವ ಮಿತ್ರಾಣಿ ಅನ್ಯ ಏವ ಚ ಬಂಧವಃ |
ಅನ್ಯ ಏವ ನವಾ ಭೃತ್ಯಾಸ್ತ್ವನ್ಯ ಏವ ಸಮಾಶ್ರಯಾಃ || ೩೮ ||

---

೩೪. ಈ ಜಗದ್ಭ್ರಾಂತಿಯು ಅನಿತ್ಯವು. ಸಂವಿತ್ಸ್ವರೂಪನಾದ ಆತ್ಮನಲ್ಲಿಯೇ ಒಳಗೇ ಇದ್ದು ಹೊರಗೆ ಕಾಣುವುದು. ಹುಟ್ಟುವುದು, ಲಯವಾಗುವುದು. ನೀರಿನ ಅಲೆಗಳಂತೆ ಇದೂ ಬಹು ಚಂಚಲವಾದುದು.

೩೫. ಒಂದೇ ರೀತಿಯಾದ ಸನ್ನಿವೇಶಗಳಿದ್ದ ತ್ರಿಜಗತ್ತುಗಳೂ ಹಾಗೆಯೇ ವಿಷಮ ಸನ್ನಿವೇಶಗಳಿದ್ದ ಅನೇಕ ಜಗತ್ತ್ರಯಗಳೂ ಅದರಂತೆಯೇ ಅರ್ಧ ಸಮ ಸನ್ನಿವೇಶಗಳಿದ್ದ ತ್ರೈಲೋಕ್ಯಗಳೂ ನೆನಪಿನಲ್ಲಿರುವುವು.

೩೬. ಹಾಗೆಯೇ ಪೂರ್ವ ಸೃಷ್ಟಿಯಲ್ಲಿ ಇದ್ದಂತೆಯೇ ಇದ್ದು, ಅದದೇ ಕರ್ಮಗಳನ್ನು ಮಾಡುತ್ತಿದ್ದ ಭೂತಜಾತಗಳನ್ನೂ, ಆಕಾರ ಕರ್ಮಗಳಲ್ಲಿ ಭಿನ್ನವಾಗಿದ್ದ ಪ್ರಾಣಿಗಳನ್ನೂ,ಹಾಗೆಯೇ ಕರ್ಮದಲ್ಲಿ ಸಾದೃಶ್ಯವಿದ್ದರೂ ಆಕಾರದಲ್ಲಿ ಭಿನ್ನೈಸುವ ಪ್ರಾಣಿಗಳನ್ನೂ ಸ್ಮರಿಸುವೆನು.

೩೭. ಮನ್ವಂತರ ಮನ್ವಂತರದಲ್ಲಿಯೂ, ಎಲೈ ಬ್ರಹ್ಮನೆ, ಜಗತ್ಕ್ರಮವು ಬದಲಾಯಿಸುವುದು. ಸನ್ನಿವೇಶಗಳು ಹೊಸಹೊಸದಾಗುವುವು. ಪ್ರಸಿದ್ಧ ಪುರುಷರು ಹೋಗುವರು.

೩೮. ಮನ್ವಂತರ ಮನ್ವಂತರದಲ್ಲಿಯೂ ನನಗೆ ಹೊಸಹೊಸ ಸ್ನೇಹಿತರು

ಕದಾಚಿದಹಮೇಕಾಂತೇ ವಿಂಧ್ಯಕಚ್ಛಕೃತಾಲಯಃ |
ಕದಾಚಿತ್ಸಹ್ಯನಿಲಯಃ ಕದಾಚಿದ್ದರ್ದುರಾಲಯಃ || ೩೯ ||

ಕದಾಚಿದ್ಧಿಮವದ್ವಾಸೀ ಕದಾಚಿನ್ಮಲಯಾಚಲಃ |
ಕದಾಚಿತ್ಪ್ರಾಕ್ತನೇನೈವ ಸಂನಿವೇಶೇನ ಭೂಧರಂ || ೪೦ ||

ಚೂತವೃಕ್ಷೇ ಚ ಶಾಖಾಯಾಂ ಪ್ರಾಪ್ಯ ನೀಡಂ ಕರೋಮ್ಯಹಂ |
ಅನಾದ್ಯಂತೇಷು ಯಾತೇಷು ಯುಗೇಷು ಮುನಿನಾಯಕ || ೪೧ ||

ಪ್ರಾಕ್ತನೇನೈವ ಜಾತೋಽಯಂ ಸಂನಿವೇಶೇನ ಪಾದಪಃ |
ದೇಹಂ ತ್ಯಕ್ತ್ವಾ ಸುಖಂ ಸಾಧೋ ನಾತಃ ಪರಿಣತಿಂ ಗತಃ || ೪೨ ||

ತದೀಯೇನೈವ ಜಾತೋಽಯಂ ಸಂನಿವೇಶೇನ ಪಾದಪಃ |
ತಾತೇ ಜೀವತಿ ಯೈವಾಭೂಚ್ಛೋಭಾಸ್ಯ ಸುತರೋಸ್ತಥಾ || ೪೩ ||

ಬರುವರು. ಹೊಸಹೊಸ ಬಂಧುಗಳು ಬರುವರು. ಹೊಸಹೊಸ ಭೃತ್ಯರು ಬರುವರು. ಮನೆಮನೆಯೂ ಹೊಸಹೊಸದಾಗುವುದು.

೩೯. ಒಂದು ಸಲ ನಾನು ಏಕಾಂತವಾಗಿ ವಿಂಧ್ಯಪರ್ವತದ ಕಿಬ್ಬದಿಯಲ್ಲಿ ಮನೆ ಮಾಡಿಕೊಂಡಿದ್ದೆನು. ಇನ್ನೊಂದು ಸಲ ಸಹ್ಯ ಪರ್ವತದಲ್ಲಿ ಮತ್ತೊಮ್ಮೆ ದರ್ದುರಾದ್ರಿಯಲ್ಲಿ ವಾಸವಾಗಿದ್ದೆನು.

೪೦-೪೧. ಇನ್ನೊಮ್ಮೆ ಹಿಮಾಲಯದಲ್ಲಿ ಇದ್ದೆನು. ಮತ್ತೊಮ್ಮೆ ಮಲಯಾಚಲದಲ್ಲಿದ್ದೆನು. ಇನ್ನೊಮ್ಮೆ ಮೊದಲಿನಂತೆಯೇ ಮೇರು ಪರ್ವತವನ್ನು ಆಶ್ರಯಿಸಿ ಲೆಕ್ಕವಿಲ್ಲದಷ್ಟು ಸಲ ಯುಗಗಳು ಮರಳುತ್ತಿದ್ದರೂ, ಎಲೆ ಮುನೀಂದ್ರನೆ, ಈ ಚೂತ ವೃಕ್ಷದ ಕೊಂಬೆಯಲ್ಲಿಯೇ ಗೂಡು ಮಾಡಿಕೊಂಡಿದ್ದೆನು.

೪೨. ಎಲೈ, ಸಾಧುವೆ, ಈ ಮರವು ಆಗಾಗ ದೇಹತ್ಯಾಗ ಮಾಡಿದರೂ ಮತ್ತೆ ಮತ್ತೆಯೂ ಮೊದಲಿದ್ದಂತೆಯೇ ಹುಟ್ಟುವುದು.ಅದರಿಂದ ಇದ್ದಂತೆಯೇ ಇರುವುದು.

೪೩. ನಮ್ಮ ತಂದೆಯು ಬದುಕಿದ್ದಾಗ ಈ ಮಹಾವೃಕ್ಷವು ಯಾವ ಸೊಬಗಿನಿಂದ ಮೆರೆಯುತ್ತಿತ್ತೋ ಅದೇ ಸೊಬಗು ಇದಕ್ಕೆ ಯಾವಾಗಲೂ ಇರುವುದು.

ಕೃತಪ್ರಾಕ್ಸಂನಿವೇಶೋಽಯಮಹಂ ಸ್ಥಿತಿಮಿಹಾಗತಃ |
ನೇಹಾಭೂದುತ್ತರಾ ಪೂರ್ವಂ ಕಕುಪ್ನಾಯಂ ಚ ಭೂಧರಃ || ೪೪ ||

ದಿಗುತ್ತರಾಭೂದನ್ಯೇಯಂ ಪೂರ್ವಮೇವ ಮಹೀಧರಃ |
ಏಕೈಕದೇಹಸಂಸ್ಥಾನವೀತಬ್ರಹ್ಮನಿಶಾಗಮಃ || ೪೫ ||

ಧ್ಯಾನಾಂತೇ ತತ್ತ್ವ ಏವೈನಂ ಸರ್ಗಮಾಲೋಕ್ಯ ವೇದ್ಮ್ಯಹಂ || ೪೬ ||

ಅರ್ಕಾದೇರ್ಋಕ್ಷಸಂಚಾರಾರ್ ಮೇರ್ವಾದಿಸ್ಥಾನಕಾ ದಿಶಃ |
ಸಂಸ್ಥಾನಮನ್ಯಥಾ ತಸ್ಮಿನ್ಸ್ಥಿತೇ ಯಾಂತಿ ದಿಶೋಽನ್ಯಥಾ || ೪೭ ||

ನ ಸನ್ನಾಸಜ್ಜಗನ್ಮನ್ಯೇ ಭ್ರಮಯನ್ಕೇವಲಂ ಧಿಯಃ |
ಆತ್ಮಸ್ಪಂದಚಮತ್ಕಾರವಿಭವೋಽಯಂ ವಿಜೃಂಭತೇ || ೪೮ ||

---

೪೪. ಹೀಗೆ ಆ ಪೂರ್ವ ಸಂನಿವೇಶವೆಲ್ಲವೂ ಮತ್ತೆ ಇಲ್ಲಿ ಇರುವುದೆಂದು ನಾನು ಇಲ್ಲಿರುವೆನು. ಹಾಗೆಂದು, ಅದೇ ಇದು ಎಂದುಕೊಳ್ಳದಿರು. ಈ ದಿಕ್ಕು ಹಿಂದೆ ಉತ್ತರದಿಕ್ಕಾಗಿರಲಿಲ್ಲ. ಈ ಪರ್ವತವೂ ಇದೇ ಆಗಿರಲಿಲ್ಲ.

೪೫. ಹಿಂದೆ ಇದ್ದ ಉತ್ತರ ದಿಕ್ಕೇ ಬೇರೆ, ಆಗಿದ್ದ ಪರ್ವತವೇ ಬೇರೆ; ನಾನು ಮಾತ್ರ ಅದೇ ದೇಹವನ್ನೂ, ಅದೇ ಪ್ರತ್ಯಭಿಜ್ಞೆಯನ್ನೂ ಉಳಿಸಿಕೊಂಡು ಬ್ರಹ್ಮದೇವನ ಹಗಲು ಮುಗಿದು ರಾತ್ರಿಯಲ್ಲಿ ಆಗುವ ಪ್ರಲಯಗಳನ್ನೆಲ್ಲ ಕಳೆದಿರುವೆನು.

೪೬. (ಹಿಂದೆ ಹೇಳಿದಂತೆ ಕಲ್ಪಾಂತಗಳಲ್ಲಿ ಧಾರಣಗಳನ್ನುಹಿಡಿದು ಧ್ಯಾನದಲ್ಲಿ ಮಗ್ನನಾಗಿದ್ದು, ಮತ್ತೆ ಸೃಷ್ಟಿಯಾದ ಮೇಲೆ,) ಧ್ಯಾನದಿಂದ ಹೊರಕ್ಕೆ ಬಂದು, ಓಹೋ, ಸೃಷ್ಟಿಯಾಗಿದೆ ಎಂದು ಗುರುತಿಸುವೆನು.

೪೭. ಸೂರ್ಯಾದಿಗಳಿಂದ ಮತ್ತು ನಕ್ಷತ್ರ ಸಂಚಾರಗಳಿಂದ ಮೇರು ಮೊದಲಾದುವುಗಳ ಸ್ಥಾನದಿಂದ, ದಿಕ್ಕುಗಳು ಯಾವಯಾವುದು ಎಂಬುದು ಗೊತ್ತಾಗುವುದು. ಸೂರ್ಯಾದಿಗಳು ಬೇರೆಬೇರೆ ಸ್ಥಾನಗಳಲ್ಲಿದ್ದರೆ, ದಿಕ್ಕುಗಳ ಕ್ರಮವೂ ಬೇರೆ ಬೇರೆಯಾಗುವುದು.

೪೮. ಅದರಿಂದ ಈ ಜಗತ್ತು ಸತ್ ಅಲ್ಲ, ಅಸತ್ ಅಲ್ಲ. ಆತ್ಮಸ್ಪಂದಗಳ ಚಮತ್ಕಾರವೇ ಹೀಗೆ ಹರಡಿಕೊಂಡು ಬುದ್ಧಿಬುದ್ಧಿಗೂ ಈ ಜಗತ್ತು ಸತ್ಯವೆಂಬ ಭ್ರಾಂತಿಯನ್ನು ಹುಟ್ಟಿಸುತ್ತ ವಿಜೃಂಭಿಸುತ್ತಿರುವುದು.

ಪುತ್ರಃ ಪಿತೃತ್ವಮಾಯಾತಿ ಮಿತ್ರಂ ಯಾತ್ಯರಿತಾಂ ತಥಾ |
ಸ್ತ್ರೀತ್ವಂ ಚ ಶತಶೋ ಯಾತಾನ್ಪುಂಸಶ್ಚೈವ ಸ್ಮರಾಮ್ಯಹಂ || ೪೯ ||

ಕಲೌ ಕೃತಯುಗಾಚಾರಾನ್ಕೃತೇ ಕಲಿಯುಗಸ್ಥಿತಿಂ |
ತ್ರೇತಾಯಾಂ ದ್ವಾಪರೇ ಚೈವ ಸಂಸ್ಮರಾಮಿ ಮುನೀಶ್ವರ || ೫೦ ||

ಅದೃಷ್ಟವೇದವೇದಾರ್ಥಾ ಸ್ವಸಂಕೇತವಿಹಾರಿಣಃ |
ಸರ್ಗಾನ್ನಿರರ್ಗಲಾಚಾರಾ ಕ್ವಚಿತ್ಕಾಂಶ್ಚಿತ್ಸ್ಮರಾಮ್ಯಹಂ || ೫೧ ||

ಧ್ಯಾತರಿ ಬ್ರಹ್ಮಣೋ ಬ್ರಹ್ಮನ್ಸಸುರಾಸುರಮಾನುಷಂ |
ಚತುರ್ಯುಗಸಹಸ್ರಾಂತೇ ಜಗಚ್ಛೂನ್ಯಂ ಸ್ಮರಾಮ್ಯಹಂ || ೫೨ ||

---

೪೯. ಮಗನು ತಂದೆಯಾಗುವನು. ಮಿತ್ರನು ಶತ್ರುವಾಗುವನು. ಗಂಡಸರು ಎಷ್ಟೋ ಜನ ಹೆಂಗುಸರಾಗಿರುವರು. ಇವೆಲ್ಲವೂ ನನ್ನ ನೆನಪಿನಲ್ಲಿರುವುದು.

೫೦. ಕಲಿಯುಗದಲ್ಲಿ ಕೃತಯುಗದ ಆಚಾರಗಳನ್ನು ಮಾಡುವವರನ್ನೂ, ಕೃತಯುಗದಲ್ಲಿ ಕಲಿಯುಗದ ಸ್ಥಿತಿಯನ್ನೂ. ಹೀಗೆಯೇ ತ್ರೇತಾದ್ವಾಪರಗಳಲ್ಲಿಯೂ ತದ್ಯುಗ ವಿಪರೀತ ಸ್ಥಿತಿಗಳನ್ನೂ, ಮುನೀಂದ್ರ, ನಾನು ಕಂಡಿರುವೆನು.

೫೧. ಒಂದೊಂದು ಸಲ ವೇದವೇದಾರ್ಥಗಳ ಸ್ವರೂಪವನ್ನೇ ಅರಿಯದೆ, ಸ್ವಸಂಕೇತಗಳನ್ನು ಮಾಡಿಕೊಂಡು ಸ್ವಚ್ಛಂದವಾಗಿ ವಿಹರಿಸುವವರನ್ನೂ, ಯಾವ ಶಂಕಾತಂಕಗಳೂ ಇಲ್ಲದೆ ಸ್ವೇಚ್ಛಾಚಾರ ಪರವಾಗಿರುವ ಜನರು ತುಂಬಿದ್ದ ಸೃಷ್ಟಿಗಳು ಕೆಲವನ್ನೂ ಸ್ಮರಿಸುವೆನು.

(ಕೃತಯುಗೇಽಪಿ ಪುಷ್ಕರೇಣ ನಲಸ್ಯ ನಿಕೃತ್ಯಾದ್ಯೂತೇ ಜಯೋ ವಿನಾಪರಾಧಂ ಏಕವಸ್ತ್ರೇಣ ಸಭಾರ್ಯಸ್ಯ ನಿವಾಸನಂಚ ಪ್ರಸಿದ್ಧಂ—ತಾ. ಪ್ರ.)

೫೨. ಹಾಗೆಯೇ ಬ್ರಹ್ಮನು ಚತುರ್ಯುಗ ಸಹಸ್ರಾಂತದಲ್ಲಿ ಆಗುವ ಮಹಾಪ್ರಲಯದಲ್ಲಿ, ಎಲೈ ಬ್ರಹ್ಮನೆ, ಸುರ, ಅಸುರ, ಮನುಷ್ಯಸಹಿತವಾದ ಈ ಜಗತ್ತನ್ನೆಲ್ಲಾ ಉಪಸಂಹಾರ ಮಾಡಿ, ಧ್ಯಾನಮಗ್ನನಾದಾಗ ಈ ಜಗತ್ತು ಕೇವಲ ಶೂನ್ಯದಂತೆಯೇ ಇದ್ದುದೂ ನನ್ನ ನೆನಪಿನಲ್ಲಿರುವುದು.

ಮನೋ ಮನನನಿರ್ಮಾಣಾನ್ಪಾರ್ಥಿವಾಕಾರವರ್ಜಿತಾನ್ |
ವ್ಯಾಪ್ತಾನ್ವಾಯುಮಯೈರ್ಭೂತೈರ್ದಶ ಸರ್ಗಾನ್ಸ್ಮರಾಮ್ಯಹಂ || ೫೩ ||

ವಿಚಿತ್ರಸಂಸ್ಥಾನವಿಶೇಷದೇಶಾನ್
ವಿಚಿತ್ರಕಾರ್ಯಾಕುಲಭೂತಕೋಶಾನ್ |
ವಿಚಿತ್ರವಿನ್ಯಾಸವಿಲಾಸವೇಷಾನ್
ಸ್ಮರಾಮ್ಯಹಂ ಬ್ರಹ್ಮದಿನೇಷ್ಟಶೇಷಾನ್ || ೫೪ ||

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ದೇವದೂತೋಕ್ತೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ ಭುಶುಂಡೋಪಾಖ್ಯಾನೇ "ಚಿರಜೀವಿತವರ್ಣನಂ" ನಾಮ ದ್ವಾವಿಂಶಃ ಸರ್ಗಃ

---

೫೩. ಹಾಗೆಯೇ ಮನುವು ತನ್ನ ಮನಸ್ಸಿನಿಂದಲೇ ನಿರ್ಮಾಣ ಮಾಡಿದ, ಪಾರ್ಥಿವಾಕಾರವಿಲ್ಲದೆ ಕೇವಲ ವಾಯುಭೂತದಿಂದಾದ ದೇಹಗಳುಳ್ಳ ಪ್ರಾಣಿಗಳೇ ತುಂಬಿದ್ದ ಹತ್ತು ಸೃಷ್ಟಿಗಳನ್ನು ಕಂಡಿರುವೆನು.

೫೪. ಮತ್ತು ಬ್ರಹ್ಮನ ಹಗಲು ಆರಂಭವಾದಾಗ, ಆ ಬ್ರಹ್ಮದಿನಗಳಲ್ಲಿ ಎಷ್ಟೋ ಸೃಷ್ಟಿಗಳಲ್ಲಿ ಚಿತ್ರವಿಚಿತ್ರವಾದ ಸಂಸ್ಥಾನಗಳಿದ್ದ ದೇಶಗಳನ್ನೂ, ಚಿತ್ರ ವಿಚಿತ್ರ ಕಾರ್ಯಕರಣ ಶೀಲರಾದ ಪ್ರಾಣಿಗಳ ಸಮೂಹಗಳನ್ನೂ, ಹಾಗೆಯೇ ಚಿತ್ರವಿಚಿತ್ರ ವಿಲಾಸ ವೇಷಗಳನ್ನು ನೋಡಿರುವೆನು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ ನಿರ್ವಾಣಪ್ರಕರಣದ ಭುಶುಂಡೋಪಾಖ್ಯಾನದಲ್ಲಿ "ಚಿರಜೀವಿತವರ್ಣನ" ಎಂಬ ಇಪ್ಪತ್ತೆರಡನೆಯ ಸರ್ಗವು

ತ್ರಯೋವಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಅಥಾಸೌ ವಾಯಸಶ್ರೇಷ್ಠೋ ಜಿಜ್ಞಾಸಾರ್ಥಮಿದಂ ಮಯಾ |
ಭೂಯಃ ಪೃಷ್ಟೋ ಮಹಾಬಾಹೋ ಕಲ್ಪವೃಕ್ಷಲತಾಗ್ರಕೇ ॥ ೧ ॥

ಚರತಾಂ ಜಗತಃ ಕೋಶೇ ವ್ಯವಹಾರವತಾಮಪಿ |
ಕಥಂ ವಿಹಗರಾಜೇಂದ್ರ ದೇಹಂ ಮೃತ್ಯುರ್ನ ಬಾಧತೇ ॥ ೨ ॥

ಭುಶುಂಡ ಉವಾಚ —

ಜಾನನ್ನಪಿ ಹಿ ಸರ್ವಜ್ಞ ಬ್ರಹ್ಮನ್ ಜಿಜ್ಞಾಸಯೇವ ಮಾಂ |
ಪೃಚ್ಛಸಿ ಪ್ರಭವೋ ನಿತ್ಯಂ ಭೃತ್ಯಂ ವಾಚಾಲಯಂತಿ ಹಿ ॥ ೩ ॥

ಇಪ್ಪತ್ತಮೂರನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು:—ಕಲ್ಪವೃಕ್ಷದ ಲತೆಯ ಕೊನೆಯಲ್ಲಿ ಕುಳಿತಿದ್ದ ಆ ವಾಯಸ ಶ್ರೇಷ್ಠನನ್ನು, ಎಲೈ ಮಹಾಬಾಹುವೆ ಮತ್ತೆ ಜಿಜ್ಞಾಸಾರ್ಥವಾಗಿ ನಾನು ಹೀಗೆ ಕೇಳಿದೆನು.

೨. ಜಗತ್ತಿನಲ್ಲಿಯೇ ಇದ್ದುಕೊಂಡು ವ್ಯವಹಾರ ಮಾಡುತ್ತಿರುವವರ ದೇಹಗಳನ್ನೂ, ಎಲೈ ಪಕ್ಷೀಂದ್ರನೆ, ಮೃತ್ಯುವು ಏಕೆ ಬಾಧಿಸುವುದಿಲ್ಲ ?

೩. ಭುಶುಂಡನು ಹೇಳಿದನು:—ಎಲೈ ಸರ್ವಜ್ಞನೆ, ನೀನು ಎಲ್ಲವನ್ನೂ ಬಲ್ಲವನಾದರೂ ಜಿಜ್ಞಾಸಾರ್ಥವಾಗಿ, ಎಲೈ ಬ್ರಹ್ಮನೆ, ನೀನು ನನ್ನನ್ನು ಕೇಳುತ್ತಿರುವೆ. ಪ್ರಭುಗಳು ಯಾವಾಗಲೂ ಭೃತ್ಯರಿಂದ ಮಾತನಾಡಿಸುವರಲ್ಲವೆ ?

ತಥಾಪಿ ಯತ್ಪೃಚ್ಛಸಿ ಮಾಂ ತತ್ತೇ ಪ್ರಕಥಯಾಮ್ಯಹಂ |
ಆಜ್ಞಾಚರಣಮೇವಾಹುರ್ಮುಖ್ಯಮಾರಾಧನಂ ಸತಾಂ || ೪ ||

ದೋಷಮುಕ್ತಾ ಫಲಪ್ರೋತಾ ವಾಸನಾತಂತು ಸಂತತಿಃ |
ಹೃದಿ ನ ಗ್ರಥಿತಾ ಯಸ್ಯ ಮೃತ್ಯುಸ್ತಂ ನ ಜಿಘಾಂಸತಿ || ೫ ||

ನಿಃಶ್ವಾಸವೃಕ್ಷಕ್ರಕಚಾಃ ಸರ್ವದೇಹಲತಾಘುಣಾಃ |
ಆಧಯೋ ಯಂ ನ ಭಿಂದಂತಿ ಮೃತ್ಯುಸ್ತಂ ನ ಜಿಘಾಂಸತಿ || ೬ ||

ಶರೀರತರುಸರ್ಪೌಘಾಶ್ಚಿಂತಾರ್ಪಿತಶಿರಃಫಣಾಃ |
ಆಶಾ ಯಂ ನ ದಹತ್ಯಂತಃ ಮೃತ್ಯುಸ್ತಂ ನ ಜಿಘಾಂಸತಿ || ೭ ||

---

೪. ಆಗಲಿ, ನೀನು ನನ್ನನ್ನು ಕೇಳಿದೆಯೆಂದು ಎಲ್ಲವನ್ನೂ ಚೆನ್ನಾಗಿ ಹೇಳುವೆನು. ಸತ್ಪುರುಷರಿಗೆ ಸಲ್ಲಿಸುವ ಆರಾಧನಗಳಲ್ಲಿ ಅವರ ಆಜ್ಞಾಪಾಲನವೇ ಮುಖ್ಯವೆಂದು (ಹಿರಿಯರು) ಹೇಳುವರು.

೫. ದೋಷಮುಕ್ತವಾಗಿಯೂ, ಅಫಲಾಕಾಂಕ್ಷಿಯಾಗಿಯೂ ಇದ್ದು, ವಾಸನಾತಂತು ಜಾಲವು ಯಾವನ ಹೃದಯದಲ್ಲಿ ಗಂಟುಬಿದ್ದಿರುವುದಿಲ್ಲವೋ ಅಂಥವನನ್ನು ಮೃತ್ಯುವು ಹಿಂಸಿಸುವುದಿಲ್ಲ.

೬. ಪ್ರಾಣಗಳೆಂಬ ವೃಕ್ಷಗಳಿಗೆ ಗರಗಸಗಳೂ, ದೇಹವೃಕ್ಷದ ಶಾಖೆಗಳಾದ ಅಂಗೋಪಾಂಗಗಳಿಗೆ ಕುಟ್ಟೆ ಹುಳುಗಳೂ ಆದ ಮನೋವ್ಯಾಧಿಗಳು ಯಾರನ್ನು ಭೇದಿಸುವುದಿಲ್ಲವೋ ಅಂತಹವರನ್ನು ಮೃತ್ಯುವು ಹಿಂಸಿಸುವುದಿಲ್ಲ.

(ನಿಶ್ವಾಸಲಕ್ಷಣಾ ದೇಹವೃಕ್ಷಚೇದನಾಃ ಕ್ರಕಚಾ ಯೇಭ್ಯಃ--ತಾ. ಪ್ರ. ಇಲ್ಲಿ ನಿಶ್ವಾಸವೆಂದರೆ ಪ್ರಾಣವೆಂದು ಅರ್ಥ ಮಾಡಿದೆ.)

೭. ಶರೀರವೆಂಬ ಮರದ ಪೊಟರೆಯಲ್ಲಿ ಸೇರಿಕೊಂಡಿರುವ ಚಿಂತೆಯೆಂಬ ಹೆಡೆಯನ್ನು ತಲೆಯಮೇಲೆ ಇಟ್ಟಿರುವ, ಆಶಾಸರ್ಪಗಳು ಯಾವನನ್ನು ಒಳಗೇ ಸುಟ್ಟಿರುವುದಿಲ್ಲವೋ ಅಂತಹವನನ್ನು ಮೃತ್ಯುವು ಹಿಂಸಿಸುವುದಿಲ್ಲ.

ರಾಗದ್ವೇಷವಿಷಾಪೂರಃ ಸ್ವಮನೋಬಿಲಮಂದಿರಃ |
ಲೋಭವ್ಯಾಲೋ ನ ಭುಂಕ್ತೇ ಯಂ ಮೃತ್ಯುಸ್ತಂ ನ ಜಿಘಾಂಸತಿ ॥ ೮ ॥

ಪೀತಾಶೇಷವಿವೇಕಾಂಬುಃ ಶರೀರಾಂಭೋಧಿಬಾಡವಃ |
ನ ನಿರ್ದಹತಿ ಯಂ ಕೋಪಸ್ತಂ ಮೃತ್ಯುರ್ನ ಜಿಘಾಂಸತಿ ॥ ೯ ॥

ಯಂತ್ರಂ ತಿಲಾನಾಂ ಕಠಿನಂ ರಾಶಿಮುಗ್ರವಿಪಾಕುಲಂ |
ಯಂ ಪೀಡಯತಿ ನಾನಂಗಸ್ತಂ ಮೃತ್ಯುರ್ನ ಜಿಘಾಂಸತಿ ॥ ೧೦ ॥

ಏಕಸ್ಮಿನ್ನಿರ್ಮಲೇ ಯೇನ ಪದೇ ಪರಮಪಾವನೇ |
ಸಂಶ್ರಿತಾ ಚಿತ್ತವಿಶ್ರಾಂತಿಸ್ತಂ ಮೃತ್ಯುರ್ನ ಜಿಘಾಂಸತಿ ॥ ೧೧ ॥

ವಪುಃಖಂಡಾಭಿಪತಿತಂ ಶಾಖಾಮೃಗಮಿವೋದಿತಂ |
ನ ಚಂಚಲಂ ಮನೋ ಯಸ್ಯ ತಂ ಮೃತ್ಯುರ್ನ ಜಿಘಾಂಸತಿ ॥ ೧೨ ॥

---

೮. ರಾಗದ್ವೇಷಗಳೆಂಬ ವಿಷವನ್ನು ತುಂಬಿಕೊಂಡು ಚಿತ್ತವೆಂಬ ಬಿಲವನ್ನೇ ಬೀಡು ಮಾಡಿಕೊಂಡು ಇರುವ ಲೋಭವೆಂಬ ಮಹಾಸರ್ಪವು ಯಾವನನ್ನು ತಿಂದಿರುವುದಿಲ್ಲವೋ ಅವನನ್ನು ಮೃತ್ಯುವು ಹಿಂಸಿಸುವುದಿಲ್ಲ.

೯. ವಿವೇಕವೆಂಬ ಜಲವನ್ನೆಲ್ಲ ಪಾನಮಾಡಿ, ಶರೀರವೆಂಬ ಸಮುದ್ರದಲ್ಲಿ ಬಾಡವನಾಗಿರುವ ಕೋಪವು ಯಾವನನ್ನು ನಿಶ್ಶೇಷವಾಗಿ ಸುಟ್ಟಿಲ್ಲವೋ ಅಂತಹವನನ್ನು ಮೃತ್ಯುವು ಹಿಂಸಿಸುವುದಿಲ್ಲ.

೧೦. ಎಳ್ಳಿನ ರಾಶಿಗಳನ್ನು ನಿರ್ದಯವಾಗಿ ಹಿಂಡುವ ಗಾಣದಂತೆ ಯಾವನನ್ನು ಅನಂಗನು ಹಿಂಡಿಹಾಕಿರುವುದಿಲ್ಲವೋ ಅವನನ್ನು ಮೃತ್ಯುವು ಹಿಂಸಿಸುವುದಿಲ್ಲ.

೧೧. ಪರಮ ಪಾವನವೂ ಏಕೈಕವೂ ಆದ ನಿರ್ಮಲ ಬ್ರಹ್ಮಪದದಲ್ಲಿ ಯಾವನ ಮನಸ್ಸು ವಿಶ್ರಾಂತಿಪಡೆದಿರುವುದೋ ಅವನನ್ನು ಮೃತ್ಯುವು ಹಿಂಸಿಸುವುದಿಲ್ಲ.

೧೨. ದೇಹವೆಂಬ ವನಭೂಮಿಗೆ ಇಳಿದ ಕಪಿಯೋ ಎಂಬಂತೆ ಯಾವನ ಮನಸ್ಸು ಚಂಚಲವಾಗಿರುವುದಿಲ್ಲವೋ ಅವನನ್ನು ಮೃತ್ಯುವು ಹಿಂಸಿಸುವುದಿಲ್ಲ.

ಏತೇ ಬ್ರಹನ್ಮಹಾದೋಷಾಃ ಸಂಸಾರವ್ಯಾಧಿಹೇತವಃ |
ಮನಾಗಪಿ ನ ಲುಪ್ಯಂತಿ ಚಿತ್ತಮೇಕಂ ಸಮಾಹಿತಂ || ೧೩ ||

ಆಧಿವ್ಯಾಧಿ ಸಮುತ್ಥಾನಿ ಚಲಿತಾನಿ ಮಹಾಭ್ರಮೈಃ |
ನ ವಿಲುಪ್ಯಂತಿ ದುಃಖಾನಿ ಚಿತ್ತಮೇಕಂ ಸಮಾಹಿತಂ || ೧೪ ||

ನಾಸ್ತಮೇತಿ ನ ಚೋದೇತಿ ನ ಸಂಸ್ಮೃತಿರ್ನ ವಿಸ್ಮೃತಿಃ |
ನ ಸುಪ್ತಂ ನ ಚ ಜಾಗರ್ತ್ಯಚ್ಚಿತ್ತಂ ಯಸ್ಯ ಸಮಾಹಿತಂ || ೧೫ ||

ಅಂಧೀಕೃತಹೃದಾಕಾಶಾಃ ಕಾಮಕೋಪವಿಕಾರಜಾಃ |
ಚಿಂತಾ ನ ಪರಿಹಿಂಸಂತಿ ಚಿತ್ತಂ ಯಸ್ಯ ಸಮಾಹಿತಂ || ೧೬ ||

ನ ದದಾತಿ ನ ಚಾಧತ್ತೇ ನ ಜಹಾತಿ ನ ಯಾಚತೇ |
ಕುರ್ವದೇವ ಚ ಕಾರ್ಯಾಣಿ ಚಿತ್ತಂ ಯಸ್ಯ ಸಮಾಹಿತಂ || ೧೭ ||

---

೧೩. ಎಲೈ ಬ್ರಹ್ಮನೆ, ಇವು ಮಹಾದೋಷಗಳು. ಸಂಸಾರ ವ್ಯಾಧಿಗೆ ಕಾರಣಗಳು. ಆದರೂ ಸಮಾಹಿತ ಚಿತ್ತವನ್ನು ಇವು ಏನೂ ಮಾಡಲಾರವು.

[ಸಮ (ಬ್ರಹ್ಮದಲ್ಲಿ) ಆಹಿತ (ಇಟ್ಟ) ಚಿತ್ತ].

೧೪. ಆಧಿ ವ್ಯಾಧಿಗಳಿಂದ ಸಂಭವಿಸುವ, ಮಹಾಭ್ರಮ ಕಾರಣಗಳಾಗಿ ಚಾಂಚಲ್ಯವನ್ನುಂಟುಮಾಡುವ ದುಃಖಗಳು ಸಮಾಹಿತ ಚಿತ್ತವನ್ನು ಏನೂ ಮಾಡಲಾರವು.

೧೫. ಸಮಾಹಿತ ಚಿತ್ತನು ಮುಳುಗುವುದಿಲ್ಲ. ಏಳುವುದಿಲ್ಲ. ಅದಕ್ಕೆ ಸಂಸ್ಮೃತಿ ಯಿಲ್ಲ. ವಿಸ್ಮೃತಿಯಿಲ್ಲ. ಅದು ಸುಪ್ತವೂ ಅಲ್ಲ. ಜಾಗ್ರತವೂ ಅಲ್ಲ.

೧೬. ಹೃದಯಾಕಾಶದಲ್ಲಿ ಅಂಧಕಾರವನ್ನು ತುಂಬುತ್ತ, ಕಾಮಕ್ರೋಧ ವಿಕಾರಗಳಿಂದ ಜನಿಸುವ ಚಿಂತೆಗಳು ಸಮಾಹಿತ ಚಿತ್ತನನ್ನು ಏನೂ ಮಾಡುವುದಿಲ್ಲ.

೧೭. ಸಮಾಹಿತ ಚಿತ್ತನು ಕಾರ್ಯಗಳನ್ನು ಮಾಡುತ್ತಲೇ ಇದ್ದರೂ, ಕೊಡುವುದಿಲ್ಲ. ತೆಗೆದುಕೊಳ್ಳುವುದಿಲ್ಲ. ಬಿಡುವುದಿಲ್ಲ. ಬೇಡುವುದಿಲ್ಲ.

ಯೇ ದುರರ್ಥಾ ದುರಾರಂಭಾ ದುರ್ಗುಣಾ ದುರುದಾಹೃತಾಃ ।
ದುಷ್ಕ್ರಮಾಸ್ತೇ ನ ಕೃಂತಂತಿ ಚಿತ್ತಂ ಯಸ್ಯ ಸಮಾಹಿತಂ ॥ ೧೮ ॥

ಆಭಾಂತಿ ವಿಪುಲಾರ್ಥಾನಿ ಮಹಾಂತಿ ಗುಣವಂತಿ ಚ ।
ಸರ್ವಾಣ್ಯೇವಾನುಧಾವಂತಿ ಚಿತ್ತಂ ಯಸ್ಯ ಸಮಾಹಿತಂ ॥ ೧೯ ॥

ಯದುದರ್ಕಹಿತಂ ಸತ್ಯಮನಪಾಯಿ ಗತಭ್ರಮಂ ।
ದುರೀಹಿತದೃಶೋನ್ಮುಕ್ತಂ ತತ್ಪರಂ ಕಾರಯೇನ್ಮನಃ ॥ ೨೦ ॥

ಯದದೃಷ್ಟಮಶುದ್ಧೇನ ಚಿತ್ತವೈಧುರ್ಯದಾಯಿನಾ ।
ಅನೇಕತ್ವಪಿಶಾಚೇನ ತತ್ಪರಂ ಕಾರಯೇನ್ಮನಃ ॥ ೨೧ ॥

---

೧೮. ದುರುದ್ದೇಶಗಳು, ದುಷ್ಕಾರ್ಯಗಳು, ದುರ್ಗುಣಗಳು, ದುರ್ವಚನಗಳು, ದುರ್ನೀತಿಗಳು, ಇವು ಯಾವವೂ ಸಮಾಹಿತ ಚಿತ್ತನನ್ನು ಕಲಕುವುದಿಲ್ಲ.

೧೯. ಸಮಾಹಿತ ಚಿತ್ತಕ್ಕೆ ಘನವಾದ ಉದ್ದೇಶಗಳು ತಾವಾಗಿ ಹೊಳೆಯುವುವು. ಮಹತ್ವಪೂರ್ಣವೂ, ಗುಣಪೂರ್ಣವೂ ಆದ ಸಮಸ್ತ ಶುಭಗಳೂ ಅದರ ಕಡೆಗೆ ಓಡೋಡಿ ಬರುವುವು.

೨೦. ಶುಭೋದಯವೂ ಹಿತೋದಯವೂ ಆಗಿ, ಸತ್ಯವಾಗಿ, ಅಪಾಯ ರಹಿತವಾಗಿ, ಭ್ರಾಂತಿಮುಕ್ತವಾಗಿ, ದುರುದ್ದೇಶಗಳೊಂದೂ ಇಲ್ಲದ ಆತ್ಮಜ್ಞಾನಪ್ರದವಾದ ಕಾರ್ಯಗಳನ್ನೇ ಸಮಾಹಿತ ಚಿತ್ತವು ಮಾಡಿಸುವುದು.

(ದುರೀಹಿತದೃಶೋನ್ಮುಕ್ತಂ-ಭೋಗಾಭಿಲಾಷ ದೃಷ್ಟ್ಯಾಉನ್ಮುಕ್ತಂ ಸ್ವಾತ್ಮಲಾಭ ಲಕ್ಷಣಾಂ ತತ್ಪರಂ—ತಾ. ಪ್ರ.)

೨೧. ಚಿತ್ತವನ್ನು ಮೂರ್ಖವನ್ನಾಗಿ ಮಾಡುವ ಅಶುದ್ಧವಾದ, ಭೇದದೃಷ್ಟಿಯೆಂಬ ಪಿಶಾಚಿಗೆ ಗೋಚರವೂ ಆಗದಂತಹ ಆತ್ಮಜ್ಞಾನಪ್ರದವಾದ ಕಾರ್ಯಗಳನ್ನೇ ಮಾಡುವಂತೆ ಮನಸ್ಸನ್ನು ಪ್ರೇರಿಸಬೇಕು.

ಆದೌ ಮಧ್ಯೇ ತಥಾಂತೇ ಚ ಚಿರಾಯ ಪರಮೋಚಿತಂ |
ಯಚ್ಚಾರು ಮಧುರಂ ಪಥ್ಯಂ ತತ್ಪರಂ ಕಾರಯೇನ್ಮನಃ ॥ ೨೨ ॥

ಯದನಂತಂ ಮನಃಪಥ್ಯಂ ತಥ್ಯಮಾದ್ಯಂತಮಧ್ಯಗಂ |
ಸಮಸ್ತಸಾಧುಭಿರ್ಜುಷ್ಟಂ ತತ್ಪರಂ ಕಾರಯೇನ್ಮನಃ ॥ ೨೩ ॥

ಯದ್ಬುದ್ಧೇಃ ಪರಮಾಲೋಕಮಾದ್ಯಂ ಯದಮೃತಂ ಪರಂ |
ಯದನುತ್ತಮಸೌಭಾಗ್ಯಂ ತತ್ಪರಂ ಕಾರಯೇನ್ಮನಃ ॥ ೨೪ ॥

ಸಾಸುರಾಸುರಗಂಧರ್ವೇ ಸವಿದ್ಯಾಧರಕಿನ್ನರೇ |
ಸಸುರಸ್ತ್ರೀಗಣೇ ಸ್ವರ್ಗೇ ನ ಕಿಂಚಿತ್ಸುಸ್ಥಿರಂ ಶುಭಂ ॥ ೨೫ ॥

ಸತರೌ ಸನರಾಧೀಶೇ ಸಪರ್ವತಪುರವ್ರಜೇ |
ಸಾಂಬುಧೌ ಭೂತಲೇ ತಾತ ನ ಕಿಂಚಿಚ್ಛೋಭನಂ ಸ್ಥಿರಂ ॥ ೨೬ ॥

---

೨೨. ಮೊದಲಲ್ಲಿ, ಮಧ್ಯದಲ್ಲಿ, ಮುಗಿದಲ್ಲಿ ಹಾಗೆಯೇ ದೀರ್ಘಕಾಲವಾದ ಮೇಲೂ ಕೂಡ, ಸರ್ವಥಾ ಉಚಿತವೇ ಆಗಿದ್ದು, ಸುಂದರವೂ ಮಧುರವೂ ಪಥ್ಯವೂ ಆಗಿರುವ ಆತ್ಮಜ್ಞಾನವನ್ನು ಸಂಪಾದಿಸುವ ಕಡೆಗೇ ಮನಸ್ಸನ್ನು ಪ್ರೇರಿಸಬೇಕು.

೨೩. ಯಾವುದು ಅನಂತವೋ, ಮನಸ್ಸೆಂಬ ವ್ಯಾಧಿಗೆ ಪಥ್ಯಪ್ರಾಯವಾದುದೋ, ಸತ್ಯವಾದುದೋ, ಆದ್ಯಂತ ಮಧ್ಯಗಳಲ್ಲೆಲ್ಲಾ ಇರುವುದು ಯಾವುದೋ, ಸಾಧುಗಳೆಲ್ಲರೂ ಯಾವುದನ್ನು ಸೇವಿಸುವರೋ ಅದನ್ನು ಹಿಡಿಯುವಂತೆ ಮನಸ್ಸನ್ನು ಪ್ರೇರಿಸಬೇಕು.

೨೪. ಯಾವುದು ಬುದ್ಧಿಯನ್ನು ಉತ್ತಮವಾಗಿ ಬೆಳಗುವುದೋ, ಆದಿಗೂ ಆದಿಯಾದುದು ಯಾವುದೋ, ಅಮೃತವೂ, ಪರಾತ್ಪರವೂ ಆದುದು ಯಾವುದೋ, ಯಾವುದಕ್ಕಿಂತ ಹೆಚ್ಚಿನ ಸೌಭಾಗ್ಯವು ಇನ್ನು ಯಾವುದೂ ಇಲ್ಲವೋ, ಮನಸ್ಸು ಅದರ ಕಡೆ ತಿರುಗುವಂತೆ ಮಾಡಬೇಕು.

೨೫. ಸುರಾಸುರ ಗಂಧರ್ವರೂ ವಿದ್ಯಾಧರ ಕಿನ್ನರರೂ, ಅವರವರ ಸ್ತ್ರೀಯರೂ ಇರುವ ಸ್ವರ್ಗದಲ್ಲಿಯೂ ಯಾವುದೂ ಸ್ಥಿರವಾಗಿರುವುದಿಲ್ಲ. ಶುಭವಾಗಿರುವುದಿಲ್ಲ.

೨೬. ವೃಕ್ಷಾದಿಗಳು, ಭೂಪತಿಗಳು, ಪರ್ವತ ಪತ್ತನಗಳೂ, ಹಳ್ಳಿಗಳೂ,

ಸಸ್ವರ್ಗೇ ಸಸುರಾಲೋಕ ಸಪಾತಾಲೇ ಸದಿಕ್ತಟೇ |
ಜಗತ್ಯಸ್ಮಿಂಸ್ತು ಸರ್ವಸ್ಮಿನ್ನ ಕಿಂಚಿಚ್ಛೋಭನಂ ಸ್ಥಿರಂ || ೨೭ ||

ಆಧಿವ್ಯಾಧಿವಿಲೋಲಾಸು ದುಃಖೌಘವಲಿತಾಸು ಚ |
ಕ್ರಿಯಾಸು ನಿತ್ಯತುಚ್ಛಾಸು ನ ಕಿಂಚಿತ್ಸುಸ್ಥಿರಂ ಶುಭಂ || ೨೮ ||

ತರಲೀಕೃತಚಿತ್ತಾಸು ಹೃದಯಾನಂದಿನೀಷು ಚ |
ಚಿಂತಾಸು ಧೀವಿಕಾರಾಸು ನ ಕಿಂಚಿತ್ಸುಸ್ಥಿರಂ ಶುಭಂ || ೨೯ ||

ಸಮುದ್ರಗಳೂ ಸೇರಿರುವ ಈ ಭೂಮಂಡಲದಲ್ಲಿಯೇ ಶೋಭನವೂ ಸ್ಥಿರವೂ ಆದುದು ಯಾವುದೂ ಇಲ್ಲ.

೨೭. ಸುರಾಲಯವಾದ ಸ್ವರ್ಗ, ಪಾತಾಳ, ದಿಙ್ಮಂಡಲಗಳು ಸೇರಿರುವ ಸಮಸ್ತ ಜಗತ್ತಿನಲ್ಲಿಯೇ ಎಲ್ಲಿಯೂ ಶೋಭನವೂ ಸ್ಥಿರವೂ ಆದುದು ಇಲ್ಲ.

೨೮. ಆದಿವ್ಯಾಧಿಗಳಿಂದ ಕದಲಿಹೋಗಿರುವ, ದುಃಖ ಸಹಸ್ರಗಳಿಂದ ಅಲ್ಲಾಡಿಹೋಗಿರುವ, ನಿತ್ಯತುಚ್ಛವಾದ ಕಾರ್ಯ ಸಹಸ್ರಗಳಲ್ಲಿ ಶುಭವೂ ಸ್ಥಿರವೂ ಆದುದು ಯಾವುದೂ ಇಲ್ಲ.

(ಕ್ರಿಯಾಶಬ್ದೇನ ತತ್ಫಲಾನಿ ಲಕ್ಷ್ಯಂತೇ—ತಾ. ಪ್ರ.)

೨೯. ಚಿತ್ತಚಲ್ಲಿ ಚಾಂಚಲ್ಯವನ್ನು ಹುಟ್ಟಿಸುವ ಚಿಂತೆಗಳಲ್ಲಿಯೂ, ಸದ್ಯದಲ್ಲಿ ಆನಂದವಾದಂತೆ ಕಂಡುಬರುವ ಬುದ್ಧಿಯ ವಿಕಾರಗಳಲ್ಲಿಯೂ ಸ್ಥಿರವೂ ಶುಭವೂ ಆದುದು ಯಾವುದು ?

(ಸುಖದುಃಖಗಳೆರಡೂ ವಿಕಾರಗಳೇ! ಅವೆರಡೂ ತನ್ಮಾತ್ರಜನ್ಯಗಳು.)

ಹೃತ್ ಕ್ಷೀರೋದಕಸಂಸ್ಪಂದಮಂದರೇಷು ಚಲೇಷ್ವಪಿ |
ಸ್ವಸಂಕಲ್ಪ ವಿಕಲ್ಪೇಷು ನ ಕಿಂಚಿತ್ಸುಸ್ಥಿರಂ ಶಿವಂ || ೩೦ ||

ಅನಾರತಾಗಮಾಪಾಯುಪರಾಸ್ವಸಿಶಿರಾಸ್ವತಿ |
ಚಿತ್ರಾಕಾರಾಸು ಚೇಷ್ಟಾಸು ನ ಕಿಂಚಿತ್ಸುಸ್ಥಿರಂ ಶುಭಂ || ೩೧ ||

ನ ವರಮೇಕಮಹೀತಲರಾಜತಾ
ನಚ ವರಂ ವಿಬುಧಾಮರರೂಪತಾ |
ನಚ ವರಂ ಧರಣೀತಲನಾಗತಾ
ಸ್ಥಿತಿಮುಪೈತಿ ಹಿ ಯತ್ರ ಸತಾಂ ಮನಃ || ೩೨ ||

ನ ವರಮಾಕುಲಶಾಸ್ತ್ರವಿಚಾರಣಂ
ನಚ ವರಂ ಪರಕಾರ್ಯವಿವೇಚನಂ |
ನ ವರಮುಗ್ರ್ಯಕಥಾಕ್ರಮವರ್ಣನಂ
ಸ್ಥಿತಿಮುಪೈತಿ ಹಿ ಯತ್ರ ಸತಾಂ ಮನಃ || ೩೩ ||

---

೩೦. ಮನಸ್ಸೆಂಬ ಕ್ಷೀರ ಸಮುದ್ರವನ್ನು ಕಡೆಯುವ ಮಂದರ ಪರ್ವತಗಳೋ ಎಂಬಂತೆ ಇರುವ ಚಂಚಲಗಳಾದ ಸ್ವಸಂಕಲ್ಪ ವಿಕಲ್ಪಗಳಲ್ಲಿ ಯಾವುದು ಸುಸ್ಥಿರವೂ ಶಿವವೂ ಆದುದು ?

೩೧. ಅಸಿಧಾರೆಗಳಂತೆ ಯಾವಾಗಲೂ ಅಪಾಯುಗಳನ್ನೇ ತಂದೊಡ್ಡುವ, ಇಂದ್ರಿಯಗಳ ವಿಚಿತ್ರವಾದ ಚೇಷ್ಟೆಗಳಲ್ಲಿ ಸುಸ್ಥಿರವೂ ಶುಭವೂ ಆದುದು ಯಾವುದು ?

೩೨. ಸತ್ಪುರುಷರ ಮನಸ್ಸು ಎಲ್ಲಿ ವಿಶ್ರಾಂತಿಯನ್ನು ಪಡೆಯುವುದೋ ಅದಕ್ಕಿಂತ ಮಹೀತಲಕ್ಕೆಲ್ಲ ಒಬ್ಬನೇ ಒಬ್ಬ ರಾಜನಾಗುವುದೂ ಹೆಚ್ಚಲ್ಲ. ಇಂದ್ರ ಬೃಹಸ್ಪತಿ ಮೊದಲಾದವರ ಪದವಿಯೂ ಅದಕ್ಕಿಂತ ಹೆಚ್ಚಲ್ಲ. ಪಾತಾಲದಲ್ಲಿ ನಾಗೇಂದ್ರನಾಗಿರುವುದೂ ಅದಕ್ಕಿಂತ ಹೆಚ್ಚಲ್ಲ.

೩೩. ಸತ್ಪುರುಷರ ಮನವು ಎಲ್ಲಿ ವಿಶ್ರಾಂತಿಯನ್ನು ಪಡೆಯುವುದೋ ಅದಕ್ಕಿಂತ ಜಟಿಲವಾದ ಶಾಸ್ತ್ರಗಳನ್ನು ವಿಚಾರ ಮಾಡುವುದಾಗಲೀ, ಇನ್ನೊಬ್ಬರ ಕಾರ್ಯಗಳನ್ನು ವಿಮರ್ಶಿಸುವುದಾಗಲೀ, ಭಾರತಾದಿ ಉತ್ತಮ ಕಾವ್ಯಗಳ ಶ್ರವಣಾದಿಗಳಾಗಲಿ, ಉತ್ತಮವಲ್ಲ.

ನ ವರಮಾಧಿಮಯಂ ಚಿರಜೀವಿತಂ
ನಚ ವರಂ ಮರಣಂ ದೃಢಮೂಢತಾ |
ನಚ ವರಂ ನರಕೋ ನ ಚ ವಿಷ್ಟಪಂ
ಸ್ಥಿತಿಮುಪೈತಿ ಹಿ ನ ಕ್ವಚಿದಾಶಯಃ || ೩೪ ||

ಇತಿ ವಿವಿಧಜಗತ್ಕ್ರಮಾಃ ಸಮಸ್ತಾಃ
ಖಲು ಮತಿಮೂಢತಯಾ ನರಸ್ಯ ರಮ್ಯಾಃ |
ಚಲತರಕಲನಾಹಿತೇ ಪದಾರ್ಥೇ
ಕಥಮುಪಯಾಂತಿ ಚಿರಸ್ಥಿತಿಂ ಮಹಾಂತಃ || ೩೫ ||

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕಿಯೇ ದೇವದೂತೋಕ್ತೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ ಭುಶುಂಡೋಪಾಖ್ಯಾನೇ "ಸಮಾಧಾನಸಂಕಲ್ಪನಿರಾಕರಣಂ" ನಾಮ ತ್ರಯೋವಿಂಶಃ ಸರ್ಗಃ

---

೩೪. ಯಾವುದಾದರೊಂದು ಚಿಂತೆಯಿಂದ ಕೂಡಿಯೇ ಇರುವ ಚಿರಜೀವಿತವೂ ಪೂರ್ಣ ಕಾಮತೆಯನ್ನು ಕೊಡುವ ಆ ಪರಮ ಪದಕ್ಕಿಂತ ಹೆಚ್ಚಲ್ಲ. ಮರಣವೂ ಹೆಚ್ಚಲ್ಲ. ಒಂದೇ ಸಮನಾಗಿ ದೃಢವಾಗಿರುವ ಮೌಢ್ಯವೂ ಹೆಚ್ಚಲ್ಲ. ಸ್ವರ್ಗನರಕಗಳೂ ಹೆಚ್ಚಲ್ಲ. ಇವು ಯಾವುದರಲ್ಲಿಯೂ ಮನಸ್ಸು ಸಮಸ್ಥಿತಿಯನ್ನೂ ಹೊಂದುವುದಿಲ್ಲ.

೩೫. ಇದುವರೆಗೆ ಹೇಳಿದ ಜಗತ್ಸೃಷ್ಟಿಗಳೆಲ್ಲವೂ ಮೂಢಮತಿಯಾದ ಮಾನವನಿಗೆ ಮಾತ್ರ ರಮ್ಯವಾಗಿ ಕಾಣುವುದು. ಚಂಚಲವಾದ ಸಂಕಲ್ಪ ವಿಕಲ್ಪಗಳಿಂದ ಪೂರ್ಣವಾದ ಪದಾರ್ಥದಲ್ಲಿ ಮಹಾತ್ಮರು ಅದೆಂತು ಚಿರಶಾಂತಿಯನ್ನು ಪಡೆಯುವರು ?

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ ನಿರ್ವಾಣಪ್ರಕರಣದ ಭುಶುಂಡೋಪಾಖ್ಯಾನದಲ್ಲಿ "ಸಮಾಧಾನಸಂಕಲ್ಪನಿರಾಕರಣ" ಎಂಬ ಇಪ್ಪತ್ತಮೂರನೆಯ ಸರ್ಗವು

ಚತುರ್ವಿಂಶಃ ಸರ್ಗಃ

ಭುಶುಂಡ ಉವಾಚ –

ಏಕೈವ ಕೇವಲಾ ದೃಷ್ಟಿರ್ನಿರಾಪಾಯಾ ಗತಭ್ರಮಾ ।
ವಿದ್ಯತೇ ಸರ್ವವಿತ್ತ್ವೇಷು ಸರ್ವಶ್ರೇಷ್ಠಾ ಸಮುನ್ನತಾ ॥ ೧ ॥

ಆತ್ಮಚಿಂತಾ ಸಮಸ್ತಾನಾಂ ದುಃಖಾನಾಮಂತಕಾರಿಣೀ ।
ಚಿರಸಂಭೃತದುಃಸ್ವಪ್ನಸಂಸಾರಭ್ರಮಹಾರಿಣೀ ॥ ೨ ॥

ನಿಷ್ಕಲಂಕಮನೋಽಮಾರ್ಗವಿಪುಲಾಂಗಣಚಾರಿಣೀ ।
ತಥಾ ಸಮಸ್ತದುಃಖಾನಾಂ ಚಿಂತಾನರ್ಥವಿನಾಶಿನೀ ॥ ೩ ॥

ಇಪ್ಪತ್ತನಾಲ್ಕನೆಯ ಸರ್ಗ

೧. ಭುಶುಂಡನು ಹೇಳಿದನು:—ಸರ್ವಜ್ಞಾನಗಳಲ್ಲಿಯೂ ಶ್ರೇಷ್ಠವಾಗಿ, ಮಹೋನ್ನತವಾದ ಫಲವನ್ನು ಕೊಡುವುದಾಗಿ, ನಿರುಪಾಯವೂ ಭ್ರಾಂತಿರಹಿತವೂ ಆಗಿರುವ ಕೇವಲಾದೃಷ್ಟಿಯೊಂದು ಉಂಟು.

೨. ಸಮಸ್ತವಾದ ದುಃಖಗಳಿಗೂ ಮೃತ್ಯುಸ್ವರೂಪವಾಗಿ ಚಿರಕಾಲದಿಂದ ಬೆಳೆದುಬಂದಿರುವ ದುಃಸ್ವಪ್ನ ರೂಪವಾದ ಸಂಸಾರವೆಂಬ ಭ್ರಮವನ್ನು ಅಪಹರಿಸುವ ಆತ್ಮಚಿಂತನವೆಂಬುದೊಂದು ಉಂಟು.

(ಆತ್ಮಚಿಂತಾ :-ಸಾಕ್ಷಾತ್ಕಾರ ಪರ್ಯಂತ ಆತ್ಮವಿಚಾರಃ—ತಾ. ಪ್ರ.)

೩. ಹಾಗೆಯೇ ಸಮಸ್ತ ದುಃಖಗಳನ್ನೂ, ಚಿಂತೆಗಳೆಂಬ ಅನರ್ಥಗಳನ್ನೂ, ಧ್ವಂಸ ಮಾಡುವ ಈ ಆತ್ಮಚಿಂತನವು ಮಾಯಾದಿ ಸರ್ವ ಕಲಂಕಗಳನ್ನೂ ತ್ಯಜಿಸಿರುವ ಮನಸ್ಸಿಗೂ ಅಗಮ್ಯವಾಗಿರುವ ಪ್ರತ್ಯಗಾತ್ಮನೆಂಬ ವಿಸ್ತಾರವಾದ ಅಂಗಳದಲ್ಲಿ ಚಲಿಸುವುದು.

ಜ್ಯೋತ್ಸ್ನಯೇವಾಂಧಕಾರಣಾಮಲಮಂತಃ ಪ್ರಜಾಮತೇ | ॥ ೪ ॥

ಸಾ ಸ್ವಾತ್ಮಚಿಂತಾ ಭಗವನ್ಸರ್ವಸಂಕಲ್ಪವರ್ಜಿತಾ
ಯುಷ್ಮಾದಿಷು ಸುಪ್ರಾಪ್ತಾ ದುಷ್ಪ್ರಾಪ್ಯೈವಾಸ್ಮದಾದಿಷು | ॥ ೫ ॥

ಸಮಸ್ತಕಲನಾತೀತಂ ಪರಾಂ ಕೋಟಿಮುಪಾಗತಂ |
ಪದಮಾಸಾದಯಂತ್ಯೇತತ್ಕಥಂ ಸಾಮಾನ್ಯ ಬುದ್ಧಯಃ ॥ ೬ ॥

ಆತ್ಮಚಿಂತಾವಿಲಾಸಿನ್ಯಾಸ್ತಸ್ಯಾಃ ಸಖ್ಯೋ ಮಹಾಮುನೇ |
ಕಿಂಚಿತ್ಸಾಮ್ಯಮುಪಾಯಾತಾ ವಿಜ್ಞಾನಶಶಿಶೀತಲಾಃ ॥ ೭ ॥

ಆತ್ಮಚಿಂತಾಸಮಾನಾನಾಂ ವಿವಿಧಾನಾಂ ಮುನೀಶ್ವರ |
ಆತ್ಮಚಿಂತಾವಯಸ್ಯಾನಾಂ ಮಧ್ಯಾದೇಕತಮಾ ಮಯಾ ॥ ೮ ॥

---

೪. ಎಲೈ ಭಗವಂತನೇ, ಅಂಧಕಾರಗಳಿಗೆ ಚಂದ್ರಿಕೆಯು ಹೇಗೋ ಹಾಗೆ ನಾನಾ ವಿಧವಾದ ಭ್ರಾಂತಿ ಮೋಹಗಳಿಗೆ ಇದು ಪರಿಹಾರ ಸಾಧನವು.

೫. ಹೀಗೆ ಸರ್ವಸಂಕಲ್ಪ ವರ್ಜಿತವಾಗಿರುವ ಆ ಆತ್ಮಚಿಂತನವು ನಿಮ್ಮಂತಹವರಿಗೆ ಬಹು ಸುಲಭವಾಗಿ ಕೈ ಸೇರುವುದು. ನಮ್ಮಂತಹವರಿಗೆ ಕೇವಲ ಅಸಾಧ್ಯವೇ ಆಗಿರುವುದು.

೬. ಸಮಸ್ತ ಸಂಕಲ್ಪಗಳಿಗೂ ಅತೀತವಾಗಿ ಅತ್ಯುತ್ತಮವಾದ ಸ್ಥಾನವನ್ನು ಸೇರಿರುವ, ಉತ್ತಮವಾದ ಪದವನ್ನು ಸೇರಿಸುವ, ಈ ಆತ್ಮಚಿಂತನವನ್ನು ಸಾಮಾನ್ಯ ಬುದ್ಧಿಗಳು ಅದೆಂತು ಪಡೆದಾರು ?

೭. ಎಲೈ ಮಹಾಮುನೀಂದ್ರನೆ, ಆತ್ಮಚಿಂತೆಯೆಂಬ ಸ್ತ್ರೀ ರತ್ನಕ್ಕೆ ಸಖಿಯರುಂಟು. ಅವರು ತಮ್ಮ ಸಖಿಗೆ ಕೊಂಚಮಟ್ಟಿಗೆ ಸದೃಶರಾದವರು. ವಿಜ್ಞಾನ ಚಂದ್ರನ ಶೈತ್ಯವನ್ನು ಪಡೆದವರು ಅವರು,

೮. ಎಲೆ ಮುನೀಶ್ವರನೆ, ಆತ್ಮಚಿಂತನಕ್ಕೆ ಸಮಾನವಾಗಿ ಅದಕ್ಕೆ ಸಖಿಪ್ರಾಯರಾಗಿ ಇರುವ ನಾನಾ ಉಪಾಯಗಳಲ್ಲಿ ಒಂದನ್ನು ನಾನು ಆಶ್ರಯಿಸಿರುವೆನು.

ಸರ್ವದುಃಖಕ್ಷಯಕರೀ ಸರ್ವಸೌಭಾಗ್ಯವರ್ಧಿನೀ ।
ಕಾರಣಂ ಜೀವಿತಸ್ಯೇಹ ಪ್ರಾಣಚಿಂತಾ ಸಮಾಶ್ರಿತಾ ॥ ೯ ॥

ಶ್ರೀ ವಸಿಷ್ಠ ಉವಾಚ—

ಇತ್ಯುಕ್ತವಂತಂ ವಿಹಗಂ ಭುಶುಂಡಂ ಪುನರಪ್ಯಹಂ ।
ಜಾನನ್ನಪೀದಮವ್ಯಗ್ರಃ ಪೃಷ್ಟವಾನ್ ಕ್ರೀಡಯಾ ಮುನಿಂ ॥ ೧೦ ॥

ಸರ್ವಸಂಶಯವಿಚ್ಛೇದಿನ್ನತ್ಯಂತಚಿರಜೀವಿತ ।
ಯಥಾರ್ಥಂ ಬ್ರೂಹಿ ಮೇ ಸಾಧೋ ಪ್ರಾಣಚಿಂತಾ ಕಿಮುಚ್ಯತೇ ॥ ೧೧ ॥

ಭುಶುಂಡ ಉವಾಚ—

ಸರ್ವವೇದಾಂತವೇತ್ತಾಸಿ ಸರ್ವಸಂಶಯನಾಶಕಃ ।
ಮಾಮೇತತ್ಪರಿಹಾಸಾರ್ಥಂ ಮುನೇ ಪೃಚ್ಛಸಿ ವಾಯಸಂ ॥ ೧೨ ॥

---

೯. ಆ ಉಪಾಯದ ಹೆಸರು ಪ್ರಾಣಚಿಂತನವು. ಅದು ಸರ್ವದುಃಖಗಳನ್ನೂ ಧ್ವಂಸಮಾಡಿ ಸರ್ವ ಸೌಭಾಗ್ಯಗಳನ್ನೂ ವರ್ಧಿಸುವುದು. ಅದೇ ಜೀವನಕ್ಕೆ ಕಾರಣವು. ಅದನ್ನು ನಾನು ಆಶ್ರಯಿಸಿರುವೆನು.

೧೦. ಶ್ರೀ ವಸಿಷ್ಠನು ಹೇಳಿದನು —ಹೀಗೆ ಹೇಳಿದ ಆ ಭುಶುಂಡ ವಾಯಸ ಮುನೀಂದ್ರನನ್ನು ನನಗೆ ಗೊತ್ತಿದ್ದರೂ ಕೂಡ ಕ್ರೀಡಾರ್ಥವಾಗಿ ಮತ್ತೆ ಏಕಮನಸ್ಕನಾಗಿ ಕೇಳಿದೆನು.

(ಕ್ರೀಡಯಾ ಕೌತುಕೇನ—ತಾ. ಪ್ರ.)

೧೧. ಸರ್ವ ಸಂಶಯಗಳನ್ನೂ ಪರಿಹರಿಸಬಲ್ಲವನೆ, ಬಹು ದೀರ್ಘಕಾಲ ಬದುಕಿರುವವನೆ, ಸಾಧುವೇ, ನನಗೆ ಯಥಾರ್ಥವಾಗಿ ಹೇಳು. ಪ್ರಾಣಚಿಂತನವೆಂದರೇನು ?

೧೨. ಭುಶುಂಡನು ಹೇಳಿದನು—ಸರ್ವ ವೇದಾಂತಗಳನ್ನೂ ಬಲ್ಲ ನೀನು, ಸರ್ವ ಸಂಶಯಗಳನ್ನೂ ನಾಶಮಾಡಬಲ್ಲವನು. ಆದರೂ ಎಲೆ ಮುನೀಂದ್ರನೆ, ಕಾಗೆಯಾದ ನನ್ನನ್ನು ಪರಿಹಾಸಕ್ಕಾಗಿ ಹೀಗೆ ಕೇಳುತ್ತಿರುವೆ.

ಅಥವಾ ಭವತಾಮೇವ ಭಗವನ್ಪರಿಶಿಕ್ಷಿತುಂ ।
ಪುನಃ ಪ್ರಶ್ನೋತ್ತರಾಣೀಮಾ ಕಾ ಮೇ ಕ್ಷತಿರುಪಸ್ಥಿತಾ ॥ ೧೩ ॥

ಭುಶುಂಡಜೀವಿತಕರಂ ಭುಶುಂಡಸ್ವಾತ್ಮಲಾಭದಂ ।
ಶೃಣು ಪ್ರಾಣಸಮಾಧಾನಂ ವಕ್ಷ್ಯಮಾಣಮಿದಂ ಮಯಾ ॥ ೧೪ ॥

ಪಶ್ಯೇದಂ ಭಗವನ್ಸರ್ವಂ ದೇಹಗೇಹಂ ಮನೋರಮಂ ।
ತ್ರಿಪ್ರಕಾರಮಹಾಸ್ಥೂಣಂ ನವದ್ವಾರಸಮಾವೃತಂ ॥ ೧೫ ॥

ಪುರ್ಯಷ್ಟಕಕಲತ್ರೇಣ ತನ್ಮಾತ್ರಸ್ವಜನೇನ ಚ ।
ಅಹಂಕಾರಗೃಹಸ್ಥೇನ ಸರ್ವತಃ ಪರಿಪಾಲಿತಂ ॥ ೧೬ ॥

ಅಂತಃ ಪಶ್ಯಸಿ ಸತ್ಕರ್ಣಶಷ್ಕುಲೀಚಂದ್ರಶಾಲಿಕಂ ।
ಶಿರೋರುಹಾಚ್ಛಾದನವದ್ವಿಪುಲಾಕ್ಷಿಗವಾಕ್ಷಕಂ ॥ ೧೭ ॥

---

೧೩. ಅಥವಾ ನಿಮ್ಮಿಂಥವರಿಂದ ಚೆನ್ನಾಗಿ ತಿಳಿದುಕೊಳ್ಳುವುದಕ್ಕೋಸ್ಕರವಾಗಿ ನಿಮ್ಮ ಪ್ರಶ್ನೆಗೆ ಪ್ರತ್ಯುತ್ತರವಾಗಿ ನಾನು ಹೇಳಿದರೆ, ಎಲೈ ಭಗವಂತನೇ, ಅದರಿಂದ ನನಗೆ ಏನು ಹಾನಿಯಾದೀತು?

೧೪. ಭುಶುಂಡನ ಚಿರಜೀವಿತಕ್ಕೆ ಕಾರಣವಾಗಿ ಭುಶುಂಡನಿಗೆ ಆತ್ಮದರ್ಶನವನ್ನು ಮಾಡಿಕೊಟ್ಟ ಪ್ರಾಣ ಸಮಾಧಾನವನ್ನು ಕುರಿತು ಹೇಳುವೆನು ಕೇಳು.

೧೫. ಎಲೈ ಭಗವಂತನೇ, ಮನೋಹರವಾಗಿರುವ ದೇಹವೆಂಬ ಈ ಮನೆಯನ್ನು ನೋಡು. (ವಾತ, ಪಿತ್ತ, ಕಫಗಳೆಂಬ) ಮೂರು ದೊಡ್ಡ ಕಂಬಗಳೂ, ಒಂಭತ್ತು ಬಾಗಿಲುಗಳೂ ಇದಕ್ಕುಂಟು.

೧೬. ಪುರ್ಯಷ್ಟಕವೆಂಬ ಕಲತ್ರಗಳು, ತನ್ಮಾತ್ರಗಳೆಂಬ ಸ್ವಜನರೂ ಉಳ್ಳ ಅಹಂಕಾರವೆಂಬ ಗೃಹಸ್ಥನು ಈ ಮನೆಯನ್ನು ಕಾಪಾಡಿಕೊಂಡಿರುವನು.

೧೭. ಕರ್ಣ ಶಷ್ಕುಲಿಗಳೆಂಬ ಚಂದ್ರಶಾಲೆಗಳೂ, ಶಿರೋರುಹಗಳೆಂಬ ಆಚ್ಛಾದನಗಳೂ, ವಿಶಾಲವಾದ ಅಕ್ಷಿಗಳೆಂಬ ಗವಾಕ್ಷಗಳೂ, ಇರುವ ಈ ಮನೆಯನ್ನು ಒಳಗಿನಿಂದಲೇ ನೀನು ನೋಡು.

ಆಸ್ಯಪ್ರಧಾನಸುದ್ವಾರಂ ಭುಜಪಾರ್ಶ್ವೋಪಮಂದಿರಂ ।
ದಂತಾಲಿಕೇಸರಸ್ರಗ್ಭಿರ್ಭೂಷಿತದ್ವಾರಕೋಟರಂ ॥ ೧೮ ॥

ಅನಾರತಂ ರೂಪರಸಸ್ಪರ್ಶನದ್ವಾರಪಾಲವತ್ ।
ಸಂಕುಲಾಲೋಕವಲಿತಂ ತಾರಾಲಿಂದಕೃತಸ್ಥಿತಿ ॥ ೧೯ ॥

ರಕ್ತಮಾಂಸವಸಾದಿಗ್ಧಂ ಸ್ನಾಯುಸಂತತಿವೇಷ್ಟಿತಂ ।
ಸ್ಥೂಲಾಸ್ಥಿಕಾಷ್ಠಸಂಬದ್ಧಂ ಸುಕುಡ್ಯಂ ಸುಸಮಾಹಿತಂ ॥ ೨೦ ॥

(ಅಂತಃ ಸಾಕ್ಷಿತಯಾ ತ್ವಂ ಮಯಾ ವರ್ಣ್ಯಮಾನಂ ದೇಹಗೇಹಂ ಪಶ್ಯಸಿ ಸಾಕ್ಷಾದನುಭವಸಿ—ತಾ. ಪ್ರ.)

೧೮. ಮುಖವೆಂಬ ಹೆಬ್ಬಾಗಿಲೂ, ಭುಜಗಳೆಂಬ ಉಪಪಾರ್ಶ್ವ ಮಂದಿರ ಗಳೂ, ದಂತಾಲಿಗಳೆಂಬ ತೋರಣಮಾಲೆಗಳು ಅಲಂಕರಿಸಿರುವ ಬಾಗಿಲುಗಳೂ, ಆ ಮನೆಗುಂಟು.

೧೯. ಯಾವಾಗಲೂ ಹೊರಗಿನ ರೂಪ ರಸಾದಿ ವಿಷಯಗಳನ್ನು ಗ್ರಹಣ ಮಾಡಿ ಒಳಕ್ಕೆ ಕಳುಹಿಸುವ ಕರ್ಮೇಂದ್ರಿಯ, ಜ್ಞಾನೇಂದ್ರಿಯಗಳೆಂಬ ದ್ವಾರ ಪಾಲಕರೂ, ಇರುವರು.

(ಆತ್ಮನೆಂಬ ಚಿಜ್ಜ್ಯೋತಿಯ ಪ್ರಕಾಶದಿಂದ ವ್ಯಾಪ್ತವಾಗಿರುವುದು. ಇದರ ಸ್ವಾಮಿಯು ನೇತ್ರದಲ್ಲಿದ್ದಾಗ ಇದು ಜಾಗ್ರತವಾಗಿರುವುದು.)

(ಸರ್ವತ್ರ ಸಂಕುಲೇನ ಲಿಂಗದೇಹ ವ್ಯಾಪ್ತಿ ದ್ವಾರಾ ವ್ಯಾಪ್ತೇನ ಆತ್ಮಾ ಲೋಕೇನ ವಲಿತಂ ವ್ಯಾಪ್ತಂ ವಿಶೇಷತಶ್ಚ ಜಾಗರೇಕಾಲೇ ಅಕ್ಷ್ಣೋಃ ಕನೀನಿಕೇ ತಲ್ಲಕ್ಷಣಯೋಃ ಅಲಿಂದಯೋಃ ಊರ್ಧ್ವತಮದ್ವಾರ ಪ್ರಕೋಷ್ಠಯೋಃ ಕೃತಾ ಸ್ವಾಮಿ ಸ್ಥಿತಿರ್ಯಸ್ಮಿ, "ಇಂಧೋ ಹ ವೈ ನಾಮೈಷ ಯೋಽಯಂ ದಕ್ಷಿಣೇಕ್ಷನ್ ಪುರುಷಃ" "ನೇತ್ರಸ್ಥಂ ಜಾಗ್ರತಂ ವಿದ್ಯಾತ್" ಇತಿ ಶ್ರುತೇರಿತಿ ಭಾವಃ-ತಾ.ಪ್ರ.)

೨೦. ದಪ್ಪದಪ್ಪ ಮೂಳೆಗಳೆಂಬ ಮುಂಡಿಗೆಗಳನ್ನು ನಿಲ್ಲಿಸಿ, ಸ್ನಾಯುಗಳೆಂಬ ಹಗ್ಗಗಳನ್ನು ಬಿಗಿದು ರಕ್ತಮಾಂಸ ವಸೆಗಳನ್ನು ಮೆತ್ತಿ ಮಾಡಿರುವ ಸೊಗಸಾದ ಗೋಡೆಗಳು ಆ ಮನೆಗುಂಟು.

ಇಡಾ ಚ ಪಿಂಗಲಾ ಚಾಸ್ಯ ದೇಹಸ್ಯ ಮುನಿನಾಯಕ |
ಸುಸ್ಥಿತೇ ಕೋಮಲೇ ಮಧ್ಯೇ ಪಾರ್ಶ್ವಗೋಷ್ಠೇ ನಿಮೀಲಿತೇ || ೨೧ ||

ಪದ್ಮಯುಗ್ಮತ್ರಯಂ ಯಂತ್ರಮಸ್ಥಿಮಾಂಸಮಯಂ ಮೃದು |
ಊರ್ಧ್ವಾಧೋನಾಲಮನ್ಯೋನ್ಯಮಿಳತ್ಕೋಮಲಸದ್ದಲಂ || ೨೨ ||

ಸೇಕೇನ ವಿಕಸತ್ಪತ್ರಂ ಸಕಲಾಕಾಶಚಾರಿಣಾ |
ಚಲಂತಿ ತಸ್ಯ ಪತ್ರಾಣಿ ಮೃದು ವ್ಯಾಪ್ತಾನಿ ವಾಯುನಾ || ೨೩ ||

---

೨೧. ಇಡಾ, ಪಿಂಗಳಾ ಎಂಬ ಎರಡು ನಾಡಿಗಳು ಎಲೈ ಮುನೀಂದ್ರನೆ, ಈ ದೇಹದ ಮಧ್ಯಭಾಗದಲ್ಲಿ ಎರಡು ಪಾರ್ಶ್ವಗಳಲ್ಲಿ ಗೂಢವಾಗಿ ಸುಸ್ಥಿತವಾಗಿರುವುವು.

(ಅಸ್ಯದೇಹಸ್ಯ ಮಧ್ಯೇ ಇಡಾ ಪಿಂಗಲಾಚೇತಿ ದ್ವೇ ಕೋಮಲೇ ಸೂಕ್ಷ್ಮೇ ನಾಡ್ಯೌ ವಾಮದಕ್ಷಿಣ ಪಾರ್ಶ್ವಕೋಷ್ಠೇ ನಿಮೀಲಿತೇ ಅನಭಿವ್ಯಕ್ತೇ ನಾಸಾಪುಟಯೋಃ ಪ್ರಾಣಸಂಚಾರ ಲಿಂಗೇನ ಅಭಿವ್ಯಕ್ತೇ ಸುಸ್ಥಿತೇ—ತಾ. ಪ್ರ.)

೨೨. ಅಸ್ತಿಮಾಂಸಮಯವಾಗಿ ಮೃದುವಾಗಿರುವ ಆರು ಪದ್ಮಗಳುಳ್ಳ ಯಂತ್ರವೊಂದುಂಟು. ಆ ಪದ್ಮಗಳ ನಾಳಗಳು ಮೇಲೂ ಕೆಳಗೂ ಇದ್ದು ಒಂದಕ್ಕೊಂದು ಸೇರಿಕೊಂಡು ಇರುವುವು. ಆ ಪದ್ಮಗಳಿಗೆ ಕೋಮಲವಾದ ದಳಗಳು ಉಂಟು.

(ತತ್ರ ಸರ್ವಪ್ರಾಣ ಶಕ್ತೀನಾಂ ಆಶ್ರಯಭೂತಂ, ದ್ವಾಸಪ್ತತಿ ಸಹಸ್ರ ಸಂಖ್ಯಾಕ ಪ್ರಭೇಧ ಮೂಲಜಾಲಕಂ, ಪುರೀತನ್ನಾಮಕಂ, ಸಂಪುಟಿತ ಸನಾಲ ಪದ್ಮ ಯುಗ್ಮತ್ರಯಾಕಾರಂ, ಹೃತ್ಪದ್ಮಯಂತ್ರತ್ರಯಂ, ದರ್ಶಯತಿ | ಅಸ್ಥಿಗ್ರಹಣಾತ್ ಏವಂತ್ರಿಸಂಧಿಕೀಲ ಪ್ರೋತ ಊರ್ಧ್ವನಾಲತಾಗಮ್ಯತೇ| ಅನ್ಯೋನ್ಯಂ ಸಂಪುಟೇ ಭಾವೇನ ಮಿಲತ್‌ಕೋಮಲ ಸದ್ದಲಂ ಅತಏವ ಯಂತ್ರಂ ಪ್ರತ್ಯೇಕಂ ಯಂತ್ರಾಕಾರಂ—ತಾ. ಪ್ರ.)

೨೩. (ನಾಸಾಗ್ರದಿಂದ ಹಿಡಿದು ಪಾದಾಂತವಾಗಿರುವ) ಸಕಲ ದೇಹಾಕಾಶದಲ್ಲಿ ಚರಿಸುವ (ಚಂದ್ರ ಎಂಬ ಹೆಸರಿನ ಅಪಾನ) ವಾಯುವೆಂಬ ಅಮೃತದ ಎರೆ

ಚಲತ್ಸ್ವ ತೇಷು ಪತ್ರೇಷು ಸ ಮರುತ್ಪರಿವರ್ತತೇ ।
ವಾತಾಹತೇ ಲತಾಪತ್ರಜಾಲೇ ಬಹಿರಿವಾಭಿತಃ ॥ ೨೪ ॥

ವೃದ್ಧಿಂ ನೀತಃ ಸ ನಾಡೀಷು ಕೃತ್ವಾ ಸ್ಥಾನಮನೇಕಧಾ ।
ಊರ್ಧ್ವಾಧೋವರ್ತಮಾನಾಸು ದೇಹೇಸ್ಮಿನ್ಪ್ರಸರತ್ಯಥ ॥ ೨೫ ॥

ಪ್ರಾಣಾಪಾನಸಮಾನಾದ್ಯೈಸ್ತತಃ ಸ ಹೃದಯಾನಿಲಃ ।
ಸಂಜ್ಞಿತಃ ಪ್ರೋಚ್ಯತೇ ತಜ್ಞೈರ್ವಿಚಿತ್ರಾಚಾರಚೇಷ್ಟಿತೈಃ ॥ ೨೬ ॥

ಯುಸಿಕೆಯಿಂದ ಅರಳುವ ದಳಗಳುಳ್ಳ ಪದ್ಮಗಳು ಅವು. (ಪ್ರಾಣಸಂಚಾರದಿಂದ ಅವು ಕೊಂಚ ಸಂಕೋಚವನ್ನು ಹೊಂದುವುವು.)

೨೪. ಗಾಳಿಯು ಬೀಸಿದಾಗ ತರಗು ಮುಂತಾದುವು ಹರಡುವಂತೆ, ಈ ದೇಹದೊಳಗಿನ ಪದ್ಮಗಳ ಪತ್ರಗಳು ಅಲ್ಲಾಡಿದಾಗ ಪ್ರಾಣಪಾನ ವಾಯುಗಳು ಬಲಿಯುವುವು.

(ಪರಿವರ್ತತೇ ಪರಿತಃ ಪ್ರಸಾರಾತ್ ಪುರೀತತ್ಸಂಬದ್ಧ ಸರ್ವನಾಡೀಚ್ಛಿದ್ರೇಷು ಪ್ರವಿಶ್ಯ ಬಹುಲೀಭವತೀತ್ಯರ್ಥಃ—ತಾ. ಪ್ರ.)

೨೫. ಹೀಗೆ ವೃದ್ಧಿಯಾದ ಆ (ಪ್ರಾಣ) ವಾಯುವು ದೇಹದಲ್ಲಿ ಅನೇಕ ಸ್ಥಾನಗಳನ್ನು ಮಾಡಿಕೊಂಡು, ಊರ್ಧ್ವ ಮುಖವಾಗಿಯೂ, ಅಧೋಮುಖವಾಗಿಯೂ ದೇಹದಲ್ಲೆಲ್ಲಾ ಹಬ್ಬಿರುವ ನಾಡಿಗಳಲ್ಲಿ ಪ್ರಸರಿಸುವುದು.

(ಏವಂ ವೃದ್ಧಿಂ ನೀತಃ ಸ ಹೃದಯ, ಪಾಯು, ನಾಭಿ, ಕಂಠ, ಸರ್ವಾಂಗ ಲಕ್ಷಣಂ ಅನೇಕಧಾ ಸ್ಥಾನಂಕೃತ್ವಾ ಕಲ್ಪಯಿತ್ವಾ, ಪ್ರಾಣಾದಿ ಪಂಚಸಂಜ್ಞಃ ಸನ್, ಊರ್ಧ್ವಾಧೋ ವರ್ತಮಾನಾಸು ದ್ವಿಸಪ್ತತಿ ಸಹಸ್ರ ಪ್ರತಿ ಶಾಖಾಸು ಏಕೋತ್ತರ ಶತನಾಡೀಷು ಪ್ರವಿಶ್ಯ ದೇಹೇ ಪ್ರಸರತಿ—ಇತ್ಯರ್ಥಃ—ತಾ. ಪ್ರ.)

೨೬. ಪ್ರಾಣ, ಅಪಾನ, ಸಮಾನ, ವ್ಯಾನ, ಉದಾನಗಳೆಂಬ ಸಂಕೇತಗಳಿಂದ ಹೃದಯದಲ್ಲಿರುವ ವಾಯುವೊಂದೇ, ನಾನಾ ಪ್ರಕಾರವಾದ, ಬೇರೆಬೇರೆಯಾದ ರೀತಿಗಳಲ್ಲಿ ನಡೆಯುವುದು. ಕಾರ್ಯ ಮಾಡುವುದು ಎಂದು ಅದನ್ನು ಬಲ್ಲವರು ಹೇಳುವರು.

ಹೃತ್ಪದ್ಮಯಂತ್ರತ್ರಿತಯೇ ಸಮಸ್ತಾಃ ಪ್ರಾಣಶಕ್ತಯಃ ।
ಊರ್ಧ್ವಾಧಃ ಪ್ರಸೃತಾ ದೇಹೇ ಚಂದ್ರಬಿಂಬಾದಿವಾಂಶವಃ ॥ ೨೭ ॥

ಯಾಂತ್ಯಾಯಾಂತಿ ವಿಕರ್ಷಂತಿ ಹರಂತಿ ವಿಹರಂತಿ ಚ ।
ಉತ್ಪತಂತಿ ಪತಂತ್ಯಾಶು ತಾ ಏತಾಃ ಪ್ರಾಣಶಕ್ತಯಃ ॥ ೨೮ ॥

ಸ ಏಷ ಹೃತ್ಪದ್ಮಗತಃ ಪ್ರಾಣ ಇತ್ಯುಚ್ಯತೇ ಬುಧೈಃ ।
ಅಸ್ಯ ಕಾಚಿನ್ಮುನೇ ಶಕ್ತಿಃ ಪ್ರಸ್ಪಂದಯತಿ ಲೋಚನೇ ॥ ೨೯ ॥

ಕಾಚಿತ್ಸ್ಪರ್ಶಮುಪಾಧತ್ತೇ ಕಾಚಿದ್ವಹತಿ ನಾಸಯಾ ।
ಕಾಚಿದನ್ನಂ ಜರಯತಿ ಕಾಚಿದ್ವಕ್ತಿ ವಚಾಂಸಿ ಚ ॥ ೩೦ ॥

---

೨೭. ಹೃತ್ಪದ್ಮಯಂತ್ರ ತ್ರಿತಯದಲ್ಲಿ ಸಮಸ್ತವಾದ ಪ್ರಾಣಶಕ್ತಿಗಳೂ ನೆಲಸಿರುವುವು. ಚಂದ್ರಬಿಂಬದಿಂದ ಕಿರಣಗಳು ಹೊರಡುವಂತೆ, ಆ ಪ್ರಾಣಶಕ್ತಿಗಳು ಹೃದಯದಿಂದ ಹೊರಟು ದೇಹವನ್ನು ಊರ್ಧ್ವವಾಗಿಯೂ, ಅಧೋಮುಖವಾಗಿಯೂ ವ್ಯಾಪಿಸುವುವು.

೨೮. ಈ ಪ್ರಾಣಶಕ್ತಿಗಳು ಹೋಗುವುವು, ಬರುವುವು, ನೂಕುವುವು, ಹಾರಿಸುವುವು, ಆಟವಾಡುವುವು ಹಾರುವುವು, ಬೀಳುವುವು.

(ತಾಸಾಮನ್ನರಸಸ್ಯ ದೇಹವ್ಯಾಪನಾಯ ನಾಡೀಷು ವ್ಯಾಪಾರಮಾಹ— ತಾ. ಪ್ರ.)

೨೯. ಹೃತ್ಪದ್ಮವನ್ನಾಶ್ರಯಿಸಿ ಕುಳಿತಿದ್ದಾಗ, ವಿದ್ವಾಂಸರು ಅದನ್ನು ಪ್ರಾಣವೆನ್ನುವರು. ಎಲೈ ಮುನೀಂದ್ರನೇ, ಈ ಪ್ರಾಣದ ಶಕ್ತಿಯೊಂದು ಕಣ್ಣಿನಲ್ಲಿ ವ್ಯಾಪಾರ ಮಾಡುವದು.

೩೦. ಇನ್ನೊಂದು ಸ್ಪರ್ಶವನ್ನು ತಿಳಿಯಿಸಿಕೊಡುವದು, ಇನ್ನೊಂದು ಮೂಗಿನಲ್ಲಿ ವ್ಯಾಪಾರ ಮಾಡುವದು, ಮತ್ತೊಂದು ತಿಂದ ಅನ್ನವನ್ನು ಜೀರ್ಣಿಸುವದು, ಮಗದೊಂದು ಮಾತುಗಳನ್ನಾಡುವದು.

ಬಹುನಾತ್ರ ಕಿಮುಕ್ತೇನ ಸರ್ವಮೇವ ಶರೀರಕೇ |
ಕರೋತಿ ಭಗವಾನ್ವಾಯುರ್ಯಂತ್ರೇಹಾಮಿವ ಯಾಂತ್ರಿಕಃ ॥ ೩೧ ॥

ತತ್ರೋರ್ಧ್ವಾಧೋ ದ್ವಿಸಂಕೇತೌ ಪ್ರಸೃತಾವನಿಲೌ ಮುನೇ |
ಪ್ರಾಣಾಪಾನಾವಿತಿ ಖ್ಯಾತೌ ಪ್ರಕಟೌ ದ್ವೌ ವರಾನಿಲೌ ॥ ೩೨ ॥

---

೩೧. ಎಲೈ ಭಗವಂತನೆ, ಈ ವಿಷಯವಾಗಿ ಬಹುವಾಗಿ ಏಕೆ ಹೇಳಬೇಕು ? ಯಾಂತ್ರಿಕನು ಯಂತ್ರ ವ್ಯಾಪಾರವನ್ನು ಮಾಡುವಂತೆ, ಶರೀರದಲ್ಲಿ ಎಲ್ಲ ಕೆಲಸವನ್ನೂ ವಾಯುವೇ ಮಾಡುವುದು.

೩೨. ಎಲೈ ಮುನೀಂದ್ರನೇ, ಊರ್ಧ್ವಮುಖವಾಗಿಯೂ ಅಧೋಮುಖವಾಗಿಯೂ ಪ್ರಸರಿಸುವ ಈ ವಾಯುವಿಗೆ ಪ್ರಾಣ, ಅಪಾನ ಎಂಬ ಎರಡು ಹೆಸರುಗಳು ಉಂಟು.

(ಏವಂ ಸರ್ವಂ ಔಪೋದ್ಘಾತಿಕಂ ಉಪವರ್ಣ್ಯ ಸ್ವಯಂ ಕ್ರಿಯಮಾಣಾಂ ಪ್ರಾಣಚಿಂತಾಂ ದರ್ಶಯತಿ ತಯೋರಿತಿ | ತಯೋರ್ಗತ್ಯನುಸರಣಂತು ಆಧ್ಯಾತ್ಮಿಕ ಪರಿಚ್ಛೇದ ತ್ಯಾಗೇನ ಆಧಿದೈವಿಕ ಸೂತ್ರಾತ್ಮರೂಪ ತದಾತ್ಮಭಾವ ಧಾರಣಯಾ ಅಸಂಗ ಪಾಪ್ಮ ದೂಷಿತ ಸರ್ವೇಂದ್ರಿಯ ವ್ರತ ಪರಿತ್ಯಾಗೇನ ತನ್ಮಾತ್ರ ವ್ರತಾಚರಣಂ ವಾಗಾದೀಂದ್ರಿಯಾಣಾಂ ಹಿ ವಚನಾದಿ ಸ್ವಸ್ವವಿಷಯ ವ್ಯಸನಿತಾವ್ರತಂ ತಚ್ಚಸಂಗ ಪಾಪ್ಮದೂಷಿತಮಿತಿ ಶ್ರಮಲಕ್ಷಣೇ ನ ಮೃತ್ಯುನಾ ಭಗ್ನಂ | ಪ್ರಾಣಸ್ಯ ತು ಮುಖ ನಾಸಿಕಾದಿಸ್ಥಾನೇಷು ಸಂಚರಣಮೇವ ವ್ರತಂ ತಚ್ಚ ನ ವಿಷಯಾಸಂಗದೂಷಿತಮಿತಿ ನ ಶ್ರಮಾತ್ಮನಾ ಭಜ್ಯತ ಇತಿ ಪ್ರಾಣ ಏವೈಕೋ ವ್ರತಭಂಗ ಶೂನ್ಯೋ ಮೃತ್ಯುನಾ ನ ಗ್ರಸ್ಯತೇ | ಅತಃ ತದಾತ್ಮಕಾ ಧಾರಣಾ ತದ್ವ್ರತ ಮಾತ್ರಾ ಚರಣ ಲಕ್ಷಣಾತ್ ಪ್ರಾಣಚಿಂತನಾತ್ ಸ್ವಸ್ಯ ಜಿತಮೃತ್ಯುತಾ ಇತ್ಯಾಶಯಃ |

ಇಯಂಚ ಪ್ರಾಣಚಿಂತಾ ಪ್ರಾಣವ್ರತಧಾರಣ ಸಹಿತಾ ಬೃಹದಾರಣ್ಯಕೇ ಸಪ್ತಾನ್ನ ಬ್ರಾಹ್ಮಣೇ ಅವಗಂತವ್ಯಾ —ತಾ.ಪ್ರ.)

ತಯೋರನುಸರನ್ನಿತ್ಯಂ ಮುನೇ ಗತಿಮಹಂ ಸ್ಥಿತಃ |
ಶಿತೋಷ್ಣವಪುಷೋರ್ನಿತ್ಯಂ ನಿತ್ಯಮಂಬರಪಾಂಥಯೋಃ || ೩೩ ||

ಕಲೇವರಮಹಾಯಂತ್ರವಾಹಯೋಃ ಶ್ರಮಹೀನಯೋಃ |
ಹೃದಯಾಕಾಶಾರ್ಕಶಶಿನೋಸ್ತ್ವಗ್ನೀಷೋಮಸ್ವರೂಪಯೋಃ || ೩೪ ||

ಶರೀರಪುರಪಾಲಸ್ಯ ಮನಸೋ ರಥಚಕ್ರಯೋಃ |
ಅಹಂಕಾರನೃಪಸ್ಯಾಸ್ಯ ಪ್ರಶಸ್ಯೇಷ್ಟತುರಂಗಯೋಃ || ೩೫ ||

ತಯೋರ್ಮಾನುಸರತಃ ಪ್ರಾಣಾಪಾನಾಭಿಧಾನಯೋಃ |
ಗತಿಂ ಶರೀರಮರುತೋರಾಶರೀರಮರುದ್ಧಯೋಃ || ೩೬ ||

ಜಾಗ್ರತ್ಸ್ವಪ್ನಸುಷುಪ್ತೇಷು ಸದೈವ ಸಮರೂಪಯೋಃ |
ಸುಷುಪ್ತಸಂಸ್ಥಿತಸ್ಯೇವ ಬ್ರಹ್ಮನ್ ಗಚ್ಛಂತಿ ವಾಸರಾಃ || ೩೭ ||

---

೩೩. ಆ ಪ್ರಾಣ, ಅಪಾನಗಳ ಗತಿಯನ್ನು ಯಾವಾಗಲೂ ಅನುಸರಿಸುತ್ತ, ನಾನು ಕುಳಿತಿರುವೆನು. ಆ ಪ್ರಾಣ ಅಪಾನಗಳು ಯಾವಾಗಲೂ ಆಕಾಶದಲ್ಲಿ ಚರಿಸುತ್ತ ಇರುವವು. ಅವು ಉಷ್ಣಶೀತ ಧಾತುಗಳು.

೩೪. ಕಳೇಬರವೆಂಬ ಮಹಾಯಂತ್ರವನ್ನು ನಡೆಸುವ ಕುದುರೆಗಳು ಇವು. ಇವುಗಳಿಗೆ ಶ್ರಮವೆಂಬುದು ಇಲ್ಲವೇ ಇಲ್ಲ. ಇವೇ ಹೃದಯಾಕಾಶದಲ್ಲಿರುವ ಸೂರ್ಯ ಚಂದ್ರರು. ಇವೇ ಅಗ್ನಿ, ಸೋಮ ಸ್ವರೂಪರು.

೩೫. ಶರೀರವೆಂಬ ಪತ್ತನದ ಪಾಲಕನಾಗಿರುವ ಮನಸ್ಸಿನ ರಥ ಚಕ್ರಗಳಂತೆ ಇರುವವರು ಇವರು. ಅಹಂಕಾರನೆಂಬ ಅರಸನ ಶ್ರೇಷ್ಠವೂ ಇಷ್ಟವೂ ಆದ ಕುದುರೆಗಳು ಇವು.

೩೬–೩೭. ಶರೀರದಲ್ಲಿರುವ ಆ ಪ್ರಾಣ, ಅಪಾನಗಳೆಂಬ ಮರುತ್ತುಗಳು ದೇಹವಿರುವವರೆಗೂ ಯಾವ ತಡೆಯೂ ಇಲ್ಲದೆ ಸಂಚರಿಸುವುವು. ಜಾಗ್ರತ್ತು, ಸ್ವಪ್ನ, ಸುಷುಪ್ತಿಗಳಲ್ಲಿ ಅವು ಒಂದೇ ಸಮನಾಗಿ ಯಾವಾಗಲೂ ನಡೆಯುತ್ತಿರುವುವು. ಅವುಗಳ ಗತಿಯನ್ನು ಅನುಸರಿಸುವ ನನಗೆ, ಸುಷುಪ್ತಿಯಲ್ಲಿ ಇದ್ದಂತೆಯೇ ಇರುತ್ತ, ದಿನದಿನಗಳು ಕಳೆದುಹೋಗುತ್ತಿರುವುವು.

ಸಹಸ್ರವಿನಿಕೃತ್ತಾಂಗಾದ್ಬಿಸತಂತುಲವಾದಪಿ |
ದುರ್ಲಕ್ಷ್ಯಾ ವಿದ್ಯಮಾನಾಪಿ ಗತಿಃ ಸೂಕ್ಷ್ಮತರಾನಯೋಃ || ೨೮ ||

ಅವಿರತಗತಯೋರ್ಗತಿಂ ವಿದಿತ್ವಾ ಹೃದಿ
ಮರುತೋರನುಸೃತ್ಯ ಚೋದಿತಾಂ ತಾಂ |

(ಸಮರೂಪಯೋಃ = ಅಭ್ಯಾಸಾತಿಶಯೇನ ಬಹಿರಂತಶ್ಚ ! ದ್ವಾದಶ ಷೋಡಶಾಂಗುಲ ಪ್ರದೇಶ ಮಾತ್ರ ಪರಿಮಿತ ಸಂಚಾರಯೋಃ —ತಾ. ಪ್ರ.)

೨೮. ಕಮಲನಾಳದಲ್ಲಿರುವ ಸೂಕ್ಷ್ಮವಾದ ತಂತುವನ್ನು ಸಾವಿರ ಪಾಲಾಗಿ ಸೀಳಿದರೆ ಎಷ್ಟು ಸೂಕ್ಷ್ಮವಾಗುವುದೋ ಅದಕ್ಕಿಂತ ಸೂಕ್ಷ್ಮವಾಗಿರುವ ಗತಿಯು ಈ ಪ್ರಾಣಾಪಾನಗಳದು. ಅದರಿಂದ ಅದು ಇರುವುದನ್ನು ತಿಳಿಯುವುದೇ ಕಷ್ಟವು.

(ಪ್ರಾಣಾಯಾಮಾಭ್ಯಾಸಾತ್ ತಯೋಃ ಸೂಕ್ಷ್ಮತಮತ್ವಾಪಾದನಾಚ್ಚ ಸೋತ್ಕ್ರಮಣತ್ವ ಪ್ರಸಕ್ತಿಃ—ಅಥವಾ ನಾಡ್ಯಂತಸ್ಸಂಚಾರೋಽನಯೋರ್ಮುಖ ನಾಸಿಕಾ ಸಂಚಾರ ಇತಿ ಕುತೋ ನಲಕ್ಷ್ಯತೇ ? ತತ್ರಾಹ "ಯಥಾ ಕೇಶಃ ಸಹಸ್ರಧಾ ಭಿನ್ನಃ ತಾವತಾ ಅಣಿಮ್ನಾ ತಿಷ್ಠತಿ" ಇತಿ ಶ್ರುತೇಃ ನಾಡೀನಾಮೇವ ಅತಿಸೂಕ್ಷ್ಮತ್ವಾತ್ ದುರ್ಲಕ್ಷತ್ವೇ ತದಂತಃ ಅನಯೋರ್ಗತಿಃ ಸುತರಾಂ ದುರ್ಲಕ್ಷ್ಯಾ ಇತ್ಯಾಶಯಃ —ತಾ. ಪ್ರ.)

೨೯. ಒಂದೇ ಸಮನಾಗಿ ಸಂಚಾರ ಮಾಡುತ್ತಿರುವ ಈ ಪ್ರಾಣ, ಅಪಾನ, ವಾಯುಗಳ ಗತಿಯನ್ನು ಕುರಿತು ಶ್ರುತಿಗಳಲ್ಲಿ ಬಹುವಾಗಿ ಹೇಳಿರುವದು ಹೃದಯದಲ್ಲಿ ಆ ಗತಿಯನ್ನು ತಿಳಿದು, (ಅದನ್ನು ಅನುಸರಿಸಿದರೆ) ಎಲೆ ಮಹಾತ್ಮನೆ, ಅವನು ಮತ್ತೆ ಹುಟ್ಟುವದಿಲ್ಲ. ಅವನಿಗೆ ಮೃತ್ಯುಪಾಶವು ಹರಿದು ಹೋಗುವುದು.

(ವರ್ಣಿತಾಂ ಪ್ರಾಣಚಿಂತಾಂ ವರ್ಣಯಿಷ್ಯಮಾಣ ಪ್ರಕಾರ ಪ್ರಶ್ನಸ್ಯ ಅವಸರಂ ಸೂಚಯನ್ನುಪಸಂಹರತಿ.—ಅವಿರತೇತಿ–ಹೃದಿ ಹೃದಯಾದಿಸ್ಥಾನೇಷು ಅವಿರತಂಗತಂ ಸಂಚಾರೋ ಯಯೋಸ್ತಯೋಃ, ಮರುತೋಃ, ಪ್ರಾಣಾಪಾನಯೋಃ ಚೋದಿತಾಂ, ನಾನಾಶ್ರುತಿಷು ತತ್ರಪ್ರಾಣೋಪಾಸ್ತಿ ಪ್ರಕರಣೇ ಅನೇಕಧಾ ವಿದಿತಾಂ

ನ ಪುನರಿಹ ಹಿ ಜಾಯತೇ
ಮಹಾತ್ಮನ್ಮುದಿತಮನಾಃ ಪುರುಷಃ ಪ್ರಣಷ್ಟಪಾಶಃ ॥ ೩೯ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕಿಯೇ ದೇವದೂತೋಕ್ತೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ ಭುಶುಂಡೋಪಾಖ್ಯಾನೇ "ಪ್ರಾಣವಿಚಾರಣಂ" ನಾಮ ಚತುರ್ವಿಂಶಃ ಸರ್ಗಃ

ನಿರ್ದೋಷತ್ವ-ಗತಶ್ರಮತ್ವ, ಅಭಗ್ನವ್ರತತ್ವ, ಸಂವರ್ಗಾದ್ಯನೇಕ ಗುಣವಿಶಿಷ್ಟಾಂ ಗತಿಂ ಅನುಸೃತ್ಯ ವಕ್ಷ್ಯಮಾಣ ಪ್ರಕಾರೇಣ ಉಪಾಸ್ಯ ಪ್ರಣಷ್ಟ ಮೃತ್ಯುಪಾಶಸ್ಸನ್ ಪುರುಷಃ ತತ್ವಜ್ಞಾನೇನ ಜೀವನ್ಮುಕ್ತೋ ಭೂತ್ವಾ ಇಹ ಸಂಸಾರೇ ಪುನರ್ನ ಜಾಯತೇ ಇತ್ಯರ್ಥಃ—ತಾ. ಪ್ರ.)

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ ನಿರ್ವಾಣಪ್ರಕರಣದ ಭುಶುಂಡೋಪಾಖ್ಯಾನದಲ್ಲಿ "ಪ್ರಾಣವಿಚಾರಣ" ಎಂಬ ಇಪ್ಪತ್ತನಾಲ್ಕನೆಯ ಸರ್ಗವು

ಪಂಚವಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಇತ್ಥಂ ಸ ಕಥಯನ್ ಪಕ್ಷೀ ಪೃಷ್ಟಸ್ತತ್ರ ಪ್ರಸರ್ಗಯಾ |
ಕೀದೃಶೀ ಪ್ರಾಣವಾತಸ್ಯ ಗತಿರಿತ್ಯೇವ ರಾಘವ || ೧ ||

ಭುಶುಂಡ ಉವಾಚ—

ಜಾನನ್ನಪಿ ಮುನೇ ಸರ್ವಂ ಕಿಂ ಮಾಂ ಪೃಚ್ಛಸಿ ಲೀಲಯಾ |
ಯಥಾ ಪೃಷ್ಟಮಹಂ ವಚ್ಮಿ ಶೃಣು ತತ್ರಾಪಿ ಮದ್ವಚಃ || ೨ ||

ಪ್ರಾಣೋಯಮನಿಶಂ ಬ್ರಹ್ಮನ್ ಸ್ಪಂದಶಕ್ತಿಃ ಸದಾಗತಿಃ |
ಸಬಾಹ್ಯಾಭ್ಯಂತರೇ ದೇಹೇ ಪ್ರಾಣೋಽಯಮುಪರಿ ಸ್ಥಿತಃ || ೩ ||

ಇಪ್ಪತ್ತೈದನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು :—ಹೀಗೆ ಹೇಳುತ್ತಿರುವ ಆ ಪಕ್ಷಿಯನ್ನು ಮತ್ತೆ ನಾನು ಎಲೈ ರಾಘವನೇ, "ಪ್ರಾಣವಾಯುವಿನ ಗತಿಯು ಎಂಥದು ?" ಎಂದು ಕೇಳಿದೆನು.

೨. ಭುಶುಂಡನು ಹೇಳಿದನು :—ಎಲೈ ಮುನೀಂದ್ರನೆ, ನೀನು ಎಲ್ಲವನ್ನೂ ಬಲ್ಲವನಾದರೂ ಲೀಲೆಯಿಂದ ನನ್ನನ್ನು ಕೇಳುತ್ತಿರುವೆ. ಆಗಲಿ, ನೀನು ಕೇಳಿದೆಯೆಂದು ನಾನು ಹೇಳುವೆನು. ಕೇಳು.

೩. ಎಲೈ ಬ್ರಹ್ಮನೆ, ಈ ಪ್ರಾಣವು ಸ್ಪಂದಶಕ್ತಿ (ವ್ಯಾಪಾರಕಾರಿಣಿ) ಯಾಗಿರುವದು. ಇದು ಯಾವಾಗಲೂ ಸಂಚಾರ ಮಾಡುತ್ತಲೇ ಇರುವದು. ಈ ಪ್ರಾಣವು ದೇಹದಲ್ಲಿ ಊರ್ಧ್ವಗತಿಯಾಗಿ ಇರುವದು,

ಅಪಾನೇಪ್ಯನಿಶಂ ಬ್ರಹ್ಮನ್ಸ್ಪಂದಶಕ್ತಿಃ ಸದಾಗತಿಃ |
ಸಬಾಹ್ಯಾಭ್ಯಂತರೇ ದೇಹೇ ತ್ವಪಾನೋಽಯಮವಾಕ್ ಸ್ಥಿತಃ ॥ ೪ ॥

ಜಾಗ್ರತಃ ಸ್ವಪತಶ್ಚೈವ ಪ್ರಾಣಾಯಾಮೋಽಯಮುತ್ತಮಃ |
ಪ್ರವರ್ತತೇ ಯತಸ್ತಜ್ಜ್ಞ ತತ್ತ್ವಚ್ಛ್ರೇಯಸೇ ಶೃಣು ॥ ೫ ॥

ಬಾಹ್ಯೋನ್ಮುಖತ್ವಂ ಪ್ರಾಣಾನಾಂ ಯದ್ಧೃದಂಬುಜಕೋಟರಾತ್ |
ಸ್ವರಸೇನಾಪ್ರಯತ್ನಾನಾಂ ತಂ ಧೀರಾಃ ರೇಚಕಂ ವಿದುಃ ॥ ೬ ॥

ದ್ವಾದಶಾಂಗುಲಪರ್ಯಂತಂ ಬಾಹ್ಯಮಾಕ್ರಮತಾಮಧಃ |
ಪ್ರಾಣಾನಾಮಂಗಸಂಸ್ಪರ್ಶೋ ಯಃ ಸ ಪೂರಕ ಉಚ್ಯತೇ ॥ ೭ ॥

---

೪. ಅಪಾನವೂ ಕೂಡ, ಎಲೈ ಬ್ರಹ್ಮನೆ, ಸ್ಪಂದಶಕ್ತಿಯಾಗಿ ಯಾವಾಗಲೂ ವ್ಯಾಪಾರ ಮಾಡುತ್ತಿರುವದು. ದೇಹದ ಒಳಹೊರಗನ್ನೆಲ್ಲ ವ್ಯಾಪಿಸಿ ಅಧೋಗತಿಯಾಗಿರುವದು.

೫. ಪುರುಷನು ಎಚ್ಚರವಾಗಿರಲಿ, ಮಲಗಿರಲಿ, ಈ (ಪ್ರಾಣಾಪಾನಗಳ ಊರ್ಧ್ವ, ಅಧೋಗತಿ ರೂಪ ವ್ಯಾಪಾರವಾದ) ಪ್ರಾಣಾಯಾಮವು ನಡೆಯುತ್ತಲೇ ಇರುವದು. ಅದರಿಂದ, ಪ್ರಾಣಾಯಾಮವನ್ನು ಬಲ್ಲ ಮುನಿಯೇ, ಅದನ್ನು ಕುರಿತು ಹೇಳುವೆನು. ಶ್ರೇಯಸ್ಸಾಗಲಿ, ಕೇಳು.

೬. ಪ್ರಾಣಗಳು ಬಹಿರ್ಮುಖವಾಗಿ ಹೃತ್ಕಮಲ ಮಧ್ಯದಿಂದ ಹೊರಟು, ಸ್ವಶಕ್ತಿಯಿಂದ ಯಾವ ಪ್ರಯತ್ನವೂ ಇಲ್ಲದೆ ಹೊರಬರುವುದೇ ರೇಚಕವೆಂದು ಧೀರರು (ಬಲ್ಲವರು) ಹೇಳುವರು.

೭. ಹನ್ನೆರಡು ಅಂಗುಲಗಳ ಉದ್ದವಾಗಿ ಪ್ರಾಣಗಳು ಹೊರಗೆ ಇಳಿಯುವಾಗ ಅಂಗಗಳಿಗೆ ಉಂಟಾಗುವ ಸ್ಪರ್ಶವನ್ನು ಪೂರಕ ಎನ್ನುವರು.

(ತತ್ರ ಹೃದಯಾನ್ಮೂರ್ಧ ಪರ್ಯಂತಂ ಪ್ರಶ್ವಾಸ ಗತ್ಯರ್ಧಂ ಆಂತರ ರೇಚಕತ್ವೇನ ಚಿಂತನೀಯಂ | ಮೂರ್ಧಾದಿ ಬಹಿರ್ದ್ವಾದಶಾಂಗುಲ ಪರ್ಯಂತಂ ತ್ವರ್ಧಂ ಬಾಹ್ಯ ಪೂರಕತ್ವೇನ —ತಾ. ಪ್ರ.)

ಬಾಹ್ಯಾತ್ಪರಾಪತತ್ಯಂತರಪಾನೇ ಯತ್ನವರ್ಜಿತಃ ।
ಯೋಽಯಂ ಪ್ರಪೂರಣಃ ಸ್ಪರ್ಶೋ ವಿದುಸ್ತಮಪಿ ಪೂರಕಂ ॥ ೮ ॥

ಅಪಾನೇಽಸ್ತಂಗತೇ ಪ್ರಾಣೋ ಯಾವನ್ನಾಭ್ಯುದಿತೋ ಹೃದಿ ।
ತಾವತ್ಸಾ ಕುಂಭಕಾವಸ್ಥಾ ಯೋಗಿಭಿರ್ಯಾನುಭೂಯತೇ ॥ ೯ ॥

ರೇಚಕಃ ಕುಂಭಕಶ್ಚೈವ ಪೂರಕಶ್ಚ ತ್ರಿಧಾ ಸ್ಥಿತಃ ।
ಅಪಾನಸ್ಯೋದಯಸ್ಥಾನೇ ದ್ವಾದಶಾಂತಾದಧೋ ಬಹಿಃ ॥ ೧೦ ॥

---

೮. ಹಾಗೆಯೇ, ಹೊರಗಿನಿಂದ ಅಪಾನವು ಒಳಕ್ಕೆ ಬರುವಾಗ, ನಡೆಯುವ ಯತ್ನವರ್ಜಿತವಾದ ಪ್ರಪೂರಣವು (ಗಾಳಿ ತುಂಬುವಿಕೆಯು) ಯಾವದುಂಟೋ ಅದನ್ನೂ ಪೂರಕವೆನ್ನುವರು.

(ಏವಂ ಬಾಹ್ಯಾತ್ ದೇಶಾತ್ ಅಪಾನೇ ಅಂತಃ ಪರಾಪತತಿ ಪ್ರವಿಶತಿ ಯೋ ನಾಸಾಗ್ರಾದಿ ಮೂರ್ಧ ಪರ್ಯಂತೋ ಯಶ್ಚ ಮೂರ್ಧಾದಿ ಹೃದಯ ಪರ್ಯಂತೋ ವಾಯೋಃ ಸ್ಪರ್ಶಃ ತಂ ದ್ವಿವಿಧಮಪಿ ಅಂತಃ ಪೂರಕಂ ವಿದುಃ—ತಾ. ಪ್ರ.)

೯. ಅಪಾನವು ಅಸ್ತಂಗತವಾಗಿ ಹೃದಯದಲ್ಲಿ ಇನ್ನೂ ಪ್ರಾಣವು ಹುಟ್ಟದಿರುವಾಗ, ಯಾವ ಅವಸ್ಥೆಯು ಇರುವದೋ, ಯಾವದನ್ನು ಯೋಗಿಗಳು ಅನುಭವಿಸಬಲ್ಲರೋ ಅದೇ ಕುಂಭಕಾವಸ್ಥೆಯು.

೧೦. ರೇಚಕ, ಕುಂಭಕ, ಪೂರಕ ಎಂದು ಮೂರು ವಿಧವಾಗಿ, ಅಪಾನವು ಉದಯವಾಗುವ ಸ್ಥಾನದಲ್ಲಿ ಹನ್ನೆರಡು ಅಂಗುಲಗಳ ಕೆಳಗೆ, ದೇಹದಿಂದ ಹೊರಗೆ ಇರುವದು.

(ಅಪಾನಸ್ಯೋದಯ ಸ್ಥಾನೇ–ನಾಸಾಗ್ರಾತ್ ಬಹಿಃ ದ್ವಾದಶಾಂಗುಲ ಪರ್ಯಂತೇ—ತಾ. ಪ್ರ.)

ಸ್ವಭಾವಾಃ ಸರ್ವಕಾಲಸ್ಥಾಃ ಸಮ್ಯಗ್ಯತ್ನವಿವರ್ಜಿತಾಃ |
ಯೇ ಪ್ರೋಕ್ತಾಃ ಸ್ಫಾರಮತಿಭಿಸ್ತಾನ್ ಶೃಣು ತ್ವಂ ಮಹಾಮತೇ || ೧೧ ||

ದ್ವಾದಶಾಂಗುಲಪರ್ಯಂತಾದ್ಬಾಹ್ಯಾದಭ್ಯುದಿತಃ ಪ್ರಭೋ |
ಯೋ ವಾತಸ್ತಸ್ಯ ತತ್ರೈವ ಸ್ವಭಾವಾತ್ಪೂರಕಾದಯಃ || ೧೨ ||

ಮೃದಂತರಸ್ಥಾನಿಷ್ಪನ್ನಘಟವದ್ಯಾ ಸ್ಥಿತಿರ್ಬಹಿಃ |
ದ್ವಾದಶಾಂಗುಲಪರ್ಯಂತೇ ನಾಸಾಗ್ರಸಮಸಂಮುಖೇ
ವ್ಯೋಮ್ನಿ ನಿತ್ಯಮಪಾನಸ್ಯ ತಂ ವಿದುಃ ಕುಂಭಕಂ ಬುಧಾಃ | || ೧೩ ||

ಬಾಹ್ಯೋನ್ಮುಖಸ್ಯ ವಾಯೋರ್ಯಾ ನಾಸಿಕಾಗ್ರಾವಧಿರ್ಗತಿಃ |
ತಂ ಬಾಹ್ಯಪೂರಕಂ ತ್ವಾದ್ಯಂ ವಿದುರ್ಯೋಗವಿದೋ ಜನಾಃ || ೧೪ ||

---

೧೧. ಎಲೈ ಮಹಾಮತಿಯೆ, ಈ ರೇಚಕ ಕುಂಭಕ ಪೂರಕಗಳೂ ಸ್ವಭಾವವಾಗಿ ಆಗುವ ಸಹಜ ಸ್ಥಿತಿಗಳು. ಇವು ಎಲ್ಲಾ ಕಾಲದಲ್ಲಿಯೂ ಇರುವವು. ಯಾವ ಯತ್ನವೂ ಇಲ್ಲದೆ ಆಗುವಂಥವು. ಇವುಗಳ ವಿಚಾರವಾಗಿ ಚೆನ್ನಾಗಿ ತಿಳಿದವರು ಹೇಳುವದನ್ನು ಹೇಳುವೆನು ಕೇಳು.

೧೨. (ನಾಸಾಗ್ರದಿಂದ) ಹನ್ನೆರಡು ಅಂಗುಲದ ದೂರದಲ್ಲಿ, ಹೊರಗಡೆ ಯಾವ ವಾಯುವು ಉದಯವಾಗುವುದೋ, ಆ ವಾಯುವಿನ ಸ್ವಭಾವದಿಂದಲೇ, ಅಲ್ಲಿಯೇ ಪೂರಕಾದಿಗಳು ಸಂಭವಿಸುವವು.

(ಅಭ್ಯುದಿತಃ ಅಭಿಮುಖಂ ಸ್ಥಿತಃ--ತಾ. ಪ್ರ.)

೧೩. ಇನ್ನೂ ಹುಟ್ಟದಿರುವ ಗಡಿಗೆಯು ಮಣ್ಣಿನೊಳಗೆ ಹೇಗೆ ಇರುವದೋ, ಹಾಗೆ ನಾಸಾಗ್ರದಿಂದ ಸಮಸಮ್ಮುಖದಲ್ಲಿ ಹನ್ನೆರಡು ಅಂಗುಲಗಳ ದೂರದಲ್ಲಿ ಇರುವ ಬಹಿರಾಕಾಶದಲ್ಲಿ ಅಪಾನದ ಸ್ಥಿತಿಯುಂಟು. ಅದನ್ನು ಬಲ್ಲವರು ಕುಂಭಕವೆನ್ನುವರು.

(ತತ್ರ ಬಾಹ್ಯ ವಾಯ್ವಂತಃ ಅಪಾನಸ್ಯ ಏಕೀಭಾವೇನ ನಿಶ್ಚಲ ಪ್ರಾಯಾಂ ಸ್ಥಿತಿಂ ಕುಂಭಕತ್ವೇನ ಕಲ್ಪಯತಿ—ತಾ. ಪ್ರ.)

ನಾಸಾಗ್ರಾದಪಿ ನಿರ್ಗತ್ಯ ದ್ವಾದಶಾಂತಾವಧಿರ್ಗತಿಃ |
ಯಾ ವಾಯೋಸ್ತಾಂ ವಿದುರ್ಧೀರಾಃ ಅಪರಂ ಬಾಹ್ಯಪೂರಕಂ || ೧೫ ||

ಬಹಿರಸ್ತಂ ಗತೇ ಪ್ರಾಣೇ ಯಾವನ್ನಾಪಾನ ಉದ್ಗತಃ |
ತಾವತ್ಪೂರ್ಣಾಂ ಸಮಾವಸ್ಥಂ ಬಹಿಷ್ಠಂ ಕುಂಭಕಂ ವಿದುಃ || ೧೬ ||

ಯತ್ತದಂತರ್ಮುಖತ್ವಂ ಸ್ಯಾದಪಾನಸ್ಯೋದಯಂ ವಿನಾ |
ತಂ ಬಾಹ್ಯರೇಚಕಂ ವಿದ್ಯಾಚ್ಚಿಂತ್ಯಮಾನಂ ವಿಮುಕ್ತಿದಂ || ೧೭ ||

ದ್ವಾದಶಾಂತಾದ್ಯದುತ್ಥಾಯ ರೂಪಪೀವರತಾ ಪರಾ |
ಅಪಾನಸ್ಯ ಬಹಿಷ್ಠಂ ತಮುಪರಂ ಪೂರಕಂ ವಿದುಃ || ೧೮ ||

---

೧೪. ಹೊರಗೆ ಹೊರಟಿರುವ (ಹೃದಯದಲ್ಲಿರುವ) ವಾಯುವಿನ ನಾಸಿಕಾಗ್ರದವರೆಗಿನ ಗತಿಯನ್ನು ಯೋಗವನ್ನು ಬಲ್ಲವರು ಆದ್ಯ [ಮೊದಲನೆಯ] ಬಾಹ್ಯಪೂರಕವೆನ್ನುವರು.

೧೫. ನಾಸಿಕಾಗ್ರದಿಂದ ಹೊರಟು ಹನ್ನೆರಡು ಅಂಗುಲದವರೆಗೆ ಹೋಗುವ ವಾಯುವಿನ ಗತಿಯನ್ನು ಧೀರರು ಎರಡನೆಯ ಬಾಹ್ಯಪೂರಕವೆನ್ನುವರು.

೧೬. [ಹೀಗೆ ಹೃದಯದಿಂದ ಹೊರಟು ಈಚೆಗೆ ಬಂದ] ಪ್ರಾಣವಾಯುವು ಅಸ್ತಂಗತವಾಗಿ, ಇನ್ನೂ ಅಪಾನವು ಹುಟ್ಟದಿರುವ ಸ್ಥಿತಿಯಲ್ಲಿ ಇರುವ ಪೂರ್ಣವಾಗಿರುವ ಸಮಾವಸ್ಥೆಯು ಯಾವದುಂಟೋ ಅದನ್ನು ಬಾಹ್ಯಕುಂಭಕ ಎನ್ನುವರು.

೧೭. ಅಪಾನವು ಉದಯವಾಗುವುದಕ್ಕೆ ಕೊಂಚ ಮೊದಲು, ಸಂಭವಿಸುವ ವಾಯುವಿನ ಅಂತರ್ಮುಖತ್ವವು ಯಾವುದುಂಟೋ ಅದನ್ನು ಬಾಹ್ಯರೇಚಕ ಎನ್ನುವರು. ಅದನ್ನು ಧ್ಯಾನಚಿಂತನಗಳಿಂದ ಉಪಾಸನ ಮಾಡಿದರೆ ಮುಕ್ತಿಯು ಲಭಿಸುವುದು.

೧೮. ಹೊರಗೆ ಹನ್ನೆರಡು ಅಂಗುಲ ದೂರದಿಂದ ಹುಟ್ಟಿ ಸ್ಥೂಲರೂಪವಾಗಿದ್ದರೂ ಸೂಕ್ಷ್ಮವಾಗಿರುವ ಅಪಾನದ ಗತಿಯು ಯಾವುದೋ ಅದನ್ನು ಎರಡನೆಯ ಬಾಹ್ಯಪೂರಕವೆನ್ನುವರು.

ಬಾಹ್ಯಾನಾಭ್ಯಂತರಾಶ್ಚೈತಾನ್ ಕುಂಭಕಾದೀನನಾರತಂ |
ಪ್ರಾಣಾಪಾನಸ್ವಭಾವಾಂಸ್ತಾನ್ ಬುಧ್ವಾ ಭೂಯೋ ನ ಜಾಯತೇ ॥ ೧೯ ॥

ಅಷ್ಟಾವೇತೇ ಮಹಾಬುದ್ಧೇ ರಾತ್ರಿರದಿವಮನುಸ್ಮೃತಾಃ |
ಸ್ವಭಾವಾ ದೇಹವಾಯೂನಾಂ ಕಥಿತಾ ಮುಕ್ತಿದಾ ಮಯಾ ॥ ೨೦ ॥

ಗಚ್ಛತಸ್ತಿಷ್ಠತೋ ವಾಪಿ ಜಾಗ್ರತಃ ಸ್ವಪತೋಽಪಿ ವಾ |
ಏತೇ ನಿರೋಧಮಾಯಾಂತಿ ಪ್ರಕೃತ್ಯಾತಿಚಲಾನಿಲಾಃ ॥ ೨೧ ॥

---

೧೯. ಹೀಗೆ ಪ್ರಾಣಅಪಾನಗಳ ಸ್ವಭಾವವಾಗಿ ಎಡೆಬಿಡದೆ ಸಂಭವಿಸುವ ಬಾಹ್ಯ–ಅಭ್ಯಂತರ ಕುಂಭಕಾದಿಗಳನ್ನು ಯಾವನು ತಿಳಿಯುವನೋ ಅವನು ಮತ್ತೆ ಜನ್ಮವೆತ್ತುವುದಿಲ್ಲ.

(ಬುಧ್ವಾ–ಉಪಾಸ್ಯ —ತಾ. ಪ್ರ.)

೨೦. ಎಲೈ ಮಹಾಮತಿಯೆ, ದೇಹವಾಯುಗಳ ಸ್ವಭಾವದಿಂದ ಸಂಭವಿಸುವ ಈ ಎಂಟನ್ನೂ ಹಗಲೂ ರಾತ್ರಿಗಳಲ್ಲಿ ಒಂದೇ ಸಮನಾಗಿ ಧ್ಯಾನಿಸುವವನಿಗೆ ಮುಕ್ತಿಯು ಲಭಿಸುವುದು.

(೧೩ ರಿಂದ ೧೮ನೇ ಶ್ಲೋಕದವರೆಗೆ ಕ್ರಮವಾಗಿ, ಕುಂಭಕ, ಆದ್ಯಬಾಹ್ಯ ಪೂರಕ, ಅಪರಬಾಹ್ಯಪೂರಕ, ಬಾಹ್ಯಕುಂಭಕ, ಬಾಹ್ಯರೇಚಕ, ಬಾಹ್ಯಪೂರಕ, ಬಾಹ್ಯಾಂಭ್ಯಂತರ ಕುಂಭಕಗಳೆರಡು ಹೀಗೆ ಎಂಟು ಹೇಳಿದೆ. ಆದರೆ ತಾತ್ಪರ್ಯ ಪ್ರಕಾಶಕಾರರು "ಯದ್ಯಪಿ ಬಹಿರಂತಶ್ಚ ರೇಚಕ ಪೂರಕಯೋಃ ಪ್ರತ್ಯೇಕಂ ದ್ವೈವಿಧ್ಯಕಥನಾತ್ ಕುಂಭಕಾಭ್ಯಾಂಸಹ ದಶ ಭವಂತಿ ತಥಾಪಿ ಕುಂಭಕಯೋಃ ಪ್ರಾಧಾನ್ಯಾತ್ ಅಂಗಾಷ್ಟಕಾಭಿಪ್ರಾಯೇಣ ಇಯಮುಕ್ತಿಃ"ಎಂದಿದ್ದಾರೆ.)

೨೧. ಪುರುಷನು ನಡೆಯುತ್ತಿರಲಿ, ನಿಂತಿರಲಿ, ಎದ್ದಿರಲಿ, ಮಲಗಿರಲಿ, ಈ ವಾಯುಗಳು ಸ್ವಭಾವವಾಗಿ ಅತಿ ಚಪಲಗಳಾಗಿದ್ದರೂ ನಿರೋಧಕ್ಕೆ ಸಿಕ್ಕುವುವು.

ಯತ್ಕರೋತಿ ಯದಶ್ನಾತಿ ಬುದ್ಧ್ಯೈವಾಲಮನುಸ್ಮರನ್ |
ಕುಂಭಕಾದೀನ್ನರಃ ಸ್ವಾಂತಸ್ತತ್ರ ಕರ್ತಾ ನ ಕಿಂಚನ || ೨೨ ||

ಅವ್ಯಗ್ರಮಸ್ಮಿನ್ವ್ಯಾಪಾರೇ ಬಾಹ್ಯಂ ಪರಿಜಹನ್ಮನಃ |
ದಿನೈಃ ಕತಿಪಯೈರೇವ ಪದಮಾಪ್ನೋತಿ ಕೇವಲಂ || ೨೩ ||

ಏತದಭ್ಯಸತಃ ಪುಂಸೋ ಬಾಹ್ಯೇ ವಿಷಯವೃತ್ತಿಷು |
ನ ಬಧ್ನಾತಿ ರತಿಂ ಚೇತಃ ಶ್ವದೃತೌ ಬ್ರಾಹ್ಮಣೋ ಯಥಾ || ೨೪ ||

ಏತಾಂ ದೃಷ್ಟಿಮುಪಷ್ಟಭ್ಯ ಯೇ ಸ್ಥಿತಾಃ ಕೃತಬುದ್ಧಯಃ |
ಪ್ರಾಪ್ತಪ್ರಾಪ್ತವ್ಯಮಖಿಲಂ ತೈರಖಿನ್ನಾಸ್ತ ಏವ ಹಿ || ೨೫ ||

---

೨೨. ಇವುಗಳನ್ನು ಒಳಗೆ ಮನಸ್ಸಿನಲ್ಲಿ ಸ್ಮರಿಸುತ್ತಾ ಪುರುಷನು ಏನನ್ನು ಮಾಡಿದರೂ, ಏನನ್ನು ತಿಂದರೂ ಅವನಿಗೆ ಆ ಕರ್ತೃತ್ವವಿರುವದಿಲ್ಲ.

[ಯತ್ಕರೋತಿ–ಯದಶ್ನಾತಿ ಇವು ಕರ್ತೃತ್ವ ಭೋಕ್ತೃತ್ವಗಳು: ಇವು ಕೂಡ ಈ ಎಂಟರ ಧ್ಯಾನದಿಂದ ನಾಶವಾಗುವುವು—ತಾ. ಪ್ರ.]

೨೩. ಏಕಾಗ್ರವಾದ ಮನಸ್ಸಿನಿಂದ ಬಾಹ್ಯ ಚಿಂತನವನ್ನು ಬಿಟ್ಟು, ಈ ಪ್ರಾಣ ವ್ಯಾಪಾರವನ್ನೇ ಚಿಂತಿಸುತ್ತಾ ಇರುವವನಿಗೆ ಕೆಲವು ದಿನಗಳಲ್ಲಿಯೇ ಪರಮಪದವೂ ಲಭಿಸುವದು.

೨೪. ಈ ಪ್ರಾಣ ವ್ಯಾಪಾರವನ್ನು ಅಭ್ಯಾಸ ಮಾಡುವವನಿಗೆ, ಬ್ರಾಹ್ಮಣನಿಗೆ ನಾಯಿಯ ಹಾಲಿನಲ್ಲಿ ತೋರುವಷ್ಟು ತಿರಸ್ಕಾರವು ಬಾಹ್ಯವಾದ ವಿಷಯ ಭೋಗಗಳಲ್ಲಿ ಹುಟ್ಟುವದು.

೨೫. ಈ ಮಾರ್ಗವನ್ನು ಅವಲಂಬಿಸಿ ಯಾರು ಕೃತಕೃತ್ಯರಾಗುವರೋ, ಅವರು ಪಡೆಯಬೇಕಾದುದು ಎಲ್ಲವನ್ನೂ ಪಡೆದವರು, ಖೇದವಿಲ್ಲದವರು ಎಂದರೆ ಅವರೇ.

ತಿಷ್ಠತಾ ಗಚ್ಛತಾ ನಿತ್ಯಂ ಸ್ವಪತಾ ಜಾಗ್ರತಾ ತಥಾ ।
ಏಷಾ ಚೇತ್ಪ್ರೇಕ್ಷ್ಯತೇ ದೃಷ್ಟಿಸ್ತನ್ನ ಬಂಧನಮಾಪ್ಯತೇ ॥ ೨೬ ॥

ಪ್ರಾಣಾಪಾನಾನುಸರಣಪ್ರಾಪ್ತಬೋಧವತಾಮಲಂ ।
ಸಂಶಾಂತಮಲಮೋಹೇನ ಸ್ವಸ್ಥೇನಾಂತರಿಹೋಷ್ಯತೇ ॥ ೨೭ ॥

ಸರ್ವಾರಂಭಾನ್ಸದಾ ಸ್ವಚ್ಛಃ ಕುರ್ವನ್ನಪಿ ಬುಧೋ ಜನಃ ।
ಪ್ರಾಣಾಪಾನಗತಿಂ ಪ್ರಾಪ್ಯ ಸುಖಸ್ಥಃ ಸುಖಮೇಧತೇ ॥ ೨೮ ॥

ಪ್ರಾಣಸ್ಯಾಭ್ಯುದಯೋ ಬ್ರಹ್ಮನ್ಪದ್ಮಪತ್ರಾತ್ ಹೃದಿ ಸ್ಥಿತಾತ್ ।
ದ್ವಾದಶಾಂಗುಲಪರ್ಯಂತೇ ಪ್ರಾಣೋಽಸ್ತಂಯಾತ್ಯಯಂ ಬಹಿಃ ॥ ೨೯ ॥

ಅಪಾನಸ್ಯೋದಯೋ ಬಾಹ್ಯಾದ್ದ್ವಾದಶಾಂತಾನ್ಮಹಾಮುನೇ ।
ಅಸ್ತಂಗತಿರಥಾಂಭೋಜಮಧ್ಯೇ ಹೃದಯಸಂಸ್ಥಿತೇ ॥ ೩೦ ॥

---

೨೬. ನಿಂತಿರಲಿ, ನಡೆಯುತ್ತಿರಲಿ, ಮಲಗಿರಲಿ, ಎದ್ದಿರಲಿ, ಯಾವಾಗಲೂ ಈ ಪ್ರಾಣಗತಿಯನ್ನು ನೋಡುತ್ತಿದ್ದುದೇ ಆದರೆ, ಅದು ಬಂಧನವನ್ನು ತಪ್ಪಿಸುವದು.

೨೭. ಈ ಪ್ರಾಣಾಪಾನ ಗತಿಗಳನ್ನು ಹಿಡಿದು ಆ ಉಪಾಸನದಿಂದ ಜ್ಞಾನವನ್ನು ಪಡೆದವರಿಗೆ ಮಲಮೋಹಗಳೆಲ್ಲವೂ ನಿವಾರಣವಾಗಿ ಪ್ರತ್ಯಗಾತ್ಮನಲ್ಲಿ ಸ್ಥಿತಿಯುಂಟಾಗುವದು.

೨೮. ಈ ಪ್ರಾಣಾಪಾನ ಗತಿಗಳನ್ನು ಅನುಸಂಧಾನ ಮಾಡುವ ವಿದ್ವಾಂಸನು ಎಲ್ಲಾ ಕೆಲಸಗಳನ್ನು ಮಾಡುತ್ತಿರುವವನಾದರೂ ಕರ್ಮಲೇಪವು ಎಳ್ಳಷ್ಟೂ ಇಲ್ಲದೆ ಸ್ವಚ್ಛನಾಗಿಯೇ ಇದ್ದು, ಸ್ವಸ್ಥನಾಗಿ ಸುಖವಾಗಿ ಇರುವನು.

೨೯. ಎಲೈ ಬ್ರಹ್ಮನೆ, ಹೃದಯದಲ್ಲಿರುವ ಪದ್ಮಪತ್ರದಿಂದ ಪ್ರಾಣವು ಉದಯವಾಗಿ, ಹನ್ನೆರಡು ಅಂಗುಲ ನಡೆದು, ಹೊರಗೆ ಅಸ್ತವಾಗುವುದು:

೩೦. ಎಲೈ ಮಹಾಮುನಿಯೆ, ಹೊರಗೆ ಹನ್ನೆರಡು ಅಂಗುಲ ದೂರದಲ್ಲಿ ಅಪಾನವು ಉದಯವಾಗಿ, ಹೃದಯದಲ್ಲಿರುವ ಕಮಲದ ಮಧ್ಯದಲ್ಲಿ ಲಯವಾಗುವುದು.

ಪ್ರಾಣೋ ಯತ್ರ ಸಮಾಯಾತಿ ದ್ವಾದಶಾಂತೇ ನಭಃಪದೇ |
ಪದಾಸ್ತಸ್ಮಾದಪಾನೋಽಯಂ ಸ್ವಾದೇತಿ ಸಮನಂತರಂ || ೩೧ ||

ಬಾಹ್ಯಾಕಾಶೋನ್ಮುಖಃ ಪ್ರಾಣೋ ವಹತ್ಯಗ್ನಿಶಿಖಾ ಯಥಾ |
ಹೃದಾಕಾಶೋನ್ಮುಖೋಽಪಾನೋ ನಿಮ್ನೇ ವಹತಿವಾರಿವತ್ || ೩೨ ||

ಅಪಾನಶ್ಚಂದ್ರಮಾ ದೇಹಮಾಪ್ಯಾಯಯತಿ ಬಾಹ್ಯತಃ |
ಪ್ರಾಣಃ ಸೂರ್ಯೋಽಗ್ನಿರಥವಾ ಪಚತ್ಯಂತರಿದಂ ವಪುಃ || ೩೩ ||

ಪ್ರಾಣೋ ಹಿ ಹೃದಯಾಕಾಶಂ ತಾಪಯಿತ್ವಾ ಪ್ರತಿಕ್ಷಣಂ |
ಮುಖಾಗ್ರಗಗನಂ ಪಶ್ಚಾತ್ತಾಪಯತ್ಯುತ್ತಮೋ ರವಿಃ || ೩೪ ||

ಅಪಾನೇಂದುರ್ಮುಖಾಗ್ರಂ ತು ಪ್ಲಾವಯಿತ್ವಾ ಹೃದಂಬರಂ |
ಪಶ್ಚಾದಾಪ್ಯಾಯಯತ್ಯೇಷ ನಿಮೇಷಸಮನಂತರಂ || ೩೫ ||

---

೩೧. ಪ್ರಾಣವು ಹನ್ನೆರಡು ಅಂಗುಲದ ದೂರದಲ್ಲಿರುವ ಆಕಾಶದಲ್ಲಿ ಎಲ್ಲಿ ಲಯವಾಗುವದೋ, ಅಲ್ಲಿಯೇ ಆ ಕೂಡಲೇ ಅಪಾನವು ಉದಯವಾಗುವುದು.

೩೨. ಬಾಹ್ಯಾಕಾಶದ ಕಡೆಗೆ ಹೊರಟ ಪ್ರಾಣವು ದೀಪಜ್ವಾಲೆಯಂತೆ ಹೋಗುವುದು. ಹೃದಯಾಕಾಶದ ಕಡೆಗೆ ಹೋಗುವ ಅಪಾನವು ಹಳ್ಳದ ಕಡೆಗೆ ಹರಿಯುವ ನೀರಿನಂತೆ ಧುಮುಕುವದು.

೩೩. ಅಪಾನವು ಚಂದ್ರನು. ಹೊರಗಿನಿಂದ ದೇಹಕ್ಕೆ ಸುಖವನ್ನು ಉಂಟು ಮಾಡುವುದು. ಪ್ರಾಣವು ಸೂರ್ಯನು, ಅಗ್ನಿಯು, ದೇಹದೊಳಗೇ ಇದ್ದು ಎಲ್ಲ ವನ್ನೂ ಪಾಕಮಾಡುವುದು.

೩೪. ಪ್ರಾಣವು ಚೆನ್ನಾಗಿ ಬೆಳಗುವ ಸೂರ್ಯನಾಗಿ, ಕ್ಷಣಕ್ಷಣದಲ್ಲಿಯೂ ಹೃದಯಾಕಾಶವನ್ನು ಚೆನ್ನಾಗಿ ತಪ್ತಮಾಡಿ, ಮುಖದ ಅಗ್ರಭಾಗದಲ್ಲಿರುವ ಆಕಾಶ ವನ್ನು ಅನಂತರ ತಪ್ತಮಾಡುವುದು.

೩೫. ಇನ್ನೊಂದು ಗಳಿಗೆಯೊಳಗಾಗಿ, ಅಪಾನವು ಚಂದ್ರನಾಗಿ ಮುಖಾಗ್ರ ವನ್ನು ಮೊದಲು ತಂಪುಮಾಡಿ ಅನಂತರ ಹೃದಯಾಕಾಶವನ್ನು ತಂಪು ಮಾಡು ವುದು.

ಅಪಾನಶಶಿನೋಂತಸ್ಥಾ ಕಲಾ ಪ್ರಾಣವಿವಸ್ವತಾ |
ಯತ್ರ ಗ್ರಸ್ತಾ ತದಾಸಾದ್ಯ ಪದಂ ಭೂಯೋ ನ ಶೋಚ್ಯತೇ ॥ ೩೬ ॥

ಪ್ರಾಣಾರ್ಕಸ್ಯ ತಥಾಂತಸ್ಥಾ ಯತ್ರಾಪಾನಸಿತಾಂಶುನಾ |
ಗ್ರಸ್ತಾ ತತ್ಪದಮಾಸಾದ್ಯ ನ ಭೂಯೋ ಜನ್ಮಭಾಙ್ನರಃ ॥ ೩೭ ॥

ಪ್ರಾಣ ಏವಾರ್ಕತಾಂ ಯಾತಿ ಸಬಾಹ್ಯಾಭ್ಯಂತರೇಂಬರೇ |
ಆಪ್ಯಾಯನಕರೀಂ ಪಶ್ಚಾಚ್ಛಶಿತಾಮಧಿತಿಷ್ಠತಿ ॥ ೩೮ ॥

ಪ್ರಾಣ ಏವೇಂದುತಾಂ ತ್ಯಕ್ತ್ವಾ ಶರೀರಾಪ್ಯಾಯಕಾರಿಣೀಂ |
ಕ್ಷಣಾದಾಯಾತಿ ಸೂರ್ಯತ್ವಂ ಸಂಶೋಷಣಕರಂ ಪದಂ ॥ ೩೯ ॥

---

೩೬. ಅಪಾನ ಚಂದ್ರನ ಅಂತಸ್ಥವಾದ ಕಳೆಯನ್ನು ಪ್ರಾಣಸೂರ್ಯನು ಎಲ್ಲಿ ಗ್ರಾಸಮಾಡುವನೋ ಆ ಸ್ಥಾನವನ್ನು ಸೇರಿದವನಿಗೆ ಶೋಕವು ಕಳೆದು ಹೋಗುವುದು.

(ಕಲಾ–ಚರಮೋಭಾಗಃ | ಯತ್ರ ಯಸ್ಮಿನ್ ಹಾರ್ದೇ ಬ್ರಹ್ಮಣಿ ಸ್ಥಿತ್ವಾ ಗ್ರಸ್ತಾ ತದ್ಬ್ರಹ್ಮಾಸಾದ್ಯ—ತಾ. ಪ್ರ.)

೩೭. ಪ್ರಾಣಸೂರ್ಯನಲ್ಲಿರುವ ಕಳೆಯನ್ನು ಅಪಾನ ಚಂದ್ರನು ಎಲ್ಲಿ ಗ್ರಾಸ ಮಾಡುವನೋ ಆ ಪದವನ್ನು ಹೊಂದಿದವನು ಮತ್ತೆ ಜನ್ಮವೆತ್ತುವದಿಲ್ಲ.

(ಯತ್ರ ಯಸ್ಮಿನ್ ದ್ವಾದಶಾಂಗುಲ ಪರ್ಯಂತ ಬಾಹ್ಯಾಕಾಶೋಪಲಕ್ಷಿತೇ ಬ್ರಹ್ಮಣಿ ವಿದ್ಯಮಾನೇನ ಅಪಾನೇನ ಗ್ರಸ್ತಾ ತದ್ಬ್ರಹ್ಮ ಪದಮಾಸಾದ್ಯ—ತಾ. ಪ್ರ.)

೩೮. ಪ್ರಾಣವೇ ಬಾಹ್ಯಾಂಭ್ಯಂತರ ಆಕಾಶಗಳಲ್ಲಿ ಸೂರ್ಯನಾಗಿದ್ದು ಅನಂತರ ತಾನೇ ಆಪ್ಯಾಯನಕರನಾದ ಚಂದ್ರನಾಗುವುದು.

೩೯. ಅದೇ ಪ್ರಾಣವೇ ಮತ್ತೆ ಶರೀರಕ್ಕೆ ಅಪ್ಯಾಯನಕರವಾದ ಚಂದ್ರತ್ವವನ್ನು ಬಿಟ್ಟು ಉತ್ತರಕ್ಷಣದಲ್ಲಿಯೇ ಸಂಶೋಷಣಕರವಾದ ಸೂರ್ಯತ್ವವನ್ನು ಹೊಂದುವುದು.

ಅರ್ಕತಾಂ ಸಂಪರಿತ್ಯಜ್ಯ ನ ಯಾವಚ್ಚಂದ್ರತಾಂ ಗತಃ |
ಪ್ರಾಣಸ್ತಾವದ್ವಿಚಾರ್ಯಂತೇಽದೇಶಕಾಲೇ ನ ಶೋಚ್ಯತೇ || ೪೦ ||

ಹೃದಿ ಚಂದ್ರಾರ್ಕಯೋರ್ಜ್ಞಾತ್ವಾ ನಿತ್ಯಮಸ್ತಮಯೋದಯಂ |
ಆತ್ಮನೋ ನಿಜಮಾಧಾರಂ ನ ಭೂಯೋ ಜಾಯತೇ ಮನಃ || ೪೧ ||

ಸೋದಯಾಸ್ತಮಯಂ ಸೇಂದುಂ ಸರಶ್ಮಿಂ ಸಗಮಾಗಮಂ |
ಹೃದಯೇ ಭಾಸ್ಕರ ದೇವಂ ಯಃ ಪಶ್ಯತಿ ಸ ಪಶ್ಯತಿ || ೪೨ ||

---

೪೦. ಪ್ರಾಣವು ಸೂರ್ಯತ್ವವನ್ನು ಬಿಟ್ಟು ಇನ್ನೂ ಚಂದ್ರನಾಗದಿರುವ, ದೇಶ ಕಾಲಗಳಿಲ್ಲದ ಆ ಪ್ರಾಣಸಂಧಿಯಲ್ಲಿ (ಆತ್ಮನು ನಿರ್ದೇಹನು, ನಿಷ್ಕ್ರಿಯನು, ನಿರ್ಮನನು, ಮುಂತಾದ ಆತ್ಮಸ್ವಭಾವಗಳನ್ನು) ವಿಚಾರ ಮಾಡಿ ತಿಳಿಯುವುದು ಸಾಧ್ಯವು. ಹಾಗೆ ವಿಚಾರ ಮಾಡಿದವನು ವೀತಶೋಕನಾಗುವನು.

(ತತ್ರ ಬಹಿಃ ದ್ವಾದಶಾಂಗುಲ ಪರ್ಯಂತೇ ಪ್ರಸೃತಃ ಪ್ರಾಣಃ ಯಾವದರ್ಕತಾಂ ಔಷ್ಣ್ಯಂ ಪರಿತ್ಯಜ್ಯ ಚಂದ್ರತಾಂ ಶೈತ್ಯಂ ನ ಗತಃ ಸಾ ಪ್ರಾಣಾಪಾನಯೋಃ ಸಂಧ್ಯವಸ್ಥಾ | ತಸ್ಯಾಂ ದೇಹಾದ್ಬಹಿಃ ಪ್ರಾಣಲಯಾದಾತ್ಮನೋ ನಿರ್ದೇಹತ್ವ ನಿಷ್ಕ್ರಿಯತ್ವ ನಿರ್ಮನಸ್ತ್ವಾದಯೋ ವಾಸ್ತವ ಸ್ವಭಾವಾಃ ಸಂಭಾವಯಿತುಂ ಶಕ್ಯತ್ವಾತ್ ವಿಚಾರ್ಯಂತೇ | ತತ್ರ ಬಾಹ್ಯ ಕುಂಭಕೇ ದೇಹಾದಿ ದೇಶಪರಿಚ್ಛೇದಾಭಾವಾತ್ ಚಂದ್ರಸೂರ್ಯಾತ್ಮಕ ಪ್ರಾಣಾಪಾನ ಕ್ರಿಯಾ ಪ್ರಯುಕ್ತ ಆಯುಃಕಾಲ ಪರಿಚ್ಛೇದಾಭಾವಾಚ್ಚ ಅದೇಶಕಾಲೇ ಸ್ವಾತ್ಮನಿ ಪ್ರತಿಷ್ಠಿತೇನ ಯೋಗಿನಾ ನ ಶೋಚ್ಯತೇ— ತಾ. ಪ್ರ.)

೪೧. ಹೃದಯದಲ್ಲಿ ನಿತ್ಯವೂ ಆಗುತ್ತಿರುವ ಸೂರ್ಯಚಂದ್ರರ ಅಸ್ತೋದಯಗಳನ್ನೂ, ಆತ್ಮನ ಆಧಾರವನ್ನೂ ನೋಡಿದವನಿಗೆ ಮತ್ತೆ ಮನಸ್ಸಿನ (ಅರ್ಥಾತ್) ಜನ್ಮವು ಆಗುವದಿಲ್ಲ.

(ಇದೇ ಸರ್ಗದ ೩೫ನೆಯ ಶ್ಲೋಕದಿಂದ ಮುಂದೆ ನೋಡಿ.)

೪೨. ಉದಯಾಸ್ತಮಯಗಳಿಂದ ಕೂಡಿದ ಚಂದ್ರನನ್ನೂ, ಅವನ ರಶ್ಮಿಗಳನ್ನೂ, ಗಮನ ಆಗಮನಗಳನ್ನುಳ್ಳ ಸೂರ್ಯನನ್ನೂ ಹೃದಯದಲ್ಲಿ ಯಾವನು ಕಾಣುವನೋ ಅವನು ಆತ್ಮವನ್ನು ಕಾಣುವನು.

ನ ಕ್ಷೀಣಂ ನಾಪರಿಕ್ಷೀಣಂ ಬಹಿಷ್ಠಂ ಸಿದ್ಧಯೇ ತಮಃ |
ಹಾರ್ದಂ ತು ಕ್ಷಪಯೇದ್ಧ್ವಾಂತಂ ಯತ್ ಕ್ಷಯೇ ಸಿದ್ಧಿರುತ್ತಮಾ || ೪೩ ||

ಬಾಹ್ಯೇ ತಮಸಿ ಸಂಕ್ಷೀಣೋ ಲೋಕಾಲೋಕಃ ಪ್ರಜಾಯತೇ |
ಹಾರ್ದೇ ತು ತಮಸಿ ಕ್ಷೀಣೇ ಸ್ವಾಲೋಕೋ ಜಾಯತೇ ಮುನೇ || ೪೪ ||

ಹಾರ್ದಾಂಧಕಾರಕ್ಷಯದಂ ಪರಿಜ್ಞಾತಂ ವಿಮುಕ್ತಿದಂ |
ಸೋದಯಾಸ್ತಮಯಂ ಯತ್ನಾತ್ಪ್ರಾಣಾರ್ಕಮವಲೋಕಯೇತ್ || ೪೫ ||

ಅಪಾನೇಂದುಃ ಪ್ರಯಾತ್ಯಸ್ತಂ ಯತ್ರ ಹೃತ್ಪದ್ಮಕೋಟರೇ |
ಪದಾತ್ತಸ್ಮಾದುದೇತ್ಯಂತಃ ಪ್ರಾಣಾರ್ಕೋ ಬಹಿರುನ್ಮುಖಃ || ೪೬ ||

ಅಪಾನೇಽಸ್ತಂಗತೇ ಪ್ರಾಣಃ ಸಮುದೇತಿ ಹೃದಂಬುಜಾತ್ |
ಛಾಯಾಯಾಂ ಗಲಿತಾಂಗಾಯಾಂ ತತ್ರೈವಾಶು ಯಥಾತಪಃ || ೪೭ ||

---

೪೩. ಕ್ಷೀಣವಲ್ಲ, ಅಕ್ಷೀಣವಲ್ಲ. ಇಂತಹ ಬಾಹ್ಯ ತಮಸ್ಸು ಹೃದಯದಲ್ಲಿ ಇರುವ ತಮಸ್ಸನ್ನು ನಾಶಗೊಳಿಸುವದು. ಹಾಗೆ ಆದಮೇಲೆ ಉತ್ತಮವಾದ ಸಿದ್ಧಿಯು ಲಭಿಸುವುದು.

೪೪. ಎಲೈ ಮುನಿಯೆ, ಹೊರಗಿರುವ ಬಾಹ್ಯ ತಮಸ್ಸು ಕ್ಷೀಣವಾದರೆ ಲೋಕದಲ್ಲಿರುವ ಪದಾರ್ಥಗಳೆಲ್ಲವೂ ಕಾಣಿಸುವವು. ಹೃದಯದಲ್ಲಿರುವ ತಮಸ್ಸು ಕ್ಷೀಣವಾದರೆ ಆತ್ಮದರ್ಶನವಾಗುವುದು.

೪೫. ಹೃದಯದಲ್ಲಿರುವ ಅಂಧಕಾರವನ್ನು ಕ್ಷಯಮಾಡುವದಾಗಿಯೂ, ತಿಳಿದರೆ ಮುಕ್ತಿಯನ್ನೂ ಕೊಡುವದಾಗಿಯೂ ಇರುವ ಪ್ರಾಣ ಸೂರ್ಯನ ಉದಯಾಸ್ತಮಯಗಳನ್ನು ಪ್ರಯತ್ನಪಟ್ಟು ನೋಡಬೇಕು.

೪೬. ಹೃದಯ ಕಮಲದಲ್ಲಿ ಎಲ್ಲಿ ಅಪಾನಚಂದ್ರನು ಅಸ್ತನಾಗುವನೋ ಅಲ್ಲಿಯೇ ಪ್ರಾಣಸೂರ್ಯನು ಬಹಿರ್ಮುಖನಾಗಿ ಹುಟ್ಟುವನು.

೪೭. ನೆರಳು ಕಳೆದುಹೋಗಲು ಅಲ್ಲಿಯೇ ಬಿಸಿಲು ಕಾಣಿಸಿಕೊಳ್ಳುವಂತೆ, ಅಪಾನವು ಅಸ್ತಂಗತವಾಗುವಲ್ಲಿಯೇ ಪ್ರಾಣವು ಹೃದಯ ಕಮಲದಲ್ಲಿಯೇ ಹುಟ್ಟುವುದು.

ಪ್ರಾಣೇ ತ್ವಸ್ತಂಗತೇ ಬಾಹ್ಯಾದಪಾನಃ ಪ್ರೋದಿತಃ ಕ್ಷಣಾತ್ |
ಆತಪೇ ಪರಿತೋ ನಷ್ಟೇ ಛಾಯೇವಾನುಪದಂ ತಥಾ || ೪೮ ||

ಪ್ರಾಣಜನ್ಮಾವನೌ ನಷ್ಟಮಪಾನಂ ವಿದ್ಧಿ ಸನ್ಮತೇ |
ಅಪಾನಜನ್ಮಭೂಮೌ ಚ ಪ್ರಾಣಂ ನಷ್ಟಮವೇಹಿ ಹಿ || ೪೯ ||

ಅಸ್ತಂಗತವತಿ ಪ್ರಾಣೇ ತ್ವಪಾನೇಭ್ಯುದಯೋನ್ಮುಖೇ |
ಬಹಿಃ ಕುಂಭಕಮಾಲಂಬ್ಯ ಚಿರಂ ಭೂಯೋ ನ ಶೋಚ್ಯತೇ || ೫೦ ||

ಅಪಾನೇಸ್ತಂಗತೇ ಪ್ರಾಣೇ ಕಿಂಚಿದಭ್ಯುದಯೋನ್ಮುಖೇ |
ಅಂತಃ ಕುಂಭಕಮಾಲಂಬ್ಯ ಚಿರಂ ಭೂಯೋ ನ ಶೋಚ್ಯತೇ || ೫೧ ||

ಪ್ರಾಣರೇಚಕಮಾಲಂಬ್ಯ ಅಪಾನಾದ್ದೂರಕೋಟಿಗಂ |
ಸ್ವಚ್ಛಂ ಕುಂಭಕಮಭ್ಯಸ್ಯ ನ ಭೂಯಃ ಪರಿತಪ್ಯತೇ || ೫೨ ||

---

೪೮. ಪ್ರಾಣವು ಅಸ್ತಂಗತವಾಗಲು ಹೊರಗಿನಿಂದ, ಉತ್ತರಕ್ಷಣದಲ್ಲಿಯೇ, ಬಿಸಿಲು ನಷ್ಟವಾಗಲು ಅದರಹಿಂದೆಯೇ ಕಾಣಿಸಿಕೊಳ್ಳುವ ನೆರಳಿನಂತೆ ಅಪಾನವು ಉದಯವಾಗುವದು.

೪೯. ಪ್ರಾಣವು ಉದಯವಾಗುವ ಸ್ಥಲದಲ್ಲಿಯೇ ಅಪಾನವು ನಷ್ಟವಾಗುವದು ಎಂದು ತಿಳಿ. ಎಲೈ ಸನ್ಮತಿಯೇ, ಅಪಾನವು ಉದಯವಾಗುವ ಸ್ಥಲದಲ್ಲಿ ಪ್ರಾಣವು ನಷ್ಟವಾಗುವುದೆಂದು ತಿಳಿ.

೫೦. ಪ್ರಾಣವು ಅಸ್ತಂಗತವಾಗಿ, ಇನ್ನೂ ಅಪಾನವು ಉದಯವಾಗಲಿರುವ ಸಂಧಿಯಲ್ಲಿ ಇರುವ ಬಾಹ್ಯ ಕುಂಭವನ್ನು ಅವಲಂಬಿಸಿದವನು (ಆಶ್ರಯಿಸಿದವನು) ಮತ್ತೆ ಎಂದಿಗೂ ಶೋಕಿಸುವುದಿಲ್ಲ.

೫೧. ಅಪಾನವು ಅಸ್ತಂಗತವಾಗಿ ಪ್ರಾಣವು ಇನ್ನೂ ಉದಯವಾಗುತ್ತಿರುವ ಸಂಧಿಯಲ್ಲಿ ಇರುವ ಅಂತಃಕುಂಭಕವನ್ನು ಆಶ್ರಯಿಸಿದವನು ಮತ್ತೆ ಶೋಕವನ್ನು ಹೊಂದುವುದಿಲ್ಲ.

೫೨. ಅಪಾನದಿಂದ ದೂರವಾಗಿರುವ ಪ್ರಾಣರೇಚಕವನ್ನು ಹಿಡಿದು ನಿರ್ಮಲ

ಅಪಾನೇ ರೇಚಕಾಧಾರಂ ಪ್ರಾಣಪೂರಾಂತರ ಸ್ಥಿತಂ |
ಸ್ವಸಂಸ್ಥಂ ಪೂರಕಂ ದೃಷ್ಟ್ವಾ ನ ಭೂಯೋ ಜಾಯತೇ ನರಃ || ೩೩ ||

ಪ್ರಾಣಾಪಾನಾವುಭಾವಂತರ್ಯತ್ರೈತೌ ವಿಲಯಂ ಗತೌ |
ತದಾಲಂಬ್ಯ ಪದಂ ಶಾಂತಮಾತ್ಮಾನಂ ನಾನುತಪ್ಯತೇ || ೩೪ ||

ಪ್ರಾಣಭಕ್ಷೋನ್ಮುಖೇಪಾನೇ ದೇಶಂ ಕಾಲಂ ಚ ನಿಷ್ಕಲಂ |
ವಿಚಾರ್ಯ ಬಹಿರಂತರ್ವಾ ನ ಭೂಯಃ ಪರಿಶೋಚ್ಯತೇ || ೩೫ ||

ಅಪಾನಭಕ್ಷಣಪರೇ ಪ್ರಾಣೇ ಹೃದಿ ತಥಾ ಬಹಿಃ |
ದೇಶಂ ಕಾಲಂ ಚ ಸಂಪ್ರೇಕ್ಷ್ಯ ನ ಭೂಯೋ ಜಾಯತೇ ಮನಃ || ೩೬ ||

ವಾದ ಕುಂಭಕವನ್ನು ಅಭ್ಯಾಸಮಾಡಿ ಸಾಧಿಸಿದವನು ಮತ್ತೆ ಎಂದಿಗೂ ಪರಿತಾಪ ಪಡುವುದಿಲ್ಲ.

(ನಿಃಶ್ಶೇಷ ವಾಯುರೇಚನಾತ್ ಸ್ವಚ್ಛಂ—ತಾ. ಪ್ರ.)

೩೩. ಅಪಾನವು ನಡೆಯುತ್ತಿರಲಾಗಿ (ಮೂಗಿನ ಮೂಲಕವಾಗಿ ಒಳಕ್ಕೆ ಹೋಗುತ್ತಿರುವಾಗ ಬಾಹ್ಯ) ರೇಚಕಕ್ಕೆ ಆಧಾರವಾಗಿರುವ ಪ್ರಾಣಪೂರಣವನ್ನೂ ಹಾಗೆಯೇ ಒಳಗಿರುವ ಪೂರಕವನ್ನೂ ಕಂಡವನು ಮತ್ತೆ ಜನ್ಮವೆತ್ತುವದಿಲ್ಲ.

೩೪. ಪ್ರಾಣಾಪಾನಗಳೆರಡೂ ಎಲ್ಲಿ ವಿಲಯವನ್ನು ಹೊಂದುತ್ತವೆಯೋ ಆ ಸ್ಥಾನವೇ ಶಾಂತವಾದ ಆತ್ಮಪದವು. ಅದನ್ನು ಆಶ್ರಯಿಸಿದವನಿಗೆ ಅನುತಾಪ ವಿರುವದಿಲ್ಲ.

೩೫. ಅಪಾನವು ಪ್ರಾಣಭಕ್ಷಣ ಮಾಡುವದಕ್ಕೆ ಸಿದ್ಧವಾಗಿರುವ ಸಂಧಿಯಲ್ಲಿ ದೇಶಕಾಲಗಳ ಸ್ವರೂಪವೇನು ? ನಿಷ್ಕಲವಾದ ಚಿತ್ತಿನ ಸ್ವರೂಪವೇನು ? ಎಂಬು ದನ್ನು ಹೊರಗಾಗಲಿ ಒಳಗಾಗಲಿ ವಿಚಾರಮಾಡಿ ನೋಡಿದವನು ಮತ್ತೆ ಶೋಕಕ್ಕೆ ಗುರಿಯಾಗುವುದಿಲ್ಲ.

೩೬. ಒಳಗೆ ಹೃದಯದಲ್ಲಿಯಾಗಲಿ ಅಥವಾ ಹೊರಗೇ ಆಗಲೀ, ಪ್ರಾಣವು ಅಪಾನವನ್ನು ಭಕ್ಷಿಸುತ್ತಿರುವಾಗ ದೇಶಕಾಲಗಳನ್ನು ಕುರಿತು ವಿಚಾರ ಮಾಡಿ ನೋಡಿದ ಮನಸ್ಸು ಮತ್ತೆ ಹುಟ್ಟುವುದಿಲ್ಲ.

(ಹಿಂದೆ ೪ಗನೆಯ ಶ್ಲೋಕದಲ್ಲಿ ಹೇಳಿರುವುದನ್ನು ಇಲ್ಲಿ ವಿವರವಾಗಿ ಹೇಳಿದೆ.)

ಯತ್ರ ಪ್ರಾಣೋ ಹ್ಯಪಾನೇನ ಪ್ರಾಣೇನಾಪಾನ ಏವ ಚ |
ನಿಗೀರ್ಣೌ ಬಹಿರಂತಶ್ಚ ದೇಶಕಾಲೌ ಚ ಪಶ್ಯ ತೌ　　|| ೫೭ ||

ಕ್ಷಣಮಸ್ತಂಗತಪ್ರಾಣಮಪಾನೋದಯವರ್ಜಿತಂ |
ಅಯತ್ನಸಿದ್ಧಬಾಹ್ಯಸ್ಥಂ ಕುಂಭಕಂ ತತ್ಪದಂ ವಿದುಃ　　|| ೫೮ ||

ಅಯತ್ನಸಿದ್ಧೋ ಹ್ಯಂತಸ್ಥಕುಂಭಕಃ ಪರಮಂ ಪದಂ　　|| ೫೯ ||

ಏತತ್ತದಾತ್ಮನೋ ರೂಪಂ ಶುದ್ಧೈಷಾ ಪರಮೈವ ಚಿತ್ |
ಏತತ್ತತ್ತತ್ಸದಾಭಾಸಮೇತತ್ಪ್ರಾಪ್ಯ ನ ಶೋಚ್ಯತೇ　　|| ೬೦ ||

ಪುಷ್ಪಸ್ಯಾಂತರಿವಾಮೋದಃ ಪ್ರಾಣಸ್ಯಾಂತರವಸ್ಥಿತಂ |
ನ ಸ ಪ್ರಾಣಂ ನ ವಾಪಾನಂ ಚಿದಾತ್ಮಾನಮುಪಾಸ್ಮಹೇ　　|| ೬೧ ||

---

೫೭. ಎಲ್ಲಿ ಪ್ರಾಣವನ್ನು ಅಪಾನವು ತಿನ್ನುವುದೋ ಎಲ್ಲಿ ಪ್ರಾಣವು ಅಪಾನವನ್ನು ತಿನ್ನುವುದೋ ಅದು ಹೊರಗಾಗಲಿ, ಒಳಗಾಗಲಿ, ಅಲ್ಲಿ ದೇಶಕಾಲಗಳನ್ನು ನೋಡು.

(ದೇಶಕಾಲೌ ಪ್ರಾಣಾಪಾನಾಭ್ಯಾಂ ಸಹೈವನಿ ಗೀರ್ಣೌ ಇತಿ ಪಶ್ಯ ಇತ್ಯರ್ಥಃ —ತಾ. ಪ್ರ.)

೫೮. ಪ್ರಾಣವು ಅಸ್ತಂಗತವಾದ ಉತ್ತರಕ್ಷಣದಲ್ಲಿ, ಇನ್ನೂ ಅಪಾನವು ಉದಯವಾಗದಿರುವಾಗ, ಯಾವ ಯತ್ನವೂ ಇಲ್ಲದೆ ಸಿದ್ಧವಾದ ಬಾಹ್ಯ ಕುಂಭಕವನ್ನು ತತ್ಪದವೆಂದು ತಿಳಿಯುವರು.

೫೯. ಅಯತ್ನದಿಂದ ಸಿದ್ಧವಾಗುವ ಅಂತಃಕುಂಭಕವೇ ಪರಮ ಪದವು.

೬೦. ಇದೆಯೇ ಆತ್ಮನ ರೂಪವು. ಇದೇ ಶುದ್ಧವೂ ಪರಮವೂ ಆದ ಚಿತ್ತು. ಇದೆಯೇ ತತ್ ಎಂಬ ಪದದಿಂದ ವ್ಯವಹೃತವಾಗುವ ಸದಾ ಪ್ರಕಾಶವಾಗಿರುವ ಆತ್ಮಪದವು. ಇದನ್ನು ಹೊಂದಿದರೆ ಶೋಕವು ಅಡಗುವುದು.

೬೧. ಹೂವಿನ ಹೊಟ್ಟೆಯಲ್ಲಿರುವ ಪರಿಮಳದಂತೆ, ಪ್ರಾಣಗರ್ಭದಲ್ಲಿ ಅಡಗಿ

ಜಲಸ್ಯಾಂತರಿವಾಸ್ವಾದಮಪಾನಸ್ಯಾಂತರಸ್ಥಿತಂ |
ನ ಸ ಪ್ರಾಣಂ ನ ವಾಪ್ರಾಣಂ ಚಿದಾತ್ಮಾನಮುಪಾಸ್ಮಹೇ || ೬೨ ||

ಪ್ರಾಣಕ್ಷಯಸ್ಯೋಪಾಂತಸ್ಥಮಪಾನಕ್ಷಯ ಕೋಟಿಗಂ |
ಅಪಾನಪ್ರಾಣಯೋರ್ಮಧ್ಯಂ ಚಿದಾತ್ಮಾನಮುಪಾಸ್ಮಹೇ || ೬೩ ||

ಪ್ರಾಣಸ್ಯ ಪ್ರಾಣನಂ ಪ್ರೋಚ್ಚೈಃ ಪರಂ ಜೀವಸ್ಯ ಜೀವನಂ |
ದೇಹಸ್ಯ ಧಾರಣಂ ಧುರ್ಯಂ ಚಿದಾತ್ಮಾನಮುಪಾಸ್ಮಹೇ || ೬೪ ||

ಮಾನಸೋ ಮನನಂ ಸತ್ಯಂ ಬುದ್ಧೇರೇಕಾವಬೋಧನಂ |
ಅಹಂಕೃತೇರಹಂಕಾರಂ ಚಿದಾತ್ಮಾನಮುಪಾಸ್ಮಹೇ || ೬೫ ||

ುವ ಪ್ರಾಣವೂ ಅಲ್ಲದ, ಅಪಾನವೂ ಅಲ್ಲದ ಚಿದಾತ್ಮನನ್ನು ಉಪಾಸನ ಮಾಡುವೆನು.

೬೨. ಜಲದಲ್ಲಿ ಅಡಕವಾಗಿರುವ ರುಚಿಯಂತೆ, ಅಪಾನ ಗರ್ಭದಲ್ಲಿ ಅಡಗಿ ುವ ಪ್ರಾಣ ಸಹಿತವೂ ಅಲ್ಲದೆ ಅಪ್ರಾಣವೂ ಅಲ್ಲದೆ ಇರುವ ಚಿದಾತ್ಮನನ್ನು ಉಪಾಸನ ಮಾಡುವೆನು.

(ಸ ಪ್ರಾಣಂ ಸ ಜೀವಂ ಅಪ್ರಾಣಂ ನಿರ್ಜೀವ —ತಾ. ಪ್ರ.)

೬೩. ಪ್ರಾಣಕ್ಷಯದ ಮಗ್ಗುಲಲ್ಲಿಯೇ ಇರುವ, ಅಪಾನಕ್ಷಯದ ಕೊನೆಯಲ್ಲಿ ರುವ, ಅಪಾನ ಪ್ರಾಣಗಳ ಮಧ್ಯದಲ್ಲಿ ಇರುವ ಚಿದಾತ್ಮನನ್ನು ಉಪಾಸನ ಾಡುವೆನು.

೬೪. ಪ್ರಾಣಕ್ಕೆ ಪ್ರಾಣವಾಗಿ, ಜೀವದ ಜೀವನವಾಗಿ, ದೇಹವನ್ನು ಧಾರಣ ಾಡುವ ಭಾರವನ್ನು ವಹಿಸಿರುವ ಚಿದಾತ್ಮನನ್ನು ಉಪಾಸನ ಮಾಡುವೆನು.

೬೫. ಮನಸ್ಸಿನ ಮನನವಾಗಿ, ಸತ್ಯಸ್ವರೂಪವಾಗಿ, ಬುದ್ಧಿಯ ಏಕಾವ ೋಧನವಾಗಿ, ಅಹಂಕಾರವಾಗಿರುವ ಚಿದಾತ್ಮನನ್ನು ಉಪಾಸನ ಮಾಡುವೆನು.

ಯಸ್ಮಿನ್ಸರ್ವಂ ಯತಃ ಸರ್ವಂ ಯತ್ಸರ್ವಂ ಸರ್ವತಶ್ಚ ಯತ್ |
ಯಚ್ಚ ಸರ್ವಮಯಂ ನಿತ್ಯಂ ತಚ್ಚಿತ್ತತ್ತ್ವಮುಪಾಸ್ಮಹೇ ॥ ೬೬ ॥

ಆಲೋಕಾಲೋಕನಂ ಪುಣ್ಯಂ ಸರ್ವಪಾವನಪಾವನಂ |
ನಚ ಭಾವನಮುನ್ಮೂನಂ ತಚ್ಚಿತ್ತತ್ತ್ವಮುಪಾಸ್ಮಹೇ ॥ ೬೭ ॥

(ಅಪಾನೋಸ್ತಂ ಗತೋ ಯತ್ರ ಪ್ರಾಣೋ ನಾಭ್ಯುದಿತ ಕ್ಷಣಂ |
ಕಲಾಕಲಂಕರಹಿತಂ ತಚ್ಚಿತ್ತತ್ತ್ವಮುಪಾಸ್ಮಹೇ) ॥ ೧ ॥

ನಾಪಾನೋಭ್ಯುದಿತೋ ಯತ್ರ ಪ್ರಾಣಶ್ಚಾಂತಮುಪಾಗತಃ |
ನಾಸಾಗ್ರಗಗನಾವರ್ತಂ ತಚ್ಚಿತ್ತತ್ತ್ವಮುಪಾಸ್ಮಹೇ ॥ ೬೮ ॥

---

೬೬. ಯಾವುದರಲ್ಲಿ ಎಲ್ಲವೂ ಇರುವುದೋ, ಯಾವುದರಿಂದ ಎಲ್ಲವೂ ಹುಟ್ಟಿ ಬರುವುದೋ, ಯಾವುದು ತಾನೇ ಎಲ್ಲವೂ ಆಗಿರುವುದೋ, ಎಲ್ಲೆಲ್ಲಿಯೂ ಯಾವುದು ತಾನೇ ಆಗಿರುವುದೋ, ಯಾವುದರಲ್ಲಿ ಎಲ್ಲವೂ ತುಂಬಿರುವುದೋ, ನಿತ್ಯವಾದ ಶಾಶ್ವತವಾದ ಆ ಚಿತ್ ತತ್ವವನ್ನು ಉಪಾಸನ ಮಾಡುವೆನು.

೬೭. ಬೆಳಕುಗಳಿಗೆಲ್ಲ ಬೆಳಕಾಗಿ, ಪುಣ್ಯವಾಗಿ, ಸರ್ವ ಪಾವನ ವಸ್ತುಗಳನ್ನೂ ಪಾವನಗೊಳಿಸುವುದಾಗಿ, ಮನೋಬುದ್ಧಿ–ಆದಿವಿಕಾರಗಳನ್ನೆಲ್ಲ ಆಶ್ರಯವಾದರೂ ತಾನು ವಿಕಾರಕ್ಕೆ ಒಳಗಾಗದಿರುವ ಆ ಚಿತ್ ತತ್ವವನ್ನು ಉಪಾಸನ ಮಾಡುವೆನು.

೧. ಅಪಾನೇಽಸ್ತಂಗತೇ ಯತ್ರ ಪ್ರಾಣೋನಾಭ್ಯುದಿತೇಕ್ಷಣಂ | ಕಲಾಕಲಂಕ ರಹಿತಂತ ಚಿತ್ತತ್ತ್ವಮುಪಾಸ್ಮಹೇ—ಅಪಾನವು ಅಸ್ತವಾಗಿ ಪ್ರಾಣವು ಇನ್ನೂ ಹುಟ್ಟದಿರುವ ಕ್ಷಣದಲ್ಲಿ ಗೋಚರವಾಗುವ ಯಾವ ಕಲಾಕಲಂಕವೂ ಇಲ್ಲದ ಆ ಚಿತ್ ತತ್ತ್ವವನ್ನು ಉಪಾಸನ ಮಾಡುವೆನು.)

೬೮. ಎಲ್ಲಿ ಅಪಾನವು ಇನ್ನೂ ಹುಟ್ಟಿಲ್ಲವೋ, ಎಲ್ಲಿ ಪ್ರಾಣವು ಅಂತವನ್ನು ಕಂಡಿತೋ, ಆ ನಾಸಾಗ್ರ ಗಗನದಲ್ಲಿ ಸುಳಿಗಳಂತೆ ಸುಳಿಯುವ, ಪ್ರಾಣಾಪಾನ ಸಂಧಿ ಸ್ಥಾನದಲ್ಲಿ ತೋರುವ ಆ ಚಿತ್ ತತ್ವವನ್ನು ಉಪಾಸನ ಮಾಡುವೆನು.

ಯತ್ರ ಪ್ರಾಣೋಸ್ತಮಾಯಾತಿ ಯತ್ರಾಪಾನೋಸ್ತಮೇತಿ ಚ |
ಯತ್ರ ದ್ವಾವಪ್ಯನುತ್ಪನ್ನೌ ತಚ್ಚಿತ್ತತ್ತ್ವಮುಪಾಸ್ಮಹೇ ‖ ೬೯ ‖

ಪ್ರಾಣಾಪಾನೋದ್ಭವಸ್ಥಾನೇ ಬಾಹ್ಯಾಭ್ಯಂತರಮಾಸ್ಥಿತೇ |
ಯೇ ದ್ವೇ ಯೋಗಿಪದಾಧಾರಸ್ತಚ್ಚಿತ್ತತ್ತ್ವಮುಪಾಸ್ಮಹೇ ‖ ೭೦ ‖

ಪ್ರಾಣಾಪಾನರಥಾರೂಢಂ ಪ್ರಾಣಾಪಾನಮನಾತತಂ |
ಯಚ್ಛಕ್ತಿರೂಪಂ ಶಕ್ತೀನಾಂ ತಚ್ಚಿತ್ತತ್ತ್ವಮುಪಾಸ್ಮಹೇ ‖ ೭೧ ‖

---

೬೯. ಎಲ್ಲಿ ಪ್ರಾಣಾಪಾನಗಳೆರಡೂ ಅಸ್ತವಾಗುವುವೋ, ಎಲ್ಲಿ ಎರಡೂ ಹುಟ್ಟದೆ ಇರುವವೋ, ಆ ಚಿತ್ ತತ್ತ್ವವನ್ನು ಉಪಾಸನ ಮಾಡುವೆನು.

(ಇದಾನೀಂ ಬಾಹ್ಯಾಂತಃ ಪ್ರದೇಶೋಪಾದಿ ಭೇದಮುಪಹಾಯ, "ಯತಶ್ಚೋದೇತಿ ಸೂರ್ಯೋ | ಅಸ್ತಂತಯತ್ರಚಗಚ್ಛತಿ | ತಂದೇವಾಶ್ಚಕ್ರಿರೇ ಧರ್ಮಂ ಸ ಏವಾದ್ಯ ಸ ಉಶ್ವ ಏತದ್ವೈತತ್" ಇತಿ ಶ್ರುತ್ಯರ್ಥಂ ಮನಸಿಕೃತ್ಯ ಆಹ.)

೭೦. ಪ್ರಾಣಾಪಾನಗಳೆರಡೂ ಹುಟ್ಟುವ ಬಾಹ್ಯಾಂಭ್ಯಂತರಗಳಲ್ಲಿ ಸಂಸ್ಥಿತವಾಗಿರುವ ಯಾವ ಎರಡು ಸ್ಥಾನಗಳುಂಟೋ ಯೋಗಿಜನರಿಗೆಲ್ಲ ಏಕಲಕ್ಷ್ಯವಾಗಿರುವ ಆಧಾರಸ್ಥಾನವು ಯಾವುದೋ ಆ ಚಿತ್ ತತ್ತ್ವವನ್ನು ಉಪಾಸನ ಮಾಡುವೆನು.

೭೧. ಪ್ರಾಣಾಪಾನಗಳೆಂಬ ರಥವನ್ನು ಏರಿ, ಪ್ರಾಣ ಅಪಾನಗಳೆಂಬ ಪರಿಚ್ಛಿನ್ನ ರೂಪವನ್ನು ಹೊಂದಿ, ಇಂದ್ರಿಯಾದಿಗಳಲ್ಲಿರುವ ಶಕ್ತಿಗಳಿಗೆಲ್ಲ ಶಕ್ತಿಯಾಗಿರುವ ಪ್ರಾಣನ ಅಪಾನ ಶಕ್ತಿಯಾಗಿ ಬೆಳಗುವದು ಯಾವುದೋ ಆ ಚಿತ್ ತತ್ತ್ವವನ್ನು ಉಪಾಸನ ಮಾಡುವೆನು.

ಹೃತ್ಪ್ರಾಣಕುಂಭಕಂ ದೇವಂ ಬಹಿಶ್ಚಾಪಾನಕುಂಭಕಂ |
ಪೂರಕಾಂಶವಿಸೃಷ್ಟಂ ಯತ್ತಚ್ಚಿತ್ತತ್ತ್ವಮುಪಾಸ್ಮಹೇ || ೭೨ ||

ಪ್ರಾಣಾಪಾನಪರಾಮರ್ಶಂ ಸತ್ತಾಬೋಧಂ ವಿರೂಪಕಂ |
ಯತ್ಪ್ರಾಪ್ಯಂ ಪ್ರಾಣಮನನಾತ್ತಚ್ಚಿತ್ತತ್ತ್ವಮುಪಾಸ್ಮಹೇ || ೭೩ ||

ಯತ್ಪ್ರಾಣಪವನಸ್ಪಂದೋ ಯತ್ಸ್ಪಂದಾನಂದಕಾರಕಂ |
ಕಾರಣಂ ಕಾರಣಾನಾಂ ಯತ್ತಚ್ಚಿತ್ತತ್ತ್ವಮುಪಾಸ್ಮಹೇ || ೭೪ ||

---

೭೨. ಹೃದಯದಲ್ಲಿ ಪ್ರಾಣಕುಂಭಕವಾಗಿ, ಬಹಿಃ ಅಪಾನ ಕುಂಭಕವಾಗಿರುವ, ಪ್ರಕಾಶ ಸ್ವರೂಪವಾಗಿರುವ, ಪೂರಕ ರೇಚಕ ಸ್ವರೂಪವಾಗಿರುವ ಆ ಚಿತ್ ತತ್ತ್ವವನ್ನು ಉಪಾಸನ ಮಾಡುವೆನು.

೭೩. ಪ್ರಾಣಾಪಾನಗಳೆರಡನ್ನೂ ಹಿಡಿದು ಆಡಿಸುವ, ಸರ್ವಸತ್ತಾ ಸ್ವರೂಪವಾಗಿದ್ದರೂ, ಯಾವ ರೂಪವೂ ಇಲ್ಲದ, ಪ್ರಾಣೋಪಾಸನದ ಫಲವಾಗಿ ಲಭಿಸುವ ಆ ಚಿತ್ ತತ್ತ್ವವನ್ನು ಉಪಾಸನ ಮಾಡುವೆನು.

೭೪. ಪ್ರಾಣವಾಯುವಿನ ವ್ಯಾಪಾರವು ಯಾವುದರಿಂದಲೋ, ಇಂದ್ರಿಯ ವ್ಯಾಪಾರ ಮಾಡಿಸಿ ವಿಷಯಾನಂದಗಳನ್ನು ಕೊಡುವದು ಯಾವದೋ, ಕಾರಣಗಳಿಗೆಲ್ಲ ಕಾರಣವಾದ ಆ ಚಿತ್ ತತ್ತ್ವವನ್ನು ಉಪಾಸನ ಮಾಡುವೆನು.

(ಇಂದ್ರಿಯಾಣಾಂ ವಿಷಯ ಪ್ರದೇಶೋಪಸರ್ಪಣಂ ಸ್ಪಂದಃ ತದುಪಭೋಗಶ್ಚ ಆನಂದಃ ತಯೋಃ ಕಾರಣಂ--ತಾ. ಪ್ರ.)

ಯದಖಿಲಕಲನಾಕಲಂಕಹೀನಂ
ಪರಿವಲಿತಂ ಚ ಸದಾ ಕಲಾಗಣೇನ ।
ಸ್ವನುಭವವಿಭವಂ ಪದಂ ತದಗ್ರ್ಯಂ
ಸಕಲಸುರಪ್ರಣತಂ ಪರಂ ಪ್ರಪದ್ಯೆ ॥ ೭೫ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕಿಯೇ ದೇವದೂತೋಕ್ತೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ ಭುಶುಂಡೋಪಾಖ್ಯಾನೇ "ಸಮಾಧಿವರ್ಣನಂ" ನಾಮ ಪಂಚವಿಂಶಃ ಸರ್ಗಃ

---

೭೫. ಯಾವದು ವಿಚಾರಮಾಡಿ ನೋಡಿದರೆ ಯಾವದೊಂದು ಕಲನಾ ಕಲಂಕವೂ ಇಲ್ಲದಿದ್ದರೂ, ಜೀವನಿಗೆ ಉಪಾಧಿಯಾದ ಪ್ರಾಣಾದಿ ಷೋಡಶ ಕಲಾ ಗಣದಿಂದ ಪರಿವೇಷ್ಟಿತವಾಗಿರುವದೋ, ಶುದ್ಧವಾದ ಅನುಭವವೆಂಬ ವೈಭವವು ಯಾವದರಲ್ಲಿ ಉಂಟೋ, ಸಕಲ ಸುರಗಣಗಳೂ ಸೇವಿಸುವ ಆ ಪರಮ ಪದವನ್ನು ಉಪಾಸನ ಮಾಡುವೆನು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ ನಿರ್ವಾಣಪ್ರಕರಣದ ಭುಶುಂಡೋಪಾಖ್ಯಾನದಲ್ಲಿ "ಸಮಾಧಿವರ್ಣನ" ಎಂಬ ಇಪ್ಪತ್ತನಾಲ್ಕನೆಯ ಸರ್ಗವು

ಷಟ್ತ್ರಿಂಶಃ ಸರ್ಗಃ

ಭುಶುಂಡ ಉವಾಚ —

ಏಷಾಹಿ ಚಿತ್ತವಿಶ್ರಾಂತಿರ್ಮಯಾ ಪ್ರಾಣಸಮಾಧಿನಾ |
ಕ್ರಮೇಣಾನೇನ ಸಂಪ್ರಾಪ್ತಾ ಸ್ವಯಮಾತ್ಮನಿ ನಿರ್ಮಲೇ || ೧ ||

ಏತಾಂ ದೃಷ್ಟಿಮವಷ್ಟಭ್ಯ ಸಂಸ್ಥಿತೋಽಸ್ಮಿ ಮಹಾಮುನೇ |
ನ ಚಲಾಮಿ ನಿಮೇಷಾಂಶಮಪಿ ಮೇರುವಿಚಾಲತಃ || ೨ ||

ಗಚ್ಛತಸ್ತಿಷ್ಠತೋ ವಾಪಿ ಜಾಗ್ರತಃ ಸ್ವಪತೋಽಪಿ ವಾ |
ಸ್ವಪ್ನೇಽಪಿ ನ ಚಲತ್ಯೇಷ ಸುಸಮಾಧಿರ್ಮಮಾತ್ಮನಿ || ೩ ||

ನಿತ್ಯಾನಿತಾಸು ಲೋಲಾಸು ಜಗತ್ಸ್ಥಿತಿಷು ಸುಸ್ಥಿತಃ |
ಅಂತರ್ಮುಖೋಽಸ್ಮಿ ತಿಷ್ಠಾಮಿ ಸ್ವಕಾಮೇನಾತ್ಮನಾತ್ಮನಿ || ೪ ||

ಇಪ್ಪತ್ತಾರನೆಯ ಸರ್ಗ

೧. ಭುಶುಂಡನು ಹೇಳಿದನು—ನಾನು ಪ್ರಾಣ ಸಮಾಧಿಯನ್ನು ಆಶ್ರಯಿಸಿ ಕ್ರಮಕ್ರಮವಾಗಿ, ನಿರ್ಮಲನಾದ ಆತ್ಮನಲ್ಲಿ ಪಡೆದ ಚಿತ್ತ ವಿಶ್ರಾಂತಿಯು ಇದು.

೨. ಎಲೈ ಮಹಾಮುನಿಯೇ, ನಾನು ಈ ಮಾರ್ಗವನ್ನು ಹಿಡಿದು ಸುಖವಾಗಿರುವೆನು. ಮೇರುವು ಅಲ್ಲಾಡಿದರೂ ನಾನು ಇಷ್ಟಾದರೂ ಅಲ್ಲಾಡದೆ ಇರುವೆನು.

೩. ನಾನು ನಡೆಯುತ್ತಿರಲಿ, ನಿಂತಿರಲಿ, ಎದ್ದಿರಲಿ, ಮಲಗಿರಲಿ, ಕನಸು ಕಾಣುತ್ತಿದ್ದರೂ ಸಹ, ಈ ನನ್ನ ಆತ್ಮಸಮಾಧಿಯು ಚಲಿಸುವುದಿಲ್ಲ.

೪. ನಿತ್ಯಾನಿತ್ಯಗಳಾಗಿ ಚಂಚಲಗಳಾಗಿರುವ ಜಗತ್ತಿನ ಸುಖದುಃಖಗಳಲ್ಲಿ ನಿರ್ವಿಕಾರನಾಗಿ ನಾನು ಸ್ವಸ್ಥನಾಗಿರುವೆನು. ಅಂತರ್ಮುಖನಾಗಿ, ನನ್ನ ಸಂಕಲ್ಪದಿಂದ, ಸ್ವಯಂ ನನ್ನಲ್ಲಿಯೇ ಸ್ಥಿರನಾಗಿರುವೆನು.

ಅಪಿ ಸಂರುಧ್ಯತೇ ವಾಯುರಪಿ ವಾ ಸಲಿಲಂ ಗತೇ |
ನೈತಸ್ಮಾತ್ಸುಸಮಾಧಾನಾದ್ವಿರುದ್ಧಂ ಸಂಸ್ಮರಾಮ್ಯಹಂ || ೫ ||

ಪ್ರಾಣಾಪಾನಾನುಸರಣಾತ್ಪರಮಾತ್ಮಾವಲೋಕನಾತ್|
ಅಶೋಕಮನುಜಾತೋಽಸ್ಮಿ ಪದಮಾದ್ಯಂ ಮಹಾತಪಃ || ೬ ||

ಆಮಹಾಪ್ರಲಯಾದ್ಬ್ರಹ್ಮನ್ಮಜ್ಜನನಿಮಜ್ಜನಂ |
ಅಹಮದ್ಯಾಪಿ ಭೂತಾನಾಂ ಪಶ್ಯನ್ ಜೀವಾಮಿ ಧೀರಧೀಃ || ೭ ||

ನ ಭೂತಂ ನ ಭವಿಷ್ಯಂ ಚ ಚಿಂತಯಾಮಿ ಕದಾಚನ |
ದೃಷ್ಟಿಮಾಲಂಬ್ಯ ತಿಷ್ಠಾಮಿ ವರ್ತಮಾನಾಮಿಹಾತ್ಮನಾ || ೮ ||

ಯಥಾ ಪ್ರಾಪ್ತೇಷು ಕಾರ್ಯೇಷು ಪರಿತ್ಯಕ್ತಫಲೈಷಣಃ|
ಸುಷುಪ್ತಸಮಯಾ ಬುದ್ಧ್ಯಾ ಪರಿತಿಷ್ಠಾಮಿ ಕೇವಲಂ || ೯ ||

---

೫. (ಜ್ಯೋತಿಶ್ಚಕ್ರವನ್ನು ವಹಿಸಿರುವ ಪ್ರವಾಹವೆಂಬ) ವಾಯುವು ಚಲಿಸದೆ ನಿಂತರೂ, ನೀರು ಹರಿಯದೆ ನಿಂತರೂ, ನನಗೆ ಈ ಸಮಾಧಿಯು ಭಂಗವಾಗುವುದಿಲ್ಲ.

೬. ಎಲೈ ಮಹಾತಪಸ್ವಿಯೆ, ಪ್ರಾಣಾಪಾನ ಗತಿಗಳನ್ನು ಅನುಸರಿಸಿ, ಪರಮಾತ್ಮ ದರ್ಶನವನ್ನು ಮಾಡುತ್ತ, ನಾನು ಆ ಪದದಲ್ಲಿ ನಿಂತು, ಅಶೋಕನಾಗಿರುವೆನು.

೭. ಮಹಾಪ್ರಲಯ ಕಾಲದವರೆವಿಗೂ ಪ್ರಾಣಿ ಸಂಘಗಳು ಮುಳುಗುವುಹನ್ನೂ ನೋಡುತ್ತ, ನಿರ್ವಿಕಾರ ಮನಸ್ಕನಾಗಿ, ಇದುವರೆಗೂ ಇರುವೆನು.

೮. ಹಿಂದೆ ಕಳೆದುಹೋದುದನ್ನೂ, ಮುಂದೆ ಬರುವದನ್ನೂ ಕುರಿತು ಏನೂ ಚಿಂತೆ ಮಾಡದೆ, ಸಾಕ್ಷಿಭಾವದಿಂದ ಈಗ ನಡೆಯುತ್ತಿರುವದನ್ನೂ ಮಾತ್ರ ನೋಡುತ್ತ ಕುಳಿತಿರುವೆನು.

೯. ಮಾಡಬೇಕಾದ ಕಾರ್ಯಗಳನ್ನು ಫಲಬುದ್ಧಿಯಲ್ಲದೆ ಮಾಡುತ್ತ, ಸುಷುಪ್ತಿಯಲ್ಲಿರುವಂತೆ ಬುದ್ಧಿಯು ನಿರ್ವಿಕಾರವಾಗಿರುವ ಹಾಗೆ ಇಟ್ಟುಕೊಂಡು ಕೇವಲನಾಗಿ ಇರುವೆನು.

ಭಾವಾಭಾವಮಯೀಂ ಚಿಂತಾಮಿಮಾಮಾಲೋಕ್ಯ ನಿಷ್ಫಲಾಂ ।
ವಿಮೃಶ್ಯಾತ್ಮನಿ ತಿಷ್ಠಾಮಿ ಚಿರಂಜೀವಾಮ್ಯನಾಮಯಃ ॥ ೧೦ ॥

ಪ್ರಾಣಾಪಾನಗಸಂಯೋಗಗತಂ ತತ್ ಸಮನುಸ್ಮರನ್ ।
ಸ್ವಯಂಪೂರ್ಣಾತ್ಮನಿ ತುಷ್ಯಾಮಿ ಚಿರಂ ಜೀವಾಮ್ಯನಾಮಯಃ ॥ ೧೧ ॥

ಇದಮದ್ಯ ಮಯಾ ಲಬ್ಧಮಿದಂ ಪ್ರಾಪ್ಸ್ಯಾಮಿ ಸುಂದರಂ ।
ಇತಿ ಚಿಂತಾ ನ ಮೇ ತೇನ ಚಿರಂ ಜೀವಾಮ್ಯನಾಮಯಃ ॥ ೧೨ ॥

ನ ಸ್ತೌಮಿ ನ ಚ ನಿಂದಾಮಿ ಕ್ವಚಿತ್ಕಿಂಚಿತ್ಕದಾಚನ ।
ಆತ್ಮನೋಽನ್ಯಸ್ಯ ವಾ ಸಾಧೋ ತೇನಾಹಂ ಶುಭಮಾಗತಃ ॥ ೧೩ ॥

ನ ತುಷ್ಯತಿ ಶುಭಪ್ರಾಪ್ತೌ ನಾಶುಭೇಽಪಿ ವಿಖಿದ್ಯತೇ ।
ಮನೋ ಮಮ ಸಮಂ ನಿತ್ಯಂ ತೇನಾಹಂ ಶುಭಮಾಗತಃ ॥ ೧೪ ॥

---

೧೦. ಬೇಕು ಬೇಡಗಳಿಂದ ಕೂಡಿರುವ ಹುಟ್ಟುಸಾವುಗಳನ್ನು, ವಿಮರ್ಶೆ ಮಾಡಿ, ಅವು ಅಸಾರವೆಂದು ಕಂಡುಕೊಂಡು, ಯಾವುದೊಂದಕ್ಕೂ ಸಿಕ್ಕದೆ ಸ್ವಸ್ಥನಾಗಿದ್ದು ಚಿರಂಜೀವಿಯಾಗಿರುವೆನು.

೧೧. ಪ್ರಾಣಾಪಾನಗಳ ಸಂಧಿಯನ್ನು ಅಲ್ಲಿ ಪ್ರಕಟವಾಗುವ ಬ್ರಹ್ಮ ತತ್ತ್ವವನ್ನು ಸರ್ವದಾ ಅನುಸ್ಮರಣ ಮಾಡುತ್ತ ಆತ್ಮತೃಪ್ತನಾಗಿ, ಹೊರಗಿನದು ಏನನ್ನೂ ಅಪೇಕ್ಷಿಸದೆ, ಯಾವುದಕ್ಕೂ ಸಿಕ್ಕದೆ ಚಿರಂಜೀವಿಯಾಗಿರುವೆನು.

೧೨. ಇದೋ ಈಗ ಇದು ಸಿಕ್ಕಿತು. ಇನ್ನು ಮುಂದೆ ಸುಂದರವಾದುದು, ಇನ್ನೊಂದು ಸಿಕ್ಕುವದು ಎಂಬ ಚಿಂತೆಯೇ ನನಗಿಲ್ಲವಾಗಿ, ಯಾವದಕ್ಕೂ ಸಿಕ್ಕದೆ ಚಿರಂಜೀವಿಯಾಗಿರುವೆನು.

೧೩. ನಾನು ನನ್ನನ್ನೇ ಆಗಲಿ, ಇತರರನ್ನೇ ಆಗಲಿ, ಎಲ್ಲಿಯೋ ಯಾವಾಗಲೂ ಎಳ್ಳಷ್ಟೂ ಹೊಗಳುವುದಿಲ್ಲ, ತೆಗಳುವುದಿಲ್ಲ. ಅದರಿಂದ, ಎಲೈ ಸಾಧುವೆ, ನಾನು ಶುಭವನ್ನು ಹೊಂದಿರುವೆನು.

೧೪. ನನ್ನ ಮನಸ್ಸು ಶುಭ ಪ್ರಾಪ್ತಿಯಲ್ಲಿ ಸಂತೋಷಪಡುವದಿಲ್ಲ. ಅಶುಭ

ಪರಮಂ ತ್ಯಾಗಮಾಲಂಬ್ಯ ಸರ್ವಸ್ಯೇವ ಸದೈವ ಹಿ |
ಜೀವಿತಾದಿ ಮಯಾ ತ್ಯಕ್ತಂ ತೇನಾಹಂ ಶುಭಮಾಗತಃ || ೧೫ ||

ಪ್ರಶಾಂತಚಾಪಲಂ ವೀತಶೋಕಂ ಸ್ವಸ್ಥಂ ಸಮಾಹಿತಂ |
ಮನೋ ಮಮ ಮುನೇ ಶಾಂತಂ ತೇನ ಜೀವಾಮ್ಯನಾಮಯಃ || ೧೬ ||

ಕಾಷ್ಠಂ ವಿಲಾಸಿನೀಂ ಶೈಲಂ ತೃಣಮಗ್ನಿಂ ಹಿಮಂ ನಭಃ |
ಸಮಂ ಸರ್ವತ್ರ ಪಶ್ಯಾಮಿ ತೇನ ಜೀವಾಮ್ಯನಾಮಯಃ || ೧೭ ||

ಕಿಮದ್ಯ ಮಮ ಸಂಪನ್ನಂ ಪ್ರಾತರ್ವಾ ಭವಿತಾ ಪುನಃ |
ಇತಿ ಚಿಂತಾಜ್ವರೋ ನಾಸ್ತಿ ತೇನ ಜೀವಾಮ್ಯನಾಮಯಃ || ೧೮ ||

ಗಳಲ್ಲಿ ಖೇದಪಡುವದಿಲ್ಲ. ಯಾವಾಗಲೂ ನಿರ್ವಿಕಾರವಾಗಿರುವದು. ಅದರಿಂದ ಶುಭವನ್ನು ಹೊಂದಿರುವೆನು.

೧೫. ಪರಮ ವೈರಾಗ್ಯವನ್ನು ಆಶ್ರಯಿಸಿ, ಸರ್ವವನ್ನೂ ಸರ್ವಕಾಲದಲ್ಲಿಯೂ, ಜೀವಿತಾದಿಗಳನ್ನೂ ಸಹ ತ್ಯಾಗಮಾಡಿರುವೆನು. ಅದರಿಂದ ಶುಭವನ್ನು ಹೊಂದಿರುವೆನು.

೧೬. ನನ್ನ ಮನಸ್ಸಿಗೆ ಚಾಪಲ್ಯಗಳು ಯಾವದೂ ಇಲ್ಲ. ಶೋಕಗಳು ಇಲ್ಲ. ಅದು ಸ್ವಸ್ಥವಾಗಿ ಸಮಾಹಿತ (ಬ್ರಹ್ಮನಿಷ್ಠ) ವಾಗಿರುವದು. ಶಾಂತವಾಗಿರುವದು. ಅದರಿಂದ ನಾನು ಅನಾಮಯ (ಸುಖ) ನಾಗಿರುವೆನು.

೧೭. ಕಾಷ್ಠವಾಗಲಿ, ವಿಲಾಸಿನಿಯಾಗಲಿ, ಶೈಲವಾಗಲಿ, ತೃಣವಾಗಲಿ, ಅಗ್ನಿಯಾಗಲಿ, ಹಿಮವಾಗಲಿ, ನಭವಾಗಲಿ, ಎಲ್ಲವನ್ನೂ ಸಮದೃಷ್ಟಿಯಿಂದ ಕಾಣುತ್ತಾ ಇರುವೆನು. ಅದರಿಂದ ನಾನು ಸುಖಿಯಾಗಿರುವೆನು.

೧೮. ನನಗೆ ಈಗ ಏನು ದೊರೆಯಿತು ? ಬೆಳಗಾದರೆ ಇನ್ನೇನು ದೊರೆಯುವದು ? ಎಂದು ಚಿಂತಾಜ್ವರವು ನನಗಿಲ್ಲ. ಅದರಿಂದ ನಾನು ಸುಖಿಯಾಗಿರುವೆನು.

ಜರಾಮರಣದುಃಖೇಷು ರಾಜ್ಯಲಾಭಸುಖೇಷು ಚ |
ನ ಬಿಭೇಮಿ ನ ಹೃಷ್ಯಾಮಿ ತೇನ ಜೀವಾಮ್ಯನಾಮಯಃ ‖ ೧೯ ‖

ಅಯಂ ಬಂಧುಃ ಪರಶ್ಚಾಯಂ ಮಮಾಯಮಯಮನ್ಯತಃ |
ಇತಿ ಬ್ರಹ್ಮನ್ನ ಜಾನಾಮಿ ತೇನ ಜೀವಾಮ್ಯನಾಮಯಃ ‖ ೨೦ ‖

ಸರ್ವಂ ಸರ್ವಪದಾಭಾಸಮನಾದ್ಯಂತಮನಾಮಯಂ |
ಅಯಂ ಚಿದಿತಿ ಜಾನಾಮಿ ತೇನ ಜೀವಾಮ್ಯನಾಮಯಃ ‖ ೨೧ ‖

ಆಹರನ್ವಿಹರಂಸ್ತಿಷ್ಠನ್ನುತ್ತಿಷ್ಠಚ್ಛ್ವಸನ್ಸ್ವಪನ್ |
ದೇಹೋಽಹಮಿತಿ ನೋ ವೇದ್ಮಿ ತೇನಾಸ್ಮಿ ಚಿರಜೀವಿತಃ ‖ ೨೨ ‖

ಇಮಂ ಸಾಂಸಾರಮಾರಂಭಂ ಸುಷುಪ್ತಪದವತ್ಸ್ಥಿತಃ |
ಅಸಂತಮಿವ ಜಾನಾಮಿ ತೇನ ಜೀವಾಮ್ಯನಾಮಯಃ ‖ ೨೩ ‖

---

೧೯. ಜರಾಮರಣ ದುಃಖಗಳಲ್ಲಿಯೂ, ರಾಜ್ಯಲಾಭ ಸುಖಗಳಲ್ಲಿಯೂ ಹೆದರುವುದಿಲ್ಲ. ಹರ್ಷಿಸುವುದಿಲ್ಲ. ಅದರಿಂದ ನಾನು ಸುಖಿಯಾಗಿರುವೆನು.

೨೦. ಇವನು ಬಂಧುವು, ಇವನು ಬೇರೆಯವನು, ಇವನು ನನ್ನವನು, ಇವನು ಹೊರಗಿನವನು, ಎಂಬುವನ್ನು ಎಲೈ ಬ್ರಹ್ಮನೇ, ನಾನು ಅರಿಯೆನು. ಅದರಿಂದ ನಾನು ಸುಖಿಯಾಗಿರುವೆನು.

೨೧. ಸರ್ವವೂ ಸರ್ವ ವಸ್ತುಗಳಾಗಿ ತೋರುತ್ತಿರುವುದೂ, ಆದಿ ಅಂತಗಳಿಲ್ಲದೆ, ಯಾವುದೊಂದು ವಿಕಾರವೂ ಇಲ್ಲದೆ ಇರುವ ಚಿತ್ತೇ! ನಾನೂ ಚಿತ್ತೇ! ಎಂದು ತಿಳಿದುಕೊಂಡು ನಾನು ಸುಖವಾಗಿರುವೆನು.

೨೨. ತರುವದು, ಆಡುವದು, ಇರುವದು, ಏಳುವದು, ಉಸಿರು ಆಡುವದು, ಮಲಗುವದು, ಮುಂತಾದ ಕೆಲಸಗಳನ್ನು ಮಾಡುವಾಗ ಯಾವಾಗಲೂ ದೇಹೋಽಹಂ ಎಂಬ ಬುದ್ಧಿಯು ನನಗಿಲ್ಲ. ಅದರಿಂದ ಚಿರಂಜೀವಿಯಾಗಿರುವೆನು.

೨೩. ಈ ಸಂಸಾರವನ್ನೂ ಇಲ್ಲಿ ಮಾಡುವ ಕೆಲಸಗಳನ್ನೂ ಸುಷುಪ್ತಿಯಲ್ಲಿರುವಂತೆ ಇದ್ದುಕೊಂಡು ನೋಡುತ್ತ, ಇವೆಲ್ಲವೂ ಇಲ್ಲದೇ ಇದ್ದರೆ ಹೇಗೆ ಇರಬಹುದೋ ಹಾಗೆ ತಿಳಿದಿರುವೆನು. ಅದರಿಂದ ಸುಖಿಯಾಗಿರುವೆನು.

ಯಥಾಕಾಲಮುಪಾಯಾತಾವರ್ಥಾನರ್ಥೌ ಸಮೌ ಮಮ |
ಹಸ್ತಾವಿವ ಶರೀರಸ್ಥೌ ತೇನ ಜೀವಾಮ್ಯನಾಮಯಃ ॥ ೨೪ ॥

ಅಪರಿಚಲಯಾ ಶಕ್ತ್ಯಾ ಸುದೃಶಾ ಸ್ನಿಗ್ಧಮುಗ್ಧಯಾ |
ಋಜು ಪಶ್ಯಾಮಿ ಸರ್ವತ್ರ ತೇನ ಜೀವಾಮ್ಯನಾಮಯಃ ॥ ೨೫ ॥

ಅಪಾದಮಸ್ತಕಾಂತೇಽಸ್ಮಿನ್ನ ದೇಹೇ ಮಮತಾ ಮಮ |
ತ್ಯಕ್ತಾಹಂಕಾರಪಂಕಸ್ಯ ತೇನ ಜೀವಾಮ್ಯನಾಮಯಃ ॥ ೨೬ ॥

ಯತ್ಕರೋಮಿ ಯದಶ್ನಾಮಿ ತತ್ತ್ಯಕ್ತ್ವಾ ತದ್ಗತೋಽಪಿ ಮೇ |
ಮನೋ ನೈಷ್ಕರ್ಮ್ಯಮಾದತ್ತೇ ತೇನ ಜೀವಾಮ್ಯನಾಮಯಃ ॥ ೨೭ ॥

---

೨೪. ಆಯಾ ಕಾಲಗಳಲ್ಲಿ ಬರುವ ಅರ್ಥಾನರ್ಥಗಳನ್ನು ದೇಹದಲ್ಲಿರುವ ಎಡಗೈ ಬಲಗೈಗಳಂತೆ ಎಂದು ಸಮನಾಗಿ ನೋಡುತ್ತಿರುವೆನು. ಅದರಿಂದ ಸುಖವಾಗಿರುವೆನು.

೨೫. ತನ್ನ ಸ್ವಭಾವವನ್ನು ಬಿಡದೆ, ಸ್ಥಿರವಾಗಿ, ಎಲ್ಲವನ್ನೂ ಸ್ನೇಹ ಸುಂದರವಾಗಿ, ಮುದ್ದಾಗಿಯೇ ನೋಡುವ ಶಕ್ತಿಯಿಂದ ಎಲ್ಲೆಲ್ಲಿಯೂ ಎಲ್ಲವನ್ನೂ ಋಜುವಾಗಿ ನೋಡುತ್ತಿರುವೆನು. ಅದರಿಂದ ನಾನು ಸುಖವಾಗಿರುವೆನು.

(ಸ್ವರೂಪಾನ್ನ [ಪರಿಚಲತೀತಿ] ಅಪರಿಚಲಯಾ ಮನಃಸ್ಥೈರ್ಯಶಕ್ತ್ಯಾ, ಸುದೃಶಾ ಸರ್ವಭೂತೇಷು ಆತ್ಮೌಪಮ್ಯ ದೃಷ್ಟ್ಯಾ | ಋಜು ಅಕುಟಿಲಂ | ತಥಾ ಚೋಕ್ತಂ ಭಾರತೇ :—

ಸರ್ವಂ ಜಿಹ್ಮಂ ಮೃತ್ಯುಪದಮಾರ್ಜವಂ ಬ್ರಹ್ಮಣಃ ಪದಂ | ಏತಾವಾನ್ ಜ್ಞಾನ ವಿಷಯಃ ಪ್ರಲಾಪಃ ಕಿಂಕರಿಷ್ಯತಿ=ಇತಿ—ತಾ. ಪ್ರ.)

೨೬. ಆಪಾದಮಸ್ತಕಾಂತವಾಗಿರುವ ಈ ದೇಹದಲ್ಲಿ ನನಗೆ ಮಮತೆಯಿಲ್ಲ. ನನಗೆ ಅಹಂಕಾರವೆಂಬ ಪಂಕವು ಸೋಂಕಿಲ್ಲ. ಅದರಿಂದ ನಾನು ಸುಖವಾಗಿರುವೆನು.

೨೭. ಯಾವುದನ್ನೇ ಮಾಡಲಿ, ಏನನ್ನೇ ತಿನ್ನಲಿ, ಆ ಅಭಿಮಾನವನ್ನು

ಯದಾ ಯದಾ ಮುನೇ ಕಿಂಚಿದ್ವಿಜಾನಾಮಿ ತದಾ ತದಾ |
ಮತಿರಾಯಾತಿ ನೌದ್ಧತ್ಯಂ ತೇನ ಜೀವಾಮ್ಯನಾಮಯಃ ॥ ೨೮ ॥

ಕರೋಮಿಶಕ್ತೋಽಪಿ ನಾಕ್ರಾಂತಿಂ ಪರಿತಾಪೇ ನ ಖೇದವಾನ್ |
ದರಿದ್ರೋಽಪಿ ನ ವಾಂಛಾಮಿ ತೇನ ಜೀವಾಮ್ಯನಾಮಯಃ ॥ ೨೯ ॥

ಪಶ್ಯದ್ರೂಪೇ ಶರೀರೇಽಸ್ಮಿನ್ ಭೂತಸ್ಥಾತ್ಮಾ ಚಿದಾಸ್ಪದಃ |
ಭೂತವೃಂದಮಹಂ ಸಾಮ್ಯಾತ್ತೇನ ಜೀವಾಮ್ಯನಾಮಯಃ ॥ ೩೦ ॥

ವಹಿಸದೆ ಇರುವದರಿಂದ, ನನ್ನ ಮನಸ್ಸು ನೈಷ್ಕರ್ಮ್ಯವನ್ನು ಪಡೆದಿರುವದು. ಅದರಿಂದ ನಾನು ಸುಖಿಯಾಗಿರುವೆನು.

(ನೈಷ್ಕರ್ಮ್ಯಂ ಅಕರ್ತೃ ಭೋಕ್ತೃ ಸ್ವಭಾವತಾಂ—ತಾ. ಪ್ರ.)

೨೮. ಯಾವಾಗ ಯಾವಾಗಲಾದರೂ ನನಗೆ ಅಷ್ಟೋ ಇಷ್ಟೋ ತಿಳಿದರೆ, ಆಗಾಗಲೆಲ್ಲ ನನ್ನ ಮನಸ್ಸು ಔದ್ಧತ್ಯವನ್ನು ಹೊಂದುವದಿಲ್ಲ. ಅದರಿಂದ ನಾನು ಸುಖಿಯಾಗಿರುವೆನು.

೨೯. ನಾನು ಶಕ್ತನಾಗಿದ್ದರೂ ಯಾರ ಮೇಲೂ ಆಕ್ರಮಣ ಮಾಡುವದಿಲ್ಲ. ಪರಿತಾಪಪಡಬೇಕಾಗಿ ಬಂದಾಗಲೂ ಖೇದಪಡುವದಿಲ್ಲ. ದರಿದ್ರನಾದರೂ ಇಂಥದು ಬೇಕು ಎಂದು ಅಪೇಕ್ಷಿಸುವುದಿಲ್ಲ. ಅದರಿಂದ ನಾನು ಸುಖಿಯಾಗಿರುವೆನು.

(ಶಕ್ತಃ ಪರೇಷಾಮಾಕ್ರಮಣ ಸಮರ್ಥಃ | ಪರಕೃತೇ ಪರಿತಾಪಃ—ತಾ. ಪ್ರ.)

೩೦. ಈ ಶರೀರದಲ್ಲಿ ಇರುವೆನಾದರೂ ಭೂತಭೂತದಲ್ಲಿಯೂ ಇರುವ ಚಿದ್ರೂಪನಾದ ಆತ್ಮನೇ ನಾನು ಎಂಬ ಸಾಮ್ಯದೃಷ್ಟಿಯಿಂದ ಪ್ರಾಣಿಗಳನ್ನು ನೋಡುವೆನು. ಅದರಿಂದ ಸುಖಿಯಾಗಿರುವೆನು.

ಆಶಾಪಾಶಾವಿನುನ್ನಾಯಾಶ್ಚಿತ್ತವೃತ್ತೇಃ ಸಮಾಹಿತಃ |
ಸಂಸ್ಪರ್ಶಂ ನ ದದಾಮ್ಯಂತಸ್ತೇನ ಜೀವಾಮ್ಯನಾಮಯಃ ॥ ೩೧ ॥

ಅಸತ್ತಾಂ ಜಗತಃ ಸತ್ತಾಮಾತ್ಮನಃ ಕರಬಿಲ್ವವತ್ |
ಸುಪ್ತಃ ಪ್ರಬುದ್ಧಃ ಪಶ್ಯಾಮಿ ತೇನಾಸ್ಮಿ ಚಿರಜೀವಿತಃ ॥ ೩೨ ॥

ಜೀರ್ಣಂ ಭಿನ್ನಂ ಶ್ಲಥಂ ಕ್ಲಿಣ್ಣಂ ಕ್ಷುಬ್ಧಂ ಕ್ಷುಣ್ಣಂ ಕ್ಷಯಂ ಗತಂ |
ಪಶ್ಯಾಮಿ ನವವತ್ಸರ್ವಂ ತೇನ ಜೀವಾಮ್ಯನಾಮಯಃ ॥ ೩೩ ॥

ಸುಖಿತೋಽಸ್ಮಿ ಸುಖಾಪನ್ನೇ ದುಃಖಿತೋ ದುಃಖಿತೇ ಜನೇ |
ಸರ್ವಸ್ಯ ಪ್ರಿಯಮಿತ್ರಂ ಚ ತೇನ ಜೀವಾಮ್ಯನಾಮಯಃ ॥ ೩೪ ॥

---

೩೧. ಸಹಜವಾಗಿ ನೂರಾರು ಆಶೆಗಳಿಂದ ಕೂಡಿ ಬಗ್ಗಿಹೋಗಿರುವ ಚಿತ್ತವೃತ್ತಿಯನ್ನು ಸಮಪಡಿಸಿಕೊಂಡು, ಆ ಆಶಾಶತಗಳಿಗೆ ಒಳಗೆ ಅವಕಾಶಕೊಡದಿರುವೆನು. ಅದರಿಂದ ನಾನು ಸುಖಿಯಾಗಿರುವೆನು.

೩೨. ಜಗತ್ತಾಗಿ ಕಾಣುತ್ತಿರುವ ಇದೆಲ್ಲವೂ ಅಸತ್ ಎಂಬುದನ್ನೂ, ಆತ್ಮವೊಂದೇ ಸತ್ ಎಂಬುದನ್ನೂ ಅಂಗೈಯಲ್ಲಿರುವ ಬಿಲ್ವಫಲದಷ್ಟು ಸ್ಪಷ್ಟವಾಗಿ ಜಾಗ್ರತ್ಸ್ವಪ್ನಗಳಲ್ಲಿಯೂ ಕಾಣುತ್ತಿರುವೆನು. ಆದರಿಂದ ಚಿರಂಜೀವಿಯಾಗಿರುವೆನು.

೩೩. ಜೀರ್ಣವಾದುದನ್ನೂ, ಛಿನ್ನವಾದುದನ್ನೂ, ಸಡಿಲವಾಗಿ ಹೋಗಿರುವುದನ್ನೂ, ಕುಗ್ಗಿಹೋಗಿರುವುದನ್ನೂ, ಕ್ಷುಬ್ಧವಾಗಿರುವುದನ್ನೂ, ಪುಡಿಪುಡಿಯಾಗಿರುವುದನ್ನೂ, ಕ್ಷಯವಾಗಿ ಹೋಗಿರುವುದನ್ನೂ, ಹೊಸದನ್ನು ಕಂಡರೆ ಹೇಗೋ ಹಾಗೆ ಆನಂದದಿಂದಲೇ ಕಾಣುವೆನು. ಅದರಿಂದ ಸುಖಿಯಾಗಿರುವೆನು.

೩೪. ಸೌಖ್ಯವಾಗಿರುವವರು ಬಂದರೆ ಸುಖಪಡುವೆನು. ದುಃಖಿಗಳಾದವರು ಬಂದರೆ ದುಃಖಪಡುವೆನು. ಸರ್ವರಿಗೂ ಪ್ರಿಯಮಿತ್ರನಾಗಿರುವೆನು. ಅದರಿಂದ ಸುಖಿಯಾಗಿರುವೆನು.

ಆಪದ್ಯಚಲಧೀರೋಽಸ್ಮಿ ಜಗನ್ಮಿತ್ರಂ ಚ ಸಂಪದಿ ।
ಭಾವಾಭಾವೇಷು ನೈವಾಸ್ಮಿ ತೇನ ಜೀವಾಮ್ಯನಾಮಯಃ ॥ ೩೫ ॥

ನಾಹಮಸ್ಮಿ ನಚಾನ್ಯೋಽಮೇ ನಾಹಮನ್ಯಸ್ಯ ಕಸ್ಯಚಿತ್ ।
ಇತಿ ಮೇ ಭಾವಿತಂ ಚಿತ್ತಂ ತೇನ ಜೀವಾಮ್ಯನಾಮಯಃ ॥ ೩೬ ॥

ಅಹಂ ಜಗದಹಂ ವ್ಯೋಮ ದೇಶಕಾಲಕ್ರಮಾವಹಂ ।
ಅಹಂ ಕ್ರಿಯೇತಿ ಮೇ ಬುದ್ಧಿಸ್ತೇನ ಜೀವಾಮ್ಯನಾಮಯಃ ॥ ೩೭ ॥

ಘಟಶ್ಚಿಚ್ಚಿತ್ಪಟಶ್ಚಿತ್ಖಂ ಚಿದ್ವನಂ ಶಕಟಂ ಚ ಚಿತ್ ।
ಚಿತ್ಸರ್ವಮಿತಿ ಮೇ ಭಾವಃ ತೇನ ಜೀವಾಮ್ಯನಾಮಯಃ ॥ ೩೮ ॥

ಇತ್ಯಹಂ ಮುನಿಶಾರ್ದೂಲ ತ್ರಿಲೋಕಕಮಲಾಲಿಕಃ ।
ಭುಶುಂಡೋ ನಾಮ ಕಾಕೋಲಃ ಕಥಿತಶ್ಚಿರಜೀವಿತಃ ॥ ೩೯ ॥

---

೩೫. ಆಪತ್ತುಗಳಲ್ಲಿ ಪರ್ವತನಂತೆ ಸ್ಥಿರನಾಗಿರುವೆನು. ಸಂಪತ್ತಿನಲ್ಲಿ ಜಗನ್ಮಿತ್ರನಾಗಿರುವೆನು. ಭಾವ (ಜನ್ಮ) ಅಭಾವ (ಮರಣ) ಇವುಗಳಿಗೆ ಸಿಕ್ಕದಿರುವೆನು. ಅದರಿಂದ ಸುಖಿಯಾಗಿರುವೆನು.

೩೬. "ನಾನು ಎಂದು ಪ್ರತ್ಯೇಕವಾಗಿ ಇಲ್ಲ: ಅನ್ಯನೆಂಬುದು ಇನ್ನೊಂದಿಲ್ಲ; ಇನ್ನು ಯಾರಿಗೂ ನಾನು ಸೇರಿದವನೂ ಅಲ್ಲ" ಎಂಬ ಭಾವನೆಯಿಂದ ನನ್ನ ಚಿತ್ತವು ಪೂರ್ಣವಾಗಿರುವುದು. ಅದರಿಂದ ನಾನು ಸುಖವಾಗಿರುವೆನು.

೩೭. "ನಾನೇ ಜಗತ್ತು: ನಾನೇ ಆಕಾಶವು: ನಾನೇ ದೇಶಕಾಲಕ್ರಮಗಳು. ನಾನೇ ಕ್ರಿಯೆಯು" ಎಂಬ ಬುದ್ಧಿಯು ನನಗಿರುವುದು: ಅದರಿಂದ ನಾನು ಸುಖವಾಗಿರುವೆನು.

೩೮. "ಘಟವೂ ಚಿತ್ತೇ! ಪಟವೂ ಚಿತ್ತೇ! ಆಕಾಶವೂ ಚಿತ್ತೇ! ವನವೂ ಚಿತ್ತೇ! ಶಕಟವೂ ಚಿತ್ತೇ! ಈ ಸರ್ವವೂ ಚಿತ್ತೇ!" ಎಂದು ನನ್ನ ಭಾವವು. ಅದರಿಂದ ಸುಖಿಯಾಗಿರುವೆನು.

೩೯. ಹೀಗೆಂದು, ಎಲೈ ಮುನಿಶಾರ್ದೂಲನೇ, ತ್ರಿಲೋಕವೆಂಬ ಕಮಲದಲ್ಲಿ ಒಂದು ದುಂಬಿಯಂತಿರುವ, ಭುಶುಂಡನೆಂಬ ಕಾಗೆಯಾಗಿ, ಚಿರಂಜೀವಿ ಎನ್ನಿಸಿಕೊಂಡು ಇರುವೆನು.

ಬ್ರಹ್ಮಾರ್ಣವೇ ವಿಲುಲಿತಂ ತ್ರಿಜಗತ್ತರಂಗ
ಮುತ್ಪಾದನಾದ್ಯಭಿಭವೇನ ವಿಭಿನ್ನರೂಪಂ |
ಆಲೀನಮುನ್ನಮಿತಮಾಕುಲದೃಶ್ಯದೃಶ್ಯ
ಮಾಲೋಚಯನ್ಪ್ರಕಲಯಂಶ್ಚ ಚಿರಂ ಸ್ಥಿತೋಽಸ್ಮಿ || ೪೦ ||

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕಿಯೇ ದೇವದೂತೋಕ್ತೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ ಭುಶುಂಡೋಪಾಖ್ಯಾನೇ "ಚಿರಜೀವಿತಹೇತುಕಥನಂ" ನಾಮ ಷಡ್ವಿಂಶಃ ಸರ್ಗಃ

---

೪೦. ಬ್ರಹ್ಮವೆಂಬ ಮಹಾರ್ಣವದಲ್ಲಿ ತ್ರಿಜಗತ್ತುಗಳೆಂಬ ತರಂಗಗಳು ಹುಟ್ಟುತ್ತಲೂ ಭಿನ್ನಭಿನ್ನರೂಪಗಳಾಗಿ ತೋರುತ್ತಿರುವವು. ಇವು ಒಮ್ಮೆ ಸಂಪೂರ್ಣವಾಗಿ ಲೀನವಾಗಿರುವವು. ಇನ್ನೊಮ್ಮೆ ಮೇಲಕ್ಕೆ ಎದ್ದಿರುವವು. ಮತ್ತೊಮ್ಮೆ ಒಂದು ದೃಶ್ಯದಲ್ಲಿ ಇನ್ನೊಂದು ದೃಶ್ಯವು ಕಲೆತು ಕೊಂಡು ಹೋಗಿರುವದು, ಇಂತಹ ದೃಶ್ಯಜಾತವನ್ನು (ಸಮಾಧಿಯಿಲ್ಲದಾಗ) ನೋಡುತ್ತಲೂ (ಸಮಾಧಿಕಾಲದಲ್ಲಿ) ಮರೆಯುತ್ತಲೂ ಚಿರಕಾಲದಿಂದಲೂ ಇರುವೆನು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ ನಿರ್ವಾಣಪ್ರಕರಣದ ಭುಶುಂಡೋಪಾಖ್ಯಾನದಲ್ಲಿ "ಚಿರಜೀವಿತಹೇತುಕಥನ" ಎಂಬ ಇಪ್ಪತ್ತಾರನೆಯ ಸರ್ಗವು

ಸಪ್ತವಿಂಶಃ ಸರ್ಗಃ

ಭುಶುಂಡ ಉವಾಚ—

ಏತತ್ತೇ ಕಥಿತಂ ಬ್ರಹ್ಮನ್ಯಥಾಸ್ಮಿ ಯದಿಹಾಸ್ಮಿ ಚ |
ತ್ವದಾಜ್ಞಾಮಾತ್ರಸಿದ್ಧ್ಯರ್ಥಂ ಧಾರ್ಷ್ಟ್ಯೇನ ಜ್ಞಾನಪಾರಗ ‖ ೧ ‖

ಶ್ರೀ ವಸಿಷ್ಠ ಉವಾಚ—

ಅಹೋ ನು ಚಿತ್ರಂ ಭಗವನ್ಭವತಾ ಭೂಷಣಂ ಶ್ರುತೇಃ |
ಆತ್ಮೋದಂತಃ ಪ್ರಕಥಿತಃ ಪರಂ ವಿಸ್ಮಯಕಾರಣಂ ‖ ೨ ‖

ಧನ್ಯಾಸ್ತೇ ಯೇ ಮಹಾತ್ಮಾನಮತ್ಯಂತಚಿರಜೀವನಂ |
ಭವಂತಂ ಪರಿಪಶ್ಯಂತಿ ದ್ವಿತೀಯಮಿವ ಪದ್ಮಜಂ ‖ ೩ ‖

ಇಪತ್ತೇಳನೆಯ ಸರ್ಗ

೧. ಭುಶುಂಡನು ಹೇಳಿದನು:—ಎಲೈ ಬ್ರಹ್ಮನೇ, ಹೇಗಿರುವೆನು? ಏನಾಗಿರುವೆನು? ಎಂಬುದೆಲ್ಲವನ್ನೂ ನಿನ್ನ ಆಜ್ಞೆಯು ಸಿದ್ಧವಾಗಲೆಂದು, ಎಲೈ ಜ್ಞಾನಪಾರಗನೇ, ಧಾರ್ಷ್ಟ್ಯವನ್ನು ವಹಿಸಿ ಹೇಳಿದೆನು.

೨. ವಸಿಷ್ಠನು ಹೇಳಿದನು—ಎಲೈ ಭಗವಂತನಾದ ಭುಶುಂಡನೆ, ನೀನು ಕೇಳಿದವರ ಕಿವಿಗಳಿಗೆಲ್ಲ ಭೂಷಣವಾಗಿರುವ ವಿಚಿತ್ರವಾದ ನಿನ್ನ ವೃತ್ತಾಂತವನ್ನು ಹೇಳಿದೆ. ಅಹಹಾ! ಇದು ನಿಜವಾಗಿಯೂ ವಿಸ್ಮಯಕಾರಕವಾದುದು.

೩. ಎರಡನೆಯ ಚತುರ್ಮುಖ ಬ್ರಹ್ಮನೋ ಎಂಬಷ್ಟು ಅತ್ಯಂತ ಚಿರಂಜೀವಿಯಾಗಿರುವ ನಿನ್ನಂತಹ ಮಹಾತ್ಮನನ್ನು ದರ್ಶನ ಮಾಡಿದವರೇ ಧನ್ಯರು.

ಯಾವದದ್ಯ ದೃಶೋ ಧನ್ಯಾಃ ಸ್ವಾತ್ಮ್ಯೋದಂತಮಖಂಡಿತಂ |
ಯಥಾವತ್ಪಾವನಂ ಬುದ್ಧೇಃ ಸರ್ವಂ ಕಥಿತವಾನಸಿ || ೪ ||

ಪ್ರಭಾಂತಂ ದಿಕ್ಷು ಸರ್ವಾಸು ದೃಷ್ಟ್ವಾ ವಿಬುಧಭೂತಯಃ |
ಭವಾನಿವ ಜಗತ್ಯಸ್ಮಿನ್ನ ಮಹಾನವಲೋಕಿತಃ || ೫ ||

ಕಥಂಚಿತ್ಪ್ರಾಪ್ಯತೇ ಕಶ್ಚಿದ್ಭ್ರಾಂತ್ವೇಹ ಹಿ ಮಹಾಜನಃ |
ನ ಭವಾನಿವ ಭವ್ಯಾತ್ಮಾ ಸುಲಭೋ ಜಗತಿ ಕ್ವಚಿತ್ || ೬ ||

ವಂಶಖಂಡೇ ಹಿ ಕಸ್ಮಿಂಶ್ಚಿಜ್ಜಾಯತೇ ಮೌಕ್ತಿಕಂ ಯಥಾ |
ಜಗತ್ಖಂಡೇ ಹಿ ಕಸ್ಮಿಂಶ್ಚಿದ್ದೃಶ್ಯತೇ ತ್ವಾದೃಶಸ್ತಥಾ || ೭ ||

ಮಯಾತು ಸುಮಹತ್ಕಾರ್ಯಮದ್ಯ ಸಂಪಾದಿತಂ ಶುಭಂ |
ಪುಣ್ಯದೇಹವಿಮುಕ್ತಾತ್ಮಾ ಯದ್ಭವಾನವಲೋಕಿತಃ || ೮ ||

---

೪. ನಿನ್ನನ್ನು ನೋಡಿದ ಕಣ್ಣುಗಳೇ ಧನ್ಯಗಳು! ನಿನ್ನ ವೃತ್ತಾಂತವೆಲ್ಲವನ್ನೂ ಯಥಾವತ್ತಾಗಿ ಹೇಳಿದೆ. ಇದು ಬುದ್ಧಿಯನ್ನು ಪಾವನಮಾಡುವದು.

೫. ಎಲ್ಲಾ ದಿಕ್ಕುಗಳೂ ಈಗ ಬೆಳಗುತ್ತಿರುವವು. ವಿದ್ವಾಂಸರೂ ದೇವತೆಗಳೂ ಕೋರುವ ಜ್ಞಾನೈಶ್ವರ್ಯ ಸಂಪತ್ತುಗಳು ಎಲ್ಲಾ ದಿಕ್ಕುಗಳಲ್ಲಿಯೂ ಕಾಣುತ್ತಿರುವವು. ನಿನ್ನಂತಹ ಮಹಾತ್ಮನನ್ನು ಈ ಜಗತ್ತಿನಲ್ಲಿಯೇ ಕಂಡಿಲ್ಲ.

೬. ಬಹುವಾಗಿ ಅಲೆದು ಹುಡುಕಿನೋಡಿದರೆ, ತತ್ವಜ್ಞನಾದ ಮಹಾಪುರುಷನೊಬ್ಬನನ್ನು ಕಾಣಬಹುದು. ಆದರೆ ನಿನ್ನಂತಹ ಮಹಾಪುರುಷನು ಮಾತ್ರ ಜಗತ್ತಿನಲ್ಲಿಯೇ ಸುಲಭನಲ್ಲ.

೭. ಯಾವದೋ ಒಂದು ಹೆಬ್ಬಿದಿರಿನಲ್ಲಿ ಮಾತ್ರ ಮುತ್ತು ಹುಟ್ಟುವುದು. ಹಾಗೆಯೇ ಈ ಬ್ರಹ್ಮಾಂಡದಲ್ಲಿ ನಿನ್ನಂತಹವನೊಬ್ಬನು ಎಲ್ಲಿಯೋ ಯಾವಾಗಲೋ ಕಣ್ಣಿಗೆ ಬೀಳುವನು.

೮. ಪುಣ್ಯದೇಹಿಯೂ, ವಿಮುಕ್ತಾತ್ಮನೂ ಆದ ನಿನ್ನನ್ನು ನೋಡಿದೆನಾಗಿ ನಾನು ಈಗ ನಿಜವಾಗಿಯೂ ಶುಭವಾದ ಮಹತ್ಕಾರ್ಯವನ್ನು ಮಾಡಿದಂತಾಯಿತು.

ತದಸ್ತು ತವ ಕಲ್ಯಾಣಂ ಪ್ರವಿಶಾತ್ಮಗುಹಾಂ ಶುಭಾಂ |
ಮಧ್ಯಾಹ್ನಸಮಯೋ ಯನ್ಮೇ ವ್ರಜಾಮಿ ಸುರಮಂದಿರಂ ॥ ೯ ॥

ಇತ್ಯಾಕರ್ಣ್ಯ ಭುಶುಂಡೋಽಸೌ ಜಗ್ರಾಹೋತ್ಥಾಯ ಪಾದಪಾತ್ |
ಸಂಕಲ್ಪಿತಾಭ್ಯಾಂ ಹಸ್ತಾಭ್ಯಾಮುಪಾತ್ತಂ ಹೇಮಪಲ್ಲವಂ ॥ ೧೦ ॥

ಕಲ್ಪವೃಕ್ಷಲತಾಪುಷ್ಪಕೇಸರೇಣ ಹಿಮತ್ವಿಷಾ |
ತತ್ಪಾತ್ರಂ ಮೌಕ್ತಿಕಾರ್ಘ್ಯೇಣ ಪೂರಯಾಮಾಸ ಪೂರ್ಣಧೀಃ ॥ ೧೧ ॥

ತೇನಾರ್ಘ್ಯಪಾದ್ಯಪುಷ್ಪೇಣ ತ್ರಿನೇತ್ರಮಿವ ಮಾಮಸೌ |
ಆಪಾದಮಸ್ತಕಂ ಭಕ್ತ್ಯಾ ಪೂಜಯಾಮಾಸ ಪೂರ್ವಜಃ ॥ ೧೨ ॥

ಅನುವ್ರಜ್ಯಾಕದರ್ಥೇನ ಖಗೇಂದ್ರಾಲಮಿತಿ ಬ್ರುವನ್ |
ವಿಷ್ಟರಾದಹಮುತ್ಥಾಯ ತತಃ ಖಗವದಾಪ್ಲುತಃ ॥ ೧೩ ॥

---

೯. ಆದರಿಂದ ನಿನಗೂ ಕಲ್ಯಾಣವಾಗಲಿ. ಶುಭವಾದ ನಿನ್ನ ಗುಹೆಯನ್ನು ನೀನೂ ಪ್ರವೇಶಮಾಡು. ಮಧ್ಯಾಹ್ನವಾಯಿತು. ನಾನೂ ಸುರಲೋಕಕ್ಕೆ ಹೋಗುವೆನು.

೧೦. ನಾನು ಹೀಗೆ ಹೇಳಿದುದನ್ನು ಕೇಳಿ, ಆ ಭುಶುಂಡನು ಮರದಿಂದ ಮೇಲಕ್ಕೆದ್ದು, ಸ್ವಸಂಕಲ್ಪದಿಂದ ಸೃಷ್ಟಿಯಾದ ತನ್ನ ಕೈಗಳಿಂದ, ಮಗ್ಗುಲಲ್ಲಿದ್ದ ಚಿನ್ನದ ಚಿಗುರುಗಳನ್ನು ತೆಗೆದುಕೊಂಡನು.

೧೧. ಪೂರ್ಣಪ್ರಜ್ಞನಾದ ಆ ಭುಶುಂಡನು, ಆ ಹೇಮಪಲ್ಲವ ಪಾತ್ರವನ್ನು ಕಲ್ಪವೃಕ್ಷದ ಪುಷ್ಪಗಳ ಕೇಸರಗಳಿಂದಲೂ, ಅರ್ಘ್ಯವಾಗಿ ಒಪ್ಪಿಸಿದ ಚಂದ್ರನಂತಿರುವ ಮುತ್ತುಗಳಿಂದಲೂ ತುಂಬಿದನು.

೧೨. ಹಾಗೆ ಅರ್ಘ್ಯಪಾದ್ಯಗಳಾಗಿ ಕೊಟ್ಟ ಹೂಗಳಿಂದ ತ್ರಿನೇತ್ರನಾದ ಈಶ್ವರನನ್ನು ಪೂಜಿಸುವ ಹಾಗೆ, ಆ ಪುರಾತನನು ನನ್ನನ್ನು ಭಕ್ತಿಯಿಂದ ಆಪಾದ ಮಸ್ತಕವಾಗಿ ಪೂಜಿಸಿದನು.

೧೩. ನಾನು "ಎಲೈ ವಿಹಗೇಂದ್ರನೇ, ನೀನು ಹಿಂದೆ ಬರುವ ಶ್ರಮವನ್ನು ಸಹಿಸಬೇಕಾಗಿಲ್ಲ" ಎಂದು ಹೇಳುತ್ತ, ಆತನು ಕೊಟ್ಟಿದ್ದ ಆಸನದಿಂದ ಮೇಲಕ್ಕೆದ್ದು ಹಕ್ಕಿಯ ಹಾಗೆ ಹಾರಿದೆನು.

ವ್ಯೋಮ್ನಿ ಯೋಜನಮಾತ್ರಂ ತು ಮದನುವ್ರಜ್ಯಯಾ ಗತಃ |
ಕರಂ ಕರೇಣಾವಷ್ಟಭ್ಯ ಬಲಾತ್ಸಂರೋಧಿತಃ ಖಗಃ ॥ ೧೪ ॥

ಮಯಿ ಯಾತೇ ಕ್ಷಣೇನೈವ ಗಗನಾಧ್ವನ್ಯದೃಶ್ಯತಾಂ |
ನಿವೃತ್ತೋಽಸೌ ವಿಹಂಗೇಂದ್ರೋ ದುಸ್ತ್ಯಜಾ ಸಂಗತಿಃ ಸತಾಂ ॥ ೧೫ ॥

ಅನ್ಯೋನ್ಯಮಪಿ ಕಸ್ಮಿಂಶ್ಚಿತ್ತರಂಗಕ ಇವಾಂಬುಧೌ |
ವ್ಯೋಮನ್ಯದೃಶ್ಯತಾಂ ಯಾತೋ ಖಗಸ್ಮೃತ್ಯಾ ಮುನೀನಹಂ ॥ ೧೬ ॥

ಸಪ್ತರ್ಷಿಮಂಡಲಂ ಪ್ರಾಪ್ಯ ಜಾಯಯಾ ಪರಿಪೂಜಿತಃ ॥ ೧೭ ॥

ಯಾತೇ ಕೃತಯುಗಸ್ಯಾದೌ ಪುರಾವರ್ಷಶತದ್ವಯೇ |
ಸಂಗತೋಽಹಂ ಭುಶುಂಡೇನ ಮೇರೋಃ ಶೃಂಗದ್ರುಮೇ ಭವಂ ॥ ೧೮ ॥

---

೧೪. ಆತನೂ ಆಕಾಶಮಾರ್ಗದಲ್ಲಿ ಒಂದು ಯೋಜನದೂರ ನನ್ನ ಜೊತೆಯಲ್ಲಿಯೇ ಕೈಹಿಡಿದುಕೊಂಡು ಬಂದನು. ನಾನು ಬಲವಂತಮಾಡಿ ಆತನನ್ನು ತಡೆದೆನು.

೧೫–೧೬. ನಾನು ಆಕಾಶಮಾರ್ಗದಲ್ಲಿ ಒಂದು ಕ್ಷಣಕಾಲದಲ್ಲಿಯೇ ಕಣ್ಣಿಗೆ ಕಾಣದಷ್ಟು ದೂರ ಹೋಗಲು, ಆ ಪಕ್ಷೀಂದ್ರನೂ ಹಿಂತಿರುಗಿದನು. ಸಮುದ್ರದಲ್ಲಿ ತರಂಗಗಳು ಒಂದನ್ನೊಂದು ಬಿಡದಿರುವಂತೆ, ಸತ್ಪುರುಷರೂ ಒಬ್ಬರ ಜೊತೆಯನ್ನು ಒಬ್ಬರು ಕಷ್ಟದಿಂದ ಬಿಡುವರು. ನಾನೂ ಆ ಭುಶುಂಡನನ್ನೇ ಸ್ಮರಿಸಿಕೊಳ್ಳುತ್ತ ಆಕಾಶಮಾರ್ಗದಲ್ಲಿ ಸಪ್ತರ್ಷಿ ಮಂಡಲವನ್ನು ಸೇರಿದೆನು.

೧೭. ಸಪ್ತರ್ಷಿ ಮಂಡಲಕ್ಕೆ ಹೋಗಿ ನನ್ನ ಪತ್ನಿಯಾದ ಅರುಂಧತೀದೇವಿಯ ಪೂಜೋಪಚಾರಗಳನ್ನು ಕೈಗೊಂಡೆನು.

೧೮. ಹಿಂದೆ ಕೃತಯುಗದ ಮೊದಲಲ್ಲಿ, ಇನ್ನೂರು ವರ್ಷಗಳು ಆದಮೇಲೆ ಮೇರುಪರ್ವತದ ಶಿಖರದಲ್ಲಿರುವ ಕಲ್ಪವೃಕ್ಷದಲ್ಲಿ ನಾನು ಭುಶುಂಡನನ್ನು ನೋಡಿದೆನು.

ಅದ್ಯ ರಾಮ ಕೃತೇ ಕ್ಷೀಣೇ ತ್ರೇತಾ ಸಂಪ್ರತಿ ವರ್ತತೇ |
ಮಧ್ಯೆ ತ್ರೇತಾಯುಗಸ್ಯಾಸ್ಯ ಜಾತಸ್ತ್ವಂ ರಿಪುಮರ್ದನ || ೧೯ ||

ಪುನರದ್ಯಾಷ್ಟಮೇ ವರ್ಷೇ ತತ್ರೈವೋಪರಿ ಭೂಭೃತಃ |
ಮಿಲಿತೋಭೂದ್ಭುಶುಂಡೋ ಮೇ ತಥೈವಾಜರರೂಪವಾ್ || ೨೦ ||

ಇತಿ ಸಂಕಥಿತಂ ಚಿತ್ರಂ ಭುಶುಂಡೋದಂಸಮುತ್ತಮಂ |
ಶ್ರುತ್ವಾ ವಿಚಾರ್ಯ ಚೈವಾಂತರ್ಯದ್ಯುಕ್ತಂ ತತ್ಸಮಾಚರ || ೨೧ ||

ಶ್ರೀ ವಾಲ್ಮೀಕಿರುವಾಚ—

ಇತಿ ಸುಮತಿ ಭುಶುಂಡ ಸತ್ಕಥಾಂ ಯೋ
ವಿಮಲಮತಿಃ ಪ್ರವಿಚಾರಯಿಷ್ಯತೀಹ |

---

೧೯. ರಾಮ, ಈಗ ಕೃತಯುಗವು ಕಳೆದುಹೋಗಿ ತ್ರೇತಾಯುಗವು ನಡೆಯುತ್ತಿರುವದು. ಎಲೈ ರಿಪು ಮರ್ದನನೇ, ನೀನು ತ್ರೇತಾಯುಗದ ಮಧ್ಯದಲ್ಲಿ ಹುಟ್ಟಿರುವೆ.

೨೦. ಮತ್ತೆ ಎಂಟು ವರ್ಷದ ಹಿಂದೆ ಅದೇ ಮೇರುಪರ್ವತದಲ್ಲಿ ಭುಶುಂಡನು ನನಗೆ ಸಿಕ್ಕಿದ್ದನು. ಈಗಲೂ ಹಾಗೆಯೇ ಅಜರನಾಗಿ ರೂಪವಂತನಾಗಿ ಇರುವನು.

೨೧. ಇದು ಭುಶುಂಡುವಿನ ವಿಚಿತ್ರವೂ ಶ್ರೇಷ್ಠವೂ ಆದ ವೃತ್ತಾಂತವು. ಇದನ್ನು ಕೇಳಿರುವೆ. ಇದನ್ನು ಚೆನ್ನಾಗಿ ವಿಚಾರಮಾಡಿ ನೋಡಿ ಇಲ್ಲಿಂದ ಮುಂದೆ ಯಾವುದು ಯೋಗ್ಯವೋ ಅದನ್ನು ಮಾಡು.

೨೨. ಶ್ರೀ ವಾಲ್ಮೀಕಿಯು ಹೇಳಿದನು—ಹೀಗೆ ಸುಮತಿಯಾದ ಭುಶುಂಡನ

ಭವಭಯಬಹುಲಾಕುಲಾಸ್ಥಿತಾಂ ಸ
ಪ್ರಸಭಮಸತ್ಸರಿತಂ ತರಿಷ್ಯತೀತಿ ॥ ೨೨ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕಿಯೇ ದೇವದೂತೋಕ್ತೇ ಮೋಕ್ಷೋಪಾಯೇಷು ನಿರ್ವಾಣಪ್ರಕರಣೇ ಭುಶುಂಡೋಪಾಖ್ಯಾನೇ "ಭುಶುಂಡೋಪಾಖ್ಯಾನ ಸಮಾಪ್ತಿ"ರ್ನಾಮ ಸಪ್ತವಿಂಶಃ ಸರ್ಗಃ

ಸತ್ಕಥೆಯನ್ನು ಕೇಳಿದವನು ನಿರ್ಮಲಬುದ್ಧಿಯಾಗುವನು. ವಿಚಾರಪರನಾಗುವನು. ಬಹುಜನ್ಮಭಯದಿಂದ ಬಹುವಾಗಿ ಜಟಿಲವಾಗಿರುವ ಈ ಅಸತ್ ನದೀ ಪ್ರವಾಹವನ್ನು ದಾಟುವ ಪ್ರಯತ್ನವನ್ನು ಮಾಡುವನು.

(ಪ್ರಸಭಂ ಇತಿ ಪೌರುಷ ಪ್ರಾಧಾನ್ಯದ್ಯೋತನಾರ್ಥಂ—ತಾ. ಪ್ರ.)

(ಜಾಬಾಲೋಪನಿಷತ್ತಿನಲ್ಲಿ ಕಾಲಾಗ್ನಿರುದ್ರನನ್ನು ಭಸ್ಮರುದ್ರಾಕ್ಷ ಮಾಹಾತ್ಮ್ಯವನ್ನು ಕೇಳುವ ಭುಶುಂಡನು ಒಬ್ಬನಿದ್ದಾನೆ.)

ಇಂತಿದು ಆರ್ಷವು ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ ನಿರ್ವಾಣಪ್ರಕರಣದ "ಭುಶುಂಡೋಪಾಖ್ಯಾನಸಮಾಪ್ತಿ" ಎಂಬ ಇಪ್ಪತ್ತೇಳನೆಯ ಸರ್ಗವು

೧೪ನೇ ಸಂಪುಟವು ಮುಗಿದುದು.